ಆಹುತಿಯಾದವು (1814). 1851ರಲ್ಲಿ ಪುನಃ ಗ್ರಂಥಾಲಯದಲ್ಲಿಯ ಸುಮಾರು ಅರ್ಧದಷ್ಟು ಗ್ರಂಥಗಳು ಬೆಂಕಿಯ ಒಡಲನ್ನು ಸೇರಿದವು. ಥಾಮಸ್ ಜೆಫರಸನ್ನನ 6,487 ಗ್ರಂಥಗಳನ್ನು 1815ರಲ್ಲಿ ಈ ಗ್ರಂಥಾಲಯ ಪಡೆಯಿತು.

ಈ ಗ್ರಂಥಾಲಯದಲ್ಲಿರುವ ಅನ್ಯತ್ರ ಅಲಭ್ಯ, ಅಮೂಲ್ಯ ಗ್ರಂಥಗಳ ಸಂಖ್ಯೆ ಮೂರು ಲಕ್ಷಕ್ಕಿಂತಲೂ ಹೆಚ್ಚು. ಚಲಿಸುವ ಅಚ್ಚುಗಳಲ್ಲಿ ಪ್ರಪ್ರಥಮವಾಗಿ ಮುದ್ರಿತವಾಗಿ ಪ್ರಕಟವಾದ ಗುಟೆನಬರ್ಗ್ ಬೈಬಲ್ ಇಲ್ಲಿದೆ. 1501ಕ್ಕಿಂತ ಮೊದಲು ಪ್ರಕಟವಾದ ಸುಮಾರು 5,600 ಗ್ರಂಥಗಳು ಇಲ್ಲಿವೆ. ಅಮೆರಿಕದ ಮಾಜೀ ಅಧ್ಯಕ್ಷರುಗಳ ಪತ್ರಗಳು ಮತ್ತು ಭಾಷಣಗಳ ಸಂಗ್ರಹ ಹಾಗೂ ಸಾಹಿತಿಗಳ ಹಸ್ತಪ್ರತಿಗಳನ್ನು ಇಲ್ಲಿ ಕಾಣಬಹುದು. ಅಮೆರಿಕದ ಸ್ವಾತಂತ್ರ್ಯ ಸಂಗ್ರಾಮದ ಹಲವು ದಾಖಲೆಗಳೂ ಇಲ್ಲಿವೆ.

ಚೀನಿ ಭಾಷೆಯ 3,60,000 ಗ್ರಂಥಗಳಲ್ಲದೆ ಜಪಾನಿ, ಕೊರಿಯ, ಪಾರಸಿ, ಬಂಗಾಲಿ, ಸಂಸ್ಕೃತ, ಹಿಂದಿ, ಉರ್ದು, ಮರಾಠಿ, ಕನ್ನಡ ಭಾಷೆಗಳ ಹಲವಾರು ಗ್ರಂಥಗಳೂ ಇಲ್ಲಿವೆ.

ಈ ಗ್ರಂಥಾಲಯದಲ್ಲಿ ವಿವಿಧ ಭಾಗಗಳಲ್ಲಿ ಸೇವೆ ಸಲ್ಲಿಸುವವರ ಸಂಖ್ಯೆ 4000. ಇವರಲ್ಲಿ ಅನೇಕರು ಪ್ರಪಂಚದ ವಿವಿಧ ಭಾಷೆಗಳಲ್ಲಿ ಪರಿಣತರು. ಈ ಗ್ರಂಥಾಲಯಕ್ಕೆ ಪ್ರತಿನಿತ್ಯವೂ ಓದುಗರು ಗ್ರಂಥಗಳನ್ನು ಎರವಲು ಪಡೆಯುವುದಕ್ಕೆ, ಅಧ್ಯಯನಕ್ಕೆ ಮತ್ತು ಮಾಹಿತಿ ಪಡೆಯುವುದಕ್ಕೆ ಬರುತ್ತಾರೆ. ಅಂಚೆಯ ಮೂಲಕ ವಿವಿಧ ವಿಷಯಗಳ ಮಾಹಿತಿಯನ್ನು ಒದಗಿಸುವ ಸೌಲಭ್ಯವೂ ಇಲ್ಲುಂಟು. ಪ್ರಪಂಚದ ವಿವಿಧ ದೇಶಗಳ ಸುಮಾರು ಓದುಗರು ಈ ಸೌಲಭ್ಯವನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಹೀಗೆ ಕಾಂಗ್ರೆಸ್ ಗ್ರಂಥಾಲಯದ ಸೇವೆ ಅಮೆರಿಕದ ಜನರಿಗಷ್ಟೇ ಅಲ್ಲ ಪ್ರಪಂಚದ ವಿವಿಧ ದೇಶಗಳಲ್ಲಿರು ವವರಿಗೂ ದೊರೆಯುತ್ತಿದೆ.

ಲೈಬ್ರರಿ ಆಫ್ ಕಾಂಗ್ರೆಸ್ ಅಮೆರಿಕದ ಒಂದು ಪ್ರಮುಖ ಸಾಂಸ್ಕೃತಿಕ ಕೇಂದ್ರವೂ ಹೌದು. ಇಲ್ಲಿ ಕಾಲಕಾಲಕ್ಕೆ ದೇಶ ವಿದೇಶಗಳ ಸಾಹಿತ್ಯದ ಮಹಾಗ್ರಂಥಗಳ ವಿಮರ್ಶನ ಕಾರ್ಯವನ್ನು ವಿದ್ವಾಂಸರು ಕೈಗೊಳ್ಳುತ್ತಾರೆ. 1961ರಲ್ಲಿ ರವೀಂದ್ರನಾಥ ಠಾಕೂರರ ಕೃತಿಗಳ ಪ್ರದರ್ಶನವೊಂದನ್ನು ಇಲ್ಲಿ ಏರ್ಪಡಿಸಲಾಗಿತ್ತು.

ಮುದ್ರಿತ ಸೂಚೀಪತ್ರಗಳ ವಿತರಣ ಕಾರ್ಯವನ್ನು ಲೈಬ್ರರಿ ಆಫ್ ಕಾಂಗ್ರೆಸ್ ಪ್ರಾರಂಭಿಸಿದ್ದು 1901ರಿಂದ. ಇಂದು ಸುಮಾರು 25,000 ಚಂದಾದಾರ ಗ್ರಂಥಾಲಯಗಳಿಗೆ ಅವುಗಳ ವಿತರಣೆ ಆಗುತ್ತಿದೆ. ಇತ್ತೀಚೆಗೆ ಈ ವಿತರಣ ಕಾರ್ಯವನ್ನು ಸಂಪೂರ್ಣವಾಗಿ ಯಂತ್ರೀಕರಿಸಲಾಗಿದೆ.

ಪ್ರಥಮತಃ 84 ಗ್ರಂಥಾಲಯಗಳ ಸಹಕಾರದೊಂದಿಗೆ ಸಂಯುಕ್ತಸೂಚಿಯನ್ನು ತಯಾರಿಸುವ ಕಾರ್ಯ ಪ್ರಾರಂಭವಾಯಿತು. ಈ ಬೃಹತ್ ಯೋಜನೆಗೆ ರಾಕ್‍ಫೆಲರ್ ಪ್ರತಿಷ್ಠಾನ ಧನಸಹಾಯವಿತ್ತಿದೆ. ಇಂದು ಈ ಯೋಜನೆಯಲ್ಲಿ ಸುಮಾರು 700 ಗ್ರಂಥಾಲಯಗಳು ಭಾಗವಹಿಸುತ್ತಿದ್ದು ಸುಮಾರು ಒಂದು ಕೋಟಿ ಗ್ರಂಥಗಳ ಸೂಚೀಪತ್ರಗಳನ್ನು ಸಂಕಲ್ಪಿಸಲಾಗಿದೆ.

ಲೈಬ್ರರಿ ಆಫ್ ಕಾಂಗ್ರೆಸ್‍ನ ಪ್ರಸ್ತುತ (13ನೆಯ ಗ್ರಂಥಪಾಲ ಜೇಮ್ಸ್ ಎಚ್. ಬಿಲ್ಲಿಂಗ್‍ಟನ್ ಇವನ ಅವಧಿಯಲ್ಲಿ ಡಿಜಿಟಲ್ ಲೈಬ್ರರಿ ರೂಪಪಡೆಯಿತು. ಹನ್ನೊಂದನೆಯ ಗ್ರಂಥಪಾಲ. ಅಮೆರಿಕದ ಉನ್ನತ ದರ್ಜೆಯ ಅಧಿಕಾರಿಗಳಿಗೆ ಸಲ್ಲುವ ಸ್ಥಾನಮಾನ, ವೇತನಗಳನ್ನೇ ಗ್ರಂಥಪಾಲಕರಿಗೆ ಕೊಡಲಾಗಿದೆ. (ಎಸ್.ಎಚ್.ಕೆ.)

**2. ಜಪಾನಿನ ರಾಷ್ಟ್ರೀಯ ಸಂಸತ್ ಗ್ರಂಥಾಲಯ :** ಇಂದೊಂದು ರಾಷ್ಟ್ರೀಯ ಗ್ರಂಥಾಲಯ. 1948ರ ಫೆಬ್ರುವರಿ 9 ರಂದು ಜಾರಿಗೆ ಬಂದ ರಾಷ್ಟ್ರೀಯ ಸಂಸತ್ ಗ್ರಂಥಾಲಯ ಕಾನೂನಿನಂತೆ ಸ್ಥಾಪಿತವಾಯಿತು. ಇದು ಎರಡು ಸರ್ಕಾರಿ ಗ್ರಂಥಾಲಯಗಳ ಮತ್ತು ಹಲವು ಖಾಸಗಿ ಗ್ರಂಥಾಲಯಗಳ ಸಮಾವೇಶದಿಂದಾದುದು. ಸರ್ಕಾರದ ಕಾರ್ಯಾಂಗ ಮತ್ತು ನ್ಯಾಯಾಂಗ ವಿಭಾಗಗಳ ಗ್ರಂಥಾಲಯಗಳೂ ಇದರಲ್ಲಿ ಸೇರ್ಪಡೆಯಾಗಿವೆ. ಗ್ರಂಥಾಲಯ ಕಾನೂನಿನಂತೆ ದೇಶದಲ್ಲಿ ಪ್ರಕಟವಾಗುವ ಪತ್ರಿಕೆ ಮತ್ತು ಪುಸ್ತಕಗಳ ಒಂದೊಂದು ಪ್ರತಿಗಳು ಇಲ್ಲಿಗೆ ಬರುತ್ತವೆ. ಗ್ರಂಥಾಲಯದಲ್ಲಿರುವ ಒಟ್ಟು ಪುಸ್ತಕಗಳ ಸಂಖ್ಯೆ ಸು. 5 ದಶಲಕ್ಷ ಎಂದು ಅಂದಾಜು ಮಾಡಲಾಗಿದೆ. ಅತ್ಯಾಧುನಿಕ ಕಟ್ಟಡವನ್ನು ಹೊಂದಿರುವ ಗ್ರಂಥಾಲಯದಲ್ಲಿ ಸಾವಿರಕ್ಕೂ ಮಿಕ್ಕ ಓದುಗರಿಗೆ ಸ್ಥಳಾವಕಾಶ ಇದೆ. ಸಂಸತ್ತಿನ ಅನುಮತಿ ಪಡೆದು ಗ್ರಂಥಪಾಲಕನನ್ನು ನೇಮಿಸಲಾಗುತ್ತದೆ. ಗ್ರಂಥಾಲಯದ ಕಾರ್ಯ ನಿರ್ವಹಣೆ, ಚಟುವಟಿಕೆ ಮುಂತಾದುವನ್ನು ಈತ ಸಂಸತ್ತಿಗೆ ಆಗಾಗ್ಗೆ ವರದಿ ಮಾಡುತ್ತಾನೆ.

ಗ್ರಂಥಾಲಯಕ್ಕೆ ಮುಕ್ತ ಪ್ರವೇಶ ಇದೆ. ಸಂಸತ್ತು ಪರಿಶೀಲಿಸುವ ಕರಡು ಪ್ರತಿಗಳ ಸಿದ್ಧತೆಯಲ್ಲಿ ಇದರ ಪಾತ್ರ ಗಮನಾರ್ಹ. ಸರ್ಕಾರದ ವಿವಿಧ ಇಲಾಖೆಗಳಿಗೆ ಸಂಬಂಧಿಸಿದ ಅಂಕಿಅಂಶಗಳನ್ನು ಸಂಗ್ರಹಿಸಿ ಸಂಸತ್ತಿಗೆ ಇದು ಒದಗಿಸುತ್ತದೆ. ಸಂಶೋಧನ ವಿಭಾಗ, ಗ್ರಂಥಸೂಚಿ ವಿಭಾಗ ಮೊದಲಾದ ವಿಶಿಷ್ಟ ವಿಭಾಗಗಳನ್ನಿದು ಹೊಂದಿದೆ.

ಗ್ರಂಥಾಲಯದ ಪ್ರಕಟಣೆಗಳಿವು : 1. ರಾಷ್ಟ್ರೀಯ ಗ್ರಂಥಸೂಚಿ. 2. ಕಾನೂನುಗಳ ಸೂಚಿ. 3. ಸಂಸತ್ ಚರ್ಚೆಗಳ ಸೂಚಿ. 4. ನಿಯತಕಾಲಿಕೆಗಳ ಲೇಖನ ಸೂಚಿ. 5. ಅಂಕಿ ಅಂಶಗಳ ಸೂಚಿ. 6. ವಿದೇಶೀ ಶಾಸನಗಳ ಸೂಚಿ.

ಅಂತಾರಾಷ್ಟ್ರೀಯ ಎರವಲು ಸೇವೆ ಗ್ರಂಥಾಲಯದ ಪ್ರಮುಖ ಚಟುವಟಿಕೆ ಗಳಲ್ಲೊಂದು. ವಿನಿಮಯದ ಮೂಲಕ ವಿಜ್ಞಾನ ಮತ್ತು ತಾಂತ್ರಿಕ ವಿಷಯಗಳನ್ನು ಕುರಿತ ಪುಸ್ತಕಗಳನ್ನು ಇಲ್ಲಿ ವಿಶೇಷವಾಗಿ ಸಂಗ್ರಹಿಸಲಾಗುತ್ತಿದೆ. ಪರಾಮರ್ಶನ ಮತ್ತು ಛಾಯಾಚಿತ್ರಗಳಿಗೆ ಸಂಬಂಧಿಸಿದಂತೆ ದೇಶ ವಿದೇಶಗಳಿಂದ ಬರುವ ಕೋರಿಕೆಗಳನ್ನು ಈಡೇರಿಸುವಲ್ಲಿಯೂ ಈ ಸಂಸ್ಥೆ ಹೆಚ್ಚಿನ ಆಸ್ಥೆವಹಿಸುತ್ತಿದೆ.

ಅಂತಾರಾಷ್ಟ್ರೀಯ ಚಟುವಟಿಕೆಗಳಿಗಾಗಿಯೇ ಈ ಸಂಸ್ಥೆ ಎರಡು ಪ್ರಕಟಣೆಗಳನ್ನು ಹೊರಡಿಸುತ್ತಿದೆ. ಅಂತಾರಾಷ್ಟ್ರೀಯ ವಿನಿಮಯ ವಾರ್ತೆ ಎಂಬುದು ಒಂದು. ಇನ್ನೊಂದು, ಹಿಂದೂ ಪೆಸಿಫಿಕ್ ವಿನಿಮಯ ವಾರ್ತಾ ಪತ್ರ ಎಂಬ ತ್ರೈಮಾಸಿಕೆ. 1963ರಿಂದ ಇದು ರಾಷ್ಟ್ರೀಯ ಸಂಸತ್ ಗ್ರಂಥಾಲಯ ವಾರ್ತಾ ಪತ್ರಿಕೆ ಎಂಬ ಹೆಸರಿನಿಂದ ಪ್ರಕಟವಾಗುತ್ತಿದೆ. 1957ರ ನವೆಂಬರ್‌ನಲ್ಲಿ ಗ್ರಂಥಾಲಯದ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಗ್ರಂಥ ವಿನಿಮಯ ಕುರಿತ ಸಮ್ಮೇಳನವೊಂದು ನಡೆಯಿತು. (ಕೆ.ಎಸ್.ಆರ್.ಎಜಿ.)

**3. ಬ್ರಿಟಿಷ್ ಮ್ಯೂಸಿಯಮ್ ಗ್ರಂಥಾಲಯ :** ಗ್ರೇಟ್ ಬ್ರಿಟನಿನ ರಾಷ್ಟ್ರೀಯ ಗ್ರಂಥಾಲಯ. ಬ್ರಿಟನಿನ ಕೆಲವು ಪ್ರತಿಭಾವಂತರು ಸರ್ ರಾಬರ್ಟ್ ಕಾಟನನ ನೇತೃತ್ವದಲ್ಲಿ ಪ್ರಾಚೀನ ಹಾಗೂ ಅಮೂಲ್ಯ ಗ್ರಂಥಗಳನ್ನು ಕಲೆ ಹಾಕಿ ಅವನ್ನು ಸಂರಕ್ಷಿಸುವ ಕೋರಿಕೆಯ ಪ್ರಣಾಳಿಕೆಯೊಂದನ್ನು ರಾಣಿ ಎಲಿಜಬೆತ್‍ಗೆ ಅರ್ಪಿಸಿದರು. ಅದೇ ಬ್ರಿಟನಿನಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಒಂದು ಗ್ರಂಥಾಲಯ ಸ್ಥಾಪನೆಗೆ ನಾಂದಿಯಾಯಿತು.

ವೈದ್ಯ ಮತ್ತು ನಿಸರ್ಗ ವಿಜ್ಞಾನಿ ಸರ್ ಹ್ಯಾನ್ಸ್ ಸ್ಲೋನ್ ತನ್ನ ವೈಯಕ್ತಿಕ ಸಂಗ್ರಹವಾದ 40,000 ಮುದ್ರಿತ ಗ್ರಂಥಗಳು, 7,000 ಹಸ್ತಪ್ರತಿಗಳು, ಅಮೂಲ್ಯವಾದ ಪದಕ, ನಾಣ್ಯ, ಗ್ರೀಕ್, ರೋಮ್, ಈಜಿಪ್ಟ್‌ಗಳ ಪುರಾತನ ವಸ್ತುಗಳು, ಮುದ್ರೆ, ಕೆತ್ತನೆಗಳಿಂದೊಡಗೂಡಿದ ಪ್ರಾಣಿಗಳ ಚಿಪ್ಪು, ಚಿತ್ರಗಳು – ಇಂಥವನ್ನು ಸರ್ಕಾರಕ್ಕೆ ದಾನವಾಗಿ ಕೊಟ್ಟ. ಪ್ರತಿಯಾಗಿ ತನ್ನ ವಾರಸುದಾರರಿಗೆ ಸರ್ಕಾರ 20 ಸಾವಿರ ಪೌಂಡ್ ಕೊಡಬೇಕೆಂದು ಕೇಳಿದ. ಪಾರ್ಲಿಮೆಂಟು ಇದಕ್ಕೆ ಒಪ್ಪಿತು. 1753ರ ಕಾನೂನಿನ ಅನ್ವಯ ಈ ಸಂಗ್ರಹ ಮ್ಯೂಸಿಯಮ್ ಅಸ್ತಿತ್ವಕ್ಕೆ ಕಾರಣವಾಯಿತು. ಇದರ ಕ್ಷೇಮಾಭಿವೃದ್ಧಿಗಾಗಿ ನ್ಯಾಸವೊಂದನ್ನು ರಚಿಸಲಾಯಿತು. ಮಾಂಟೆಗ್ಯೂ ಹೌಸಿನಲ್ಲಿ ಈ ಸಂಗ್ರಹಾಲಯಕ್ಕೆ ಸ್ಥಳ ದೊರೆತದ್ದು 1759ರಲ್ಲಿ.

ಅದೇ ಕಾಲಕ್ಕೆ ಹಾರ್ಲೆ ಮತ್ತು ರಾಬರ್ಟ್ ಕಾಟನ್‌ರ ಸಂಗ್ರಹಗಳೂ ಇಂಗ್ಲೆಂಡಿನ ಅರಸ ಎರಡನೆಯ ಜಾರ್ಜನ ಗ್ರಂಥಾಲಯದ ಕೊಡುಗೆಯೂ (1757) ಸ್ಲೋನನ ಸಂಗ್ರಹದೊಡನೆ ಸೇರಿದವು. ಬಳಿಕ ಸ್ಟೇಷನರ್ಸ್ ಹಾಲಿನಲ್ಲಿ ದಾಖಲಾದ ಪುಸ್ತಕಗಳ ಒಂದೊಂದು ಪ್ರತಿ ಉಚಿತವಾಗಿ ದೊರೆಯುವ ಸೌಲಭ್ಯ ಏರ್ಪಟ್ಟಿತು. ಮೂರನೆಯ ಜಾರ್ಜ್ ದೊರೆಯ ಗ್ರಂಥಾಲಯವನ್ನು ನಾಲ್ಕನೆಯ ಜಾರ್ಜ್‌ನಿಂದ ಕೊಂಡುಕೊಂಡಿದ್ದು 1823ರಲ್ಲಿ.

ಜೋಸೆಫ್ ಬ್ಯಾಂಕರ್ಸ್, ರಿಜ್, ಅರುಂಡೇಲ್, ಚಾಸರ್ ಮುಂತಾದವರು ತಮ್ಮ ಗ್ರಂಥಗಳು, ಹಸ್ತಪ್ರತಿಗಳು, ವೈಯಕ್ತಿಕ ಗ್ರಂಥ ಸಂಗ್ರಹಗಳು, ಪ್ರಾಚೀನ ವೃತ್ತಪತ್ರಿಕೆಗಳು ಮುಂತಾದವನ್ನು ನೀಡಿದ್ದರಿಂದ ಗ್ರಂಥಾಲಯ ಪುಷ್ಟಿಗೊಂಡಿತು.

16–18 ನೆಯ ಶತಮಾನಗಳ ಫ್ರೆಂಚ್, ಇಟಾಲಿಯನ್ ಲೇಖಕರ, ವಿಜ್ಞಾನಿಗಳ, ರಾಜನೀತಿಜ್ಞರ ಬರೆಹ ಹಾಗೂ ಕಾಗದ ಪತ್ರಗಳ ಸಂಗ್ರಹಗಳು ಇಲ್ಲಿವೆ. ಅಲೆಗ್ಸಾಂಡ್ರಿಯದ ಪೇಟ್ರಿಯಾರ್ಕ್ ಒಂದನೆಯ ಚಾರ್ಲ್ಸ್‌ನಿಗೆ ದಾನವಾಗಿತ್ತ 5 ನೆಯ ಶತಮಾನದ ಬೈಬಲಿನ ಕೋಡೆಕ್ಸ್ ಅಲೆಗ್ಸಾಂಡ್ರಿನಸ್; 1000ರಲ್ಲಿ ಬರೆದ ಬೆವುಲ್ಫ್ ಪ್ರತಿ, ಮ್ಯಾಗ್ನಕಾರ್ಟದ ಎರಡು ಪ್ರತಿಗಳು, ಪುರಾತನ ಮುದ್ರಣದ ಕೆಲವು ಅವಶೇಷಗಳು, ಪ್ರಾಚೀನ ಆಂಗ್ಲೋಸ್ಯಾಕ್ಸನ್ ಶಬ್ದಕೋಶ, ಹೀಬ್ರೂ, ಸಂಸ್ಕೃತ ಮತ್ತು ಕನ್ನಡ ಭಾಷೆಗಳ ಮಹತ್ತ್ವದ ಹಸ್ತಪ್ರತಿಗಳು – ಇವು ಇಲ್ಲಿಯ ವಿರಳ ಸಂಗ್ರಹಗಳಲ್ಲಿ ಮುಖ್ಯವಾದುದು. ಇವಲ್ಲದೆ 3ನೆಯ ಶತಮಾನದಿಂದ ಅರ್ವಾಚೀನ ಕಾಲದವರೆಗಿನ ವಿಪುಲವಾದ ಹಾಗೂ ವಿರಳವಾದ ಗ್ರಂಥಗಳ ಸಂಗ್ರಹಗಳು ಇಲ್ಲಿವೆ. ಪ್ರಾಚೀನ ಕಾಲದ ಪಪೈರಸ್ ಹಸ್ತಲಿಖಿತ ಪ್ರತಿಗಳಿಂದ ತೊಡಗಿ ಮೈಕ್ರೊಫಿಲ್ಮ್, ಮೈಕ್ರೋಕಾರ್ಡ್ ಫೋಟೋ ಪ್ರತಿಗಳವರೆಗಿನ ಅತ್ಯಾಧುನಿಕ ಸಂಗ್ರಹವನ್ನು ಈ ಗ್ರಂಥಾಲಯ ಹೊಂದಿದೆ.

ಭಾರತೀಯ ವಿಷಯಕ್ಕೆ (ಇಂಡಾಲಜಿ) ಸಂಬಂಧಿಸಿದಂತೆ ಇಲ್ಲಿರುವ ಸಂಗ್ರಹ ಅಪೂರ್ವವಾದದ್ದು.

ಪ್ರಪಂಚದ ವಿವಿಧ ಭಾಷೆಗಳ ಹಾಗೂ ವಿಷಯಗಳ ಗ್ರಂಥಗಳು ಹಾಗೂ ಹಸ್ತಲಿಖಿತ ಪ್ರತಿಗಳು ಇಲ್ಲಿವೆ (1969). ಒಂದು ವರ್ಷಕ್ಕೆ ಸುಮಾರು ಒಂದು ದಶಲಕ್ಷದಷ್ಟು ಹೊಸ ಗ್ರಂಥಗಳನ್ನು ಇದು ತನ್ನ ಸಂಗ್ರಹಕ್ಕೆ ಸೇರಿಸುತ್ತಲಿದೆ.

ಬ್ರಿಟಿಷ್ ಮ್ಯೂಸಿಯಂ ಗ್ರಂಥಾಲಯದಲ್ಲಿ ಕೆಳಕಂಡ ಪ್ರಮುಖ ವಿಭಾಗಗಳಿವೆ: 1. ಮುದ್ರಿತ ಗ್ರಂಥ ವಿಭಾಗ, 2. ಹಸ್ತಪ್ರತಿಗಳ ವಿಭಾಗ, 3. ಪ್ರಾಚ್ಯ ಮುದ್ರಿತ ಗ್ರಂಥಗಳ ಹಾಗೂ ಹಸ್ತಲಿಖಿತ ಪ್ರತಿಗಳ ವಿಭಾಗ, 4. ವೈಜ್ಞಾನಿಕ ಹಾಗೂ ತಾಂತ್ರಿಕ ವ್ಯಾಸಂಗಕ್ಕೋಸ್ಕರ ಪ್ರತ್ಯೇಕ ವಿಭಾಗ, 5. ವೃತ್ತಪತ್ರಿಕೆಗಳ ವಿಭಾಗ, 6. ಅಂಚೆಚೀಟಿಗಳ ವಿಶೇಷ ವಿಭಾಗ, 7. ಪರಾಮರ್ಶನ ಸೇವಾ ವಿಭಾಗ.

ಸರ್ಕಾರದವರು ಬ್ರಿಟಿಷ್ ಮ್ಯೂಸಿಯಂ ಗ್ರಂಥಾಲಯವನ್ನು ಪೇಟೆಂಟ್ ಆಫೀಸ್ ಗ್ರಂಥಾಲಯದೊಂದಿಗೆ ಸಮಾವೇಶಗೊಳಿಸುವ ಒಂದು ಯೋಜನೆಯನ್ನು ಹಾಕಿ ಕೊಂಡಿದ್ದು 1960ರಲ್ಲಿ ಈ ಯೋಜನೆಯನ್ವಯ ಸುಮಾರು 10,00,000ರಷ್ಟು ಪ್ರಚಲಿತ ವೈಜ್ಞಾನಿಕ ಹಾಗೂ ತಾಂತ್ರಿಕ ಸಾಹಿತ್ಯ ಸಂಗ್ರಹದ ವಿಶೇಷ ಸಂದರ್ಭ ಸೇವೆಯನ್ನು ಪ್ರಾರಂಭಿಸುವುದು ಸಾಧ್ಯವಾಯಿತು.

**ಬ್ರಿಟಿಷ್ ಮ್ಯೂಸಿಯಂ ಗ್ರಂಥಾಲಯದಲ್ಲಿಯ ಪ್ರಮುಖ ಸೂಚಿಗಳು ಇಂತಿವೆ :**

**1. ಪ್ರಾಚ್ಯ ಹಸ್ತಪ್ರತಿಗಳ ಸೂಚಿ :** ಇವನ್ನು ಹಲವು ಸಂಪುಟಗಳಲ್ಲಿ ಪ್ರಕಟಿಸಿದ್ದಾರೆ. 2. ವಿಷಯಸೂಚಿಗಳು (ಸಬ್ಜೆಕ್ಟ್ ಕಾಟಲಾಗ್) 1885ರಿಂದ ಇಂದಿನವರೆಗೆ ಐದೈದು ವರ್ಷಗಳ ಸಂಪುಟಗಳಲ್ಲಿ ಹೊರಡಿಸಿದ್ದಾರೆ. 3. ವೃತ್ತಪತ್ರಿಕೆ, ಭೂಪಟ ಇತ್ಯಾದಿಗಳ ಸೂಚಿ: ಇವನ್ನು ಪ್ರತ್ಯೇಕವಾಗಿ ತಯಾರಿಸಿದ್ದಾರೆ. ಭೂಪಟಗಳ 15 ಸಂಪುಟಗಳ ಸೂಚಿಯನ್ನು 1967–68ರಲ್ಲಿ ಹೊರತಂದಿದ್ದಾರೆ. 4. ಪ್ರಾಚೀನ ಹಾಗೂ ವಿರಳ ಗ್ರಂಥಗಳ ಸೂಚಿ. 5. ಪಾಶ್ಚಾತ್ಯ ಭಾಷೆಗಳ ಮುದ್ರಿತ ಗ್ರಂಥಗಳ ಸೂಚಿ. 6. ಪಾಶ್ಚಾತ್ಯ ಭಾಷೆಗಳ ಹಸ್ತಪ್ರತಿಗಳ ಸಮಗ್ರ ಸೂಚಿ. 7. ಮುದ್ರಿತ ಗ್ರಂಥಗಳ ಸೂಚಿ. 8. ವಿಜ್ಞಾನ ವಿಭಾಗದ ಪ್ರತ್ಯೇಕ ಸೂಚಿ. 9. ಪ್ರಾಚ್ಯ ಗ್ರಂಥಗಳ ಹಾಗೂ ಹಸ್ತಪ್ರತಿಗಳ ಸೂಚಿ. ಇವುಗಳನ್ನು ಆಯಾ ಭಾಷೆಗಳಂತೆಯೇ ತಯಾರಿಸಿದ್ದು ಕ್ಯಾಟಲಾಗ್ ಆಫ್ ಜಾರ್ಜಿಯನ್ ಅಂಡ್ ಅದರ್ ಕಕೇಶಿಯನ್ ಪ್ರಿಂಟೆಡ್ ಬುಕ್ಸ್ 1962 ಅಂಡ್ ದಿ ಕ್ಯಾಟಲಾಗ್ ಆಫ್ ಪಾಷ್‌ಟೊ ಮ್ಯಾನುಸ್ಕ್ರಿಪ್ಟ್ಸ್ (1965)ಗಳನ್ನು ಹೆಸರಿಸಬಹುದು.

ಗೋವಿನ್ ನೈಟ್ ಈ ಗ್ರಂಥಾಲಯದ ಪ್ರಥಮ ಗ್ರಂಥಪಾಲ. ಅನಂತರ ಚಾರ್ಲ್‌ಸ್ ಮರ್ಟನ್, ಮ್ಯಾಥ್ಯೂ ಮ್ಯಾಟೀ, ಹೆನ್ರಿ ಎಲ್ಲಿಸ್, ಆಂಟೊನಿ ಪ್ಯಾನಿಜಿ, ಜಾನ್ ವಿಂಟರ್ ಜೋನ್ಸ್, ಎಡ್ವರ್ಡ್ ಅಗಸ್ಟಸ್ ಬಾಂಡ್, ಎಡ್ವರ್ಡ್ ಮೌಂಡೇ ಥಾಮ್‌ಸನ್ ಇವರು ಹೆಸರಾಂತ ಗ್ರಂಥಪಾಲರು.

ಬ್ರಿಟಿಷ್ ಮ್ಯೂಸಿಯಂ ಹಾಗೂ ಗ್ರಂಥಾಲಯದ ಕಾರ್ಯನಿರ್ವಹಣೆಗೆ ನಿರ್ದೇಶಕ ಹಾಗೂ ಗ್ರಂಥಪಾಲರೆಂದು ಉಭಯ ವಿಭಾಗಗಳ ಮುಖ್ಯಸ್ಥರೊಬ್ಬರ ನೇತೃತ್ವದಲ್ಲಿ ಮ್ಯೂಸಿಯಂ ಹಾಗೂ ಗ್ರಂಥಾಲಯದ ವಿವಿಧ ವಿಭಾಗಗಳ ಚಟುವಟಿಕೆಗಳು ನಡೆಯುತ್ತಿತ್ತು. ಒಟ್ಟು 13 ವಿಭಾಗಗಳಿದ್ದು, 8 ವಿಭಾಗಗಳು ಪ್ರಾಚೀನ ಅವಶೇಷಗಳಿಗೆ ಸಂಬಂಧಿಸಿವೆ; 4 ಗ್ರಂಥಾಲಯಕ್ಕೆ ಸಂಬಂಧಿಸಿವೆ. ಇನ್ನೊಂದು ಸಂಶೋಧನೆ ಪ್ರಯೋಗಾಲಯ ವಿಭಾಗ. ಇದು ಎಲ್ಲ ವಿಭಾಗಗಳಿಗೂ ನಿಕಟವಾಗಿ ಹೊಂದಿಕೊಂಡು ಕೆಲಸ ಮಾಡುತ್ತಿದೆ. ಪ್ರತಿಯೊಂದು ವಿಭಾಗಕ್ಕೂ ಒಬ್ಬ ಸಂರಕ್ಷಣಾಪಾಲ ಮತ್ತು ಸಹಾಯಕ ಪಾಲನಿರುತ್ತಾನೆ.

ಎರಡನೆಯ ಮಹಾಯುದ್ಧದ ಪರಿಣಾಮದಿಂದ ಸುಮಾರು 200,000 ಗ್ರಂಥಗಳನ್ನು ಹಾಗೂ ವೃತ್ತಪತ್ರಿಕೆಗಳ 30,000 ಸಂಪುಟಗಳನ್ನು ಗ್ರಂಥಾಲಯ ಕಳೆದುಕೊಂಡಿತು. ಇದಲ್ಲದೇ ವಸ್ತು ಸಂಗ್ರಹಾಲಯಕ್ಕೂ ಹಲವು ಬಗೆಯ ನಷ್ಟ ಸಂಭವಿಸಿತು. ಪ್ಯಾನಿಜ್ಜಿಯವರು 1845ರಲ್ಲಿ ಬ್ರಿಟಿಷ್ ಗ್ರಂಥಾಲಯವನ್ನು ಪುನರ್ ವ್ಯವಸ್ಥೆಗೊಳಿಸಿದರು.

ಬ್ರಿಟಿಷ್ ಮ್ಯೂಸಿಯಂ ಗ್ರಂಥಾಲಯ ಪ್ರಪಂಚದ ರಾಷ್ಟ್ರೀಯ ಗ್ರಂಥಾಲಯಗಳಲ್ಲಿ ಅತಿ ದೊಡ್ಡದು. ಪ್ರಪಂಚದ ಹಲವಾರು ಮೇಧಾವಿಗಳು ಇದರ ಸಹಾಯ ಪಡೆದು ಅಮೂಲ್ಯ ಸಿದ್ಧಾಂತಗಳ ಜಾಗತಿಕ ಕೊಡುಗೆಗಳನ್ನು ನೀಡಿದ್ದಾರೆ. (ಸಿ.ವಿ.ಎಚ್.)

**4. ಫ್ರಾನ್ಸಿನ ರಾಷ್ಟ್ರೀಯ ಗ್ರಂಥಾಲಯ :** ಫ್ರಾನ್ಸಿನ ರಾಜರುಗಳು ಕಾಲ ಕಾಲಕ್ಕೆ ಸಂಗ್ರಹಿಸಿಕೊಂಡು ಬಂದ ಗ್ರಂಥಗಳ ಸಮಾವೇಶದಿಂದ ಆರಂಭವಾದುದು. ಮೊದಲು ಕೇವಲ ಒಂದು ಮಿತಿಯಲ್ಲಿ ಗ್ರಂಥಾಲಯವಾಗಿದ್ದ ಇದಕ್ಕೆ ರಾಷ್ಟ್ರೀಯ ವ್ಯಾಪ್ತಿ ಬಂದದ್ದು 16 ನೆಯ ಶತಮಾನದ ಅನಂತರ. ಇದಕ್ಕೆ ಕಾರಣನಾದವ ರಾಜ ಫ್ರಾನ್ಸ್ವಾ. ಈತ 1537ರಲ್ಲಿ ಒಂದು ಆಜ್ಞೆ ಹೊರಡಿಸಿ, ದೇಶದಲ್ಲಿ ಪ್ರಕಟವಾಗುವ ಪ್ರತಿಯೊಂದು ಪುಸ್ತಕ ಮತ್ತು ಪತ್ರಿಕೆಯ ಒಂದೊಂದು ಪ್ರತಿಯನ್ನು ಗ್ರಂಥಾಲಯಕ್ಕೆ ಕಡ್ಡಾಯವಾಗಿ ಕಳುಹಿಸಬೇಕೆಂದು ಕೋರಿದ. ಇದರಿಂದಾಗಿ ಗ್ರಂಥಾಲಯ ಬೇಗ ಬೇಗನೆ ಅಭಿವೃದ್ಧಿಯಾಯಿತು. ಕ್ರಮೇಣ ಗ್ರಂಥಾಲಯದ ಕಟ್ಟಡವನ್ನು ಅಧುನಾತನಗೊಳಿಸಲಾಯಿತಲ್ಲದೆ ಹೊಸ ಹೊಸ ಕಟ್ಟಡಗಳನ್ನು ಕಟ್ಟಿ ಅದಕ್ಕೆ ಜೋಡಿಸಲಾಯಿತು. ಫ್ರಾನ್ಸಿನ ಮಹಾಕ್ರಾಂತಿಯ ತರುವಾಯ ಗ್ರಂಥಾಲಯಕ್ಕೆ ಮುಕ್ತ ಪ್ರವೇಶವನ್ನು ಕಲ್ಪಿಸಲಾಯಿತು. ಈಗ ಗ್ರಂಥಾಲಯದಲ್ಲಿರುವ ಗ್ರಂಥಗಳ ಮತ್ತು ಹಸ್ತಪ್ರತಿಗಳ ಒಟ್ಟು ಸಂಖ್ಯೆ ಸುಮರು 3 ಲಕ್ಷ ಎಂದು ಅಂದಾಜು ಮಡಲಾಗಿದೆ. ಸರ್ಕಾರ ಕೊಡುವ ವಾರ್ಷಿಕ ಸಹಾಯ ಧನ ಮತ್ತು ಗ್ರಂಥಾಲಯದ ಪ್ರಕಟಣೆಗಳಿಂದ ಬರುವ ಆದಾಯ – ಇವು ಇದರ ಪ್ರಮುಖ ವರಮಾನ ಮೂಲಗಳು. ಇದರ ಸಿಬ್ಬಂದಿ ವರ್ಗ ಸುಮಾರು 800. ಮೇಲ್ವಿಚಾರಣೆ ಶಿಕ್ಷಣ ಇಲಾಖೆಗೆ ಸೇರಿದೆ.

**ಗ್ರಂಥಾಲಯದಲ್ಲಿರುವ ವಿಶಿಷ್ಟ ವಿಭಾಗಗಳಿವು :** 1. ಹಸ್ತಪ್ರತಿಗಳ ವಿಭಾಗ. 2. ನಕ್ಷೆಗಳ ವಿಭಾಗ. 3. ಪದಕಗಳ (ಮೆಡಲ್ಸ್) ವಿಭಾಗ. 4. ಸಂಗೀತ ವಿಭಾಗ. 5. ಪ್ರತೀಕರಣ ವಿಭಾಗ.

**ಗ್ರಂಥಾಲಯದ ಕಾರ್ಯಚಟುವಟಿಕೆಗಳಿವು :** 1. ಸಂಶೋಧಕರಿಗೆ ಆಕರ ಮತ್ತು ಪರಾಮರ್ಶನ ಗ್ರಂಥಗಳನ್ನು ಒದಗಿಸುವುದು. 2. ಅಂತರ ಗ್ರಂಥಾಲಯ ಎರವಲು ಸೇವೆ. ಇದನ್ನು 1922ರಲ್ಲಿ ಪ್ರಾರಂಭಿಸಲಾಯಿತು. ದೇಶ ಮತ್ತು ವಿದೇಶ ಗ್ರಂಥಾಲಯಗಳೊಂದಿಗೆ ಎರವಲು ಸೇವೆಯ ಸೌಕರ್ಯವಿದೆ. 3. ಸು. 97 ದೇಶಗಳಲ್ಲಿರುವ ಸು. 800 ಗ್ರಂಥಾಲಯಗಳೊಂದಿಗೆ ಅಂತಾರಾಷ್ಟ್ರೀಯ ಗ್ರಂಥ ವಿನಿಮಯ ಸೌಲಭ್ಯ ಉಂಟು. ಸರ್ಕಾರಿ ಪ್ರಕಟಣೆಗಳ ವಿನಿಮಯವೂ ಉಂಟು.

**ಗ್ರಂಥಾಲಯದ ಪ್ರಕಟಣೆಗಳಿವು :** ರಾಷ್ಟ್ರೀಯ ಗ್ರಂಥಸೂಚಿ. ವಾರಕ್ಕೊಮ್ಮೆ ಪ್ರಕಟವಾಗುವ ಇದರಲ್ಲಿ ಗ್ರಂಥಾಲಯಕ್ಕೆ ಬಂದ ಗ್ರಂಥ ಮತ್ತು ಪತ್ರಿಕೆಗಳ ಸೂಚಿ, ಪ್ರಕಟಣ ಕಾರ್ಯ ಕುರಿತು ಲೇಖನಗಳು ಮತ್ತು ಪ್ರಕಾಶಕ ಹಾಗೂ ಪುಸ್ತಕ ಮಾರಾಟಗಾರರ ಜಾಹಿರಾತುಗಳು ಪ್ರಕಟವಾಗುತ್ತವೆ. 2 ಇತಿಹಾಸ ಸೂಚಿ. ಫ್ರಾನ್ಸಿನ ಇತಿಹಾಸ ಗ್ರಂಥಗಳನ್ನು ಕುರಿತ ಸೂಚಿ ಇದು.

ಸಂಗೀತ ವಿಭಾಗಕ್ಕಾಗಿ 1964ರಲ್ಲಿ ಒಂದು ಹೊಸ ಭವನವನ್ನೇ ನಿರ್ಮಿಸಲಾಯಿತು. ಹವಾನಿಯಂತ್ರಿತ ವಿಶಾಲವಾದ ಓದುಕೋಣೆಗಳಿರುವ ಈ ಗ್ರಂಥಾಲಯದಲ್ಲಿ ವಿದ್ಯುತ್ ಚಾಲಿತ ಪುಸ್ತಕ ತೊಟ್ಟಿಲು, ಗ್ರಂಥವಾಹಕ ಪಟ್ಟಿಗಳು ಮೊದಲಾದ ಆಧುನಿಕ ಯಂತ್ರೋಪಕರಣಗಳ ಬಳಕೆಯೂ ಉಂಟು. ಗ್ರಂಥಸೂಚಿ ಕಾರ್ಯದಲ್ಲಿ ಕಂಪ್ಯೂಟರ್‌ಗಳನ್ನು ಬಳಸಲಾಗುತ್ತಿದೆ. (ಕೆ.ಎಸ್.ಆರ್‌ಎಜಿ.)

**5. ಪೀಕಿಂಗ್ (ಬೀಜಿಂಗ್) ಗ್ರಂಥಾಲಯ :** ಚೀನದ ರಾಷ್ಟ್ರೀಯ ಗ್ರಂಥಾಲಯ. ಪ್ರಪಂಚದ ದೊಡ್ಡ ಗ್ರಂಥಾಲಯಗಳಲ್ಲಿ ಇದೂ ಒಂದು. ಇಲ್ಲಿರುವ ಗ್ರಂಥಗಳು ಮತ್ತು ಹಸ್ತಪ್ರತಿಗಳ ಒಟ್ಟು ಸಂಖ್ಯೆ ಸುಮಾರು ಏಳು ದಶಲಕ್ಷ ಎಂದು ಅಂದಾಜು ಮಾಡಲಾಗಿದೆ. ದೇಶದಲ್ಲಿ ಕಾಲಕಾಲಕ್ಕೆ ಆಡಳಿತ ನಡೆಸಿದ ವಿವಿಧ ರಾಜಮನೆತನಗಳ ಖಾಸಗಿ ಗ್ರಂಥಾಲಯಗಳೆಲ್ಲ ಇದರಲ್ಲಿ ಸಮಾವೇಶಗೊಂಡಿದೆ. ಹೀಗಾಗಿ ಹಲವು ಅಮೂಲ್ಯ ಬೌದ್ಧ ಹಸ್ತಪ್ರತಿಗಳು ಇಲ್ಲಿವೆ. ದೇಶದ ನಾನಾ ಭಾಗಗಳಲ್ಲಿ ಪ್ರಕಟವಾಗುವ ಪತ್ರಿಕೆಗಳು ಮತ್ತು ಪುಸ್ತಕಗಳ ಪ್ರತಿಗಳು ಇಲ್ಲಿಗೆ ಬರುತ್ತವೆ. ಗ್ರಂಥಾಲಯ ಸಾಕಷ್ಟು ವಿಸ್ತಾರವಾಗಿದ್ದು ಪ್ರತ್ಯೇಕ ಓದುಕೋಣೆಗಳನ್ನು ಹೊಂದಿದೆ. ಸಾರ್ವಜನಿಕರಿಗೆ ಇಲ್ಲಿ ಮುಕ್ತ ಅವಕಾಶ ಉಂಟು. ಮಕ್ಕಳಿಗಾಗಿ ಪ್ರತ್ಯೇಕ ವಿಭಾಗ ಇದೆ. ಪರಾಮರ್ಶನ ಸೇವೆಯೂ ಉಂಟು.

**ಗ್ರಂಥಾಲಯದ ಚಟುವಟಿಕೆಗಳು :** 1. ದೇಶದ ಸುಮಾರು 168 ಗ್ರಂಥಾಲಯಗಳಲ್ಲಿರುವ ವಿದೇಶಿ ಭಾಷೆಗಳ ಸು. 20,270 ನಿಯತಕಾಲಿಕೆಗಳ ಸಂಯುಕ್ತಸೂಚಿಯನ್ನು ಎರಡು ಸಂಪುಟಗಳಲ್ಲಿ ಪ್ರಕಟಿಸಿದೆ (1959). 2. ಸು. 19,115 ನಿಯತಕಾಲಿಕೆಗಳ (1833– 1949 ರ ಅವಧಿಯಲ್ಲಿ ಪ್ರಕಟವಾದ) ಸಂಯುಕ್ತಸೂಚಿಯನ್ನು ಪ್ರಕಟಿಸಿದೆ (1961). 3. ವಿಶ್ವವಿದ್ಯಾಲಯದ ಗ್ರಂಥಾಲಯಗಳು ಮತ್ತು ಮುದ್ರಣಾಲಯಗಳ ಸಹಕಾರದಿಂದ ಮುದ್ರಿತ ಗ್ರಂಥಗಳ ಸೂಚೀ ಪತ್ರಗಳನ್ನು ಸಿದ್ಧಪಡಿಸಿ ಗ್ರಂಥಾಲಯಗಳಿಗೆ ವಿತರಣೆ ಮಾಡಲಾಗುತ್ತಿದೆ. 4. ಪ್ರಕಟವಾದ ಪ್ರತಿ ಪುಸ್ತಕಕ್ಕೂ ವಿವರಣಾತ್ಮಕ ಸೂಚೀಪತ್ರವನ್ನು ಪ್ರಕಟಿಸುವುದು ಇಲ್ಲಿನ ಒಂದು ವೈಶಿಷ್ಟ್ಯ. ದೇಶದಲ್ಲಿ ಪ್ರತಿ ತಿಂಗಳು ಪ್ರಕಟವಾಗುವ ಸು. 2,500 ಪುಸ್ತಕಗಳ ಪೈಕಿ ಸು. 2000 ಪುಸ್ತಕಗಳಿಗೆ ಇಂಥ ಸೂಚೀಪತ್ರಗಳನ್ನು ಸಿದ್ಧಪಡಿಸುತ್ತಿದೆ. ವಿದೇಶೀ ಪುಸ್ತಕಗಳಿಗೂ ಈ ಸೌಕರ್ಯ ಇದೆ. 5. ಅಂತಾರಾಷ್ಟ್ರೀಯ ಗ್ರಂಥ ವಿನಿಮಯ ಉಂಟು. ಹೀಗೆ ಸಂಗ್ರಹವಾದ ಪುಸ್ತಕಗಳನ್ನು ಗ್ರಂಥಾಲಯಗಳಿಗೆ ಹಂಚಲಾಗುತ್ತದೆ. ಅಂತರ ಗ್ರಂಥಾಲಯ ಎರವಲು ಸೇವೆಗೂ ಇದೇ ಕೇಂದ್ರ. 6. ಗ್ರಂಥಾಲಯ ವಿಜ್ಞಾನದಲ್ಲಿ ವಿವಿಧ ತರಬೇತಿಗಳಿಗೆ ಅವಕಾಶವಿದೆ.

ಗ್ರಂಥಾಲಯ ಮತ್ತು ಗ್ರಂಥಾಲಯ ವಿಜ್ಞಾನಕ್ಕೆ ಸಂಬಂಧಿಸಿದಂತೆ ಹಲವು ಪತ್ರಿಕೆಗಳನ್ನು ಇದು ಪ್ರಕಟಿಸುತ್ತದೆ. ಅವುಗಳಲ್ಲಿ ಮುಖ್ಯವಾದವು: ಗ್ರಂಥಾಲಯ ಕಾರ್ಯ ಮತ್ತು ಗ್ರಂಥಾಲಯ ವಿಜ್ಞಾನ ಪತ್ರಿಕೆ. ಇವುಗಳಲ್ಲಿ ಮೊದಲನೆಯದು ಗ್ರಾಮಾಂತರ ಗ್ರಂಥಾಲಯ ಮತ್ತು ಶಾಲಾ ಗ್ರಂಥಾಲಯಗಳ ಕೆಲಸಗಾರರಿಗಾಗಿ; ಎರಡನೆಯದು ಗ್ರಂಥಾಲಯ ವಿಜ್ಞಾನಕ್ಕೆ ಸಂಬಂಧಿಸಿದ ಸಂಶೋಧನ ಲೇಖನಗಳ ಪ್ರಕಟಣೆಗಾಗಿ. ಇದೊಂದು ದ್ವೈಮಾಸಿಕ. 1960ರಿಂದ ಈಚೆಗೆ ಈ ಎರಡು ಪತ್ರಿಕೆಗಳೂ ಸಂಯುಕ್ತವಾಗಿ ಗ್ರಂಥಾಲಯಗಳು ಎಂಬ ಹೆಸರಿನಿಂದ ಪ್ರಕಟವಾಗುತ್ತಿವೆ. ಗ್ರಂಥವಾಚನ ಮತ್ತು ಪ್ರಕಾಶನ ವಾರ್ತೆ ಎಂಬುವು ಉಳಿದ ನಿಯತಕಾಲಿಕೆಗಳು. (ಕೆ.ಎಸ್.ಆರ್‌ಎಜಿ.)

**6. ಭಾರತದ ರಾಷ್ಟ್ರೀಯ ಗ್ರಂಥಾಲಯ :** ಕೋಲ್ಕತದಲ್ಲಿರುವ ರಾಷ್ಟ್ರೀಯ ಗ್ರಂಥಾಲಯ. ಬ್ರಿಟಿಷರ ಕಾಲದಲ್ಲಿದ್ದ ಇಂಪೀರಿಯಲ್ ಗ್ರಂಥಾಲಯವನ್ನು ಸ್ವಾತಂತ್ರ್ಯಾನಂತರ ಭಾರತ ಸರ್ಕಾರ ರಾಷ್ಟ್ರೀಯ ಗ್ರಂಥಾಲಯವನ್ನಾಗಿ ಪರಿವರ್ತಿಸಿತು. ಇದೀಗ ರಾಷ್ಟ್ರದ ಬೃಹದ್ ಗ್ರಂಥಾಲಯವಾಗಿದೆ.

ಕೋಲ್ಕತದ ಪ್ರಮುಖರಾದ ದ್ವಾರಕಾನಾಥ ಠಾಕೂರ್ ಮತ್ತು ಪ್ಯಾರಿ ಚಂದ್ರ ಮಿತ್ರ ಅವರು ಎಲ್ಲರಿಗೂ ಪ್ರವೇಶವುಳ್ಳ ಗ್ರಂಥಾಲಯವೊಂದನ್ನು ಸ್ಥಾಪಿಸಬೇಕೆಂದು ನಿರ್ಧರಿಸಿದರು. ಅವರ ಪರಿಶ್ರಮದ ಫಲವಾಗಿ ಕಲ್ಕತ್ತ ಸಾರ್ವಜನಿಕ ಗ್ರಂಥಾಲಯ ಸ್ಥಾಪಿಸಲ್ಪಟ್ಟಿತು (1835).

ಭಾರತದ ವೈಸ್‌ರಾಯ್ ಆಗಿದ್ದ ಕರ್ಜನ್ ಕಲ್ಕತ್ತಕ್ಕೆ ಭೇಟಿಯಿತ್ತಾಗ ಈ ಗ್ರಂಥಾಲಯವನ್ನು ಸಂದರ್ಶಿಸಿ (1899) ಅದರ ಅಂದಿನ ದುಃಸ್ಥಿತಿಯನ್ನು ಗಮನಿಸಿ ಅದರ ಸ್ವಾಮ್ಯವನ್ನು ಕೊಂಡುಕೊಂಡ. ಈಸ್ಟ್ ಇಂಡಿಯ ಕಾಲೇಜು ಗ್ರಂಥಾಲಯ ಮತ್ತು ಕಲ್ಕತ್ತದಲ್ಲಿರುವ ಭಾರತ ಸರ್ಕಾರದ ವಿವಿಧ ಶಾಖೆಗಳನ್ನು ಇದರೊಡನೆ ವಿಲೀನಗೊಳಿಸಿ ಮೆಟ್‌ಕಾಫ್ ಭವನಕ್ಕೆ ಇದನ್ನು ಸ್ಥಳಾಂತರಿಸಿದ. ಇವೆಲ್ಲವುಗಳ ವಿಲೀನದಿಂದ ಆದ ಗ್ರಂಥಾಲಯವನ್ನು ಇಂಪೀರಿಯಲ್ ಲೈಬ್ರರಿ ಎಂದು ಹೆಸರಿಸಿದ. 1902ರಲ್ಲಿ ಇಂಪೀರಿಯಲ್ ಗ್ರಂಥಾಲಯ ಕಾಯಿದೆ ಅಂಗೀಕೃತವಾಯಿತು. 1903ರ ಜನವರಿಯಲ್ಲಿ ಈ ಗ್ರಂಥಾಲಯವನ್ನು ಸಾರ್ವಜನಿಕರ ಉಪಯೋಗಕ್ಕಾಗಿ ತೆರೆಯಲಾಯಿತು. ತಮ್ಮ ಜ್ಞಾನತೃಷೆಯನ್ನಾರಿಸಿಕೊಳ್ಳಲು ಜನ ಬ್ರಿಟಿಷ್ ಮ್ಯೂಸಿಯಂ ಲೈಬ್ರರಿಗೆ ಬರುವಂತೆ ಇಲ್ಲಿಯ ಗ್ರಂಥಾಲಯಕ್ಕೂ ಬರಬೇಕೆನ್ನುವುದು ಕರ್ಜನ್ನನ ಮನೀಷೆ. ಈತ ಭಾರತದ ಗ್ರಂಥಾಲಯಕ್ಕೆ ಬ್ರಿಟಿಷ್ ಮ್ಯೂಸಿಯಂನಲ್ಲಿ ಕೆಲಸ ಮಡುತ್ತಿದ್ದ ಜಾನ್ ಮ್ಯಾಕ್‌ಫರ್ಲೆಸ್ ಎಂಬಾತನನ್ನು ಗ್ರಂಥಪಾಲನಾಗಿ ನೇಮಿಸಿದ. ಇವನ ಬಳಿಕ ಕ್ರಮವಾಗಿ ಭಾಷಾವಿಜ್ಞಾನಿ ಹರಿನಾಥ ಡೇ, ಕವಿ ಜೆ. ಎ. ಚಾಪ್‌ಮನ್, ಶಿಕ್ಷಣ ತಜ್ಞ ಕೆ. ಎಂ. ಅಸದುಲ್ಲ ಇವರು ಗ್ರಂಥಪಾಲರಾಗಿದ್ದರು.



ರಾಷ್ಟ್ರೀಯ ಗ್ರಂಥಾಲಯ, ಕೋಲ್ಕತ

ಈ ಗ್ರಂಥಾಲಯ ಕಾರ್ಯಾರಂಭ ಮಾಡಿದ್ದು ಒಂದು ಲಕ್ಷ ಗ್ರಂಥಗಳ ಸಂಗ್ರಹದಿಂದ. ದೇಶಕ್ಕೆ ಸ್ವಾತಂತ್ರ್ಯ ದೊರೆತ ಕೆಲದಿನಗಳಲ್ಲಿಯೇ ಇದರ ಹೆಸರನ್ನು ಭಾರತೀಯ ರಾಷ್ಟ್ರೀಯ ಗ್ರಂಥಾಲಯವೆಂದು ಬದಲಿಸಿದುದಲ್ಲದೆ ಅಂದಿಗೆ ಗವರ್ನರ್ ಜನರಲ್ಲರ ಅರಮನೆಯಾಗಿದ್ದ ಕಲ್ಕತ್ತದ ಬೆಲ್‌ವೆಡಿಯರ್ ಭವನಕ್ಕೆ ಇದನ್ನು ಸ್ಥಳಾಂತರಿಸಲಾಯಿತು. ಸು. 13 ಲಕ್ಷ ರೂ. ಗಳ ವೆಚ್ಚದಲ್ಲಿ ಈ ಭವನವನ್ನು ಪುನರ್ನವೀಕರಣಗೊಳಿಸಿದ್ದು 1963ರಲ್ಲಿ.

1953ರ ಫೆಬ್ರುವರಿ 1 ರಂದು ಈ ಗ್ರಂಥಾಲಯವನ್ನು ಸಾಂಪ್ರದಾಯಿಕವಾಗಿ ಸಾರ್ವಜನಿಕರಿಗೆ ತೆರೆದವರು ಅಂದಿನ ಶಿಕ್ಷಣ ಸಚಿವ, ಮೌಲಾನ ಅಬುಲ್ ಕಲಮ್ ಆಜ಼ಾದ್. ಇದರ ಮೊದಲ ಗ್ರಂಥಪಾಲರಾಗಿ ಅಧಿಕಾರ ವಹಿಸಿದವರು ಕನ್ನಡಿಗರಾದ ಬಿ. ಎಸ್. ಕೇಶವನ್ ಅವರು. 14 ವರ್ಷಗಳ ಅವರ ನಿರಂತರ ಶ್ರಮದಿಂದ ಈ ಗ್ರಂಥಾಲಯಕ್ಕೆ ಒಂದು ಭದ್ರ ಅಸ್ತಿತ್ವ ಬಂತು.

1954ರಲ್ಲಿ ಅಂಗೀಕೃತವಾದ ಡೆಲಿವರಿ ಆಫ್ ಬುಕ್ಸ್ ಕಾಯಿದೆಗೆ ಅನುಗುಣವಾಗಿ ಎಲ್ಲ ಪ್ರಕಾಶಕರೂ ತಾವು ಪ್ರಕಟಿಸಿದ ಪುಸ್ತಕಗಳ ಒಂದು ಪ್ರತಿಯನ್ನು ಈ ಗ್ರಂಥಾಲಯಕ್ಕೆ ಉಚಿತವಾಗಿ ಕಳುಹಿಸಬೇಕಾಗಿದೆ. 1956ರಲ್ಲಿ ಈ ಕಾಯಿದೆಗೆ ತಿದ್ದುಪಡಿ ತಂದದ್ದರಿಂದ ದಿನ ಪತ್ರಿಕೆ ಮತ್ತು ನಿಯತಕಾಲಿಕೆಗಳೂ ಈ ಗ್ರಂಥಾಲಯದಲ್ಲಿ ದೊರೆಯುವಂತಾಗಿದೆ. ಇದು ಭಾರತ ಸರ್ಕಾರದ ಶಿಕ್ಷಣ ಇಲಾಖೆಯ ಅಂಕಿತಕ್ಕೊಳಪಟ್ಟಿದೆ. ಆಡಳಿತ ನಡೆಸಲು ಒಂದು ಕಾರ್ಯಕಾರಿ ಮಂಡಳಿ ಇದೆ. ಶಿಕ್ಷಣ ಶಾಖೆಯ ಕಾರ್ಯದರ್ಶಿ ಈ ಮಂಡಳಿಯ ಸಭಾಧ್ಯಕ್ಷ. ಗ್ರಂಥಪಾಲ ಸದಸ್ಯ ಕಾರ್ಯದರ್ಶಿ.

ಈ ಗ್ರಂಥಾಲಯದಲ್ಲಿ ಒಟ್ಟಿಗೆ 50ಕ್ಕೂ ಹೆಚ್ಚು ಭಾಷೆಗಳಲ್ಲಿನ 12,299 ನಿಯತ ಕಾಲಿಕೆಗಳು ಬರುತ್ತಿವೆ. 1,640 ಅಮೂಲ್ಯ ಹಸ್ತಪ್ರತಿಗಳ ಸಂಗ್ರಹವಿದೆ. ಇಲ್ಲಿ ವೈಯಕ್ತಿಕ ಸಂಗ್ರಹಗಳೂ ಇವೆ. ಅವುಗಳಲ್ಲಿ ಮುಖ್ಯವಾಗಿ ಅಸುತೋಷ ಮುಖರ್ಜಿಯವರ 80 ಸಾವಿರಕ್ಕೂ ಮಿಕ್ಕ ಸಂಗ್ರಹ; ಥಿಬಾ ಅವರ ಸಂಸ್ಕøತ ಸಂಗ್ರಹ; ಬುಹಾರ ಜಮೀನುದಾರರ ಅರಬ್ಬೀ, ಪಾರಸಿ ಮತ್ತು ಉರ್ದು ಸಂಗ್ರಹ; ರಾಮದಾಸ ಸೇನರ ಬಂಗಾಲಿ ಸಂಗ್ರಹ; ಜದುನಾಥ ಸರ್ಕಾರರ ಇತಿಹಾಸಸಂಗ್ರಹ; ವೈಯಾಪುರಿ ಪಿಳ್ಳೆಯವರ ಸಾಹಿತ್ಯ ಸಂಗ್ರಹ; ಬೋಲಾರಾಮ ಸಂಗ್ರಹ; 3,000ಕ್ಕೂ ಹೆಚ್ಚು ಚೀನಿ ಸಂಗ್ರಹ; ಅಮೆರಿಕಕ್ಕೆ ಸಂಬಂಧಪಟ್ಟ ಸಂಗ್ರಹ; ದೇಶದಲ್ಲಿಯ ಧುರೀಣರ ವೈಯಕ್ತಿಕ ಕಾಗದ ಪತ್ರಗಳ ಸಂಗ್ರಹ– ಇಂಥ ಇನ್ನೂ ಅನೇಕ ಶ್ರೇಷ್ಠ ಸಂಗ್ರಹಗಳು ಈ ಗ್ರಂಥಾಲಯದಲ್ಲಿವೆ.

ಭಾರತೀಯ ಭಾಷೆಗಳಲ್ಲಿ 1651ರಿಂದ 1880ರ ವರೆಗೆ ಮೊದಲು ಮುದ್ರಿತವಾದ ಗ್ರಂಥಗಳ ಅತ್ಯಮೂಲ್ಯ ಸಂಗ್ರಹ ಈ ಗ್ರಂಥಾಲಯದಲ್ಲಿದೆ. ಅವುಗಳಲ್ಲಿ ಮುಖ್ಯವಾದವು – ವರ್ಸಸ್ ಆಫ್ ಪೊಯೆಟ್ ಭರ್ತೃಹರಿ. ಸಂಸ್ಕøತದಿಂದ ಡಚ್ ಭಾಷೆಗೆ ಇದನ್ನು ತಂದವ ಏಬ್ರಹಾಂ ರೋಜರ್ಸ್. ಇದು 1651ರಲ್ಲಿ ಪ್ರಕಟವಾದದ್ದು. ಚಾರ್ಲಸ್ ವಿಲ್‌ಕಿನ್ಸ್ 1785ರಲ್ಲಿ ಭಾಷಾಂತರಿಸಿದ ಭಗವದ್ಗೀತೆಯ ಇಂಗ್ಲಿಷ್ ಅನುವಾದ ಸಾಂಗ್ಸ್ ಆಫ್ ಅಡೋರಬಲ್ ವನ್, ಸರ್ ವಿಲಿಯಮ್ ಜೋನ್ಸ್‌ನ ಕಾಳಿದಾಸನ ಶಾಕುಂತಲಾ ನಾಟಕದ ಅನುವಾದ (1789) ಮತ್ತು 1792ರಲ್ಲಿ ಅನುವಾದವಾದ ಋತುಸಂಹಾರ, 1808ರಲ್ಲಿ ಚಾರ್ಲಸ್ ವಿಲ್‌ಕಿನ್ಸ್‌ನ ಸಂಸ್ಕೃತಗ್ರಾಮರ್ ಮುಂತಾದವು. ವಿಲಿಯಮ್ ರೀವ್‌ನ ಇಂಗ್ಲಿಷ್– ಕರ್ನಾಟಕ ಡಿಕ್ಷನರಿ (1824); ಕರ್ನಾಟಕ–ಇಂಗ್ಲಿಷ್ ಡಿಕ್ಷನರಿ (1832); ಜಾನ್ ಬನ್ಯನ್ನನ ಪಿಲ್‌ಗ್ರಿಂಸ್ ಪ್ರೊಗ್ರೆಸಿನ ಭಾಷಾಂತರವಾದ ದೇಶಾಂತ್ರಿಯ ಪ್ರಯಾಣವು (1833) ಮೊದಲಾದ ಅನೇಕ ಕನ್ನಡ ಗ್ರಂಥಗಳು ಇಲ್ಲಿವೆ.

1954 ರಲ್ಲಿ ಡೆಲಿವರಿ ಆಫ್ ಬುಕ್ಸ್ ಕಾಯಿದೆ ಕಾರ್ಯಗತವಾದ ಮೇಲೆ ಈ ಗ್ರಂಥಾಲಯಕ್ಕೆ 3,93,826 ಗ್ರಂಥಗಳೂ ನಿಯತಕಾಲಿಕೆಗಳೂ ಉಚಿತವಾಗಿ ಬಂದಿವೆ. ಈ ಗ್ರಂಥಾಲಯದಲ್ಲಿ 500ಕ್ಕೂ ಹೆಚ್ಚು ನೌಕರರಿದ್ದಾರೆ. ಅವರಲ್ಲಿ 200ಕ್ಕೂ ಹೆಚ್ಚು ಜನ ಗ್ರಂಥಾಲಯ ವಿಜ್ಞಾನದಲ್ಲಿ ತರಬೇತು ಪಡೆದವರು.

1970ರಲ್ಲಿ ಈ ಗ್ರಂಥಾಲಯದ ಸದಸ್ಯರ ಸಂಖ್ಯೆ 17,000ಇತ್ತು. ಆ ವರ್ಷ ಈ ಗ್ರಂಥಾಲಯ ಎರವಲು ಕೊಟ್ಟ ಗ್ರಂಥಗಳ ಸಂಖ್ಯೆ 74,000. 28 ವಿದೇಶೀ ಗ್ರಂಥಾಲಯಗಳಿಗೆ ಅಂತರ ಎರವಲು ಸೌಲಭ್ಯವನ್ನು ನೀಡಿತು. ಇದಲ್ಲದೆ 11,000 ಮೈಕ್ರೋ ಫಿಲ್ಮ್‌ಗಳನ್ನು ವಿವಿಧ ಸಂಘ– ಸಂಸ್ಥೆಗಳಿಗೆ ಒದಗಿಸಿದ್ದುಂಟು.

1960ರಲ್ಲಿ ಮಕ್ಕಳ ವಿಭಾಗವನ್ನು ಪ್ರಾರಂಭಿಸಲಾಯಿತು. ಮಕ್ಕಳ ಮನಸ್ಸನ್ನಾಕರ್ಷಿಸುವಂತೆ ಇಲ್ಲಿ ಆಸನ ಹಾಗೂ ಚಿತ್ರಗಳನ್ನು ಅಳವಡಿಸಲಾಗಿದೆ.

ಈ ಗ್ರಂಥಾಲಯ ಭಾರತದ ರಾಷ್ಟ್ರೀಯ ಗ್ರಂಥಸೂಚಿಯ (ಇಂಡಿಯನ್ ನ್ಯಾಷನಲ್ ಬಿಬ್ಲಿಯಾಗ್ರಫಿ) ಮೊದಲನೆಯ ಸಂಚಿಕೆಯನ್ನು 1958ರ ಆಗಸ್ಟ್ 15 ರಂದು ಪ್ರಕಟಿಸಿತು. 1965ರಿಂದ ಇದು ಮಾಸಿಕವಾಗಿ ಪ್ರಕಟವಾಗುತ್ತಿದೆ. ಈ ಗ್ರಂಥ ಸೂಚಿಯಲ್ಲಿ ಭಾರತದಲ್ಲಿ ಪ್ರಕಟವಾಗುವ ಪ್ರತಿಯೊಂದು ಗ್ರಂಥದ ವರ್ಗೀಕೃತ ವ್ಯವಸ್ಥೆಯಿದ್ದು ಅದನ್ನು ಎರಡು ಭಾಗಗಳಲ್ಲಿ ವಿಂಗಡಿಸಲಾಗಿದೆ. ಮೊದಲನೆಯ ಭಾಗದಲ್ಲಿ ಸಾಮಾನ್ಯ ಪ್ರಕಟಣೆಗಳನ್ನು ಮತ್ತು ಎರಡನೆಯ ಭಾಗದಲ್ಲಿ ಭಾರತ ಸರ್ಕಾರದ ಪ್ರಕಟಣೆಗಳನ್ನು ಸೇರಿಸಲಾಗಿದೆ. ಪ್ರತಿಭಾಗದಲ್ಲಿ ಎರಡು ಉಪಭಾಗಗಳಿದ್ದು ಮೊದಲನೆಯ ಭಾಗದಲ್ಲಿ ಪಟ್ಟಿಕೆಗಳನ್ನು ಡ್ಯೂಯಿ ದಾಶಮಿಕ ವರ್ಗೀಕರಣದ ಪ್ರಕಾರ ಜೋಡಿಸಲಾಗಿದೆ. ದ್ವಿಬಿಂದು ವರ್ಗೀಕರಣದ ಚಿಹ್ನೆಗಳನ್ನು ಪಟ್ಟಿಕೆಯ ಮುಂದೆ ಕೊಡಲಾಗಿದೆ. ಇದರಲ್ಲಿ ಲೇಖಕ ಶಿರೋನಾಮೆ ಮತ್ತು ವಿಷಯಗಳ ವರ್ಣಾನುಕ್ರಮ ವ್ಯವಸ್ಥೆ ಮಾಡಲಾಗಿದೆ.

ರಾಷ್ಟ್ರೀಯ ಗ್ರಂಥಾಲಯ ವಿಶೇಷ ಗ್ರಂಥಸೂಚಿಗಳನ್ನು ಸಂಕಲಿಸಿದೆ. ಭಾರತೀಯ ಶಾಸ್ತ್ರಕ್ಕೆ ಸಂಬಂಧಪಟ್ಟ 56 ಗ್ರಂಥಸೂಚಿಗಳನ್ನು ಹೊರತರುವ ಕಾರ್ಯಕ್ರಮವನ್ನು ಕೈಗೊಂಡಿತ್ತು. ಈಗಾಗಲೇ ಮಾನವಕುಲ ಮತ್ತು ಸಸ್ಯಶಾಸ್ತ್ರ ವಿಷಯಗಳ ಸೂಚಿಗಳು 1960 ಮತ್ತು 1962ರಲ್ಲಿ ಪ್ರಕಟವಾಗಿದೆ. ಬಂಗಾಲಿ ಭಾಷೆಯ ಸೂಚಿಯ ಮೊದಲನೆಯ ಭಾಗ ಪ್ರಕಟವಾಗಿದ್ದು 1964ರಲ್ಲಿ.

ಸಪ್ರು ಅವರ ಕಾಗದಗಳ ಸಂಪುಟಗಳು 1961ರಲ್ಲಿ ಬಿಡುಗಡೆ ಮಾಡಲ್ಪಟ್ಟವು.

ಅಸುತೋಷ್ ಸಂಗ್ರಹದ ಸೂಚಿಯ ಮೊದಲಿನ ಎರಡು ಸಂಪುಟಗಳು ಪ್ರಕಟಿಸಲ್ಪಟ್ಟಿದ್ದು ಲಲಿತಕಲೆಗಳ ಮೊದಲನೆಯ ಸಂಪುಟ 1957ರಲ್ಲಿ ಮತ್ತು ಸಾಹಿತ್ಯದ (ಅಮೆರಿಕನ್ ಮತ್ತು ಯುರೋಪಿಯನ್) ಎರಡನೆಯ ಸಂಪುಟ 1963ರಲ್ಲಿ ಪ್ರಕಟಗೊಂಡವು.

ಭಾರತ ಸರ್ಕಾರದ ಶಿಕ್ಷಣ ಇಲಾಖೆ ಡಾ. ವಿ.ಎಸ್. ಝಾ ಅವರ ಅಧ್ಯಕ್ಷತೆಯಲ್ಲಿ ಗ್ರಂಥಾಲಯ ಸಮೀಕ್ಷಣ ಸಮಿತಿಯೊಂದನ್ನು ನೇಮಿಸಿತು. ಈ ಸಮಿತಿ ತನ್ನ ವರದಿಯನ್ನು ಸಲ್ಲಿಸಿದ್ದು 1969ರ ಜುಲೈನಲ್ಲಿ. ಈ ವರದಿಯಲ್ಲಿನ ಶಿಫಾರಸುಗಳ ಆಧರದ ಮೇಲೆ ಇದರ ಆಡಳಿತವನ್ನು ಸ್ವತಂತ್ರವಾದ ಒಂದು ಮಂಡಳಿಗೆ ಒಪ್ಪಿಸಬೇಕೆಂದು ಸರ್ಕಾರ ನಿರ್ಧರಿಸಿದೆ. ಆ ಬಗ್ಗೆ ಕಾಯಿದೆಯೊಂದನ್ನು ಸಂಸತ್ತಿನಲ್ಲಿ ತರಲಿದೆ.

ಭಾರತ ಸರ್ಕಾರ ಈ ಗ್ರಂಥಾಲಯದಲ್ಲಿರುವ ಅಮೂಲ್ಯ ಸಾಮಗ್ರಿಗಳನ್ನು ಕಾಯ್ದಿಡುವುದರ ಸಲುವಾಗಿ ಧನ ಸಹಾಯ ನೀಡಿದ್ದು ಈಗಾಗಲೇ ಸಂಸ್ಕೃತ, ಅರಬ್ಬೀ, ಮತ್ತು ಪಾರಸಿ ಭಾಷೆಗಳಲ್ಲಿಯ ಅಮೂಲ್ಯ ಹಸ್ತಪ್ರತಿಗಳನ್ನು ಮೈಕ್ರೊಫಿಲ್ಮ್‌ಗೆ ರೂಪಾಂತರಿಸಲಾಗಿದೆ.

ಸಂಶೋಧಕ ಸಾಮಗ್ರಿಗಳ ರಾಷ್ಟ್ರೀಯ ಸಂಯುಕ್ತಸೂಚಿಯನ್ನು (ನ್ಯಾಷನಲ್ ಕ್ಯಾಟಲಾಗ್) ತಯಾರಿಸುವ ಯೋಜನೆಯನ್ನು ಕಾರ್ಯಗತ ಮಾಡುವ ಪ್ರಯತ್ನ ನಡೆದಿದೆ.

(ಟಿ.ಎಲ್.ಬಿ.)

**F. ಸಂಪರ್ಕ ಗ್ರಂಥಾಲಯಗಳು :** ಒಂದು ರಾಷ್ಟ್ರ ತನ್ನ ನಾಡಿಗೆ ಸಂಬಂಧಪಟ್ಟ ವಿವರಗಳನ್ನು, ಪುಸ್ತಕ, ವೃತ್ತಪತ್ರಿಕೆ, ಮಾರ್ಗದರ್ಶಿನಿ, ವರದಿ, ಚಲನಚಿತ್ರ, ಛಾಯಾಚಿತ್ರ ಮತ್ತಿತರ ಸಾಮಗ್ರಿಗಳ ಮೂಲಕ ಇತರ ರಾಷ್ಟ್ರದ ಜನರಿಗೆ ಒದಗಿಸಲು ಸ್ಥಾಪಿತವಾಗಿರುವ ಗ್ರಂಥಾಲಯಗಳಿವು (ಕಾಂಟ್ಯಾಕ್ಟ್ ಲೈಬ್ರರೀಸ್). ಇವು ಎರಡು ರಾಷ್ಟ್ರಗಳ ನಡುವೆ ಸಂಪರ್ಕ ಮಾಧ್ಯಮವಾಗಿಯೂ ಪರಿಣಮಿಸುತ್ತವೆ. ಎರಡನೆಯ ಮಹಾಯುದ್ಧದ ಅನಂತರ ಜಾಗತಿಕ

ಶಾಂತಿ ಮತ್ತು ಪರಸ್ಪರ ಅರಿವುಗಳಿಗಾಗಿ ಇಂಥ ಗ್ರಂಥಾಲಯಗಳನ್ನು ತೆರೆಯುವುದರಲ್ಲಿ ಅನೇಕ ರಾಷ್ಟ್ರಗಳು ಆಸಕ್ತಿ ವಹಿಸಿದವು. ತಮ್ಮ ರಾಷ್ಟ್ರದ ಜನಜೀವನ, ಆಡಳಿತ ನೀತಿ, ಮತ್ತು ವಿದೇಶಾಂಗ ನೀತಿಗಳನ್ನು ಇನ್ನೊಂದು ದೇಶಕ್ಕೆ ಸುಲಭವಾಗಿ ಪರಿಚಯಿಸಲು ಇವುಗಳಿಂದ ಸಾಧ್ಯವಾಯಿತು. ಭಾರತ ಸರ್ಕಾರ ನ್ಯೂಯಾರ್ಕ್ ಮತ್ತಿತರ ಪಟ್ಟಣಗಳಲ್ಲಿ ಭಾರತ ವಾರ್ತಾ ಗ್ರಂಥಾಲಯವನ್ನು ತೆರೆದಿದೆ. ಅಮೆರಿಕ ಸರ್ಕಾರ ಪ್ರಪಂಚಾದ್ಯಂತ ಯುನೈಟೆಡ್ ಸ್ಟೇಟ್ಸ್ ಇನ್‌ಫರ್‌ಮೇಷನ್ ಸರ್ವಿಸ್ ಗ್ರಂಥಾಲಯಗಳನ್ನು ಸ್ಥಾಪಿಸಿದೆ. ಭಾರತದಲ್ಲಿ ಇವನ್ನು ಅಮೆರಿಕನ್ ಗ್ರಂಥಾಲಯ ಗಳೆನ್ನುತ್ತಾರೆ. ಹಾಗೆಯೇ ಬ್ರಿಟಿಷ್ ಸರ್ಕಾರ ಬ್ರಿಟಿಷ್ ಇನ್‌ಫರ್‌ಮೇಷನ್ ಸರ್ವಿಸ್ ಹಾಗೂ ಬ್ರಿಟಿಷ್ ಕೌನ್ಸಿಲುಗಳನ್ನು ಸ್ಥಾಪಿಸಿದೆ. ಸ್ವದೇಶದ ಆಡಳಿತ ವ್ಯವಸ್ಥೆ, ವಿದೇಶಾಂಗದ ನೀತಿ, ಆರ್ಥಿಕ ಸಾಮಾಜಿಕ ಶೈಕ್ಷಣಿಕ ವ್ಯವಸ್ಥೆಗಳು, ವಿಜ್ಞಾನ ಮುನ್ನಡೆ, ಕಲೆ, ಸಾಹಿತ್ಯ, ಸಂಸ್ಕೃತಿಗಳ ವಿಚಾರ – ಇವನ್ನು ಕುರಿತು ತಿಳಿವಳಿಕೆ ಕೊಡುವುದು ಈ ಗ್ರಂಥಾಲಯಗಳ ಪ್ರಮುಖ ಉದ್ದೇಶ. ಇದರಿಂದ ಎರಡು ರಾಷ್ಟ್ರಗಳ ನಡುವೆ ಹೆಚ್ಚು ವ್ಯಾಪಕವೂ ಆಳವೂ ಆದ ಅರಿವು ಮೂಡುತ್ತದೆಂದು ನಂಬಲಾಗಿದೆ.

ಸಂಪರ್ಕ ಗ್ರಂಥಾಲಯಗಳಲ್ಲಿ ಎಲ್ಲರಿಗೂ ಪ್ರವೇಶ ಉಂಟು. ವ್ಯಕ್ತಿ ಮತ್ತು ಸಂಸ್ಥೆಗಳನ್ನು ಸದಸ್ಯರನ್ನಾಗಿ ಇವು ಅಂಗೀಕರಿಸುತ್ತವೆ ಮತ್ತು ಪುಸ್ತಕಗಳನ್ನು ಉಚಿತವಾಗಿ ಎರವಲು ಕೊಡುತ್ತವೆ. ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ವೃತ್ತಿ ಜೀವಿಗಳಿಗೆ ಈ ಗ್ರಂಥಾಲಯಗಳಿಂದ ಬಹಳ ಪ್ರಯೋಜನವಿದೆ. ತನ್ನ ಸದಸ್ಯರಿಗೆ ವಾರ್ತಾ ಸಾಹಿತ್ಯವನ್ನು ಇವು ಒದಗಿಸುತ್ತವೆ. ಕೆಲವು ಮುಖ್ಯ ಕೇಂದ್ರಗಳಲ್ಲಿ (ಉದಾಹರಣೆ: ಭಾರತದಲ್ಲಿ ದೆಹಲಿ) ಅಗತ್ಯವಿರುವ ಅಂಶಗಳಿಗೆ ವ್ಯವಸ್ಥಿತವಾದ ಪ್ರಲೇಖನ (ಡಾಕ್ಯುಮೆಂಟೇಷನ್) ಸೌಲಭ್ಯವೂ ಉಂಟು. ರಾಷ್ಟ್ರದ ವಿವಿಧ ಭಾಗಗಳಲ್ಲಿ ಪುಸ್ತಕ ಮತ್ತು ಚಿತ್ರಪ್ರದರ್ಶನಗಳನ್ನು ಏರ್ಪಡಿಸುತ್ತವೆ. ಪ್ರಮುಖ ವಿಚಾರಗಳನ್ನು ಕುರಿತು ವಿಚಾರ ಸಂಕಿರಣ ಮತ್ತು ಕಾರ್ಯ ಶಿಬಿರಗಳನ್ನು ನಡೆಸುತ್ತವೆ. ಆಗಾಗ್ಗೆ ಉಪಯುಕ್ತವಾದ ಗ್ರಂಥಗಳನ್ನು ಶಾಲಾ ಕಾಲೇಜುಗಳಿಗೆ ಉಚಿತವಾಗಿ ಹಂಚುತ್ತವೆ. ಒಂದು ಒಳ್ಳೆಯ ಗ್ರಂಥಾಲಯ ಜನತೆ ಮತ್ತು ದೇಶಕ್ಕೆ ಎಷ್ಟರಮಟ್ಟಿಗೆ ಸೇವೆಯನ್ನು ಸಲ್ಲಿಸಬಹುದೆಂಬುದಕ್ಕೆ ಈ ಗ್ರಂಥಾಲಯಗಳು ಮಾದರಿಯಾಗಿವೆ. (ಎಚ್.ಎ.ಕೆ.)

**G. ಕಾಪಿರೈಟ್ ಗ್ರಂಥಾಲಯಗಳು :** ರೂಢಿಯಲ್ಲಿ, ಒಂದು ರಾಷ್ಟ್ರದ ಕಾನೂನಿನ ಪ್ರಕಾರ ಯಾವ ಗ್ರಂಥಾಲಯಕ್ಕೆ ಆ ದೇಶದಲ್ಲಿ ಪ್ರಕಟವಾಗುವ ಎಲ್ಲ ಪುಸ್ತಕಗಳ ಒಂದೊಂದು ಪ್ರತಿಯನ್ನು ಕಳುಹಿಸತಕ್ಕದ್ದು ಎಂದು ನಿರ್ಣಯವಾಗಿರುತ್ತದೋ ಅಂಥದಕ್ಕೆ ಕಾಪಿರೈಟ್ ಗ್ರಂಥಾಲಯ ಎಂದು ಹೆಸರು. 1956ರ ಕಾಪಿರೈಟ್ ಶಾಸನ ಇಂಗ್ಲೆಂಡಿನಲ್ಲಿ ಪ್ರತಿಯೊಬ್ಬ ಪ್ರಕಾಶಕನೂ ತಾನು ಪ್ರಕಟಿಸುವ ಪ್ರತಿಯೊಂದು ಪುಸ್ತಕದ ಒಂದು ಪ್ರತಿಯನ್ನು ಒಂದು ತಿಂಗಳ ಒಳಗಾಗಿ ತನ್ನ ವೆಚ್ಚದಲ್ಲಿ ಬ್ರಿಟಿಷ್ ಮ್ಯೂಸಿಯಮಿಗೆ ತಲುಪಿಸತಕ್ಕದ್ದು ಎಂದು ವಿಧಿಸುತ್ತದೆ. ಪ್ರಕಾಶಕನಿಗೆ ಲಿಖಿತ ಬೇಡಿಕೆ ಬಂದರೆ ಇನ್ನೂ ಕೆಲವು ನಿರ್ದಿಷ್ಟ ಗ್ರಂಥಾಲಯಗಳಿಗೆ ಪ್ರತಿಗಳನ್ನು ಒದಗಿಸತಕ್ಕದ್ದು. ಈ ನಿಯಮದ ಉಲ್ಲಂಘನೆ ಮಾಡಿರುವುದು ಸಾಬೀತಾದರೆ ಶಿಕ್ಷೆಯಾಗಿ ಪುಸ್ತಕದ ಬೆಲೆಯ ಜೊತೆಗೆ ಐದು ಪೌಂಡುಗಳ ಜುಲ್ಮಾನೆ ವಿಧಿಸಬಹುದು. ಸಂಶೋಧನೆ ಮತ್ತು ಅಧ್ಯಯನಗಳಿಗಾಗಿ ಕಾಪಿರೈಟ್ ಬರೆಹಗಳ ಉಪಯೋಗ, ವಿದ್ಯಾರ್ಥಿಗಳಿಗೆ ಮತ್ತು ಇತರ ಗ್ರಂಥಾಲಯಗಳಿಗೆ ಗ್ರಂಥಪಾಲ ಪ್ರತಿಗಳನ್ನು ಒದಗಿಸುವುದು–ಈ ವಿಚಾರಗಳನ್ನು 1956ರ ಕಾಪಿರೈಟ್ ಶಾಸನ ಕ್ರಮಗೊಳಿಸಿದೆ.

ಸಾಮಾನ್ಯವಾಗಿ ಕಾಪಿರೈಟ್ ನಿಯಮಗಳು ಒಂದು ದೇಶದ ರಾಷ್ಟ್ರೀಯ ಗ್ರಂಥಾಲಯಕ್ಕೆ ಆ ರಾಷ್ಟ್ರದಲ್ಲಿ ಪ್ರಕಟವಾದ ಪುಸ್ತಕಗಳನ್ನು ಕಾನೂನಿನ ಪ್ರಕಾರ ಪಡೆಯುವ ಅಧಿಕಾರ ನೀಡುತ್ತದೆ. ಅಮೆರಿಕದ ಲೈಬ್ರರಿ ಆಫ್ ಕಾಂಗ್ರೆಸ್, ಕೋಲ್ಕತದಲ್ಲಿರುವ ಭಾರತದ ರಾಷ್ಟ್ರೀಯ ಗ್ರಂಥಾಲಯ ಇಂಥವು.

ಭಾರತದಲ್ಲಿ 1954ರ ಪುಸ್ತಕಗಳು ಮತ್ತು ವೃತ್ತಪತ್ರಿಕೆಗಳ ವಿತರಣೆ (ಸಾರ್ವಜನಿಕ ಗ್ರಂಥಾಲಯಗಳು) ಶಾಸನದ ಪ್ರಕಾರ, ಕೋಲ್ಕತ್ತದ ರಾಷ್ಟ್ರೀಯ ಗ್ರಂಥಾಲಯ, ಮುಂಬಯಿಯ ಕೇಂದ್ರ ಗ್ರಂಥಾಲಯ, ಮದ್ರಾಸಿನ ಕನ್ನೆಮಾರಾ ಸಾರ್ವಜನಿಕ ಗ್ರಂಥಾಲಯ–ಇವಕ್ಕೆ ಭಾರತದಲ್ಲಿ ಪ್ರಕಟವಾಗುವ ಪ್ರತಿಯೊಂದು ಪುಸ್ತಕ ಹಾಗೂ ವೃತ್ತಪತ್ರಿಕೆಯ ಪ್ರತಿಗಳನ್ನು ಪಡೆಯುವ ಅಧಿಕಾರ ಇದೆ. ಈ ಕಾನೂನಿನ ಉಲ್ಲಂಘನೆಗೆ ಶಿಕ್ಷೆಯೆಂದರೆ ಪುಸ್ತಕದ ಬೆಲೆಗೆ ಸಮನಾದ ದಂಡ. ಇದಲ್ಲದೆ ರಾಜ್ಯಸರ್ಕಾರಗಳು ಜಾರಿಗೆ ತಂದಿರುವ 1867ರ ಪ್ರೆಸ್ ಮತ್ತು ರಿಜಿಸ್ಟ್ರೇಷನ್ ಶಾಸನದ ಪ್ರಕಾರ ಮುದ್ರಕ ತಾನು ಮುದ್ರಿಸಿದ ಪುಸ್ತಕಗಳ ತಲಾ ಒಂದೊಂದು ಪ್ರತಿಯನ್ನು ಉಚಿತವಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸಕೊಡ ಬೇಕಾಗುತ್ತದೆ. ಅಂಥ ಪುಸ್ತಕಗಳನ್ನು ರಾಜ್ಯಸರ್ಕಾರ ಕೇಂದ್ರ ಗ್ರಂಥಾಲಯಗಳಿಗೆ ನೀಡುತ್ತದೆ.

ಪುಸ್ತಕಗಳನ್ನು ಕಾನೂನಿನ ಪ್ರಕಾರ ಒಂದೆಡೆ ಸಂಗ್ರಹಿಸಿಡುವ ಪದ್ಧತಿಗೆ ಕಾರಣವಾದವ ಫ್ರೆಂಚ್‌ದೊರೆ ಒಂದನೆಯ ಫ್ರಾನ್ಸಿಸ್. ಆತ 1537ರಲ್ಲಿ ಆರ್ಡಿನೆನ್ಸ್ ಡಿ ಮಾಂಟ್ ಪೆಲಿಯಕ್ ಎಂಬ ಆಜ್ಞೆಯೊಂದನ್ನು ವಿಧಿಸಿ ರಾಷ್ಟ್ರದ ಪ್ರತಿಯೊಬ್ಬ ಮುದ್ರಕನೂ ಪ್ರಕಾಶಕನೂ ತಾನು ಮುದ್ರಿಸಿದ ಇಲ್ಲವೆ ಹೊರತಂದ ಪುಸ್ತಕದ ಒಂದು ಪ್ರತಿಯನ್ನು ಉಚಿತವಾಗಿ ರಾಯಲ್ ಲೈಬ್ರರಿಗೆ ಕಳುಹಿಸಬೇಕೆಂದು ಕಡ್ಡಾಯ ಮಾಡಿದ.

## V. ಪರಾಮರ್ಶನ ಮತ್ತು ಪ್ರಲೇಖನ ಸೇವೆಗಳು

ಪರಾಮರ್ಶನ ಸೇವೆ (ರೆಫರೆನ್ಸ್ ಸರ್ವಿಸ್) ಮತ್ತು ಪ್ರಲೇಖನ ಸೇವೆ (ಡ್ಯಾಕ್ಯುಮೆಂಟೇಷನ್ ಸರ್ವಿಸ್) ಆಧುನಿಕ ಗ್ರಂಥಾಲಯದ ಬಹುಮುಖ್ಯ ಕೆಲಸಗಳಲ್ಲಿ ಒಂದು. ಅದರ ಬಗ್ಗೆ ಇಲ್ಲಿ ವಿವರಗಳಿವೆ.

**1. ಪರಾಮರ್ಶನ ಸೇವೆ ಮತ್ತು ಪರಾಮರ್ಶನ ಗ್ರಂಥಗಳು :** ಒಂದು ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಅರಿವನ್ನು ಪಡೆದುಕೊಳ್ಳುವ ಸಲುವಾಗಿ ಗ್ರಂಥಾಲಯಕ್ಕೆ ಭೇಟಿನೀಡುವ ಸಂಶೋಧಕರ, ಶಿಕ್ಷಕರ ವಿದ್ಯಾರ್ಥಿಗಳ, ವಿವಿಧ ಉದ್ಯೋಗಸ್ಥರ, ಸಾರ್ವಜನಿಕರ ಅಗತ್ಯಗಳಿಗೆ ಅನುಗುಣವಾಗಿ ಅವರಿಗೆ ಬೇಕಾದ ದಾಖಲೆಗಳನ್ನು, ಆಧಾರಗ್ರಂಥಗಳನ್ನು, ಆಕರಗ್ರಂಥಗಳನ್ನು, ವಾರ್ಷಿಕ ಪುಸ್ತಕಗಳನ್ನು, ನಿಘಂಟುಗಳನ್ನು, ವಿಶ್ವಕೋಶಗಳನ್ನು, ಸರ್ಕಾರಿ ರಾಜ್ಯಪತ್ರಗಳನ್ನು ವಿವಿಧ ಸಂಘ–ಸಂಸ್ಥೆಗಳ ಚಟುವಟಿಕೆಗಳನ್ನು ವಿವರಿಸುವ ವಾರ್ಷಿಕ ಪ್ರಕಟಣೆಗಳನ್ನು, ವೃತ್ತಪತ್ರಿಕೆಗಳನ್ನು, ನಿಯತಕಾಲಿಕೆಗಳನ್ನು, ಭೂಪಟಗಳ ನಕ್ಷೆಗಳನ್ನು–ಹೀಗೆ ಹಲವಾರು ಉಪಯುಕ್ತ ಸಾಧನೆಗಳನ್ನು ಒದಗಿಸುವುದೇ ಪರಾಮರ್ಶನ ಸೇವೆ (ರೆಫರೆನ್ಸ್ ಸರ್ವಿಸ್). ಸದಸ್ಯರಿಗೆ ಸಾಮಾನ್ಯ ಗ್ರಂಥಗಳನ್ನು (ರೆಫರೆನ್ಸ್ ಬುಕ್ಸ್) ಸದಸ್ಯರಿಗಾಗಲಿ ಅಥವಾ ಸಾರ್ವಜನಿಕರಿಗಾಗಲಿ ಎರವಲು ಕೊಡುವುದು ಸಾಮಾನ್ಯವಾಗಿ ಯಾವ ಗ್ರಂಥಾಲಯದಲ್ಲೂ ಕಾಣಬಹುದು. ಆದರೆ ಸಂದರ್ಭವನ್ನು ಗಮನಿಸಿ, ಕೆಲವು ವಿಶೇಷ ಅನುಮತಿಗಳ ಮೇಲೆ, ಕೆಲವಾರು ಕಟ್ಟುಪಾಡುಗಳಿಗೆ ಒಳಪಟ್ಟು ಪರಾಮರ್ಶನ ಗ್ರಂಥಗಳನ್ನೂ ಸದಸ್ಯರಿಗೆ ಎರವಲು ಕೊಡುವುದು ಗ್ರಂಥಾಲಯದ ಅಧಿಕಾರಿಗಳ ತೀರ್ಮಾನಕ್ಕೆ ಬಿಟ್ಟದ್ದು. ಪರಾಮರ್ಶನ ಗ್ರಂಥಗಳನ್ನು ಗ್ರಂಥಾಲಯದ ಆವರಣದೊಳಗೆ ಮಾತ್ರ ಅವಲೋಕಿಸಲು ಯಾರಿಗಾದರೂ ಅವಕಾಶವಿರುತ್ತದೆ.

ಗ್ರಂಥಾಲಯದಲ್ಲಿ ಪರಾಮರ್ಶನ ಸೇವೆ ಒಂದು ನಿರ್ದಿಷ್ಟ ಕ್ರಮದಲ್ಲಿ ಒದಗುತ್ತದೆ. ಗ್ರಂಥಾಲಯಕ್ಕೆ ಹೊಸದಾಗಿ ಸದಸ್ಯರಾಗುವವರಿಗೆ ಮಾರ್ಗದರ್ಶನ ನೀಡುವುದರ ಬಗ್ಗೆ ಸಿದ್ಧಪಡಿಸುವ ವರ್ಗೀಕರಣ ಪಟ್ಟಿಗಳು, ಗ್ರಂಥಾಲಯದಲ್ಲಿರುವ ಪುಸ್ತಕಗಳ ಹೆಸರುಗಳನ್ನು ತಿಳಿಸುವ ಗ್ರಂಥಸೂಚಿಗಳು, ವಿಷಯ ಹಾಗೂ ಲೇಖಕರ ವರ್ಗೀಕರಣಕ್ಕೆ ಸಂಬಂಧಿಸಿದಂಥ ಕಾರ್ಡುಗಳು, ಗ್ರಂಥಾಲಯದ ವಾಚನಾಲಯಕ್ಕೆ ತರಿಸಲಾಗುವ ವೃತ್ತಪತ್ರಿಕೆ ಮತ್ತು ನಿಯತ ಕಾಲಿಕೆಗಳ ವಿವರಗಳನ್ನು ಕೊಡುವ ಸೂಚಿಪಟ್ಟಿಗಳು–ಇವೇ ಮುಂತಾದ ಉಪಯೋಗಿ ಸಾಧನೆಗಳನ್ನು ಒದಗಿಸಿರಲಾಗುತ್ತದೆ. ಒಂದು ವಿಷಯದ ಬಗ್ಗೆ ಹೆಚ್ಚಿನ ಅಧ್ಯಯನ ಮತ್ತು ಸಂಶೋಧನೆ ನಡೆಸುವಾತ ತನಗೆ ಬೇಕಾದ ಪರಾಮರ್ಶನ ಗ್ರಂಥವನ್ನು ಪಡೆಯುವ ಮೊದಲು ಸೂಚೀಕರಣ ಪಟ್ಟಿಯನ್ನೋ ವರ್ಗೀಕರಣ ಪಟ್ಟಿಯನ್ನೋ ಅವಲೋಕಿಸಿ ಅಗತ್ಯ ಗ್ರಂಥ ಯಾವ ವಿಭಾಗದಲ್ಲಿ ದೊರೆಯುತ್ತದೆ ಎಂಬುದನ್ನು ಖಚಿತಪಡಿಸಿ ಕೊಳ್ಳುತ್ತಾನೆ. ಪರಾಮರ್ಶನ ಗ್ರಂಥಗಳನ್ನಾಗಲೀ ಇನ್ನಿತರ ಪ್ರಮುಖ ಪುಸ್ತಕಗಳನ್ನಾಗಲೀ ಮನೆಗೆ ತೆಗೆದುಕೊಂಡು ಹೋಗಲು ಸದಸ್ಯರಿಗಾಗಲೀ ಇನ್ನಿತರರಿಗಾಗಲೀ ಅವಕಾಶವಿಲ್ಲ ದಿರುವುದರಿಂದ ಆ ಪುಸ್ತಕಗಳೂ ಅವಕ್ಕೆ ಮೀಸಲಾದ ಸ್ಥಳಗಳಲ್ಲಿ ಇದ್ದು ಅವಲೋಕನಕ್ಕೆ ಒದಗುತ್ತವೆ. ಪರಾಮರ್ಶನ ಗ್ರಂಥಗಳನ್ನು ಇತರ ಸಾಮಾನ್ಯ ಗ್ರಂಥಗಳಂತೆಯೇ ತೆರೆದ ಕಪಾಟುಗಳಲ್ಲಿಟ್ಟಿರುತ್ತಾರೆ.

ಒಂದು ವಿಷಯವನ್ನು ಕುರಿತು ಹೆಚ್ಚಿನ ಅಭ್ಯಾಸ ನಡೆಸುವಾತನ ಅಗತ್ಯಗಳನ್ನು ಕುರಿತಂತೆ ಅವನಿಗೆ ಮಾರ್ಗದರ್ಶನ ಮಾಡಲು ಗ್ರಂಥಾಲಯ ವ್ಯವಸ್ಥೆಯಲ್ಲಿ ತರಬೇತಿ ಪಡೆದ ನುರಿತ ಸಹಾಯಕರಿರುತ್ತಾರಗಿ ಅವರು ಆತನಿಗೆ ಪರಾಮರ್ಶನ ಸೇವೆಯ ಒಂದು ಭಾಗದ ಪ್ರಯೋಜನವನ್ನು ನೀಡುತ್ತಾರೆ. ಇದರಿಂದ ಗ್ರಂಥಾಲಯ ಸಿಬ್ಬಂದಿಯವರ ಹಾಗೂ ಓದುಗರ ವೇಳೆಯಲ್ಲಿ ಉಳಿತಾಯವಾಗಿ ಮತ್ತಷ್ಟು ಮಂದಿಗೆ ಗ್ರಂಥಾಲಯದ ಸೇವೆ ದೊರಕಿದಂತಾಗುತ್ತದೆ. ಕೇಳಿದ ಪ್ರಶ್ನೆಗಳಿಗೆ ತತ್‌ಕ್ಷಣದಲ್ಲಿ ಯೋಗ್ಯ ಉತ್ತರವನ್ನೊದಗಿಸುವ ಅಥವಾ ಬೇಕಾದ ಮಾಹಿತಿಯನ್ನು ಒದಗಿಸುವ ಸೇವೆಯನ್ನು ಸಾಮಾನ್ಯವಾಗಿ ಅಲ್ಪಾವಧಿ ಸೇವೆ ಅಥವಾ ಕ್ಷಿಪ್ರ ಪರಾಮರ್ಶನ ಸೇವೆ (ರೆಡಿ ರೆಫರೆನ್ಸ್ ಸರ್ವಿಸ್) ಎನ್ನುತ್ತಾರೆ.

ಪರಾಮರ್ಶನ ಸೇವೆಯ ಇನ್ನೊಂದು ಹಂತದಲ್ಲಿ ಓದುಗರಿಗೆ ಬೇಕಾದ ಮಾಹಿತಿ ತತ್‌ಕ್ಷಣ ದೊರೆಯದಿದ್ದಾಗ ಆ ಮಾಹಿತಿಯನ್ನು ದೊರಕಿಸಲು ಬೇರೆ ಬೇರೆ ಗ್ರಂಥಗಳು ನಿಯತಕಾಲಿಕೆಗಳಲ್ಲಿಯ ಲೇಖನಗಳು ಇತ್ಯಾದಿಗಳನ್ನು ಅವಲೋಕಿಸುವುದು ಅವಶ್ಯವಾಗುತ್ತದೆ. ಒಂದು ವೇಳೆ ಗ್ರಂಥಾಲಯದಲ್ಲಿ ಲಭ್ಯವಿದ್ದ ಸಾಮಗ್ರಿಗಳಲ್ಲಿ ಓದುಗರು ಕೇಳಿದ ಮಾಹಿತಿ ದೊರೆಯದಿದ್ದರೆ, ಅಂಥ ಮಾಹಿತಿಯನ್ನಾಗಲಿ ಅಥವಾ ಸಾಮಗ್ರಿಗಳನ್ನಾಗಲಿ ಬೇರೆ ಗ್ರಂಥಾಲಯಗಳಿಂದ ಎರವಲಾಗಿ ತರಿಸಿಕೊಡ ಬೇಕಾಗುತ್ತದೆ. ಕೆಲವೊಂದು ಸಲ ಓದುಗರಿಗೆ ಬೇಕಿದ್ದ ಮಾಹಿತಿಯನ್ನು ದೊರಕಿಸಲು ತಜ್ಞರ ಸಹಾಯವೂ ಬೇಕಾಗಬಹುದು. ಒಂದು ವಿಶಿಷ್ಟ ವಿಷಯವನ್ನು ಕುರಿತು ಪ್ರಕಟವಾಗಿರುವ ಗ್ರಂಥಗಳನ್ನು ತಿಳಿಸಿಕೊಡುವ ಗ್ರಂಥ ಸೂಚಿಯನ್ನು ತಯಾರಿಸುವುದೂ ಪರಾಮರ್ಶನ ಸೇವೆಯ ಒಂದು ರೂಪ. ಕೆಲವು

ಪ್ರಸಂಗಗಳಲ್ಲಿ ಇಂಥ ಸೂಚಿಗಳು ಓದುಗರಿಗೆ ಉಪಯೋಗವಾಗಬಹುದೆಂಬ ನಿರೀಕ್ಷೆಯಿಂದ ಗ್ರಂಥಾಲಯದಲ್ಲಿ ಅವನ್ನು ಪೂರ್ವಭಾವಿಯಾಗಿ ಸಿದ್ಧಪಡಿಸಿಟ್ಟುಕೊಳ್ಳುವುದು ಉಂಟು. ವಿಶೇಷವಾಗಿ ಸಂಶೋಧಕರಿಗೆ ಮತ್ತು ಕೈಗಾರಿಕೆ ಹಾಗೂ ವೈಜ್ಞಾನಿಕ ಕೇಂದ್ರಗಳಲ್ಲಿರುವ ಗ್ರಂಥಾಲಯಗಳನ್ನು ಉಪಯೋಗಿಸುವವರಿಗೆ ಈ ಬಗೆಯ ಸೇವೆ ಹೆಚ್ಚು ಉಪಯುಕ್ತ. ಇಂಥ ಸೇವೆ ಸ್ವಲ್ಪ ಹೆಚ್ಚಿನ ಕಾಲಾವಕಾಶ ತೆಗೆದುಕೊಳ್ಳುವುದರಿಂದ ಇದನ್ನು ಅಧಿಕ ಕಾಲಾವಧಿಯ ಪರಾಮರ್ಶನ ಸೇವೆ (ಲಾಂಗ್ ರೇಂಜ್ ರೆಫರೆನ್ಸ್ ಸರ್ವಿಸ್) ಎಂದು ಕರೆಯುತ್ತಾರೆ.

**ಪರಾಮರ್ಶನ ವಿಭಾಗದ ಸಂಘಟನೆ :** ತ್ವರಿತಗತಿಯಲ್ಲಿ ಪರಾಮರ್ಶನ ಸೇವೆಯನ್ನು ಒದಗಿಸಲು ಈ ವಿಭಾಗದ ಸಂಘಟನೆ ಅಗತ್ಯ. ಇಂಥ ಸಂಘಟನೆಯಲ್ಲಿ ಸೇವಾವಿಭಾಗ ಗ್ರಂಥಾಲಯದ ಇತರ ಸೇವಾವಿಭಾಗಗಳೊಡನೆ ಹತ್ತಿರದ ಸಂಪರ್ಕ ಪಡೆಯುವಂತೆ ಸ್ಥಳ ನಿರ್ದೇಶನ ಮಾಡುವುದು. ಗ್ರಂಥಾಲಯದಲ್ಲಿ ಲಭ್ಯವಿರುವ ಎಲ್ಲ ಪರಾಮರ್ಶನ ಗ್ರಂಥಗಳೂ ಈ ವಿಭಾಗದಲ್ಲಿ ದೊರೆಯುವಂತಾಗಿಸುವುದು ಅಗತ್ಯ. ಈ ವಿಭಾಗದಲ್ಲಿ ಗ್ರಂಥಾಲಯದ ನಿಯಮಗಳು, ಗ್ರಂಥಾಲಯದ ಕೈಪಿಡಿ, ಸ್ವರಾಜ್ಯ ಹಾಗೂ ಪರರಾಜ್ಯಗಳ ಹಾಗೂ ಬೇರೆ ಬೇರೆ ರಾಷ್ಟ್ರಗಳ ನಕಾಶೆಗಳೂ ಇರಬೇಕು. ಪರಾಮರ್ಶನ ಸೇವೆಯ ಗುಣಮಟ್ಟ ಹೆಚ್ಚಿಸಲು ಗ್ರಂಥಾಲಯದಲ್ಲಿನ ಮುಕ್ತದ್ವಾರ ಪದ್ಧತಿ (ಓಪನ್ ಆಕ್ಸೆಸ್ ಸಿಸ್ಟಮ್) ಹೆಚ್ಚು ಉಪಯುಕ್ತ. ಗ್ರಂಥಗಳ ವರ್ಗೀಕರಣಕ್ಕೆ ಹಾಗೂ ಸೂಚೀಕರಣಕ್ಕೆ ಪ್ರಚಲಿತ ಪದ್ಧತಿಗಳ ಬಳಕೆಯಿಂದ ಕಾಲದ ವ್ಯಯ ಕಡಿಮೆಯಾಗುತ್ತದೆ. ವರ್ಷೇವರ್ಷೇ ಪ್ರಕಟವಾಗುವ ಹೊಸ ಹೊಸ ಪರಾಮರ್ಶನ ಗ್ರಂಥಗಳನ್ನು ಕೊಂಡು ಒದಗಿಸುವುದಕ್ಕೂ ಪರಾಮರ್ಶನ ವಿಭಾಗದಲ್ಲಿ ಅವಕಾಶವಿರಬೇಕು.

ಪರಾಮರ್ಶನ ಗ್ರಂಥಗಳು : ಪರಾಮರ್ಶನ ಗ್ರಂಥವೆಂದರೆ–ಕೆಲವು ನಿರ್ದಿಷ್ಟ ವಿಷಯಗಳ ಅನ್ವೇಷಣೆಗೆ ಅನುಕೂಲವಾಗುವಂತೆ ಅಣಿಗೊಳಿಸಿದ, ಮೊದಲಿನಿಂದ ಕೊನೆಯವರೆಗೆ ಓದುವ ಅವಶ್ಯಕತೆ ಇಲ್ಲದಿರುವ, ಪದೇ ಪದೇ ಪರಾಮರ್ಶನ ಮಾಡಬೇಕಾಗಿರುವ ಹಾಗೂ ಗ್ರಂಥಾಲಯದಲ್ಲಿಯೇ ಉಪಯೋಗಿಸಬೇಕಾದ ಗ್ರಂಥ ಎಂದೆನ್ನುವ ವ್ಯಾಖ್ಯೆ ಅಮೆರಿಕದ ಗ್ರಂಥಾಲಯದ ಸಂಘದ ಗ್ಲಾಸರಿ ಆಫ್ ಲೈಬ್ರರಿ ಟರ್ಮ್ಸ್ ಪ್ರಕಟಣೆಯಲ್ಲಿ ಸಿಗುತ್ತದೆ. ಪರಾಮರ್ಶನ ಗ್ರಂಥದಲ್ಲಿ, ಗೊತ್ತಿದ್ದ ವಿಷಯಗಳನ್ನು ಕುರಿತು ಮಾಹಿತಿಯನ್ನು ಕಲೆಹಾಕಿ ನಮಗೆ ಬೇಕಾದಾಗ ಅತಿ ಶೀಘ್ರದಲ್ಲಿ ಆ ಮಾಹಿತಿಯನ್ನು ಉಪಯೋಗಿಸಲು ಬರುವಂತೆ ಅವನ್ನು ಅಣಿಗೊಳಿಸಲಾಗಿರುತ್ತದೆ ಎಂಬ ಅಭಿಪ್ರಾಯವನ್ನು ಎಸ್.ಆರ್. ರಂಗನಾಥನ್ ತಳೆದಿದ್ದರು.

**ಪರಾಮರ್ಶನ ಗ್ರಂಥಗಳ ವೈಶಿಷ್ಟ್ಯಗಳು :** ಪರಾಮರ್ಶನ ಗ್ರಂಥಗಳಲ್ಲಿ ಸಮಾವೇಶವಾದ ವಿಷಯಗಳನ್ನು ಸಾಮಾನ್ಯವಾಗಿ ಅಕಾರಾದಿಯಾಗಿ ಕೊಟ್ಟಿರುತ್ತಾರೆ. ಉದಾ: ವಿವಿಧ ಭಾಷೆಗಳಲ್ಲಿನ ವಿಶ್ವಕೋಶಗಳು. ಸಮಾವೇಶವಾದ ವಿಷಯಗಳನ್ನು ಶೀಘ್ರವಾಗಿ ಕಂಡುಹಿಡಿಯಲು ಓದುಗರಿಗೆ ಅನುಕೂಲವಾಗಲೆಂದು ಆ ಗ್ರಂಥಗಳ ಕೊನೆಯಲ್ಲಾಗಲಿ ಅಥವಾ ಆರಂಭದಲ್ಲಾಗಲಿ ವಿಷಯಸೂಚಿಯನ್ನು ಕೊಟ್ಟಿರುತ್ತಾರೆ. ಇಂಥ ವಿಷಯಸೂಚಿಯನ್ನು ಪ್ರತ್ಯೇಕವಾಗಿಯೂ ಪ್ರಸಿದ್ಧಿಸಿರಬಹುದು. ಇದಲ್ಲದೇ ಪರಾಮರ್ಶನ ಗ್ರಂಥಗಳ ಪರಿಚಯ ಮಾಡಿಕೊಡುವ ಮುನ್ನುಡಿ, ವಿವೇಚಿಸಿದ ವಿಷಯಗಳ ಬಗ್ಗೆ ದೀರ್ಘವಾದ ಪರಿವಿಡಿ, ಲೇಖಕರ ಪರಿಚಯ, ಗ್ರಂಥಗಳಲ್ಲಿ ಬಳಸಿದ ಸಂಕ್ಷಿಪ್ತ ರೂಪಗಳ ಪೂರ್ಣರೂಪಗಳು, ನೆರವು ಪಡೆದ ವ್ಯಕ್ತಿಗಳ ಮತ್ತು ಸಂಸ್ಥೆಗಳ ಉಪಕಾರ ಸ್ಮರಣೆ, ಇತ್ಯಾದಿ ವಿಷಯಗಳು ಸೇರಿರುತ್ತವೆ. ಇಂಥ ಗ್ರಂಥಗಳು ಒಂದು ಸಂಪುಟದಲ್ಲೊ ಇಲ್ಲವೆ ಹಲವಾರು ಸಂಪುಟಗಳಲ್ಲೊ ಇರಬಹುದು.

ಪರಾಮರ್ಶನ ಗ್ರಂಥಗಳ ಮೌಲ್ಯ ನಿರ್ಧರಣೆ : ಗ್ರಂಥಗಳ ಉಪಯುಕ್ತತೆಯನ್ನು ಅಳೆದು, ಅವುಗಳ ಮೌಲ್ಯ ನಿರ್ಧರಿಸಲು ಹಲವಾರು ಅಂಶಗಳು ಅಗತ್ಯ. ಅವು ಹೀಗಿವೆ: 1. ಗ್ರಂಥದ ಹೆಸರಿನಿಂದ ಸೂಚಿತವಾಗುವ ವಿಷಯ ಹಾಗೂ ಅದರ ವ್ಯಾಪ್ತಿ 2. ಸಂಪಾದಕ ಮತ್ತು ಲೇಖಕರ ಪೂರ್ವಪರಿಚಯ 3. ಪ್ರಕಾಶಕರು–ಹೊಸಬರೋ ಅಥವಾ ಈಗಾಗಲೇ ಇಂಥ ಕೃತಿಗಳನ್ನು ಅವರು ಪ್ರಕಟಿಸಿದ್ದರೋ ಎಂಬ ವಿಚಾರ, 4. ಪ್ರಕಾಶನ ವರ್ಷ ಮತ್ತು ಕಾಪಿರೈಟ್ ವರ್ಷ 5. ಮುನ್ನುಡಿ ಅಥವಾ ಉಪೋದ್ಘಾತದಿಂದ ವಿಷಯವ್ಯಾಪ್ತಿಯ ಬಗ್ಗೆ ತಿಳಿದುಬರುವ ಮಾಹಿತಿ 6. ಗ್ರಂಥದ ವಿಶೇಷ ಗುಣಾಂಶಗಳು ಮತ್ತು ಕೊರತೆಗಳು 7. ವಿಷಯ ಜೋಡಣೆಯಲ್ಲಿಯ ಏಕರೂಪತೆ 8. ವಿಷಯಗಳನ್ನು ನಿವೇದಿಸಿದ ರೀತಿ–ಮಕ್ಕಳಿಗಾಗಿಯೋ ವಿದ್ಯಾರ್ಥಿಗಳಿಗಾಗಿಯೋ ಪ್ರೌಢರಿಗಾಗಿಯೋ, ಸಂಶೋಧಕರಿಗಾಗಿಯೋ ಇತ್ಯಾದಿ. 9. ವಿವಾದಾತ್ಮಕ ವಿಷಯಗಳ ಪ್ರತಿಪಾದನೆಯಲ್ಲಿ ಸಂಪಾದಕರು ಅನುಸರಿಸಿದ ರೀತಿ 10. ಗ್ರಂಥ ಪುನರ್ ಮುದ್ರಿತವಾದಾಗ ಅದು ತಿದ್ದಿ ಬೆಳೆಯಿಸಿದ ಆವೃತ್ತಿಯೋ ಅಥವಾ ಕೇವಲ ಮೂಲ ಆವೃತ್ತಿಯ ಪುನರ್ ಮುದ್ರಣವೋ ಎಂಬ ವಿಷಯ, ತಿದ್ದಿ ಬೆಳೆಯಿಸಿದ ಆವೃತ್ತಿಯಾಗಿದ್ದರೆ ಯಾವ ಯಾವ ವಿಷಯಗಳನ್ನು ಯಾವಯಾವ ಹಂತದಲ್ಲಿ ತಿದ್ದಿ ಬೆಳೆಸಲಾಗಿವೆ ಎಂಬ ಅಂಶ 11. ಲೇಖನಗಳ ಕೊನೆಯಲ್ಲಿರುವ ಗ್ರಂಥಸೂಚಿ ಹಾಗೂ ವಿಷಯ ಸೂಚಿಗಳ ಬಗ್ಗೆ ವಿವರಗಳು 12. ಗ್ರಂಥದ ಪುಟವಿನ್ಯಾಸ ಮತ್ತು ಮುದ್ರಣ ಹಾಗೂ ಅದರ ರಟ್ಟುಕಟ್ಟುವಿಕೆ, 13. ಗ್ರಂಥದ ಬೆಲೆ 14. ವಿಮರ್ಶಾವಲೋಕನ.

**ಪರಾಮರ್ಶನ ಗ್ರಂಥಗಳ ಪ್ರಕಾರಗಳು :** ಪರಾಮರ್ಶನ ಗ್ರಂಥಗಳನ್ನು 1 ಸಾಮಾನ್ಯ ಪರಾಮರ್ಶನ ಗ್ರಂಥಗಳು, 2 ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದ ಗ್ರಂಥಗಳು ಎಂದು ಎರಡು ಬಗೆಯಲ್ಲಿ ವಿಂಗಡಿಸಬಹುದು. ಮೊದಲನೆಯ ವರ್ಗದ ಪರಾಮರ್ಶನ ಗ್ರಂಥಗಳಲ್ಲಿ ಎಲ್ಲ ವಿಷಯಗಳನ್ನು ಸಾಮಾನ್ಯ ರೀತಿಯಲ್ಲಿ ವಿವೇಚಿಸಿದರೆ ಎರಡನೆಯ ವರ್ಗದ ಗ್ರಂಥಗಳಲ್ಲಿ ಅವುಗಳಲ್ಲಿ ಪರಿಣತರಾದವರಿಗೆ ಉಪಯೋಗವಾಗುವಂಥ ವಿಶಿಷ್ಟ ವಿಷಯದ ವಿವೇಚನೆ ಇರುತ್ತದೆ. ಇದಲ್ಲದೆ ಈ ಗ್ರಂಥಗಳನ್ನು 1 ಗತಕಾಲಕ್ಕೆ ಸಂಬಂಧಪಟ್ಟವು, 2 ಅರ್ವಾಚೀನಕಾಲಕ್ಕೆ ಸಂಬಂಧಪಟ್ಟವು, 3 ಇವೆರಡರ ಮಿಶ್ರಣಗಳು–ಈ ರೀತಿಯಾಗಿಯೂ ವಿಭಾಗಿಸಬಹುದು. ಗ್ರಂಥಗಳು ಪ್ರಕಾರಗಳು ಯಾವುದೇ ಆಗಲಿ ಪ್ರತಿಯೊಂದು ಪ್ರಕಾರದಲ್ಲಿ ಈ ಮುಂದೆ ಹೇಳಿರುವ ಪರಾಮರ್ಶನ ಗ್ರಂಥಗಳು ಸಮಾವೇಶವಾಗುತ್ತವೆ. 1. ಕೋಶಗಳು (ನಿಘಂಟು ಮತ್ತು ವಿಶ್ವಕೋಶಗಳನ್ನೊಳಗೊಂಡಂತೆ), 2. ವಾರ್ಷಿಕ ಪುಸ್ತಕಗಳು, 3. ನಿಯತಕಾಲಿಕೆಗಳ ನಿರ್ದೇಶಿಕೆಗಳು ಮತ್ತು ಸಮಾಚಾರ ಸಾರಗಳು, 4. ನಿರ್ದೇಶಿಕೆಗಳು ಮತ್ತು ಕೈಪಿಡಿಗಳು, 5. ಗ್ರಂಥ ಮತ್ತು ವಿಷಯ ಸೂಚಿಗಳು, 6. ಜೀವನ ಚರಿತ್ರೆಯ ಕೋಶಗಳು, 7. ಸರ್ಕಾರಿ ಪ್ರಕಾಶನಗಳು, 8. ಪೇಟೆಂಟುಗಳು ಮತ್ತು ಸ್ಟ್ಯಾಂಡರ್ಡುಗಳು, 9. ಕೈಪಿಡಿಗಳು ಮತ್ತು ಇನ್ನಿತರ ಪುಸ್ತಿಕೆಗಳು, 10. ಗೆಜೆಟಿಯರ್‌ಗಳು, ಪ್ರವಾಸಿ ಕೈಪಿಡಿಗಳು ಮತ್ತು ಅಟ್ಲಾಸುಗಳು. ಇವಲ್ಲದೆ ಆಯಾ ವಿಷಯಗಳನ್ನು ಆಳವಾಗಿ ವಿವೇಚಿಸುವ ಗ್ರಂಥಗಳನ್ನೂ ಪರಾಮರ್ಶನ ಗ್ರಂಥಗಳ ಶ್ರೇಣಿಗೆ ಸೇರಿಸಬಹುದು.

ಗ್ರಂಥಾಲಯದಲ್ಲಿರುವ ಪರಾಮರ್ಶನ ಗ್ರಂಥಗಳ ಪೈಕಿ ಕೆಲವುದರ ಸೂಕ್ಷ್ಮ ಪರಿಚಯವನ್ನು ಕೆಳಗೆ ಕೊಟ್ಟಿದೆ.

**ಕೋಶಗಳು :** ಕೋಶಗಳಲ್ಲಿ ಶಬ್ದಗಳನ್ನು ಅಕಾರಾದಿಯಾಗಿ ಜೋಡಿಸಿ ಅವುಗಳ ಅರ್ಥವನ್ನು ತಿಳಿಸಲಾಗುತ್ತದೆ. ಒಂದು ಭಾಷೆಯಲ್ಲಿನ ಶಬ್ದಗಳಿಗೆ ಮತ್ತೊಂದು ಭಾಷೆಯಲ್ಲಿ ಅರ್ಥವನ್ನು ನೀಡುವಂಥ ಕೋಶಗಳೂ ಒಂದೇ ಭಾಷೆಯ ವಿವಿಧ ಶಬ್ದಗಳಿಗೆ ಅದೆ ಭಾಷೆಯಲ್ಲಿ ಅರ್ಥವನ್ನು ನೀಡುವಂಥ ಕೋಶಗಳೂ ಇರುತ್ತವೆ. ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್–ಕನ್ನಡ ನಿಘಂಟು, ರೆವರೆಂಡ್ ಕಿಟ್ಟೆಲರ ಕನ್ನಡ ಇಂಗ್ಲಿಷ್ ನಿಘಂಟು ಮೊದಲನೆಯ ವರ್ಗಕ್ಕೆ ಉದಾಹರಣೆಗಳು. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ–ಕನ್ನಡ ನಿಘಂಟು, ಶಿವರಾಮ ಕಾರಂತರ ಸಿರಿಗನ್ನಡ ಕೋಶ, ಪಂಡಿತ ಕವಲಿಯವರ ಸಚಿತ್ರ ಕನ್ನಡ–ಕನ್ನಡ ಕಸ್ತೂರೀ ಕೋಶ, ಎಚ್.ವಿ. ರಮಾಕಾಂತರಾವ್ ಅವರ ಕನ್ನಡ–ಕನ್ನಡ ಶಬ್ದಕೋಶ ಮುಂತಾದ ಸ್ವಭಾಷಾ ಕೋಶಗಳು ಎರಡನೆಯ ವರ್ಗಕ್ಕೆ ಸೇರುತ್ತವೆ. ಇದಲ್ಲದೆ ಇಂಗ್ಲಿಷ್ ಭಾಷೆಯ ಪ್ರಮುಖ ಕೋಶಗಳಾದ ಆಕ್ಸ್‌ಫರ್ಡ್ ಇಂಗ್ಲಿಷ್ ನಿಘಂಟು, ವೆಬ್‌ಸ್ಟರ್ ಕೋಶ, ಚೇಂಬರ್ಸ್ ನಿಘಂಟು ಮುಂತಾದವನ್ನು ಈ ವರ್ಗಕ್ಕೆ ಸೇರಿಸಬಹುದು. ಇವಲ್ಲದೆ ವೇದ, ಪುರಾಣ, ಮಹಾಕಾವ್ಯಗಳು ಮುಂತಾದ ಗ್ರಂಥಗಳನ್ನು ಆಧರಿಸಿ ರಚಿಸಿದಂಥ ಕಾವ್ಯಗಳಲ್ಲಿ ಬರುವ ಕ್ಲಿಷ್ಟಪದಗಳನ್ನು ಸಂಗ್ರಹಿಸಿ ಅರ್ಥೈಸುವ ಪುಸ್ತಕ ಕೋಶ ಅಥವಾ ಗ್ರಂಥಸ್ಥ ಕೋಶಗಳೂ ಉಂಟು. ಕುಮಾರವ್ಯಾಸ ನಿಘಂಟು, ಕಾವ್ಯಪದಮಂಜರಿ ನಿಘಂಟು ಮೊದಲಾದವು ಈ ಗುಂಪಿಗೆ ಬರುತ್ತವೆ. ಕೋಶಗಳನ್ನು ಶಾಸ್ತ್ರೀಯವಾಗಿ ವಿರಣಾತ್ಮಕ ಕೋಶ, ಐತಿಹಾಸಿಕ ಕೋಶ ಮತ್ತು ತೌಲನಿಕ ಕೋಶ ಎಂದು ಮೂರು ವರ್ಗಗಳಾಗಿ ವಿಂಗಡಿಸುವುದುಂಟು. ಒಂದು ಪದದ ಉಗಮ ಮತ್ತು ವಿಕಾಸದ ಎಲ್ಲ ಹಂತಗಳ ವಿವರಗಳನ್ನೂ ಪದದ ರೂಪ, ಅರ್ಥಗಳಲ್ಲಿ ಆಗಿರುವ ವ್ಯತ್ಯಾಸಗಳನ್ನೂ ವಿವರಗಳನ್ನೂ ಐತಿಹಾಸಿಕ ಕೋಶದಲ್ಲಿ ಕಾಣಬಹುದು. ಇಂಗ್ಲಿಷಿನ ಆಕ್ಸ್‌ಫರ್ಡ್ ಕೋಶ ಈ ಜಾತಿಗೆ ಸೇರುತ್ತದೆ.

ಕೋಶ ಎಂಬ ಪದಕ್ಕೆ ಶಬ್ದಕೋಶ ಮತ್ತು ಜ್ಞಾನಕೋಶ ಎಂಬ ಎರಡು ಅರ್ಥಗಳಿವೆಯಾಗಿ ಕೋಶ ಪ್ರಪಂಚದಲ್ಲಿ ವಿಶ್ವಕೋಶ, ಪಾರಿಭಾಷಿಕ ಪದಕೋಶ, ವೃತ್ತಿಪದ ಕೋಶ, ಪರ್ಯಾಯಪದ ಕೋಶ, ಗಾದೆಗಳ ಕೋಶ, ಭಾಷೆಗಳ ಕೋಶ, ಜಾನಪದ ಮತ್ತು ವಸ್ತುಕೋಶ, ಉದ್ಧರಣ ಕೋಶ, ವ್ಯಕ್ತಿನಾಮಗಳ ಕೋಶ, ಸ್ಥಾನಗಳ ಕೋಶ, ವಿವಿಧ ವಿಷಯಗಳ ವಿಶ್ವಕೋಶ – ಹೀಗೆ ಅನೇಕ ಬಗೆಯ ಕೋಶಗಳೂ ಉಂಟು. ವಿಲಿಯಂ ರೀವ್ ತಯಾರಿಸಿದ ಅತ್ಯಂತ ಹಳೆಯ ಕೋಶವಾದ ಎ ಡಿಕ್ಷನರಿ, ಕರ್ನಾಟಕ ಅಂಡ್ ಇಂಗ್ಲಿಷ್ (1832), ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ವಿಶ್ವಕೋಶ (1969–2004) ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರದ ಕಿರಿಯರ ವಿಶ್ವಕೋಶ–ಜ್ಞಾನಗಂಗೋತ್ರಿ, ಆಕ್ಸ್‌ಫರ್ಡ್ ಜೂನಿಯರ್ ಎನ್‌ಸೈಕ್ಲೊಪೀಡಿಯ, ಬ್ರಿಟಾನಿಕ ವಿಶ್ವಕೋಶ, ಅಮೆರಿಕಾನ ವಿಶ್ವಕೋಶ, ನ್ಯೂ ಕ್ಯಾಕ್ಸ್‌ಟನ್ ವಿಶ್ವಕೋಶ, ಕಾಲಿಯರ್ಸ್ ವಿಶ್ವಕೋಶ, ಕೊಲಂಬಿಯ

ಎನ್‌ಸೈಕ್ಲೊಪೀಡಿಯ, ಆಸ್ಟ್ರೇಲಿಯನ್ ಎನ್‌ಸೈಕ್ಲೊಪೀಡಿಯ –ಹೀಗೆ ಹಲವಾರು ಸಾಮಾನ್ಯ ಕೋಶಗಳು ಉಂಟು. ಇವುಗಳ ಜೊತೆಗೆ ಒಂದು ವಿಷಯವನ್ನು ಕುರಿತಂತೆ ಹಲವಾರು ಭಾಷೆಗಳಲ್ಲಿ ವಿಶಿಷ್ಟ ವಿಶ್ವಕೋಶಗಳು ಇರುತ್ತವೆ. ಮೈಸೂರು ವಿಶ್ವವಿದ್ಯಾನಿಲಯದ ವಿಷಯ ವಿಶ್ವಕೋಶ ಯೋಜನೆಯಲ್ಲಿ ಹಲವಾರು ವಿಷಯಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಪ್ರತ್ಯೇಕ ಸಂಪುಟಗಳಿರುತ್ತವೆ. ಇದೇ ರೀತಿ ಇತರ ಪ್ರಾಂತೀಯ ಭಾಷೆಗಳಲ್ಲೂ ಇಂಥ ಕೆಲಸ ನಡೆದಿದೆ. ಇಂಗ್ಲಿಷ್ ಭಾಷೆಯಲ್ಲಿನ ಪ್ರಮುಖ ವಿಷಯ ವಿಶ್ವಕೋಶಗಳಲ್ಲಿ ದಿ ಇಂಟರ್ ನ್ಯಾಷನಲ್ ಎನ್‌ಸೈಕ್ಲೊಪೀಡಿಯ ಆಫ್ ಸೈನ್ಸ್, ಮೆಕ್‌ಗ್ರಾಹಿಲ್ ಎನ್‌ಸೈಕ್ಲೊಪೀಡಿಯ ಆಫ್ ಸೈನ್ಸ್ ಅಂಡ್ ಟೆಕ್ನಾಲಜಿ, ಎನ್‌ಸೈಕ್ಲೊಪೀಡಿಯ ಆಫ್ ಸೋಷಿಯಲ್ ಸೈನ್ಸಸ್, ಎನ್‌ಸೈಕ್ಲೊಪೀಡಿಯ ಆಫ್ ರಿಲಿಜನ್ ಅಂಡ್ ಎಥಿಕ್ಸ್, ಮೆಡಿಕಲ್ ಎನ್‌ಸೈಕ್ಲೊಪೀಡಿಯ – ಹೀಗೆ ಹಲವಾರು ಕೋಶಗಳು ಬರುತ್ತವೆ.

ವೆಲ್ತ್ ಆಫ್ ಇಂಡಿಯ ಎಂಬುದು ಭಾರತದಲ್ಲಿ ಲಭ್ಯವಿರುವ ಕಚ್ಚಾಪದಾರ್ಥಗಳು, ಖನಿಜನಿಕ್ಷೇಪಗಳು, ಅರಣ್ಯಸಂಪತ್ತು ಹಾಗೂ ಕೈಗಾರಿಕಾವಸ್ತುಗಳ ಬಗ್ಗೆ ವಿವರಗಳನ್ನು ನೀಡುವ ಒಂದು ವಿಶಿಷ್ಟ ಪರಾಮರ್ಶನ ಗ್ರಂಥ. ಕಚ್ಚಾಪದಾರ್ಥಗಳ ಭಾಗವನ್ನು ಎ ಭಾಗವೆಂತಲೂ ಕೈಗಾರಿಕಾ ವಸ್ತುಗಳ ಭಾಗವನ್ನು ಬಿ ಭಾಗವೆಂತಲೂ ಕರೆದಿದ್ದಾರೆ. ದೆಹಲಿಯಲ್ಲಿರುವ ಕೌನ್ಸಿಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್ ಸಂಸ್ಥೆ ಈ ಗ್ರಂಥವನ್ನು ಪ್ರಕಟಿಸಿದೆ. ಕಚ್ಚಾ ಪದಾರ್ಥಗಳಿಗೆ ಸಂಬಂಧಿಸಿದ ಭಾಗದಲ್ಲಿ ಒಟ್ಟು 10 ಸಂಪುಟಗಳೂ ಕೈಗಾರಿಕಾ ವಸ್ತುಗಳಿಗೆ ಸಂಬಂಧಿಸಿದ ಭಾಗದಲ್ಲಿ 9 ಸಂಪುಟಗಳೂ ಇರುತ್ತವೆ. ಕೆಲವು ಸಂಪುಟಗಳು ಈಗಾಗಲೆ ಪ್ರಕಟವಾಗಿವೆ. ಈ ಎರಡೂ ಭಾಗಗಳಲ್ಲಿ ಸಮಾವೇಶವಾದ ವಿಷಯಗಳನ್ನು ಅಕಾರಾದಿಯಾಗಿ ವಿವರಿಸಲಾಗಿದೆ. ಅವಶ್ಯವಿದ್ದಲ್ಲಿ ಚಿತ್ರಗಳನ್ನೂ ಸೇರಿಸಲಾಗಿದೆ. ಎರಡೂ ಭಾಗಗಳಲ್ಲಿ ಸೇರ್ಪಡೆಯಾದ ವಿಷಯಗಳ ಬಗ್ಗೆ ಲೇಖನಗಳನ್ನು ಆಯಾ ವಿಷಯಗಳಲ್ಲಿ ಪರಿಣತರಾದವರಿಂದ ಬರೆಸಲಾಗಿದೆ.

ಎ ಭಾಗದಲ್ಲಿಯ ಲೇಖನಗಳು ಸಸ್ಯಾದಿಗಳು, ಪ್ರಾಣಿಗಳು ಮತ್ತು ಖನಿಜ ನಿಕ್ಷೇಪಗಳಿಗೆ ಸ್ಥೂಲವಾಗಿ ಸಂಬಂಧಿಸಿದ್ದು. ಬಿ ಭಾಗದಲ್ಲಿಯ ಲೇಖನಗಳು ರಾಸಾಯನಿಕ ಉದ್ಯಮಗಳು (ಉದಾ : ಆಮ್ಲಗಳು, ಕೃತಕ ಗೊಬ್ಬರಗಳು, ಉಕ್ಕು, ಔಷಧಿ ಇತ್ಯಾದಿ), ಎಂಜಿನಿಯರಿಂಗ್ ಉದ್ಯಮಗಳು (ಉದಾ: ಕಾರು ಮತ್ತು ಮೋಟಾರುಗಳು, ವಿದ್ಯುಚ್ಚಾಲಿತ ಎಂಜಿನುಗಳು, ಸೆಣಬಿನ ಗಿರಣಿಗಳು, ಹಡಗು ಕಟ್ಟುವುದು ಇತ್ಯಾದಿ), ಹಾಗೂ ಪರಂಪರಾಗತವಾಗಿ ನಡೆದುಬಂದ ಹಿತ್ತಾಳೆಯ ಕೆಲಸಗಳು, ಹೆಣಿಕೆ ಮತ್ತು ಕಸೂತಿ ಕಲೆಗಳು – ಹೀಗೆ ಅನೇಕ ವಿಷಯಗಳಿಗೆ ಸಂಬಂಧಿಸಿವೆ. ಸ್ವಾತಂತ್ರ್ಯಾನಂತರ ಭಾರತದಲ್ಲಿ ಕಚ್ಚಾ ಪದಾರ್ಥಗಳ ಲಭ್ಯತೆ ಹಾಗೂ ಅವುಗಳ ಉಪಯೋಗ ಮತ್ತು ಬೇರೆ ಬೇರೆ ಉದ್ಯಮಗಳು ಸಾಧಿಸಲಾದ ಪ್ರಗತಿ – ಈ ಬಗ್ಗೆ ನಿರ್ದಿಷ್ಟವಾದ ಹಾಗೂ ದೃಢ ವಿವರಗಳನ್ನು ನೀಡುವ ಒಂದು ವಿಶಿಷ್ಟ ಗ್ರಂಥ ಇದು. ಈ ಗ್ರಂಥವನ್ನು ಹಿಂದಿ ಭಾಷೆಯಲ್ಲಿ ಭಾರತ್‌ಕೀ ಸಂಪದಾ ಎಂಬ ಹೆಸರಿನಲ್ಲಿ ಪ್ರಕಟಿಸಿದೆ. ಇಂಥವನ್ನು ವಿಶಿಷ್ಟ ವಿಶ್ವಕೋಶ ವೆಂದು ಕರೆದರೂ ಅಡ್ಡಿಯಿಲ್ಲ.

ಯಾವುದೇ ಕೋಶದಲ್ಲಾಗಲಿ ಸಂಗ್ರಹಿತವಾಗಿರುವ ವಸ್ತುಗಳ ಅಕಾರಾದಿಯಾಗಿ ಜೋಡಣೆ ನಡೆದಿರುತ್ತದೆ. ನಿಘಂಟುಗಳಲ್ಲಿ ಪದಗಳನ್ನು ಚಿತ್ರಸಹಿತ ವಿವರಿಸುವ ಪದ್ಧತಿ ಇತ್ತೀಚೆಗೆ ಹೆಚ್ಚಾಗುತ್ತಿದೆ. ಶೀರ್ಷಿಕೆಗಳನ್ನು ಸಚಿತ್ರವಾಗಿರಿಸುವ ವ್ಯವಸ್ಥೆ ಸಾಮಾನ್ಯವಾಗಿ ಎಲ್ಲ ವಿಶ್ವಕೋಶಗಳಲ್ಲೂ ಕಂಡುಬರುತ್ತದೆ.

**ವಾರ್ಷಿಕ ಪುಸ್ತಕ :** ಪ್ರಪಂಚದ ನಾನಾ ರಾಷ್ಟ್ರಗಳಲ್ಲಿ ಸಂಭವಿಸಿದ ಮಹತ್ತ್ವದ ರಾಜಕೀಯ ಘಟನೆಗಳನ್ನೂ ವಿಜ್ಞಾನ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಸಾಧಿಸಲಾದ ಪ್ರಗತಿಗಳನ್ನೂ ಶಿಕ್ಷಣ, ಕಲೆ, ವ್ಯಾಪಾರ, ವಾಣಿಜ್ಯ ಮೊದಲಾದ ಕ್ಷೇತ್ರಗಳಲಿ ಆಗಿರುವ ಅಭಿವೃದ್ಧಿ ವಿಚಾರಗಳ ಬಗ್ಗೆ ಅಂಕಿಅಂಶಗಳನ್ನೂ ನಾನಾ ರಾಜ್ಯಗಳಿಗೆ ಸಂಬಂಧಿಸಿದಂತೆ ಅವುಗಳ ಆರ್ಥಿಕ, ಸಾಮಾಜಿಕ ಸ್ಥಿತಿಗತಿ ಮತ್ತು ಜನಸಂಖ್ಯೆಯ ವಿಚಾರವಾಗಿ ಅಂಕಿಅಂಶ ಸಮೇತ ವಿವರಗಳನ್ನೂ ಕ್ರೀಡಾ ವಿಭಾಗದಲ್ಲಿ ನಡೆದಿರುವ ಚಟುವಟಿಕೆಗಳ ಬಗ್ಗೆ ದೀರ್ಘ ಇಲ್ಲವೇ ಸಂಕ್ಷಿಪ್ತವಾದ ಮಾಹಿತಿಗಳನ್ನೂ ಸಾಧ್ಯವಾದಷ್ಟು ಮಟ್ಟಿಗೆ ಖಚಿತವಾಗಿ ಕ್ರೋಡೀಕರಿಸಿ ವರ್ಷಕ್ಕೊಮ್ಮೆ ಪ್ರಕಟಿಸುವ ಪುಸ್ತಕ (ಇಯರ್ ಬುಕ್). ಗತವರ್ಷಗಳಲ್ಲಿ ನಡೆದಿರಬಹುದಾದ ಘಟನೆಗಳನ್ನು ಅನುಕ್ರಮವಾಗಿ ಹೊಂದಿಸಿರುವುದರಿಂದ ಈ ಪುಸ್ತಕ ಆಸಕ್ತರಿಗೆ ಬಹಳಷ್ಟು ಉಪಯೋಗಕ್ಕೆ ಬರುತ್ತದೆ. ಇಡೀ ಪ್ರಪಂಚದ ಘಟನೆಗಳ ಬಗ್ಗೆ ಮಾತ್ರ ಮಾಹಿತಿ ಕೊಡುವ ವಾರ್ಷಿಕ ಮಸ್ತಕಗಳೂ ಇರುತ್ತವೆ. ಒಂದು ರಾಷ್ಟ್ರದಲ್ಲಿರುವ ರಾಜ್ಯಗಳ ಮಾಹಿತಿಗಳನ್ನು ಮಾತ್ರ ತಿಳಿಸಿಕೊಡುವ ವಾರ್ಷಿಕ ಪುಸ್ತಕಗಳೂ ಉಂಟು. ಪ್ರಸಿದ್ಧ ವಿಶ್ವಕೋಶಗಳಾದ ಎನ್‌ಸೈಕ್ಲೊಪೀಡಿಯ ಬ್ರಿಟಾನಿಕ ಮತ್ತು ಎನ್‌ಸೈಕ್ಲೊಪೀಡಿಯ ಅಮೆರಿಕಾನಗಳನ್ನು ತಯಾರಿಸುವ ಸಂಸ್ಥೆಗಳು ಅನುಕ್ರಮವಾಗಿ ಬ್ರಿಟಾನಿಕ ಬುಕ್ ಆಫ್ ದಿ ಇಯರ್ ಮತ್ತು ಅಮೆರಿಕಾನ ಆನ್ಯುಯಲ್ ಎಂಬ ವಾರ್ಷಿಕ ಪುಸ್ತಕಗಳನ್ನು ಪ್ರಕಟಿಸುತ್ತಿವೆ. ಬ್ರಿಟಾನಿಕ ಬುಕ್ ಆಫ್ ದಿ ಇಯರ್‌ನ ಜೊತೆಗೆ ಬ್ರಿಟಾನಿಕ ಇಯರ್ ಬುಕ್ ಆಫ್ ಸೈನ್ಸ್ ಅಂಡ್ ಫ್ಯೂಚರ್ ಎಂಬುದೂ ಪ್ರಕಟಗೊಳ್ಳುತ್ತಿದೆ. ವಿಜ್ಞಾನ ಮತ್ತು ತಾಂತ್ರಿಕ ವಿಷಯಗಳಿಗೆ ಸಂಬಂಧಿಸಿದಂತೆ ಮೆಕ್‌ಗ್ರಾಹಿಲ್ ಬುಕ್ ಕಂಪನಿಯವರು ಮೆಕ್‌ಗ್ರಾಹಿಲ್ ಇಯರ್ ಬುಕ್ ಆಫ್ ಸೈನ್ಸ್ ಅಂಡ್ ಟೆಕ್ನಾಲಜಿ ಎಂಬ ಹೆಸರಿನ ವಾರ್ಷಿಕ ಪುಸ್ತಕವನ್ನು ಪ್ರತಿವರ್ಷವೂ ಪ್ರಕಟಿಸುತ್ತಿದ್ದಾರೆ.

ವಾರ್ಷಿಕ ಪುಸ್ತಕದಲ್ಲಿ ಬರುವಂಥ ವಿಷಯಗಳಲ್ಲಿ ಲೇಖಕರಿಗೆ ಮತ್ತು ಸಂಶೋಧಕರಿಗೆ ಹೆಚ್ಚಿನ ಮಾಹಿತಿಗಳು ದೊರೆಯುತ್ತವೆ. ಒಂದು ವಿಷಯವನ್ನು ಕುರಿತಂತೆ ಸಮೀಕ್ಷೆಗಳು ವಾರ್ಷಿಕ ಪುಸ್ತಕಗಳಲ್ಲಿ ಇರಬಹುದು. ಆನ್ಯುಯಲ್ ರಿವ್ಯೂ ಆಫ್ ಲೈಬ್ರರಿ ಅಂಡ್ ಇನ್‌ಫರ್‌ಮೇಶನ್ ಎಂಬುದು ಈ ವರ್ಗಕ್ಕೆ ಸೇರುತ್ತದೆ. ಇಯರ್ಸ್ ವರ್ಕ್ ಇನ್ ಇಂಗ್ಲಿಷ್ ಎಂಬ ವಾರ್ಷಿಕ ಪುಸ್ತಕ ಇಂಗ್ಲಿಷ್ ಸಾಹಿತ್ಯ ಪ್ರಪಂಚದಲ್ಲಿ ನಡೆದಿರುವಂಥ ಘಟನೆಗಳನ್ನು ಕುರಿತದ್ದು. ಮಾನವೀಯ ಹಕ್ಕುಗಳನ್ನು ಕುರಿತಂಥ ಇಯರ್ ಬುಕ್ ಆಫ್ ಹ್ಯೂಮನ್ ರೈಟ್ಸ್ ಎಂಬುದು ಇಂಥ ವರ್ಗಕ್ಕೆ ಸೇರುವ ಮತ್ತೊಂದು ವಾರ್ಷಿಕ ಪುಸ್ತಕ.

ಬಹು ಹಿಂದಿನಿಂದಲೂ ಪ್ರಕಟವಾಗುತ್ತಿರುವ ವಾರ್ಷಿಕ ಪುಸ್ತಕಗಳಲ್ಲಿ ಕೆಲವನ್ನು ಹೆಸರಿಸುವುದಾದರೆ ಆನ್ಯುಯಲ್ ರಿಜಿಸ್ಟರ್ ಆಫ್ ವರ್ಲ್ಡ್ ಈವೆಂಟ್ಸ್ (ಪ್ರಾರಂಭ ವರ್ಷ; (1758), ಸ್ಟೇಟ್ಸ್‌ಮನ್ಸ್ ಇಯರ್ ಬುಕ್ (1864), ಇಯರ್ ಬುಕ್ ಆಫ್ ದಿ ಯುನೈಟೆಡ್ ನೇಷನ್ಸ್ (1945), ಯೂರೋಪಾ ಇಯರ್ ಬುಕ್, ದಿ ನ್ಯೂಯಾರ್ಕ್ ಟೈಮ್ಸ್ ಎನ್‌ಸೈಕ್ಲೊಪೀಡಿಯ ಅಲ್ಮನಾಕ್ ಮುಂತಾದವು ಪ್ರಪಂಚದ ಘಟನಾವಳಿಗಳನ್ನು ಕ್ರಮಾಗತ ರೀತಿಯಲ್ಲಿ ತಿಳಿಸಿಕೊಡುವ ವಾರ್ಷಿಕ ಪುಸ್ತಕಗಳಾಗಿವೆ.

ಭಾರತದ ಸಾಮಾಜಿಕ, ಆರ್ಥಿಕ, ರಾಜಕೀಯ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಮಾಹಿತಿಗಳನ್ನೊದಗಿಸುವ ವಾರ್ಷಿಕ ಪುಸ್ತಕಗಳು ಹಲವಿವೆ. ಮನೋರಮ ಇಯರ್ ಬುಕ್, ಹಿಂದೂಸ್ತಾನ್ ಇಯರ್ ಬುಕ್, ನಾಲಂದ ಇಯರ್ ಬುಕ್ ಅಂಡ್ ಹೂ ಈಸ್ ಹೂ ಇನ್ ಇಂಡಿಯ ಅಂಡ್ ಪಾಕಿಸ್ತಾನ್, ಟೈಮ್ಸ್ ಆಫ್ ಇಂಡಿಯ ಇಯರ್ ಬುಕ್ ಅಂಡ್ ಡೈರೆಕ್ಟರಿ ಮುಂತಾದುವು ಪ್ರಸಿದ್ಧವಾಗಿವೆ. ಭಾರತ ಸರ್ಕಾರ ಪ್ರಕಟಿಸುತ್ತಿರುವ ಇಂಡಿಯ – ಎ ರೆಫರೆನ್ಸ್ ಆನ್ಯುಯಲ್ ಎಂಬುದು ಒಂದು ವಾರ್ಷಿಕ ಪುಸ್ತಕವೇ. ಇದರಲ್ಲಿ ಸುಮಾರು 30 ವಿಭಾಗಗಳಿದ್ದು, ಒಂದೊಂದು ವಿಭಾಗವೂ ಭಾರತಕ್ಕೆ ಸಂಬಂಧಿಸಿದಂತೆ ಒಂದು ನಿರ್ದಿಷ್ಟ ವಿಷಯವನ್ನು ಕುರಿತಂತೆ ಇರುತ್ತದೆ. ಹಿಂದೂಸ್ತಾನ್ ಇಯರ್ ಬುಕ್, ನಾಲಂದ ಇಯರ್ ಬುಕ್, ಮನೋರಮ ಇಯರ್ ಬುಕ್‌ಗಳಂಥ ವಾರ್ಷಿಕ ಪುಸ್ತಕಗಳಲ್ಲಿ ಪ್ರತಿಭಾನ್ವಿತ ವ್ಯಕ್ತಿಗಳ ಸಂಕ್ಷಿಪ್ತ ಪರಿಚಯವೂ ಇರುತ್ತದೆ. ಮಹಾರಾಷ್ಟ್ರ, ಗುಜರಾತ್, ರಾಜಸ್ತಾನ, ಆಂಧ್ರ ಪ್ರದೇಶ, ಕರ್ನಾಟಕ ಮುಂತಾದ ರಾಜ್ಯಗಳು ತಮ್ಮ ಜನಜೀವನ, ಆರ್ಥಿಕ ಸಾಮಾಜಿಕ ರಾಜಕೀಯ ಸ್ಥಿತಿಗತಿಗಳನ್ನೂ ಶಿಕ್ಷಣ, ಯೋಜನೆಗಳ ವಿವರ ಮುಂತಾದುವನ್ನೂ ಅಂಕಿಅಂಶಗಳ ಸಮೇತ ತಿಳಿಸಿಕೊಡುವಂಥ ವಾರ್ಷಿಕ ಪುಸ್ತಕಗಳನ್ನು ಪ್ರಕಟಿಸುತ್ತವೆ.

ಕೆಲವೊಂದು ವಾರ್ಷಿಕ ಪುಸ್ತಕಗಳಲ್ಲಿ ಒಂದು ವಿಷಯಕ್ಕೆ ಸಂಬಂಧಿಸಿದಂತೆ ಅಂಕಿಅಂಶಗಳನ್ನು ಮಾತ್ರ ಕ್ರೋಡೀಕರಿಸಿರುವುದು ಕಾಣಬರುತ್ತದೆ. ಸ್ಟ್ಯಾಟಿಸ್ಟಿಕಲ್ ಆಬ್‌ಸ್ಟ್ರಾಕ್ಟ್ ಆಫ್ ದಿ ಇಂಡಿಯನ್ ಯೂನಿಯನ್ ಎಂಬುದನ್ನು ಭಾರತ ಸರ್ಕಾರ 1915 ರಿಂದಲೂ ಪ್ರಕಟಿಸುತ್ತಿದೆ. ಇದೇ ಮಾರ್ಗವನ್ನನುಸರಿಸಿ ಮೈಸೂರು ಸರ್ಕಾರವೂ ಸ್ಟ್ಯಾಟಿಸ್ಟಿಕಲ್ ಔಟ್‌ಲೈನ್ಸ್ ಆಫ್ ಮೈಸೂರ್ ಎಂಬ ಪುಸ್ತಕವನ್ನು ವರ್ಷೇ ವರ್ಷೇ ಪ್ರಕಟಿಸಿ ಈಗ ಸ್ಟ್ಯಾಟಿಸ್ಟಿಕಲ್ ಔಟ್‌ಲೈನ್ ಅಫ್ ಕರ್ನಾಟಕ ಎಂಬ ಶಿರೋನಾಮೆಯಲ್ಲಿ ಪ್ರಕಟಗೊಳ್ಳುತ್ತಿದೆ.

**ಜೀವನ ಚರಿತ್ರೆಯ ಕೋಶಗಳು :** ಪ್ರಸಿದ್ಧ ವಿದ್ವಾಂಸರ, ಮುತ್ಸದ್ದಿಗಳ, ಧರ್ಮೋಪದೇಶಕರ, ಸಾಹಿತಿಗಳ, ರಾಜಕಾರಣಿಗಳ, ವಿಜ್ಞಾನಿಗಳ ಜೀವನಚರಿತ್ರೆಗಳನ್ನು ತಿಳಿಸಿಕೊಡುವಂಥ ಕೋಶಗಳು. ತ್ವರಿತವಾಗಿ ಪರಾಮರ್ಶನ ಸೇವೆಯನ್ನು ಪಡೆದು ಕೊಳ್ಳುವವರಿಗೆ ಇಂಥ ಕೋಶಗಳ ಅಗತ್ಯ ಹೆಚ್ಚು. ಇಂಥ ಕೋಶಗಳು ಹಿಂದೆ ಆಗಿಹೋದ ವ್ಯಕ್ತಿಗಳ ಬಗ್ಗೆಯೂ ಜೀವಿತವಾಗಿರುವ ಪ್ರತಿಷ್ಠಿತ ವ್ಯಕ್ತಿಗಳ ಬಗ್ಗೆಯೂ ಉಪಯುಕ್ತ ವಿವರಗಳನ್ನು ಒದಗಿಸಿಕೊಡುತ್ತವೆ. ಇಂಗ್ಲಿಷ್ ಭಾಷೆಯಲ್ಲಿನ ಪ್ರಮುಖ ಜೀವನಚರಿತ್ರೆಯ ಕೋಶಗಳಲ್ಲಿ ಚೇಂಬರ್ಸ್ ಬಯೋಗ್ರಾಫಿಕಲ್ ಡಿಕ್ಷನರಿ, ವೆಬ್‌ಸ್ಟರ್ ಬಯೋಗ್ರಾಫಿಕಲ್ ಡಿಕ್ಷನರಿ ಇವು ಜಗತ್ಪ್ರಸಿದ್ಧ. ಲೆಸ್ಲಿಸ್ಟೀಫನ್ ಎಂಬುವವ ಸಂಪಾದಿಸಿದ ಡಿಕ್ಷನರಿ ಆಫ್ ನ್ಯಾಷನಲ್ ಬಯಾಗ್ರಫಿ ಎಂಬ ಕೋಶದ ಮೊದಲ (1900) ಆವೃತ್ತಿಯಲ್ಲಿ 63 ಸಂಪುಟಗಳಿದ್ದುವು. ಮುಂದಿನ ಆವೃತ್ತಿಯಲ್ಲಿ ಅದು 22 ಸಂಪುಟಗಳಷ್ಟಾಯಿತು. ಸುಮಾರು 30,000 ಪ್ರಸಿದ್ಧ ವ್ಯಕ್ತಿಗಳ ಜೀವನಚರಿತ್ರೆಯ ಸಂಕ್ಷಿಪ್ತ ವಿವರಗಳು ಇದರಲ್ಲಿದ್ದುವು. ಇದರ ಪ್ರತ್ಯೇಕ ಪ್ರತ್ಯೇಕ ಪುರವಣಿ ಸಂಪುಟಗಳೂ ಹೊರಬಿದ್ದಿವೆ. ಡಿಕ್ಷನರಿ ಆಫ್ ಅಮೆರಿಕನ್ ಬಯಾಗ್ರಫಿ, ಅಮೆರಿಕನ್ ಮೆನ್ ಆಫ್ ಸೈನ್ಸ್, ಡಿಕ್ಷನರಿ ಆಫ್ ಕೆನಡಿಯನ್ ಬಯಾಗ್ರಫಿ, ನ್ಯೂಯಾರ್ಕಿನಿಂದ ಪ್ರಕಟವಾಗುತ್ತಿರುವ ಎಚ್.ಡಬ್ಲ್ಯೂ. ವಿಲ್ಸನ್ ರವರ ಕರೆಂಟ್ ಬಯಾಗ್ರಫಿ ಮುಂತಾದ ಕೋಶಗಳು ತಮ್ಮ ತಮ್ಮ ದೇಶದ ಇಲ್ಲವೇ ಪ್ರಪಂಚದ ಬೇರೆ ಬೇರೆ

ದೇಶಗಳಲ್ಲಿ ಸಾಹಿತ್ಯ, ವಿಜ್ಞಾನ, ಲಲಿತಕಲೆ, ಪತ್ರಿಕೋದ್ಯಮ, ವ್ಯವಸಾಯ, ರಾಜಕಾರಣ, ಗ್ರಂಥಾಲಯವಿಜ್ಞಾನ, ಕಾಯದೆ–ಕಾನೂನು ಮುಂತಾದ ಕ್ಷೇತ್ರಗಳಲ್ಲಿ ಪ್ರಸಿದ್ಧಿ ಪಡೆದ ಪ್ರತಿಷ್ಠಿತ ವ್ಯಕ್ತಿಗಳ ಜೀವನ ಪರಿಚಯಗಳನ್ನು ಸವಿಸ್ತಾರವಾಗಿ ತಿಳಿಸಿಕೊಡುತ್ತವೆ. ಭಾರತದಲ್ಲಿ ಕೋಲ್ಕತದ ಇನ್‌ಸ್ಟಿಟ್ಯೂಟ್ ಆಫ್ ಹಿಸ್ಟಾರಿಕಲ್ ಸ್ಟಡೀಸ್ ಎಂಬ ಸಂಸ್ಥೆಯ ಡಿಕ್ಷನರಿ ಆಫ್ ನ್ಯಾಷನಲ್ ಬಯಾಗ್ರಫಿ ಎಂಬುದು ಭಾರತದ ಪ್ರಸಿದ್ಧ ವ್ಯಕ್ತಿಗಳ ಜೀವನ ಪರಿಚಯಕ್ಕೆ ಸಂಬಂಧಿಸಿದ ಕೋಶ. 1800–1947ರ ಅವಧಿಯಲ್ಲಿ ಜೀವಿಸಿದ್ದ ಸುಮಾರು 1400 ಅಗ್ರಗಣ್ಯ ಭಾರತೀಯರ ಬಗ್ಗೆ ಪರಿಚಯಗಳನ್ನು ಕೊಡುವಂಥ ಕೋಶವಿದು.

ಜೀವನಚರಿತ್ರೆಗೆ ಸಂಬಂಧಿಸಿದ ಗ್ರಂಥಗಳನ್ನು ಖಾಸಗೀ ಸಂಘ ಸಂಸ್ಥೆಗಳೂ ವ್ಯಕ್ತಿಗಳೂ ಪ್ರಕಟಿಸುವ ಪರಿಪಾಠ ಇದೆ. ಮೆಕ್‌ಗ್ರಾ ಹಿಲ್ ಕಂಪನಿಯ ಪ್ರಕಟಣೆ ಮಾಡರ್ನ್ ಮೆನ್ ಆಫ್ ಸೈನ್ಸ್ ಎಂಬ ಪುಸ್ತಕ ಈಚಿನ ವಿಜ್ಞಾನಿಗಳ ಜೀವನಚರಿತ್ರೆಯನ್ನು ಕುರಿತದ್ದು. ಐಸಾಕ್ ಅಸಿಮೋವ್ ಎಂಬುವನ ಬಯೋಗ್ರಾಫಿಕಲ್ ಎನ್‌ಸೈಕ್ಲೊಪೀಡಿಯ ಆಫ್ ಸೈನ್ಸ್ ಅಂಡ್ ಟೆಕ್ನಾಲಜಿ ಇದೇ ಬಗೆಯದು. ಟೈಮ್ಸ್ ಆಫ್ ಇಂಡಿಯ ಡಿಕ್ಷನರಿ ಅಂಡ್ ಇಯರ್ ಬುಕ್ ಇನ್‌ಕ್ಲೂಡಿಂಗ್ ಹೂ ಈಸ್ ಹೂ ಎಂಬುದು ಜೀವನಚರಿತ್ರೆಯನ್ನೂ ಒಳಗೊಂಡಿರುತ್ತದೆ. ಆಂಗ್ಲ ವಿದ್ವಾಂಸ ಸಿ.ಇ.ಬೂಕ್‌ಲ್ಯಾಂಡ್ ಎಂಬಾತ ಸಂಪಾದಿಸಿರುವ ಡಿಕ್ಷನರಿ ಆಫ್ ಇಂಡಿಯನ್ ಬಯಾಗ್ರಫಿಯಲ್ಲಿ 1750–1905 ರ ಅವಧಿಯಲ್ಲಿ ಜೀವಿಸಿದ್ದ ಪ್ರಸಿದ್ಧ ಭಾರತೀಯ ವ್ಯಕ್ತಿಗಳ ಬಗ್ಗೆಯೂ ಭಾರತಕ್ಕೆ ಸೇವೆ ಸಲ್ಲಿಸಿದ ವಿದೇಶೀಯರ ಬಗ್ಗೆಯೂ ವಿವರಗಳು ದೊರೆಯುತ್ತವೆ.

ಭಾರತದ ವಿವಿಧ ಭಾಷೆಗಳಲ್ಲಿಯ ವಿಖ್ಯಾತ ಲೇಖಕರ ಕಿರುಪರಿಚಯವನ್ನು ನವದೆಹಲಿಯ ಸಾಹಿತ್ಯ ಅಕಾಡೆಮಿ ಸಿದ್ಧಪಡಿಸಿರುವ ಇಂಡಿಯನ್ ರೈಟರ್ಸ್– ಹೂ ಈಸ್ ಹೂ ಎಂಬ ಗ್ರಂಥದಲ್ಲಿ ಕಾಣಬಹುದು. ಭಾರತೀಯ ಭಾಷೆಗಳಲ್ಲಿ ಲಭ್ಯವಿರುವ ಇನ್ನಿತರ ಗ್ರಂಥಗಳೆಂದರೆ ಮರಾಠೀ ಭಾಷೆಯ ಚರಿತ್ರಕೋಶ. ಇದನ್ನು ಸಿದ್ಧೇಶ್ವರ ಶಾಸ್ತ್ರಿ ಚಿತ್ರಾವ ಅವರು ಸಿದ್ಧಪಡಿಸಿದ್ದಾರೆ. ಮೂರು ಸಂಪುಟಗಳಲ್ಲಿರುವ ಈ ಕೋಶದಲ್ಲಿ ಮೌರ್ಯ ಚಂದ್ರಗುಪ್ತನಿಂದ ಗಾಂಧಿಯುಗದವರೆಗಿನ ಅವಧಿಯ ಪ್ರಖ್ಯಾತ ಭಾರತೀಯರ ಬಗ್ಗೆ ವಿವರಗಳನ್ನು ಕೊಟ್ಟಿದೆ. ಮೊದಲ ಸಂಪುಟ ಪ್ರಾಚೀನ ಯುಗಕ್ಕೂ ಎರಡನೆಯ ಸಂಪುಟ ಮಧ್ಯಯುಗಕ್ಕೂ ಮೂರನೆಯ ಸಂಪುಟ ಅರ್ವಾಚೀನ ಯುಗಕ್ಕೂ ಮೀಸಲಾಗಿದೆ. ಬಂಗಾಲಿ ಭಾಷೆಯಲ್ಲಿ ಶಶಿಭೂಷಣ ವಿದ್ಯಾಲಂಕಾರ ಎಂಬುವರು ಸಿದ್ಧಪಡಿಸಿರುವ 5 ಸಂಪುಟಗಳ ಜೀವಕೋಶ, ಬ್ರಜೇಂದ್ರನಾಥ ಬಂದೋಪಾಧ್ಯಾಯ ನಿಂದ ಸಂಪಾದಿತವಾಗಿ ಬಂಗೀಯ ಸಾಹಿತ್ಯ ಪರಿಷತ್ತಿನಿಂದ 9 ಸಂಪುಟಗಳಲ್ಲಿ ಪ್ರಕಟವಾಗಿರುವ ಸಾಹಿತ್ಯ ಸಾಧಕ ಚರಿತ ಮಾಲಾ, ಕನ್ನಡದಲ್ಲಿ ಆರ್. ನರಸಿಂಹಾಚಾರ್ಯರಿಂದ ಸಂಪಾದಿತವಾಗಿ 3 ಸಂಪುಟಗಳಲ್ಲಿ ಪ್ರಕಟವಾಗಿರುವ ಕರ್ನಾಟಕ ಕವಿಚರಿತೆ, ವೆಂಕಟೇಶ ಸಾಂಗಲಿಯವರ ಸಿರಿಗನ್ನಡ ಗ್ರಂಥಕರ್ತರ ಚರಿತ್ರಕೋಶ  ಹೀಗೆ ಹಲವಾರು ಜೀವನ ಚರಿತ್ರೆಯ ಕೋಶಗಳನ್ನು ಹೆಸರಿಸಬಹುದು.

**ಗೆಜೆಟಿಯರ್‌ಗಳು, ಪ್ರವಾಸೀ ಕೈಪಿಡಿಗಳು ಮತ್ತು ಭೂಪಟ ಪುಸ್ತಕಗಳು :** ಗ್ರಂಥಾಲಯದ ಪರಾಮರ್ಶನ ವಿಭಾಗದಲ್ಲಿ ಇಂಥ ಪ್ರಕಟನೆಗಳು ಅವಶ್ಯ ಇರುತ್ತವೆ. ಸ್ಥಳಗಳ, ಪ್ರದೇಶಗಳ, ದೇಶಗಳ ಹೆಸರುಗಳನ್ನೂ ಅವನ್ನು ಕುರಿತ ಕೆಲವಾರು ವಿವರಗಳನ್ನೂ ಒಳಗೊಂಡಿರುವ ಗೆಜೆಟಿಯರ್ ಒಂದು ಕೋಶದಂತೆಯೇ ಉಪಯೋಗಕ್ಕೆ ಬರುತ್ತದೆ. ಮೇಲಿನ ವಿವರಗಳನ್ನು ಒಳಗೊಂಡ ಕೋಶಸದೃಶ ಗ್ರಂಥಗಳನ್ನು ಭೌಗೋಳಿಕ ನಿಘಂಟು ಎಂದು ಕರೆಯುವುದು ವಾಡಿಕೆಯಾದರೂ ಗೆಜೆಟಿಯರ್ ಎಂಬ ಹೆಸರೇ ಹೆಚ್ಚು ವಾಡಿಕೆಯಲ್ಲಿದೆ. ಪ್ರಮುಖ ಗೆಜೆಟಿಯರುಗಳಲ್ಲಿ ಅಮೆರಿಕದ ಗ್ರಂಥಾಲಯ ಸಂಘ ಪ್ರಕಟಿಸುತ್ತಿರುವ ಅಮೆರಿನಕ್ ಲೈಬ್ರರಿ ಅಸೋಸಿಯೇಷನ್ ಗ್ಲಾಸರಿ ಆಫ್ ಲೈಬ್ರರಿ ಟರ್ಮ್ಸ್ ಎಂಬ ಗ್ರಂಥದಲ್ಲಿ ಭೌಗೋಳಿಕ ನಿಘಂಟೆಂಬ ಹೆಸರಿನಲ್ಲಿರುವ ಗೆಜೆಟಿಯರ್, ಗೆಜೆಟಿಯರ್ ಆಫ್ ಇಂಡಿಯ, ಮೈಸೂರು ಗೆಜೆಟಿಯರ್, ಕೊಲಂಬಿಯ ಲಿಪಿನ್‌ಕಾಟ್ ಗೆಜೆಟಿಯರ್ ಆಫ್ ದಿ ವರ್ಲ್ಡ್, ಇಂಪೀರಿಯಲ್ ಗೆಜೆಟಿಯರ್ ಆಫ್ ಇಂಡಿಯ, ಭಾರತದ ರಾಜ್ಯಗಳಲ್ಲಿನ ಜಿಲ್ಲೆಗಳಿಗೆ ಸಂಬಂಧಿಸಿದ ಜಿಲ್ಲಾ ಗೆಜೆಟಿಯರ್‌ಗಳು – ಈ ಮುಂತಾದವುಗಳನ್ನು ಹೆಸರಿಸಬಹುದು.

**ಪ್ರವಾಸೀ ಕೈಪಿಡಿಗಳು :** ಪ್ರವಾಸಿಗರ ಅನುಕೂಲಕ್ಕೆಂದೇ ವಿಶೇಷ ರೀತಿಯಲ್ಲಿ ರಚಿತವಾಗಿರುವ ಕೈಪಿಡಿಗಳೂ (ಹ್ಯಾಂಡ್ ಬುಕ್ಸ್) ಗ್ರಂಥಾಲಯದ ಪರಾಮರ್ಶನ ವಿಭಾಗದಲ್ಲಿ ದೊರೆಯುತ್ತವೆ. ಒಂದು ದೇಶದ, ರಾಜ್ಯದ, ಪ್ರಾಂತ್ಯದ ಪ್ರೇಕ್ಷಣೀಯ ಸ್ಥಳಗಳ ಬಗ್ಗೆ ಎಲ್ಲ ಮಾಹಿತಿಗಳನ್ನು – ಚಾರಿತ್ರಿಕ ಇತಿಹಾಸ, ಭೌಗೋಳಿಕ ಲಕ್ಷಣ, ಸಾರಿಗೆ ಸಂಪರ್ಕ, ಮನರಂಜನೆಯ ಸ್ಥಳಗಳು, ವಸತಿಸೌಲಭ್ಯ ಮುಂತಾದ ವಿವರಗಳನ್ನು – ನೀಡುವಂಥ ಪುಸ್ತಕಗಳು ಇದ್ದು ಅವು ಆಯಾ ವಿಭಾಗದಲ್ಲಿ ಅಧ್ಯಯನ ಮಾಡುವವರಿಗೂ ಪ್ರವಾಸಿಜನಗಳಿಗೂ ಹೆಚ್ಚು ಉಪಯೋಗಕ್ಕೆ ಬರುತ್ತವೆ. ಒಂದು ರಾಷ್ಟ್ರದ ಅಥವಾ ರಾಜ್ಯದ ಸಮಾಚಾರ ಇಲಾಖೆಯಾಗಲೀ ಇಲ್ಲವೇ ಪ್ರವಾಸೋದ್ಯಮ ವಿಭಾಗವಾಗಲೀ ಇಂಥ ಪ್ರವಾಸೀ ಕೈಪಿಡಿಗಳನ್ನು ಕಿರುಹೊತ್ತಿಗೆಯ ರೂಪದಲ್ಲೋ ಇಲ್ಲವೇ ಸಣ್ಣ ಪುಸ್ತಕಗಳ ರೂಪದಲ್ಲೋ ಹೊರತರಬಹುದು. ಅಮೆರಿಕದ ಗ್ರಂಥಾಲಯ ಸಂಘದ ಟ್ರಾವೆಲ್ ಗೈಡ್ಸ್ ಅಂಡ್ ಗೈಡ್ಸ್ ಬುಕ್ಸ್ ಎಂಬ ಪ್ರಕಟಣೆಯಲ್ಲಿ ಪ್ರದೇಶ, ಪಟ್ಟಣ, ಕಟ್ಟಡ, ಭೇಟಿ ಕೊಡಬೇಕಾದ ಸ್ಥಳಗಳು ಮುಂತಾದವುಗಳ ಬಗ್ಗೆ ವಿವರಗಳನ್ನು ಪ್ರವಾಸಿಗರ ಅನುಕೂಲಕ್ಕೆ ತಕ್ಕಂತೆ ಕೊಡಲಾಗಿದೆ. ಪ್ರವಾಸೀ ಕೈಪಿಡಿಗಳಲ್ಲಿ ಸ್ಥಳಸನ್ನಿವೇಶವನ್ನು ಸೂಚಿಸುವ ನಕ್ಷೆಗಳೂ ಛಾಯಾಚಿತ್ರಗಳೂ ಅಗತ್ಯವಾದಷ್ಟು ಅಂಕಿ–ಅಂಶಗಳೂ ಇರುತ್ತವೆ. ಪ್ರಪಂಚದ ಎಲ್ಲ ರಾಷ್ಟ್ರಗಳ ಸರ್ಕಾರಗಳೂ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವ ಸಲುವಾಗಿ ಇಂಥ ಪ್ರವಾಸೀ ಕೈಪಿಡಿಗಳ ಪ್ರಕಟಣೆಯ ಕೆಲಸವನ್ನು ಮಾಡುತ್ತಿವೆ. ಪ್ರವಾಸಿಗಳ ಅನುಕೂಲಕ್ಕೋಸ್ಕರ ಇಂಥ ಕೈಪಿಡಿಗಳ ಆಕರದಲ್ಲೂ ವೈಶಿಷ್ಟ್ಯ ಎದ್ದುಕಾಣುತ್ತದೆ. ಕೈಪಿಡಿಗಳ ಬೆಲೆ ಸಾಮಾನ್ಯವಾಗಿ ಕಡಿಮೆಯಿರುತ್ತದೆ. ಬೇಡೇಕರ್ಸ್ ಗೈಡ್ಸ್, ಮೆಕ್‌ಗ್ರಾ ಹಿಲ್ ಕಂಪನಿಯ ಪಾಕೆಟ್ ಟ್ರಾವೆಲ್ಸ್ ಗೈಡ್ಸ್, ಫಾಡರ್ಸ್ ಗೈಡ್ಸ್ ಟು ಇಂಡಿಯ – ಇವೇ ಮುಂತಾದ ಪ್ರವಾಸಿ ಕೈಪಿಡಿಗಳು ಬಳಕೆಯಲ್ಲಿವೆ. ಇಂಡಿಯನ್ ಬ್ರಾಡ್‌ಷಾ ಎಂಬುದು ಪ್ರವಾಸಿಗರಿಗೆ ಅತ್ಯಂತ ಉಪಯುಕ್ತವಾದ ಕೈಪಿಡಿ ಹಾಗೂ ಪರಾಮರ್ಶನ ಗ್ರಂಥ. ಭಾರತದ ಎಲ್ಲ ರೈಲ್ವೆ ಹಾಗೂ ವಿಮಾನಸಾರಿಗೆಯ ವೇಳಾಪಟ್ಟಿಗಳನ್ನೂ ಟಿಕೇಟು ದರಗಳನ್ನೂ ಇದರಲ್ಲಿ ಕೊಟ್ಟಿದೆ. ಕಾಲಕಾಲಕ್ಕೆ ಆಗುವ ಬದಲಾವಣೆಗಳನ್ನೂ ಸಮಾವೇಶಗೊಳಿಸಿ ತಿಂಗಳಿಗೊಮ್ಮೆ ಪ್ರಕಟಣೆಗಳನ್ನು ತರಲಾಗುತ್ತದೆ. ಭಾರತದಲ್ಲಿಯ ಗಿರಿಧಾಮಗಳ ಮತ್ತು ಆರೋಗ್ಯಧಾಮಗಳ ಬಗ್ಗೆಯೂ ಪ್ರಮುಖ ಪ್ರವಾಸೀ ಕೇಂದ್ರಗಳಿಗೆ ಸಂಪರ್ಕ ಕಲ್ಪಿಸುವ ಸಾರಿಗೆ ವ್ಯವಸ್ಥೆಗಳ ವೇಳಾಪತ್ರಿಕೆಯನ್ನೂ  ಈ ಗ್ರಂಥದಲ್ಲಿ ಕಾಣಬಹುದು.

ಭೂಪಟ ಪುಸ್ತಕ : ಸಾಮಾನ್ಯವಾಗಿ ಒಂದು ದೇಶದ ಅಥವಾ ಪ್ರದೇಶದ ಸ್ವಾಭಾವಿಕ ಸನ್ನಿವೇಶಗಳನ್ನು– ಮೇರೆಗಳು, ನದಿ, ಬೆಟ್ಟ, ಪಟ್ಟಣ, ಅಕ್ಷಾಂಶ ರೇಖಾಂಶ – ಗುರುತಿಸಿರುವ ಭೂಪಟಗಳ ಪುಸ್ತಕ. ಇದರ ಜೊತೆಗೆ ಆಯಾ ದೇಶದಲ್ಲಿನ ರಸ್ತೆ, ರೈಲುಮಾರ್ಗಗಳು, ಬಂದರುಗಳು, ಕಾರ್ಖಾನೆಗಳಿರುವ ಸ್ಥಳಗಳು, ಜಿಲ್ಲಾಕೇಂದ್ರಗಳು, ರಾಜಧಾನಿಗಳು, ತಾಲ್ಲೂಕು ಕೇಂದ್ರಗಳು, ಶೈಕ್ಷಣಿಕ ಕೇಂದ್ರಗಳು – ಹೀಗೆ ಹಲವಾರು ವಿವರಗಳೂ ಇರುತ್ತವೆ. ಇವಲ್ಲದೆ ಒಂದು ಪ್ರದೇಶದ ಸ್ವಾಭಾವಿಕ ಸಸ್ಯವರ್ಗವನ್ನೂ ವಾಯುಗುಣವನ್ನೂ ಖನಿಜಸಂಪತ್ತನ್ನೂ ರಾಜಕೀಯ ವಿಭಾಗಗಳನ್ನೂ ವಾರ್ಷಿಕ ಮಳೆಬೆಳೆಗಳನ್ನೂ ನೀರಾವರಿ ಕೆಲಸಗಳನ್ನು ತೋರಿಸಿ ಕೊಡುವ ವಿವಿಧ ಭೂಪಟಗಳೂ ಇದರಲ್ಲಿ ಸೇರಿರುತ್ತವೆ. ಇವಲ್ಲದೆ ತಾಲ್ಲೂಕು ಎಲ್ಲೆ, ಜಿಲ್ಲಾ ಗಡಿ, ರಾಜ್ಯದ ಎಲ್ಲೆ, ರಾಷ್ಟ್ರದ ಗಡಿ, ಅಂತಾರಾಷ್ಟ್ರೀಯ ಎಲ್ಲೆ– ಇವೆಲ್ಲವನ್ನೂ ಅಟ್ಲಾಸು ಒಳಗೊಂಡಿರುತ್ತದೆ. ಐತಿಹಾಸಿಕ ಬದಲಾವಣೆಗಳಿಗೆ ಅನುಗುಣವಾಗಿ ಒಂದು ರಾಷ್ಟ್ರ ಅಥವಾ ರಾಜ್ಯ ಬೇರೆ ಬೇರೆ ಅವಧಿಯಲ್ಲಿ ತಾಳಿದ ರೂಪಗಳನ್ನು ವಿವರಿಸುವ ರಾಜಕೀಯ ಭೂಪಟಗಳು ಇರುತ್ತವೆ. ಈ ಎಲ್ಲ ಅಂಶಗಳನ್ನುಳ್ಳ ಭೂಪಟಗಳು ಭೂಪಟಶಾಸ್ತ್ರಾನುಸಾರ ಆ ವಿಭಾಗದ ಪರಿಣತರಿಂದ ತಯಾರುಗೊಂಡಿರುತ್ತದೆ. ಭೂಪಟಗಳನ್ನು ಒಂದು ನಿರ್ದಿಷ್ಟ ಅಳತೆಯ ಮಾನಕ್ಕೆ (ಸ್ಕೇಲ್) ಅನುಗುಣವಾಗಿ ಸಿದ್ಧಗೊಳಿಸಿರುತ್ತಾರೆ. ಅಟ್ಲಾಸುಗಳು ಭೂಪಟಗಳ ಕೋಶವೇ ಆಗಿರುವ ಕಾರಣ ಪರಾಮರ್ಶನೆಯ ಕೆಲಸ ತ್ವರಿತವಾಗಿ ನಡೆಯುತ್ತದೆ. ಪ್ರಮುಖ ಅಟ್ಲಾಸುಗಳಲ್ಲಿ ದಿ ಟೈಮ್ಸ್ ಅಟ್ಲಾಸ್ ಆಫ್ ದಿ ವರ್ಲ್ಡ್ (ಲಂಡನ್ ಪ್ರಕಟಣೆ), ದಿ ಆಕ್ಸ್‌ಫರ್ಡ್ ಅಟ್ಲಾಸ್, ಹ್ಯಾಮಂಡ್ಸ್ ಅಂಬಾಸೆಡರ್ ಅಟ್ಲಾಸ್ ಆಫ್ ದಿ ವರ್ಲ್ಡ್, ಎನ್‌ಸೈಕ್ಲೊಪೀಡಿಯ ಬ್ರಿಟಾನಿಕ ವರ್ಲ್ಡ್ ಅಟ್ಲಾಸ್ ಆಫ್ ದಿ ವರ್ಲ್ಡ್, ರ್‍ಯಾಂಡ್ ಮ್ಯಾಕ್‌ನಲಿ ಕಾಸ್ಮೋಪಾಲಿಟನ್ ವರ್ಲ್ಡ್ ಅಟ್ಲಾಸ್, ರೀಡರ್ಸ್ ಡೈಜೆಸ್ಟ್ ಪತ್ರಿಕೆಯವರ ದಿ ಗ್ರೇಟ್ ವರ್ಲ್ಡ್ ಅಟ್ಲಾಸ್, ಮೆಡಾಲಿಯನ್ ವರ್ಲ್ಡ್ ಅಟ್ಲಾಸ್, ನ್ಯೂ ವರ್ಲ್ಡ್ ಅಟ್ಲಾಸ್ – ಹೀಗೆ ಅನೇಕ ಬಗೆಯ ಭೂಪಟ ಪುಸ್ತಕಗಳಿವೆ.

ಸ್ವಾತಂತ್ರ್ಯ ಪೂರ್ವದಲ್ಲಿ ಭಾರತಕ್ಕೇ ಮೀಸಲಾದ ಪ್ರತ್ಯೇಕ ಅಟ್ಲಾಸುಗಳಿರಲಿಲ್ಲ. ಸ್ವಾತಂತ್ರ್ಯಾನಂತರ ಭಾರತ ಸರ್ಕಾರ ಅಟ್ಲಾಸಿನ ಅಗತ್ಯಗಳನ್ನು ಮನಗಂಡು ನ್ಯಾಷನಲ್ ಅಟ್ಲಾಸ್ ಆರ್ಗನೈಸೇಷನ್ ಎಂಬ ಸಂಸ್ಥೆಯನ್ನು ಸ್ಥಾಪಿಸಿತು. ಈ ಸಂಸ್ಥೆ ಕೇಂದ್ರ ಶಿಕ್ಷಣ ಶಾಖೆಯ ಆಡಳಿತಕ್ಕೊಳಪಟ್ಟಿತ್ತು. 1957 ರಲ್ಲಿ ಈ ಸಂಸ್ಥೆ ನ್ಯಾಷನಲ್ ಅಟ್ಲಾಸ್ ಆರ್ಗನೈಸೇಷನ್ ಎಂಬ ಪ್ರಾರಂಭಿಕ ಆವೃತ್ತಿಯನ್ನು ಪ್ರಕಟಿಸಿತು. ಸ್ವತಂತ್ರ ಭಾರತದ ರೂಪರೇಷೆಗಳು ಇದರ ಪ್ರಮುಖ ವಿಷಯ. ಶಿವಪ್ರಸಾದ್ ಚಟರ್ಜಿ ಎಂಬುವರಿಂದ ಸಂಪಾದಿಸಲ್ಪಟ್ಟ ಈ ಅಟ್ಲಾಸಿನಲ್ಲಿ 25" X 14" ಆಕಾರದ 26 ಭೂಪಟಗಳಿವೆ. ಅಟ್ಲಾಸಿನ ಪ್ರಾರಂಭದಲ್ಲಿ ಭೂಪಟಗಳು ಪ್ರತಿನಿಧಿಸುವ ಅಂಶಗಳನ್ನು ಸಾದ್ಯಂತವಾಗಿ ವಿವರಿಸುವ ಟಿಪ್ಪಣಿಗಳನ್ನು ಹಿಂದಿ ಮತ್ತು ಇಂಗ್ಲಿಷ್‌ಗಳಲ್ಲಿ ಕೊಡಲಾಗಿದೆ. ಭಾರತ ಮತ್ತು ಪ್ರಪಂಚ, ಭೂರಚನೆ, ಜಲ ಪ್ರವಾಹಗಳು, ಮಳೆ, ಅರಣ್ಯ ಮತ್ತು ಭೂಸಂಪತ್ತು, ಪಶುಸಂಪತ್ತು, ವಿದ್ಯುಚ್ಛಕ್ತಿ, ರೈಲ್ವೆ ಮಾರ್ಗಗಳು, ಖನಿಜಗಳು, ಉದ್ಯಮಗಳು, ನೀರಾವರಿ ಸೌಕರ್ಯಗಳು, ಆಹಾರಧಾನ್ಯಗಳು,

ಶಿಕ್ಷಣ ಮತ್ತು ವೈಜ್ಞಾನಿಕ ಸಂಶೋಧನೆ, ಆರೋಗ್ಯ, ಪುರಾತತ್ತ್ವ ಮತ್ತು ಪ್ರವಾಸೋದ್ಯಮ – ಹೀಗೆ ಭಾರತಕ್ಕೆ ಸಂಬಂಧಿಸಿದ ಹಲವಾರು ವಿಷಯಗಳ ಭೂಪಟಗಳು ಈ ಅಟ್ಲಾಸಿನಲ್ಲಿವೆ. ಇತ್ತೀಚೆಗೆ ಭಾರತದಲ್ಲಿ ಪ್ರಕಟವಾಗುತ್ತಿರುವ ಅಟ್ಲಾಸುಗಳಲ್ಲಿ ಬ್ರಿಜ್‌ಬಾಸಿ ವರ್ಲ್ಡ್ ಅಟ್ಲಾಸು, ಶಾರದಾ ಅಟ್ಲಾಸು ಮತ್ತು ಇತರ ಪ್ರಾಂತೀಯ ಭಾಷೆಗಳಲ್ಲಿ ಪ್ರಕಟವಾಗುತ್ತಿರುವ ಅಟ್ಲಾಸುಗಳೂ ಜನಪ್ರಿಯವಾಗುತ್ತಿವೆ. ಭಾರತ ಸರ್ಕಾರದ ಪ್ರಕಾಶನ ವಿಭಾಗದವರಿಂದ ಇಂಡಿಯ ಇನ್ ಮ್ಯಾಪ್ಸ್ ಎಂಬ ಅಟ್ಲಾಸು ಉಲ್ಲೇಖಾರ್ಹ.

ಗ್ರಂಥಾಲಯದ ಪರಾಮರ್ಶನ ವಿಭಾಗದಲ್ಲಿ ವಿವಿಧ ಅಟ್ಲಾಸುಗಳನ್ನು ಸಂಗ್ರಹಿಸಿಡಲಾಗಿದ್ದು ಅಧ್ಯಯನಾಸಕ್ತರಿಗೆ, ಸಂಶೋಧಕರಿಗೆ ವಿಶಿಷ್ಟ ಪರಾಮರ್ಶನ ಸೇವೆ ಒದಗುತ್ತಿದೆ.

ನಿಯತಕಾಲಿಕೆಗಳ ನಿರ್ದೇಶಿಕೆಗಳು ಮತ್ತು ಸಮಾಚಾರ ಸಾರಗಳು : ಒಂದು ನಿರ್ದಿಷ್ಟ ಕಾಲಾವಧಿಗೊಮ್ಮೆ ಪ್ರಕಟವಾಗುವ ನಿಯತಕಾಲಿಕೆಗಳನ್ನೂ (ಪೀರಿಯಾಡಿಕಲ್ಸ್) ಆ ನಿಯತಕಾಲಿಕೆಗಳಲ್ಲಡಗಿರುವ ವಿಷಯಗಳ ಸಮಾಚಾರ ಸಾರಗಳನ್ನೂ (ಇನ್ಫರ್ಮೇಷನ್ ಅಬ್‌ಸ್ಟ್ರ್ಯಾಕ್ಟ್ಸ್) ಗ್ರಂಥಾಲಯದ ಪರಾಮರ್ಶನ ವಿಭಾಗ ಒಳಗೊಂಡಿರುತ್ತದೆ. ಒಂದು ವಿಷಯಕ್ಕೆ ಸಂಬಂಧಿಸಿದಂತೆ ಹಳೆಯ ಮತ್ತು ಹೊಸ ನಿಯತಕಾಲಿಕೆಗಳ ಪಟ್ಟಿಯನ್ನು ತಯಾರಿಸುವಾಗ ಅವುಗಳ ಸಂಪಾದಕರ, ಪ್ರಕಾಶಕರ ವಿಳಾಸಗಳು, ಪ್ರಕಟಣೆಯ ಕಾಲಾವಧಿ, ಅಚ್ಚಾಗುವ ಪ್ರತಿಗಳ ಸಂಖ್ಯೆ, ಪುಸ್ತಕ ವಿಮರ್ಶೆ, ಜಾಹೀರಾತು ಇತ್ಯಾದಿ ವಿಷಯಗಳ ಬಗ್ಗೆ ಬರುವ ಹಲವಾರು ಸಂದೇಹಗಳನ್ನು ನಿಯತಕಾಲಿಕೆಗಳ ನಿರ್ದೇಶಿಕೆಗಳು (ಡೈರೆಕ್ಟರಿಸ್) ನಿವಾರಿಸುತ್ತವೆ. ಪ್ರಪಂಚದಲ್ಲಿ ಪ್ರಕಟವಾಗುವ ನಿಯತಕಾಲಿಕೆಗಳ ಬಗ್ಗೆ ಮಾಹಿತಿಯನ್ನು ಕೊಡುವ ಹಲವಾರು ನಿರ್ದೇಶಿಕೆಗಳಿದ್ದರೆ, ಒಂದು ದೇಶಕ್ಕೇ ಸೀಮಿತವಾಗಿರುವ ನಿರ್ದೇಶಿಕೆಗಳೂ ಇರಬಹುದು. ಇವಲ್ಲದೆ ಒಂದೇ ವಿಷಯವನ್ನು ಕುರಿತ ನಿರ್ದೇಶಿಕೆಗಳೂ ಇರುತ್ತವೆ. ವರ್ಲ್ಡ್ ಲಿಸ್ಟ್ ಸೈನ್‌ಟಿಫಿಕ್ ಪೀರಿಯಾಡಿಕಲ್ಸ್ ನಂಥ ನಿರ್ದೇಶಿಕೆಗಳು ಬಹಳ ಉಪಯೋಗಕ್ಕೆ ಬರುತ್ತವೆ. ಉಲ್‌ರಿಚ್ಸ್ ಇಂಟರ್‌ನ್ಯಾಷನಲ್ ಪೀರಿಯಾಡಿಕಲ್ಸ್ ಡೈರೆಕ್ಟರಿ ಎಂಬುದರಲ್ಲಿ ಪ್ರಪಂಚದಲ್ಲಿ ವಿವಿಧ ವಿಷಯಗಳನ್ನು ಕುರಿತು ಪ್ರಕಟವಾಗುವ (ದೈನಿಕ ಪತ್ರಿಕೆಗಳನ್ನು ಬಿಟ್ಟು) ಸುಮಾರು 40,000 ನಿಯತಕಾಲಿಕೆಗಳ ಬಗ್ಗೆ ಮಾಹಿತಿ ಒದಗುತ್ತದೆ. ಸಮಾವೇಶಗೊಂಡ ನಿಯತಕಾಲಿಕೆಗಳನ್ನು ವಿಷಯಾನುಕ್ರಮದಲ್ಲಿ ಕೊಟ್ಟು, ವಿಷಯಗಳನ್ನು ಅಕಾರಾದಿ ಕ್ರಮದಲ್ಲೂ ಹೊಂದಿಸಲಾಗಿದೆ. ಈ ಅನುಬಂಧಕ್ಕೆ ಮೊದಲು ಹೊಸದಾಗಿ ಪ್ರಾರಂಭವಾದ ಮತ್ತು ನಿಲುಗಡೆಯಾದ ನಿಯತಕಾಲಿಕೆಗಳ ಶೀರ್ಷಿಕೆಗಳನ್ನು ಅಕಾರಾದಿಯಾಗಿ ಕೊಟ್ಟಿದೆ. ವಿಲ್ಲಿಂಗ್ಸ್ ಪ್ರೆಸ್ ಗೈಡ್, ಆಯರ್ಸ್ ಡೈರೆಕ್ಟರಿ ಆಫ್ ನ್ಯೂಸ್‌ಪೇಪರ್ಸ್ ಅಂಡ್ ಪೀರಿಯಾಡಿಕಲ್ಸ್, ಲಂಡನಿನಿಂದ ಪ್ರಕಟವಾಗುವ ನ್ಯೂಸ್‌ಪೇಪರ್ಸ್ ಪ್ರೆಸ್ ಡೈರೆಕ್ಟರಿ –ಇವು ಪ್ರಮುಖ ನಿರ್ದೇಶಿಕೆಗಳು.

ವಿವಿಧ ಭಾಷೆಗಳಲ್ಲಿ ಹಾಗೂ ಅನೇಕ ವಿಷಯಗಳ ಮೇಲಿನ ನಿಯತಕಾಲಿಕೆಗಳ ಬಗೆಗೆ ವಿವರಗಳನ್ನು ಕೊಡುವ ಪರಾಮರ್ಶನ ನಿರ್ದೇಶಿಕೆಗಳು ಭಾರತದಲ್ಲೂ ಪ್ರಕಟವಾಗುತ್ತಿವೆ. ಭಾರತದ ವೃತ್ತಪತ್ರಿಕೆಗಳ ರಿಜಿಸ್ಟ್ರಾರ್ ಜನರಲ್ ಪ್ರಕಟಿಸುವ ಆನ್ಯುಯಲ್ ರಿಪೋರ್ಟ್ ಎಂಬುದು ಒಂದು ನಿರ್ದೇಶಿಕೆಯೇ. 1965 ರಿಂದ ಇದನ್ನು ಪ್ರೆಸ್ ಇನ್ ಇಂಡಿಯ ಎಂಬ ಹೆಸರಿನಲ್ಲಿ ಪ್ರಕಟಿಸಲಾಗುತ್ತಿದೆ. ಭಾರತದಲ್ಲಿ ಪ್ರಕಟವಾಗುವ ಎಲ್ಲ ಭಾಷೆಗಳಲ್ಲಿನ ಎಲ್ಲ ವಿಷಯಗಳ ಮೇಲಿನ ನಿಯತಕಾಲಿಕೆಗಳ ಬಗ್ಗೆ ವಿವರಗಳು ಈ ಗ್ರಂಥದಲ್ಲಿ ಸಿಕ್ಕುತ್ತದೆ. ಇನ್ನಿತರ ನಿರ್ದೇಶಿಕೆಗಳಲ್ಲಿ ಪುಣೆಯಿಂದ ಪ್ರಕಟವಾದ (1955–56) ನಿಫಾರ್ ಗೈಡ್ ಟು ಇಂಡಿಯನ್ ಪೀರಿಯಾಡಿಕಲ್ಸ್, ಇಂಡಿಯನ್ ಪೀರಿಯಾಡಿಕಲ್ಸ್: ಆನ್ ಆನೋಟೇಟೆಡ್ ಗೈಡ್ 9 (ಪ್ರಕಟಣ ವರ್ಷ: 1969), ಭಾರತ ರಾಷ್ಟ್ರೀಯ ವಿಜ್ಞಾನ ಪ್ರಲೇಖನ ಕೇಂದ್ರ (ಐಎನ್‌ಎಸ್‌ಡಿಓಸಿ) ವಿಜ್ಞಾನ ವಿಷಯಗಳಿಗೆ ಮೀಸಲಾಗಿರುವ ನಿಯತಕಾಲಿಕೆಗಳ ಬಗ್ಗೆ ಮಾಹಿತಿ ಕೊಡುವ ಡೈರೆಕ್ಟರಿ ಆಫ್ ಇಂಡಿಯನ್ ಸೈಂಟಿಫಿಕ್ ಪೀರಿಯಾಡಿಕಲ್ಸ್ ಎಂಬ ನಿರ್ದೇಶಿಕೆ – ಇವು ಮುಖ್ಯವಾದುದು.

ಇಂಥ ನಿರ್ದೇಶಿಕೆಗಳು ಒಂದು ವಿಧದಲ್ಲಿ ಸಮಾಚಾರ ಸಾರವನ್ನು ಒದಗಿಸುವ ಪರಾಮರ್ಶನ ಗ್ರಂಥಗಳೂ ಆಗುತ್ತವೆ. ಪ್ರಪಂಚದಲ್ಲಿನ ಘಟನೆಗಳ ಬಗ್ಗೆ ಸಮಾಚಾರ ಸಾರವನ್ನು ಸಂಗ್ರಹಿಸಿ ಒಂದು ನಿಯತಕಾಲಾವಧಿಯಲ್ಲಿ ಹೊರಬೀಳುತ್ತಿರುವ ಪ್ರಕಟಣೆಗಳಲ್ಲಿ ಬ್ರಿಸ್ಟಲಿನ ಕೀಸಿಂಗ್ಸ್ ಕಂಟೆಂಪೊರರಿ ಆರ್ಕೈವ್ಸ್, ನ್ಯೂಯಾರ್ಕಿನ ಫ್ಯಾಕ್ಟ್ಸ್ ಆನ್ ಫೈಲ್ ಎಂಬ ಕಾಲಿಕೆಗಳು ಮುಖ್ಯವಾದವು. ಇವು ವಾರಕ್ಕೊಮ್ಮೆ ಹೊರಬೀಳುವ ಪ್ರಕಟಣೆಗಳು. ಪ್ರಪಂಚದ ನಿಯತಕಾಲಿಕೆಗಳ ಬಗ್ಗೆ ಮಾಹಿತಿಗಳಲ್ಲದೆ ರಾಜಕೀಯ, ವಿಜ್ಞಾನ, ಕ್ರೀಡೆ, ನಾಟಕ, ಚಲನಚಿತ್ರಗಳು, ಹೊಸ ಹೊಸ ಪ್ರಕಟಣೆಗಳು, ದೇಶಗಳ ನಡುವೆ ಆದ ಒಪ್ಪಂದಗಳು, ರಾಷ್ಟ್ರಪ್ರಮುಖರ ಭಾಷಣಗಳು, ಇತ್ಯಾದಿ ಈ ಪ್ರಕಟಣೆಗಳಲ್ಲಿ ದೊರೆಯುತ್ತವೆ. ಏಷ್ಯ ಮತ್ತು ಆಫ್ರಿಕ ಖಂಡಗಳಲ್ಲಿ ನಡೆಯುವ ಘಟನೆಗಳ ವಿವರಗಳನ್ನು ದೆಹಲಿಯಿಂದ ಪ್ರಕಟವಾಗುವ ಏಷ್ಯನ್ ರೆಕಾರ್ಡರ್ ಮತ್ತು ಆಫ್ರಿಕ ಡೈರಿ ಎಂಬ ಪ್ರಕಟಣೆಗಳಲ್ಲಿ ಕಾಣಬಹುದು. (ಬಿ.ಬಿ.ಎಚ್.)

**2. ಪ್ರಲೇಖನ :** ಒಂದೋ ಇಲ್ಲವೆ ಹಲವಾರು ವಿಷಯಗಳಿಗೋ ಸಂಬಂಧಿಸಿದಂತೆ ಅಂಕಿ ಅಂಶಗಳನ್ನೂ ಮಾಹಿತಿಗಳನ್ನೂ ಸಂಗ್ರಹಿಸಿಕೊಂಡು ನಡೆಸುವ ಸಂಶೋಧನೆಗಳಿಗೆ ಸಹಾಯವಾಗುವಂತೆ ದಾಖಲೆಗಳ ರುಜುವಾತನ್ನೂ ಪ್ರಮಾಣಪತ್ರಗಳನ್ನೂ ಒದಗಿಸಿಕೊಡುವ ಒಂದು ಕ್ರಮಬದ್ಧ ಕಾರ್ಯ (ಡಾಕ್ಯುಮೆಂಟೇಷನ್). ಇದು ಸುಸಜ್ಜಿತವಾದ ಗ್ರಂಥಾಲಯ ಮಾಡಬೇಕಾದ ಮುಖ್ಯ ಕೆಲಸಗಳಲ್ಲಿ ಒಂದು. ಜೀವನದ ಹಲವಾರು ಕ್ಷೇತ್ರಗಳಲ್ಲಿ ಪ್ರಗತಿಯನ್ನು ಸಾಧಿಸುವ ಸಲುವಾಗಿ ರೂಪಿಸಿಕೊಂಡಿರುವ ವಿವಿಧ ಪ್ರಕ್ರಮಗಳು, ಯಂತ್ರಸ್ಥಾವರಗಳು, ಶೈಕ್ಷಣಿಕ ಹಾಗೂ ವೈಜ್ಞಾನಿಕ ಸಂಸ್ಥೆಗಳು ಮುಂತಾದವುಗಳಲ್ಲಿ ನಡೆಯುವ ಭಿನ್ನ ಭಿನ್ನ ಸಂಶೋಧನೆಗಳಿಗೆ ಪೋಷಕವಾಗಿ ಆಯಾ ಕ್ಷೇತ್ರಗಳಲ್ಲಿನ ಸಂಶೋಧಕರಿಗೆ ಮಾರ್ಗದರ್ಶನವನ್ನು ಕ್ಷಿಪ್ರ ಅವಧಿಯಲ್ಲಿ ಒದಗಿಸುವುದು ಪ್ರಲೇಖನದಿಂದ ಸಾಧ್ಯ.




ಮೈಕ್ರೊಫಿಲ್ಮ್ ತಯಾರಿಕೆ

ಒಂದು ವಿಷಯವನ್ನು ಕುರಿತಂತೆ ನಡೆಯುವ ಸಂಶೋಧನೆಗೆ ಅತ್ಯಗತ್ಯವಾದ ಮಾಹಿತಿಗಳೂ ಅಂಕಿಅಂಶಗಳೂ ದಾಖಲಾತಿಗಳೂ ಪರಾಮರ್ಶನ ಗ್ರಂಥಗಳೂ ನಿಯತಕಾಲಿಕೆಗಳೂ ಇತರ ಸಂಶೋಧನ ಪ್ರಬಂಧಗಳೂ –ಇವೇ ಮುಂತಾದ ಸಾಮಗ್ರಿಗಳು ಗ್ರಂಥಾಲಯದಲ್ಲಿ ದೊರಕುತ್ತವೆ. ಈ ಎಲ್ಲ ವಿಭಾಗಗಳಲ್ಲಿ ಒಂದು ಕ್ರಮಬದ್ಧ ಪ್ರಲೇಖನ ಕಾರ್ಯದ ಆವಶ್ಯಕತೆ ಇತ್ತೀಚೆಗೆ ಹೆಚ್ಚಾಗಿ ಕಾಣಬರುತ್ತಿದೆ. ಪ್ರಲೇಖನ ಕಾರ್ಯಕ್ಕೆ ಗ್ರಂಥಾಲಯ ಒಂದು ವೇದಿಕೆಯನ್ನು ಒದಗಿಸುತ್ತದೆ. ಈಚೆಗೆ ವಿವಿಧ ಉದ್ಯಮಗಳು, ವಿಷಯ ಪ್ರಯೋಗಾಲಯಗಳು ಮತ್ತು ತಂತ್ರಜ್ಞಾನದ ಕಾರ್ಯಾಲಯಗಳು ವಿಪುಲವಾಗಿ ಬೆಳೆದು ಅವುಗಳ ಆವಶ್ಯಕತೆಗಳು ವಿಶಿಷ್ಟವಾಗಿ ಪರಿಣಮಿಸುವುದರಿಂದ ಅವು ತಮ್ಮದೇ ಆದ ಪ್ರಲೇಖನ ಸೇವೆಯನ್ನು ಸಂಘಟಿಸಿಕೊಳ್ಳುತ್ತಿವೆ. ಅಲ್ಲಿ ಕೂಡ ಕೆಲವು ಪುಸ್ತಿಕೆಗಳು ಆ ವಿಷಯಕ್ಕೆ ಸಂಬಂಧಿಸಿ ಸಂಗ್ರಹಿತವಾಗಿದ್ದರೂ ಅದು ಹಿನ್ನೆಲೆಯ ಮಾಹಿತಿಗೆ ಮಾತ್ರ. ಅಗ್ರ ಪ್ರಾಶಸ್ತ್ಯವಿರುವುದು ಪ್ರಲೇಖನಕ್ಕೆ.

ಇಂಥ ಪ್ರಲೇಖನ ಕೇಂದ್ರಗಳು ಅಥವಾ ಕಾರ್ಯಾಲಯಗಳು ಒಂದು ಸರ್ಕಾರದ ಆಡಳಿತದಲ್ಲಿಯಾಗಲಿ, ಒಂದು ಉದ್ಯಮದ ಅಥವಾ ಕಾರ್ಖಾನೆಗಳ ಅಧೀನವಾಗಿಯಾಗಲಿ ಇರಬಹುದು. ಸರ್ಕಾರೀ ಸಂಸ್ಥೆಗಳಲ್ಲಿ ಸಾಧಾರಣವಾಗಿ ಸಾರ್ವಜನಿಕರಿಗೆಲ್ಲ ಉಪಯೋಗವಾಗುವಂಥ ಪ್ರಲೇಖನ ಸೇವೆ ಜರುಗುತ್ತಿದ್ದು ಅದರಲ್ಲಿ ಅನೇಕ ವಿಷಯಗಳ ಸ್ಥೂಲವಾದ ಸಮಾಚಾರ ಮಾತ್ರ ಲಭ್ಯವಾಗಬಹುದು. ಜನಸಾಮಾನ್ಯರಿಗೆಲ್ಲ ಪ್ರಯೋಜನಕ್ಕೆ ಬರುವ ಗುಣವೊಂದು ಇದರಲ್ಲಿದ್ದರೂ ತಜ್ಞರಿಗೆ ಇಲ್ಲವೆ ಒಂದು ವಿಷಯದಲ್ಲಿ ಹೆಚ್ಚಿನ ವಿಷಯಗಳನ್ನು ತಿಳಿಯ ಬಯಸುವವರಿಗೆ ಹೆಚ್ಚು ಗಹನ ವಿಚಾರಗಳು ದೊರೆಯದೆ ಹೋಗಬಹುದು. ವಿಷಯ ಪ್ರಧಾನ ಪ್ರಯೋಗಾಲಯದಲ್ಲಿ ಅಥವಾ ಒಂದು ಉದ್ಯಮದ ದೃಷ್ಟಿಯಿಂದ ಸ್ಥಾಪಿಸಿದ ವಿಶಿಷ್ಟ ಗ್ರಂಥಾಲಯದಲ್ಲಿ ನಡೆಯುವ ಪ್ರಲೇಖನ ಕಾರ್ಯದಲ್ಲಿ ತಮ್ಮ ಸಂಸ್ಥೆಯೊಂದರಲ್ಲಿಯೇ ಸಿದ್ಧವಾಗುವ ವಸ್ತುಗಳ ಬಗೆಯ ಸಮಾಚಾರವಷ್ಟೆ ಅಲ್ಲದೆ ಅದೇ ವಿಭಾಗದಲ್ಲಿ ತೊಡಗಿರುವ ಮತ್ತೊಂದು ಸಂಸ್ಥೆಯ ಕಾರ್ಯದ ಮಾಹಿತಿ ಕೂಡ ದೊರೆಯುವಂತಿರುತ್ತದೆ. ವಿಶಿಷ್ಟ ಕೇಂದ್ರಗಳಲ್ಲಿ ಜರುಗುವ ಪ್ರಲೇಖನ ಸೇವೆ ಉತ್ತಮ ಮಟ್ಟದಾಗಿರುತ್ತದೆ. ಇದಲ್ಲದೆ ಇಂಥ ಎರಡೂ ಸಂಸ್ಥೆಗಳ ಕಾರ್ಯವನ್ನೊಳಗೊಂಡ ಮಿಶ್ರ ಸಂಘಟನೆಗಳು ಕೂಡ ತಮ್ಮ ವ್ಯಾಪ್ತಿ, ಶಕ್ತಿ ಮತ್ತು ಸಲಕರಣೆಗಳಿಗೆ ಅನುರೂಪವಾಗಿ ಪ್ರಲೇಖನ ಕಾರ್ಯವನ್ನು ನಡೆಸುತ್ತಿವೆ.

ಪ್ರಲೇಖನ ಸೇವೆಯನ್ನು ಸಮರ್ಪಕವಾಗಿ ಯಾರು ಒದಗಿಸಬಲ್ಲರು, ಅವರ ಶಿಕ್ಷಣ ಎಂಥದಾಗಿರಬೇಕು, ಪೂರ್ವ ಸಿದ್ಧತೆಗಳೇನಿರಬೇಕು, ಪ್ರಲೇಖನ ಕಾರ್ಯ ನಡೆಸುವಾತ ಕೇವಲ ಗ್ರಂಥಾಲಯ ವಿಜ್ಞಾನದಲ್ಲಿ ಪರಿಣತಿ ಹೊಂದಿದ್ದರೆ ಸಾಕೆ, ಅಥವಾ ಅದಕ್ಕೆ ಅನುಗುಣವಾದ ವಿಜ್ಞಾನ ಅಥವಾ ತಂತ್ರಜ್ಞಾನದಲ್ಲಿ ಅವನು ಪ್ರಾವೀಣ್ಯಗಳಿಸಿದ್ದಿರಬೇಕೆ, ಗ್ರಂಥಗಳ ಸಂಗ್ರಹಣೆ, ವ್ಯವಸ್ಥೆ, ವರ್ಗೀಕರಣ ಮತ್ತು ವಿತರಣೆಗಳ ಶಿಕ್ಷಣ ಮತ್ತು ಅನುಭವಗಳಿದ್ದ ಪಕ್ಷಕ್ಕೆ ಮಾತ್ರ ಪ್ರಲೇಖನ ಕಾರ್ಯ ಸುಸೂತ್ರವಾಗಿ ನಡೆಯುತ್ತದೆಯೇ ಮುಂತಾದ ಪ್ರಶ್ನೆಗಳಿಗೆ ಇರುವ ಉತ್ತರಗಳು ಪ್ರಲೇಖನ ಕಾರ್ಯ ನಡೆಯುವ ವಿಧಾನವನ್ನು ವಿವರಿಸುವಂಥವು. ಪ್ರಲೇಖನ ಕಾರ್ಯವನ್ನು ನಿರ್ವಹಿಸುವಾತ ತನ್ನ ಸೇವೆಯನ್ನು ಸಲ್ಲಿಸುವುದರಲ್ಲಿ ಸಾರ್ಥಕತೆಯನ್ನು ಪಡೆಯುವಂಥವನಾಗಿರಬೇಕು. ಎಷ್ಟೋ ಸಂದರ್ಭದಲ್ಲಿ ಸಂಬಂಧಪಟ್ಟ ಶಾಸ್ತ್ರದಲ್ಲಿ ಆಸಕ್ತಿ, ಅಭಿರುಚಿಯುಳ್ಳ ವ್ಯಕ್ತಿ ಗ್ರಂಥಾಲಯ ವಿಜ್ಞಾನದ ಶಿಕ್ಷಣವನ್ನು ಪಡೆದು ತನ್ನ ಕರ್ತವ್ಯವನ್ನು ತೃಪ್ತಿಕರವಾಗಿ ಈಡೇರಿಸಿದುದುಂಟು. ಆದರೂ ಪ್ರಲೇಖನ ಕಾರ್ಯಕ್ಕೆ ಯೋಗ್ಯನಾಗಬೇಕಾದರೆ ಮೂಲವಾಗಿ ಆತನಿಗೆ ಗ್ರಂಥಾಲಯ ವಿಜ್ಞಾನದ ಅರಿವು ಅಗತ್ಯ. ಜೊತೆಗೆ ಪ್ರಲೇಖನ ವಿಭಾಗದಲ್ಲಿ ಕೆಲಸ ಮಾಡುವ ವಿವಿಧ ತಜ್ಞರಿಗೆ ಯುಕ್ತ ಶಿಕ್ಷಣ ಮತ್ತು ತರಬೇತಿಗಳೂ ಅಗತ್ಯವಾಗುತ್ತವೆ. ಪ್ರಾದೇಶಿಕ ಭಾಷೆಗಳ ಮತ್ತು ಅಂತಾರಾಷ್ಟ್ರೀಯ ಭಾಷೆಗಳ ಪರಿಚಯವೂ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಅನುವಾದ ಮಾಡುವ ಅರ್ಹತೆಗಳೂ ಇರುವುದು ಅನಿವಾರ್ಯವೆನಿಸುತ್ತದೆ.



ಮೈಕ್ರೋಫಿಲ್ಮ್ ಓದುತ್ತಿರುವುದು

ಪ್ರಲೇಖನ ಸೇವೆಯನ್ನು ಸಲ್ಲಿಸುವ ಯಾವುದೇ ಕೇಂದ್ರವಾಗಲಿ ಮೊದಲು ತನ್ನ ಸಾಮಗ್ರಿಗಳ ಸಂಗ್ರಹಕ್ಕಾಗಿ ಅತ್ಯಂತ ವ್ಯಾಪಕವಾದ ಪೂರ್ವಸಿದ್ಧತೆಯನ್ನು ಮಾಡಿಕೊಳ್ಳಬೇಕು. ಯಾವ ಕಾರ್ಯವನ್ನು ಕೈಕೊಳ್ಳಬೇಕೋ ಆ ವಿಷಯದ ಬಗ್ಗೆ ಪ್ರಪಂಚದ ಯಾವುದೇ ಭಾಗದಲ್ಲಿ ಇಲ್ಲವೆ ಭಾಷೆಯಲ್ಲಿ ನಡೆದಿರಬಹುದಾದ ಪ್ರಸ್ತುತ ಪ್ರಗತಿಯ ಪರಿಜ್ಞಾನ ಆ ಸಂಸ್ಥೆಗಿರುವುದು ಅಗತ್ಯ. ಇಂಥ ಒಂದು ಪ್ರಲೇಖನ ಕೇಂದ್ರದ ಅಗತ್ಯಗಳನ್ನು ಪೂರೈಸಿಕೊಳ್ಳಲು ಇತರ ಪ್ರಲೇಖನ ಕೇಂದ್ರಗಳಿಂದ ವಿಜ್ಞಾಪನೆಯ ಮೂಲಕವಾಗಲಿ, ವಿಕ್ರಯದ ಮೂಲಕವಾಗಲಿ, ಎರವಲು ಪದ್ಧತಿಯನ್ನನುಸರಿಸುವುದರಿಂದಾಗಲಿ, ಇಲ್ಲವೆ ವಿನಿಮಯದ ಮೂಲಕವಾಗಲಿ ವ್ಯವಹಾರ ನಡೆಸಬಹುದು. ದಾಖಲೆಗಳನ್ನು ದೊರಕಿಸುವ ಕಾರ್ಯ ಕ್ಲಿಷ್ಟವಾದುದೂ ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುವಂಥದೂ ಆಗಿರುತ್ತದೆಯಾಗಿ ಗ್ರಂಥಾವಲೋಕನ, ವಿಷಯಾವಲೋಕನದಲ್ಲಿ ಹೆಚ್ಚಿನ ಶ್ರಮ ಇರುತ್ತದೆ. ಪ್ರಪಂಚದ ಯಾವ ಭಾಗದಲ್ಲಿ, ಯಾವ ಭಾಷೆಯಲ್ಲಿ, ಯಾವ ಮಾಧ್ಯಮದಲ್ಲಿ ಅಂಥ ಪ್ರಲೇಖನದ ವಿಷಯವಾಗಿ ಜಾಹೀರಾತುಗಳು ಅಥವಾ ಸಮಾಚಾರ ಪ್ರಕಟವಾಗಿರುವುದೋ ಅಂಥ ಮೂಲಗಳ ಪರಿಶೀಲನೆಯಲ್ಲಿ ಯಾವಾಗಲೂ ಆಸಕ್ತಿ ವಹಿಸಿ ಸಮಾಚಾರ ಸಂಗ್ರಹ ಮಾಡಿ, ಉಚಿತರೀತಿಯಲ್ಲಿ ಸಕಾಲದಲ್ಲಿ ಆ ಭಾಗದ ಕೇಂದ್ರಕ್ಕೆ ವಿನಂತಿ ಮಾಡಿಕೊಂಡು, ತಗಲುವ ವೆಚ್ಚವನ್ನು ಗೊತ್ತುಪಡಿಸಿ, ಎರವಲಿಗಾಗಿ ಪ್ರಾರ್ಥಿಸಿಯೊ ಇಲ್ಲವೆ ವಿನಿಮಯಕ್ಕಾಗಿ ಕೇಳಿಕೊಂಡೊ ಅಗತ್ಯವಿರುವ ಸಾಮಗ್ರಿಯನ್ನು ಪಡೆಯಬೇಕಾಗುತ್ತದೆ. ವಿದೇಶೀ ನಾಣ್ಯ ಪದ್ಧತಿಯ ಪರಿಚಯ, ಹಣದ ವಿನಿಮಯ ಕ್ರಮ ಮುಂತಾದ ವಿಚಾರಗಳನ್ನು ಕುರಿತು ಯುನೆಸ್ಕೊ ಒಂದು ವಿಶಿಷ್ಟ ಬಗೆಯ ಕೂಪನ್ನುಗಳನ್ನು ರಚಿಸಿದೆಯಾಗಿ ಅಂತಾರಾಷ್ಟ್ರೀಯ ಜ್ಞಾನ ಸಾಮಗ್ರಿಗಳ ವಿತರಣೆಯ ಕೆಲಸ ಸುಗಮವಾಗಿದೆ. ಇಂಥ ಕೂಪನ್ನುಗಳು ಪ್ರಲೇಖನ ಕಾರ್ಯಕ್ಕೆ ಬಲು ಸಹಾಯವೆಸಗುತ್ತವೆ. ಭಿನ್ನ ಭಿನ್ನ ವಿಷಯಗಳ ಅಧ್ಯಯನ, ಸಂಶೋಧನೆಗಳಲ್ಲಿ ಕಾರ್ಯೋನ್ಮುಖವಾಗಿರುವ ಸಂಘ–ಸಂಸ್ಥೆಗಳ ಪುಸ್ತಕ ಪಟ್ಟಿಗಳು. ಆ ಸ್ಥಳದ ವಿವಿಧ ಗ್ರಂಥ ವ್ಯಾಪಾರಿಗಳು ಹಂಚುವ ಅನೇಕ ಗ್ರಂಥಸೂಚಿಗಳು, ವಿಶ್ವವಿದ್ಯಾಲಯಗಳೇ ಮೊದಲಾದ ವಿದ್ಯಾಕೇಂದ್ರಗಳು ಪ್ರಕಟಿಸುವ ವಿವಿಧ ಸಾಧನಗಳ ಮಾಹಿತಿಗಳನ್ನೀಯುವ ಪ್ರಕಟನಾ ಕೈಪಿಡಿಗಳು ಪ್ರಲೇಖನ ಕಾರ್ಯಕ್ಕೆ ಉಪಯೋಗವಾಗುತ್ತವೆ.

ಪ್ರಪಂಚದಲ್ಲಿ ವಿವಿಧ ಶಾಸ್ತ್ರಗಳ ವಿಭಾಗಗಳಲ್ಲಿ ನಡೆಯುವ ಲಕ್ಷಗಟ್ಟಲೆಯ ಪ್ರಯೋಗಗಳ ಮತ್ತು ಪ್ರಾತ್ಯಕ್ಷಿಕೆಗಳ ವಿವರಗಳನ್ನು ಸಂಗ್ರಹಿಸಿಕೊಂಡು ಅವುಗಳನ್ನು ಬೇಡಿಕೆಯಿದ್ದಲ್ಲಿಗೆ ಒದಗಿಸಿಕೊಡುವಂಥ ಸಂಸ್ಥೆಗಳು ಭಾರತವೂ ಸೇರಿದಂತೆ ಪ್ರಪಂಚದ ಹಲವೆಡೆ ಕಾಣಬರುತ್ತವೆ. ರಾಯಲ್ ಏಷ್ಯಾಟಿಕ್ ಸೊಸೈಟಿ ಆಫ್ ಬೆಂಗಾಲ್, ಟ್ರಿಗೊನೊಮೆಟ್ರಿಕ್ ಸರ್ವೆ, ಬೊಟ್ಯಾನಿಕಲ್ ಸರ್ವೆ, ಜಿಯೊಲಾಜಿಕಲ್ ಸರ್ವೆ, ಇಂಪೀರಿಯಲ್ (ಈಗ ಇಂಡಿಯನ್) ಅಗ್ರಿಕಲ್ಚರಲ್ ರಿಸರ್ಚ್ ಇನ್‍ಸ್ಟಿಟ್ಯೂಟ್, ಇಂಡಿಯನ್ ಅಸೋಸಿಯೇಷನ್ ಫಾರ್ ದಿ ಕಲ್ಟಿವೇಷನ್ ಆಫ್ ಸೈನ್ಸ್, ಕೌನ್ಸಿಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್, ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್, ಡಿಫೆನ್ಸ್ ಸೈನ್ಸ್ ಆರ್ಗನೈಸೇಷನ್, ಅಟಾಮಿಕ್ ಎನರ್ಜಿ ಕಮಿಷನ್ ಈ ಮುಂತಾದವು ಭಾರತದಲ್ಲಿ ಹೆಸರಾಂತ ಸಂಸ್ಥೆಗಳು. ಇವಲ್ಲದೆ ಪ್ರತಿಯೊಂದು ರಾಜ್ಯದಲ್ಲಿ ತಮ್ಮ ತಮ್ಮ ಅನುಕೂಲತೆ ಆವಶ್ಯಕತೆಗಳಿಗೆ ತಕ್ಕಂತೆ ಇಂಥ ಸಂಸ್ಥೆಗಳೂ ಇವೆ. ಈ ಸಂಸ್ಥೆಗಳ ಕಾರ್ಯಕಲಾಪಗಳಿಗೆ ಸರ್ಕಾರದಿಂದಲೂ ಖಾಸಗೀ ಸಂಸ್ಥೆಗಳಿಂದಲೂ ಆಸಕ್ತ ವ್ಯಕ್ತಿಗಳಿಂದಲೂ ಅಪಾರ ಸಹಾಯ ಸಹಕಾರಗಳು ದೊರಕುತ್ತಿವೆ. ಇದರಿಂದಾಗಿ ಲಕ್ಷಗಟ್ಟಲೆ ವಿಜ್ಞಾನಿಗಳ ಸೇವೆ ಹಲವು ವಿಧಗಳಲ್ಲಿ ದೊರಕುತ್ತಿದೆಯಲ್ಲದೆ, ಪ್ರಲೇಖನ ಕಾರ್ಯ ಸುಗಮವಾಗಿ ಸಾಗಲು ದೊಡ್ಡ ಮೊತ್ತದಲ್ಲಿ ಹಣದ ವಿನಿಯೋಗವೂ ಆಗುತ್ತಿದೆ. ಈ ಬಗೆಯ ವಿಶಿಷ್ಟ ಸಂಸ್ಥೆ ಸಂಘಟನೆಗಳಲ್ಲದೆ, ವಿಶ್ವವಿದ್ಯಾಲಯಗಳು, ಪ್ರಯೋಗಶಾಲೆಗಳು, ವಿಜ್ಞಾನ ಮಂದಿರಗಳು ಕೂಡ ವಿಜ್ಞಾನ ಪ್ರಗತಿಯ ಅದ್ಭುತವಾದ ಪ್ರಯತ್ನಗಳಲ್ಲಿ ತೊಡಗಿವೆ.

ಕರ್ನಾಟಕ ರಾಜ್ಯದಲ್ಲಿರುವ ವಿವಿಧ ವಿಶ್ವವಿದ್ಯಾಲಯಗಳು, ಬೆಂಗಳೂರಿನ ಇಂಡಿಯನ್ ಇನ್‍ಸ್ಟಿಟ್ಯೂಟ್ ಆಫ್ ಸೈನ್ಸ್, ಹಿಂದೂಸ್ಥಾನ್ ಮಷೀನ್ ಟೂಲ್ಸ್‍ನಂಥ ಬೃಹದ್ ಉದ್ಯಮಗಳು – ಇವೇ ಮೊದಲಾದ ಸಂಸ್ಥೆಗಳು ಸಾಧಿಸಿರುವ ಪ್ರಗತಿಗಳನ್ನು ಕುರಿತಂಥ ವಿಷಯ ಪುಸ್ತಕಗಳೂ ಪತ್ರಿಕೆಗಳೂ ಇವೆ. ಮಾಹಿತಿಗಳನ್ನು ನೀಡುವಂಥ ಪುಸ್ತಕಗಳ ಸಂಗ್ರಹಣೆ ಕರ್ನಾಟಕದ ಪ್ರಮುಖ ಗ್ರಂಥಾಲಯಗಳಲ್ಲಿ ನಡೆದಿದೆ. ಈ ಸಂಸ್ಥೆಗಳಲ್ಲಿ ಅವರದೇ ಆದ ಪ್ರಲೇಖನ ಕಾರ್ಯ ನಡೆದಿರುತ್ತದೆ.


ಒಂದು ವಿಷಯಕ್ಕೆ ಸಂಬಂಧಿಸಿದಂತೆ ಮಾಹಿತಿಗಳನ್ನೋ ಅಂಕಿಅಂಶಗಳನ್ನೋ ಅರಸುತ್ತ ಗ್ರಂಥಾಲಯವನ್ನು ಪ್ರವೇಶಿಸುವಾತನಿಗೆ ಅವನ ಬೇಡಿಕೆಗಳೇನು ಎಂಬುದನ್ನು ಮನಗಂಡು ಅವನ ಅಗತ್ಯಗಳನ್ನು ಪೂರೈಸುವ ಸಲುವಾಗಿ ಗ್ರಂಥಾಲಯಗಳಲ್ಲಿ ವಿಶಿಷ್ಟ ಪ್ರಲೇಖನ ವಿಭಾಗಗಳಿರುತ್ತವೆ. ಇಂಥವಲ್ಲಿ ಮಾಹಿತಿ ನೀಡುವಂಥ ಪುಸ್ತಕಗಳ ಮತ್ತು ಇನ್ನಿತರ ಪ್ರಕಟಣೆಗಳ ಸಂಗ್ರಹಣೆ, ವರ್ಗೀಕರಣ, ಸೂಚೀಕರಣ ಒಂದು ಕ್ರಮಬದ್ಧ ರೀತಿಯಲ್ಲಿ ನಡೆದಿರುತ್ತದೆ. ಇದಕ್ಕಾಗಿಯೇ ಪ್ರಲೇಖನದಲ್ಲಿ ತರಬೇತಿ ಪಡೆದವರೂ ಅಗತ್ಯಕ್ಕೆ ತಕ್ಕಂತೆ ಮಾಹಿತಿಗಳನ್ನು ಒದಗಿಸುವವರೂ ಗ್ರಂಥಾಲಯದಲ್ಲಿ ನೇಮಕಗೊಂಡಿರುತ್ತಾರೆ. ಇದಕ್ಕಾಗಿ ಗ್ರಂಥಪಾಲನಿಗೆ ವಿಶೇಷವಾಗಿ ತರಬೇತನ್ನು ನೀಡಿರಲಾಗುತ್ತದೆಯಲ್ಲದೆ ಪ್ರಲೇಖನಾಧಿಕಾರಿಗಳೂ ಇದ್ದು ಸಾರ್ವಜನಿಕರ ಬೇಡಿಕೆಯ ಪೂರೈಕೆ ನಡೆಯುತ್ತದೆ.

ಗ್ರಂಥಾಲಯಗಳಲ್ಲಿ ನಡೆಯುವ ಪ್ರಲೇಖನ ಕಾರ್ಯದಲ್ಲಿ ಲಿಖಿತ ವಸ್ತುಗಳ ಸಾರವನ್ನು (ಆಬ್‍ಸ್ಟ್ರ್ಯಾಕ್ಟ್) ಸಿದ್ಧಗೊಳಿಸಿ ವಿಜ್ಞಾನಿಗಳಿಗೆ ಸಲ್ಲಿಸುವ ಕಾರ್ಯವೂ ಪ್ರಮುಖವಾದದ್ದೇ. ಇದರಲ್ಲಿ ವಿಜ್ಞಾನದ ವಿಷಯ ಲೇಖನದ ಭಾಷೆ ಮತ್ತು ಕಾಲಾವಕಾಶ – ಈ ಮೂರು ಅಂಶಗಳನ್ನೂ ಗಮನದಲ್ಲಿಟ್ಟುಕೊಂಡು ಮೂಲ ಲೇಖಕನ ವಿಚಾರಗಳನ್ನು ವಿದ್ರೂಪಗೊಳಿಸದೆ

ಅವನ್ನು ಸಂಗ್ರಹರೂಪವಾಗಿ ಅವನ ಮಾತಿನಲ್ಲಾಗಲಿ ಅದಕ್ಕಿಂತ ಹೆಚ್ಚು ಸುಲಭ ಮತ್ತು ಸಮರ್ಪಕವಾದ ಭಾಷೆಯಲ್ಲಿಯಾಗಲಿ ಅನ್ಯದೇಶಗಳ ವಿಜ್ಞಾನಿಗಳಿಗೆ ದೊರಕಿಸಿಕೊಡುವ ಪ್ರಕಟಣೆಗಳನ್ನು ಒದಗಿಸಿಕೊಡುವುದು ಪ್ರಲೇಖನ ಸೇವೆಯಲ್ಲಿ ಮುಖ್ಯ ಕೆಲಸ. ಪ್ರಮುಖ ಅಂತಾರಾಷ್ಟ್ರೀಯ ಪ್ರಕಟಣೆಗಳಲ್ಲಿ ಕೆಮಿಕಲ್ ಆಬ್‌ಸ್ಟ್ರಾಕ್ಟ್ಸ್ ಮೊದಲಾದ ನಿಯತಕಾಲಿಕೆಗಳೂ ಭಾರತದಲ್ಲಿ ಪ್ರಚಲಿತವಾಗಿರುವ ಇಂಡಿಯನ್ ಸೈನ್ಸ್ ಅಬ್‌ಸ್ಟ್ರಾಕ್ಟ್ಸ್ ಮೊದಲಾದವುಗಳೂ ಗಮನಾರ್ಹ. ಲೇಖನ ಸಾರವನ್ನೂ ಲೇಖಕರೇ ಸೂಚಿಸಿದ ಪಕ್ಷಕ್ಕೆ ಲೇಖನ ಸಾರ ಪ್ರಕಟಣೆಯ ಕೆಲಸ ಸುಗಮವಾಗುತ್ತದೆಯೆಂದು ಯುನೆಸ್ಕೊ ಕರೆಕೊಟ್ಟಿದೆ.

ಪ್ರಪಂಚದ ಉತ್ತಮ ಗ್ರಂಥಗಳನ್ನು ಮೇರುಕೃತಿಗಳನ್ನು ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಅನುವಾದ ಮಾಡಿಸುವಲ್ಲಿ ಯುನೆಸ್ಕೊದಂಥ ಸಂಸ್ಥೆಗಳು ಕಾರ್ಯೋನ್ಮುಖವಾಗಿವೆ. ಒಂದು ನಿರ್ದಿಷ್ಟ ವಿಷಯವನ್ನು ಕುರಿತಂತೆ ಯಾವ ಯಾವ ಭಾಷೆಗಳಲ್ಲಿ ಪುಸ್ತಕಗಳು ದೊರೆಯುತ್ತವೆಂಬುದನ್ನು ಪ್ರಲೇಖನ ವಿಭಾಗ ತಿಳಿಸುವುದಿದೆ. ಇದರ ಸಲುವಾಗಿಯೇ ಅನುವಾದ ಗ್ರಂಥಗಳ ವಿವರಗಳನ್ನು ತಿಳಿಸುವ ಸೂಚೀಕರಣ ವ್ಯವಸ್ಥೆಯೂ ಸೇರಿರುತ್ತದೆ.

ಲಿಖಿತ ಸಾಮಗ್ರಿಯ ಪ್ರತಿರೂಪವನ್ನು ದೊರಕಿಸಿಕೊಡುವುದು ಪ್ರಲೇಖನ ಸೇವೆಯ ಇನ್ನೊಂದು ಮುಖ. ಒಂದು ಗ್ರಂಥವನ್ನಾಗಲಿ, ಲೇಖನವನ್ನಾಗಲಿ, ಭೂಪಟವನ್ನಾಗಲಿ, ಆಲೇಖ್ಯವನ್ನಾಗಲಿ, ನಕ್ಷೆಯನ್ನಾಗಲಿ, ಸಾಮಾನ್ಯ ರೀತಿಯಲ್ಲೊ ಇಲ್ಲವೆ ಯಂತ್ರದ ಮೂಲಕವೊ ಅದರ ಪ್ರತಿಯನ್ನು ಮಾಡಿಸಿಕೊಡುವುದು ಪ್ರಲೇಖನದ ವಿಶಿಷ್ಟ ಕಾರ್ಯ. ಮೈಕ್ರೋಕಾರ್ಡುಗಳನ್ನಾಗಲೀ ಮೈಕ್ರೊಫಿಲ್ಮುಗಳನ್ನಾಗಲೀ ಒದಗಿಸಿಕೊಡುವುದು ಇಲ್ಲವೇ ಜೆರಾಕ್ಸ್ ಪದ್ಧತಿಯ ಮೂಲಕವಾಗಲಿ, ಹೇಲಿಯೋಗ್ರಾಫ್ ಮೂಲಕವಾಗಲಿ, ಕ್ಯಾಮರದ ಸಹಾಯದಿಂದಾಗಲಿ, ನಕಲೆತ್ತು ಯಂತ್ರದಿಂದಾಗಲಿ ಪ್ರತಿಗಳನ್ನು ತೆಗೆದುಕೊಡುವ ಸೌಲಭ್ಯ ಉಂಟು. ಈ ಬಗೆಯ ಕಾರ್ಯಲಿಖಿತ ವಸ್ತುವಿನ ಪ್ರತಿರೂಪವನ್ನು ಅಥವಾ ಪುನರ್ಮುದ್ರಣವನ್ನು ಅದೇ ಆಕಾರದಲ್ಲೊ ಅಥವಾ ಅದಕ್ಕಿಂತ ವಿಸ್ತೃತ ಇಲ್ಲವೆ ಸಂಕುಚಿತ ರೂಪದಲ್ಲೊ ಉಷ್ಣಲೇಖಿಯ ವಿಧಾನಗಳಿಂದಾಗಲೀ ವಿದ್ಯುಚ್ಛಾಯಾಚಿತ್ರಗ್ರಹಣ ವಿಧಾನಗಳಿಂದಾಗಲೀ ಸಿದ್ಧಗೊಳಿಸಬಹುದು. ಈ ಬಗೆಯ ಯಂತ್ರಸಾಮಗ್ರಿ ಮತ್ತು ಅದಕ್ಕೆ ಅನುಗುಣವಾದ ಉಪಕರಣಗಳು ಈಗ ಪ್ರಪಂಚದ ರಾಷ್ಟ್ರಗಳಲ್ಲಿ ಹೇರಳವಾಗಿ ಲಭ್ಯವಿವೆ.



ತುದಿ ಕಚ್ಚಿನ ಯಂತ್ರೀಕರಣ ವಿಧಾನ

ಯಂತ್ರಗಳ ಮೂಲಕ ಸಾಮಗ್ರಿಯನ್ನು ಮೂಲರೂಪದಲ್ಲಿಯಾಗಲಿ ಪುನರ್ಮುದ್ರಿತ ಪ್ರತಿಯಲ್ಲಾಗಲಿ ಒದಗಿಸಿಕೊಡುವಂತೆ, ಒಂದು ಪ್ರಲೇಖನ ಕೇಂದ್ರದಲ್ಲಿ ಸಂಗ್ರಹವಾಗಿರುವ ಸಾಮಗ್ರಿಯನ್ನು ವ್ಯವಸ್ಥಿತ ರೀತಿಯಲ್ಲಿ ವಿಂಗಡಿಸುವ ಕಾರ್ಯದಲ್ಲಿಯೂ ಈಗ ಅನೇಕ ಬಗೆಯ ಯಂತ್ರಗಳು ಪ್ರಚಾರದಲ್ಲಿವೆ. ವಿಷಯಸೂಚಿಗಳು, ಗ್ರಂಥಗಳ ಪಟ್ಟಿಗಳು, ಇಂಥ ಪಟ್ಟಿ ಮಾಡಿದ ಕಾರ್ಡುಗಳು –ಇವನ್ನು ವಿಶಿಷ್ಟ ರೀತಿಯಲ್ಲಿ ರಚಿಸುವುದು ಕೂಡ ಒಂದು ಸಾಹಸದ ಕೆಲಸವೇ. ಈ ಕಾರ್ಯದಲ್ಲಿ ರಂಧ್ರಿತ ಮೂಲೆಗಳನ್ನು ಅಲ್ಲಿ ಬರೆದ ಅಕ್ಷರಗಳಿಂದ ಎತ್ತಿ ತೋರಿಸುವ ಕಾರ್ಡುಗಳು, ಸ್ಲಾಟೆಡ್ ಕಾರ್ಡುಗಳು ಮುಂತಾದ ಸಾಮಾನ್ಯ ಬಗೆಯ ಕಾರ್ಡುಗಳಲ್ಲದೆ ಫೋಟೋ ಎಲೆಕ್ಟ್ರಿಕ್ ಯಂತ್ರಗಳ ಹಾಗೂ ಎಲೆಕ್ಟ್ರಾನಿಕ್ ಗಣಕ ಯಂತ್ರಗಳ ಮೂಲಕ ಅವನ್ನು ವಿಂಗಡಿಸುವ ಕ್ರಮ ಅನೇಕ ಪ್ರಲೇಖನ ಸಂಸ್ಥೆಗಳಲ್ಲಿ ಕಂಡುಬಂದಿದೆ. ಗಣಕ ಯಂತ್ರಗಳನ್ನು ಉಪಯೋಗಿಸಿ ಕ್ರಮ ವಿಧಾಯವನ್ನು (ಪ್ರೊಗ್ರಾಮಿಂಗ್) ಬಹುಮಟ್ಟಿಗೆ ಸುಧಾರಿಸಲಾಗಿದೆ. ಪ್ರಲೇಖನ ಕಾರ್ಯವನ್ನು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವ್ಯಾಪ್ತಿಯಲ್ಲಿ ಕೈಗೊಂಡಿರುವ ಸಂಸ್ಥೆಗಳಲ್ಲಿ ಇಂಟರ್‌ನ್ಯಾಷನಲ್ ಫೆಡರೇಷನ್ ಫಾರ್ ಡಾಕ್ಯುಮೆಂಟೇಷನ್, ಭಾರತ ರಾಷ್ಟ್ರೀಯ ವಿಜ್ಞಾನ ಪ್ರಲೇಖನ ಕೇಂದ್ರ (ಇನ್ಸ್‌ಡಾಕ್) – ಎಂಬುವು ಪ್ರಮುಖವಾದವು. ಇಂಟರ್‌ನ್ಯಾಷನಲ್ ಫೆಡರೇಷನ್ ಫಾರ್ ಡಾಕ್ಯುಮೆಂಟೇಷನ್ ಎಂಬ ಸಂಸ್ಥೆ 1885 ರಲ್ಲಿ ಬ್ರಸಲ್ಸ್‌ನಲ್ಲಿ ಸ್ಥಾಪನೆಯಾಯಿತು. ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಬಿಬ್ಲಿಯಾಗ್ರಫಿ ಎಂಬುದು ಇದರ ಹಿಂದಿನ ಹೆಸರು. ವಿಶ್ವಸಂಸ್ಥೆ, ಯುನೆಸ್ಕೊ, ಫುಡ್ ಅಂಡ್ ಅಗ್ರಿಕಲ್ಚರಲ್ ಆರ್ಗನೈಸೇಷನ್ ಮೊದಲಾದ ಸಂಸ್ಥೆಗಳ ಪ್ರಲೇಖನ ಕಾರ್ಯದ ಹೊಣೆಯನ್ನು ಈ ಸಂಸ್ಥೆ ಹೊತ್ತಿದೆ. ಇದರ ಜೊತೆಗೆ ವಿಜ್ಞಾನ ವಿಷಯಕ ಸಾಮಗ್ರಿಯನ್ನು ಸಂಗ್ರಹಿಸುವುದು, ವರ್ಗೀಕರಿಸುವುದು, ವಿಂಗಡಿಸುವುದು, ಸೂಚೀಕರಿಸುವುದು, ರೂಪಾಂತರಗೊಳಿಸುವುದು, ವಿತರಿಸುವುದು ಇವೇ ಮೊದಲಾದ ಅಂಶಗಳಲ್ಲಿ ಸರ್ವ ಸಾಮಾನ್ಯವಾದ ಪ್ರಮಾಣಗಳನ್ನು ಸಿದ್ಧಗೊಳಿಸಿದೆ.

ಮೊದಮೊದಲು ಈ ಸಂಸ್ಥೆಯ ಪ್ರವರ್ತಕರು ಡ್ಯೂಯಿಯ ದಾಶಮಿಕ ವರ್ಗೀಕರಣ ಪದ್ಧತಿಯನ್ನೇ ಅನುಸರಿಸಿ ಕೇವಲ ಸಮಾಜಶಾಸ್ತ್ರಗಳ ಲೇಖನ ಗ್ರಂಥಪತ್ರಕ ಮೊದಲಾದ ಪಠ್ಯ ಸಾಮಗ್ರಿಯನ್ನು ವಿತರಿಸುವುದಕ್ಕೆ ಮಾತ್ರ ತಮ್ಮ ಸೇವೆಯನ್ನು ಸೀಮಿತಗೊಳಿಸಿದ್ದರು. ಕ್ರಮೇಣ ಈ ಸಂಸ್ಥೆಯ ಕಾರ್ಯ ಬೆಳೆಯುತ್ತ ಪ್ರಪಂಚದ ವಿವಿಧ ಜ್ಞಾನದ ಸಂಗ್ರಹ ಮತ್ತು ವಿತರಣೆ ತನ್ನ ಹೊಣೆಯೆಂದು ತಿಳಿದುಕೊಂಡು ಮುಂದುವರಿಯಿತಾದ ಕಾರಣ ಮೊದಲು ಅನುಸರಿಸುತ್ತಿದ್ದ ವರ್ಗೀಕರಣ ಪದ್ಧತಿಯಲ್ಲಿನ ಅರೆಕೊರೆಗಳು ಗೊತ್ತಾದವಾಗಿ ಅದನ್ನು ಕೈಬಿಟ್ಟು ಅದನ್ನಾಧರಿಸಿರುವ ಯು. ಡಿ. ಸಿ. ಪದ್ಧತಿಯನ್ನು ಅನ್ವಯಿಸಿಕೊಂಡಿತು. ಆದರೆ ಒಂದನೆಯ ಮಹಾಯುದ್ಧ ತಲೆದೋರಿ ಸಂಸ್ಥೆಯ ಕಾರ್ಯಚಟುವಟಿಕೆಗಳು ತೃಪ್ತಿಕರವಾಗಿ ನಡೆಯದೆ ಅದರ ಕಾರ್ಯದಲ್ಲಿ ಸ್ಥಗಿತತೆ ಏರ್ಪಟ್ಟಿತ್ತು. ಪ್ರಲೇಖನ ಸೇವೆಯಲ್ಲಿ ಆಸಕ್ತಿ ವಹಿಸಿದ ಹಲವರ ಪ್ರಯತ್ನದಿಂದ ಸಂಸ್ಥೆ ಮತ್ತೆ 1924ರಲ್ಲಿ ಚೇತರಿಸಿಕೊಂಡಿತು. ಕೆಲವೇ ರಾಷ್ಟ್ರಗಳ ಸದಸ್ಯರನ್ನೊಳಗೊಂಡ ಇದು ಅಂತಾರಾಷ್ಟ್ರೀಯ ಖ್ಯಾತಿ ಗಳಿಸಿತು. ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಡಾಕ್ಯುಮೆಂಟೇಷನ್ ಎಂದು ಸಂಸ್ಥೆಗೆ ನಾಮಕರಣವಾದದ್ದು 1931ರಲ್ಲಿ. ಮತ್ತೆ 1938ರಲ್ಲಿ ಸಂಸ್ಥೆಯ ಹೆಸರನ್ನು ಇಂಟರ್‌ನ್ಯಾಷನಲ್ ಫೆಡರೇಶನ್ ಫಾರ್ ಡಾಕ್ಯುಮೆಂಟೇಷನ್ ಎಂದು ಬದಲಿಸಿದಾಗಿನಿಂದ ಇದೇ ಹೆಸರೇ ಉಳಿದುಕೊಂಡು ಬಂದಿದೆ. ಸಂಸ್ಥೆಯ ಮುಖ್ಯ ಕಾರ್ಯಾಲಯವನ್ನು ಬ್ರಸಲ್ಸ್‌ನಿಂದ ದಿ ಹೇಗ್ ನಗರಕ್ಕೆ ವರ್ಗಾಯಿಸಲಾಗಿದೆ.

ಪ್ರಪಂಚದ ಎರಡನೆಯ ಮಹಾಯುದ್ಧ ಕಾಲದಲ್ಲಿ ವಿವಿಧ ರಾಷ್ಟ್ರಗಳಿಂದ ಸಮಾಚಾರ ಧನಸಹಾಯಗಳು ಈ ಸಂಸ್ಥೆಗೆ ದೊರೆಯದೆ ಹೋಗಿ ಅದರ ಕಾರ್ಯ ಮತ್ತೆ ಕೆಲದಿವಸಗಳ ಕಾಲ ಸ್ತಬ್ಧವಾಗಬೇಕಾಯಿತು. ಈಗ ಅದು ಬಹುಮಟ್ಟಿಗೆ ಸುಧಾರಿಸಿದ್ದು ಸಾರ ಸಂಗ್ರಹ ಮತ್ತು ವಿತರಣ ಪ್ರತಿರೂಪಗಳ ಪೂರೈಕೆ ಪ್ರಶಿಕ್ಷಣದ ವ್ಯವಸ್ಥೆಯನ್ನು ಒಳಗೊಂಡಿದೆ. ಪ್ರಾದೇಶಿಕ ಶಾಖೆಗಳು, ವಿಷಯಬದ್ಧ ಸೇವಾ ಕಾರ್ಯದ ವಿಕೇಂದ್ರೀಕರಣ ಮೊದಲಾದ ರೀತಿಗಳನ್ನು ಅದು ಈಗ ಪಾಲಿಸುತ್ತಿದೆ. 1952 ರಲ್ಲಿ ಭಾರತ ಈ ಸಂಸ್ಥೆಯ ಸದಸ್ಯ ರಾಷ್ಟ್ರವಾಯಿತು.

ಪ್ರಪಂಚದ ಬೇರೆ ಬೇರೆ ರಾಷ್ಟ್ರಗಳಲ್ಲಿಯೂ ಇಂಥ ಸೇವೆಯನ್ನು ಸಲ್ಲಿಸುವ ರಾಷ್ಟ್ರೀಯ ಸಂಸ್ಥೆಗಳಿವೆ. ಅವುಗಳಲ್ಲಿ 1952ರಲ್ಲಿ ಭಾರತ ಸ್ಥಾಪಿಸಿದ ಇಂಡಿಯನ್ ನ್ಯಾಷನಲ್ ಸೈಂಟಿಫಿಕ್ ಡಾಕ್ಯುಮೆಂಟೇಷನ್ ಸೆಂಟರ್ (ಈಗ ನಿಸ್ಕೇರ್ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಫಾರ್ ಸೈನ್ಸ್ ಕಮ್ಯುನಿಕೇಷನ್ ಅಂಡ್ ಇನ್‌ಫರ್ಮೇಷನ್ ರಿಸರ್ಚ್ ಎಂಬುದಾಗಿ ಕರೆಯಲ್ಪಟ್ಟಿದೆ) ಮತ್ತು ಅದೇ ವರ್ಷ ರಷ್ಯದಲ್ಲಿ ಸ್ಥಾಪಿತಗೊಂಡ ಆಲ್ ಯೂನಿಯನ್ ಇನ್‌ಸ್ಟಿಟ್ಯೂಟ್ ಫಾರ್ ಸೈಂಟಿಫಿಕ್ ಅಂಡ್ ಟೆಕ್ನಿಕಲ್ ಇನ್‌ಫರ್ಮೇಶನ್ –ಇವನ್ನು ಹೆಸರಿಸಬಹುದು. ವಿನಿತಿ ಎಂಬ ಸಂಕ್ಷಿಪ್ತ ರೂಪದ ಹೆಸರನ್ನು ಪಡೆದ ರಷ್ಯದ ಸಂಸ್ಥೆ ವಿಜ್ಞಾನ, ತಂತ್ರಜ್ಞಾನ ಮತ್ತು ಸಮಾಜಶಾಸ್ತ್ರಗಳನ್ನೊಳಗೊಂಡು ಸಮಾಚಾರ ಸಂಗ್ರಹ, ವರ್ಗೀಕರಣ, ಸೂಚೀಕರಣ, ಮತ್ತು ವಿತರಣೆಯ ಮೊದಲಾದ ಎಲ್ಲ ವಿಭಾಗಗಳಲ್ಲಿ ಅನುಕರಣೀಯವಾದ ಪ್ರಗತಿಯನ್ನು ಸಾಧಿಸುತ್ತ ಬಂದಿದೆ. ಅದರ ಭಾಷಾಂತರ ಸೇವೆ, ಪ್ರತೀಕರಣ ಸೇವೆ, ಸಂಪಾದನ ಕಾರ್ಯ, ಸಾರ ಸಂಗ್ರಹ ಕಾರ್ಯ – ಇವೆಲ್ಲ ವೈಶಿಷ್ಟ್ಯಪೂರ್ಣವಾಗಿದ್ದು ಹೊಸತಾಗಿ ಪ್ರಲೇಖನ ಕಾರ್ಯವನ್ನು ಕೈಕೊಳ್ಳುವ ರಾಷ್ಟ್ರಗಳಿಗೆ ಮಾರ್ಗದರ್ಶನ ನೀಡುವುದಾಗಿದೆ.

ಭಾರತ ರಾಷ್ಟ್ರೀಯ ವಿಜ್ಞಾನ ಪ್ರಲೇಖನ ಕೇಂದ್ರ ಸಂಸ್ಥೆ ಯುನೆಸ್ಕೊದ ಪ್ರೇರಣೆಯಿಂದ ಸ್ಥಾಪಿಸಲ್ಪಟ್ಟು ಇದೀಗ ಭಾರತದ ಪ್ರಮುಖ ಪ್ರಲೇಖನ ಕೇಂದ್ರವೆನಿಸಿದೆ. ಸಮಾಜ ವಿಜ್ಞಾನಗಳಿಗೆ

ಸಂಬಂಧಿಸಿದಂತೆ ಸೋಷಿಯಲ್ ಸೈನ್ಸ್ ಡಾಕ್ಯುಮೆಂಟೇಷನ್ ಸೆಂಟರ್ ಎಂಬ ಕೇಂದ್ರ ಆ ವಿಜ್ಞಾನದ ವಿವಿಧ ಶಾಖೆಗಳಲ್ಲಿ ಕಾರ್ಯಪ್ರವೃತ್ತರಾಗಿರುವವರ ಕಾರ್ಯಚಟುವಟಿಕೆಗಳನ್ನು ಕ್ರೋಡೀಕರಿಸಿ ಒಂದು ಸಂಯುಕ್ತ ಪಟ್ಟಿಯನ್ನು ತಯಾರಿಸಿದೆ.



ಕಾಂತ ಟೇಪು

ಪ್ರಲೇಖನ ಮತ್ತು ಗ್ರಂಥಾಲಯ ವಿಜ್ಞಾನಗಳಲ್ಲಿ ಸಂಶೋಧನೆ ನಡೆಸುವುದು, ಉನ್ನತಮಟ್ಟದ ಪ್ರಲೇಖನಕಾರರ ತರಬೇತಿ, ಪ್ರಲೇಖನ ಕ್ಷೇತ್ರದಲ್ಲಿ ಸಲಹೆ ನೀಡುವುದು ಮುಂತಾದ ಉದ್ದೇಶಗಳನ್ನು ಇಟ್ಟುಕೊಂಡು 1962ರಲ್ಲಿ ಸ್ಥಾಪಿತವಾದ ಪ್ರಲೇಖನ ಸಂಶೋಧನೆ ಮತ್ತು ತರಬೇತಿ ಕೇಂದ್ರ ಪ್ರಲೇಖನ ಸೇವೆಯನ್ನು ಯಶಸ್ವಿಯಾಗಿ ನೆರವೇರಿಸುತ್ತಿದೆ. (ಎಚ್.ಎಸ್.ಪಿ.)

ಪ್ರಲೇಖನ ವಿಷಯದಲ್ಲಿ ಹೆಚ್ಚಿನ ಕೆಲಸ ಮಾಡುತ್ತಿರುವ ಮೂರು ಕೇಂದ್ರಗಳ ಬಗ್ಗೆ ವಿವರಗಳನ್ನು ಇಲ್ಲಿ ಕೊಡಲಾಗಿದೆ.

(a) ಪ್ರಲೇಖನ ಸಂಶೋಧನೆ ಮತ್ತು ತರಬೇತಿ ಕೇಂದ್ರ : ಪ್ರಲೇಖನ ಮತ್ತು ಗ್ರಂಥಾಲಯ ವಿಜ್ಞಾನಗಳಲ್ಲಿ ಸಂಶೋಧನೆ ನಡೆಸುವುದು, ಉನ್ನತಮಟ್ಟದ ಪ್ರಲೇಖನಕಾರರಿಗೆ ತರಬೇತಿ ಕೊಡುವುದು, ಪ್ರಲೇಖನ ಕ್ಷೇತ್ರದಲ್ಲಿ ಸಲಹೆ ನೀಡುವುದು – ಈ ಮುಖ್ಯ ಉದ್ದೇಶಗಳನ್ನು ಕಾರ್ಯಗತಗೊಳಿಸುವ ಸಲುವಾಗಿ ಸ್ಥಾಪಿತವಾದ ಸಂಸ್ಥೆ. ಯೋಜನಾ ಆಯೋಗದ ಸದಸ್ಯರೂ ಇಂಡಿಯನ್ ಸ್ಟ್ಯಾಟಿಸ್ಟಿಕಲ್ ಇನ್‌ಸ್ಟಿಟ್ಯೂಟಿನ ನಿರ್ದೇಶಕರೂ ಆಗಿದ್ದ ಪಿ. ಸಿ. ಮಹಲನೋಬಿಸ್‌ರವರ ಆದೇಶದ ಮೇರೆಗೆ 1962ರಲ್ಲಿ ಎಸ್.ಆರ್. ರಂಗನಾಥನ್ ಅವರ ನೇತೃತ್ವದಲ್ಲಿ ಈ ಕೇಂದ್ರ ಬೆಂಗಳೂರಿನಲ್ಲಿ ಸ್ಥಾಪನೆಯಾಯಿತು. ಇಂಡಿಯನ್ ಸ್ಟ್ಯಾಟಿಸ್ಟಿಕಲ್ ಇನ್‌ಸ್ಟಿಟ್ಯೂಟಿನ ಅಂಗ ಸಂಸ್ಥೆಯಾಗಿ ಇದು ಕೆಲಸ ಮಾಡುತ್ತಿದೆ.

ಪ್ರಲೇಖನಕ್ಕೆ ಸಂಬಂಧಿಸಿದಂತೆ ಇಲ್ಲಿ ನೀಡಲಾಗುವ ತರಬೇತಿಯ ಅವಧಿ 20 ತಿಂಗಳಿನದು. ಗ್ರಂಥಾಲಯ ವಿಜ್ಞಾನ ಪದವೀಧರರು ಈ ತರಬೇತಿಯನ್ನು ಪಡೆಯಲು ಅರ್ಹರು. ಯಶಸ್ವಿಯಾಗಿ ತರಬೇತಿಯನ್ನು ಪೂರ್ಣಗೊಳಿಸಿದವರಿಗೆ ಅಸೋಸಿಯೇಟ್ ಷಿಪ್ ಇನ್ ಡಾಕ್ಯುಮೆಂಟೇಷನ್ ಎಂಬ ಅರ್ಹತೆ ದೊರೆಯುತ್ತದೆ.

ಗ್ರಂಥಾಲಯ ವಿಜ್ಞಾನ ಹಾಗೂ ಪ್ರಲೇಖನ ಕ್ಷೇತ್ರದಲ್ಲಿ ಈ ಕೇಂದ್ರ ವಿಶೇಷವಾಗಿ ಸಂಶೋಧನೆ ನಡೆಸಿದೆ. ವರ್ಗೀಕರಣ, ಸೂಚೀಕರಣ, ಪ್ರಲೇಖನ ಹಾಗೂ ಗ್ರಂಥಾಲಯ ಆಡಳಿತದಲ್ಲಿ ಗಣಕದ ಬಳಕೆ ಮುಂತಾದ ವಿಷಯಗಳಲ್ಲಿ ಅಧ್ಯಯನಗಳನ್ನು ಮಾಡಿದೆ. ವರ್ಗೀಕರಣಕ್ಕೆ ಸಂಬಂಧಿಸಿದಂತೆ ಕೋಲನ್ ಕ್ಲಾಸಿಫಿಕೇಶನ್ ಎಂಬ ಪ್ರಕಟಣೆಯನ್ನು ಹೊರತಂದಿದೆ. 1965 ರಿಂದ ಸುಮಾರು 99 ವಿವಿಧ ಹಾಗೂ ವಿಶಿಷ್ಟ ವಿಷಯಗಳ ದೀರ್ಘಪಟ್ಟಿಯನ್ನು (ಡೆಪ್ತ್ ಷೆಡ್ಯೂಲ್ಸ್) ಈ ಕೇಂದ್ರ ಈಗಾಗಲೇ ಹೊರತಂದಿದೆ. ಕೇಂದ್ರದ ವತಿಯಿಂದ ಸೂಚೀಕರಣ ಮತ್ತು ಪ್ರಲೇಖನ ವಿಷಯಗಳಿಗೆ ಸಂಬಂಧಿಸಿದಂತೆ ಗ್ರಂಥಗಳೂ ವರದಿಗಳೂ 500 ಕ್ಕೂ ಹೆಚ್ಚು ಸಂಶೋಧನಾತ್ಮಕ ಪ್ರಬಂಧಗಳೂ ಪ್ರಕಟವಾಗಿವೆ.

1963 ರಿಂದ ಈ ಕೇಂದ್ರ ನಡೆಸುತ್ತಿರುವ ರಾಷ್ಟ್ರೀಯ ಸಮ್ಮೇಳನಗಳಲ್ಲಿ ನುರಿತ ಪ್ರಲೇಖನಕಾರರು ಸೇರಿ ವಿಚಾರ ವಿನಿಮಯ ಮಾಡಿಕೊಳ್ಳುತ್ತಾರಲ್ಲದೆ ಹೊಸ ಹೊಸ ಸಂಶೋಧನೆಗಳಿಗೆ ಅನುವು ಮಾಡಿಕೊಳ್ಳುತ್ತಾರೆ.

ಗ್ರಂಥಾಲಯ ವಿಜ್ಞಾನಕ್ಕೆ ಮೀಸಲಾದ ಶಾರದಾ–ರಂಗನಾಥನ್ ದತ್ತಿಯ ಆರ್ಥಿಕ ಸಹಾಯದಿಂದ ಲೈಬ್ರರಿ ಸೈನ್ಸ್ ವಿತ್ ಎ ಸ್ಲ್ಯಾಂಟ್ ಟು ಡಾಕ್ಯುಮೆಂಟೇಷನ್ ಎಂಬ ತ್ರೈಮಾಸಿಕವೊಂದನ್ನು ಈ ಕೇಂದ್ರ ಪ್ರಕಟಿಸುತ್ತಿತ್ತು. ಕೇಂದ್ರದ ಆಶ್ರಯದಲ್ಲಿ ಆಗಾಗ ದತ್ತಿ ಉಪನ್ಯಾಸಗಳನ್ನು ನಡೆಸಲಾಗಿದೆ. (ಎಂ.ಎ.ಜಿ.)

(b) ಭಾರತದ ರಾಷ್ಟ್ರೀಯ ವಿಜ್ಞಾನ ಪ್ರಲೇಖನ ಕೇಂದ್ರ : ಈ ಕೇಂದ್ರ (ನಿಸ್ಕೇರ್) ಭಾರತದ ವೈಜ್ಞಾನಿಕಾ ಮತ್ತು ಕೈಗಾರಿಕಾ ಸಂಶೋಧನ ಮಂಡಳಿಯ ಅಂಗವಾಗಿ 1952ರಲ್ಲಿ ಯುನೆಸ್ಕೊ ನೆರವಿನಿಂದ ದೆಹಲಿಯಲ್ಲಿ ಸ್ಥಾಪಿತವಾಯಿತು. ಯುನೆಸ್ಕೊ ಈ ಸಂಸ್ಥೆಗೆ ಗ್ರಂಥ, ನಿಯತಕಾಲಿಕೆ, ಯಂತ್ರಸಾಮಗ್ರಿಗಳನ್ನು ಒದಗಿಸಿರುವುದಲ್ಲದೆ ತಾಂತ್ರಿಕ ತಜ್ಞರನ್ನೂ ನೀಡಿದೆ. ಪ್ರಾರಂಭದಲ್ಲಿ ರಾಷ್ಟ್ರೀಯ ಭೌತಶಾಸ್ತ್ರ ಪ್ರಯೋಗಾಲಯದ ನಿರ್ದೇಶಕ ಕೆ. ಎಸ್. ಕೃಷ್ಣನ್ ಅವರು ಇದರ ಆಡಳಿತ ನಿರ್ದೇಶಕರಾಗಿದ್ದರು. 1963 ರಲ್ಲಿ ಇದು ಸ್ವತಂತ್ರ ಸಂಸ್ಥೆಯಾಗಿ ತನ್ನದೇ ಆದ ಕಾರ್ಯನಿರ್ವಾಹಕ ಸಮಿತಿಯನ್ನು ಪಡೆಯಿತು.

ಉದ್ದೇಶಗಳು : 1. ಭಾರತಕ್ಕೆ ಬೇಕಾದ ವೈಜ್ಞಾನಿಕ ನಿಯತಕಾಲಿಕೆಗಳನ್ನು ಪಡೆದು ಅವನ್ನು ರಕ್ಷಿಸುವುದು. 2. ವಿಜ್ಞಾನಿಗಳಿಗೂ ತಾಂತ್ರಿಕರಿಗೂ ಬೇಕಾದ ಲೇಖನಗಳ ಸಾರಾಂಶವನ್ನು ನಿಯತಕಾಲಿಕೆಯ ಮೂಲಕ ಒದಗಿಸುವುದು. 3. ಪ್ರಶ್ನೆಗಳಿಗೆ ಪ್ರಲೇಖನಗಳ ಆಧಾರದ ಮೇಲೆ ವಿಷಯ ಮಾಹಿತಿಯನ್ನು ಒದಗಿಸುವುದು. 4. ವೈಜ್ಞಾನಿಕ ಲೇಖನಗಳ ಫೋಟೋ ಪ್ರತಿಗಳನ್ನು ಒದಗಿಸುವುದು. 5. ಲೇಖನಗಳನ್ನು ಭಾಷಾಂತರಿಸಿ ಒದಗಿಸುವುದು. 6. ಭಾರತದಲ್ಲಿ ಪ್ರಕಟವಾದ ಮತ್ತು ಪ್ರಕಟವಾಗದ ವೈಜ್ಞಾನಿಕ ವರದಿಗಳನ್ನು ಸಂಗ್ರಹಿಸಿಡುವುದು. 7. ಪ್ರಪಂಚದ ಇತರ ದೇಶಗಳಿಗೆ ಭಾರತದಲ್ಲಿ ನಡೆದ ವೈಜ್ಞಾನಿಕ ವಿಷಯಗಳನ್ನು ಒದಗಿಸುವುದು.

ತಾಂತ್ರಿಕ ಉಪಸಮಿತಿ, ವರ್ಗೀಕರಣ ಉಪಸಮಿತಿ, ಸಂಪಾದಕ ಉಪಸಮಿತಿ, ಆಯವ್ಯಯ ಉಪಸಮಿತಿ ಇವುಗಳ ಸಲಹೆಗಳನ್ನು ಪಡೆದು ಕೇಂದ್ರ ಸಲಹಾ ಸಮಿತಿ ಪ್ರಲೇಖನ ಕೇಂದ್ರದ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತದೆ.

ಸರ್ಕಾರಿ ವಿಭಾಗಗಳು, ಸಂಶೋಧಕ ಸಂಸ್ಥೆಗಳು, ವಿಶ್ವವಿದ್ಯಾಲಯಗಳು, ಕೈಗಾರಿಕಾ ಸಂಸ್ಥೆಗಳು, ವಿಜ್ಞಾನಿಗಳು, ತಾಂತ್ರಿಕರು, ವೈದ್ಯರು, ಶಿಕ್ಷಣತಜ್ಞರು ಈ ಕೇಂದ್ರದ ಸಹಾಯವನ್ನು ಕೋರುತ್ತಾರೆ. ಪ್ರತಿ ವರ್ಷ ಇಂಥ ಸುಮಾರು 30,000 ಕೋರಿಕೆಗಳು ಬರುತ್ತವೆ. ಪ್ರತಿಯೊಂದು ಕೋರಿಕೆಯನ್ನೂ ಅತಿ ಶೀಘ್ರವಾಗಿ, ಕಡಿಮೆ ಖರ್ಚಿನಲ್ಲಿ ಈಡೇರಿಸುವ ವ್ಯವಸ್ಥೆ ಈ ಕೇಂದ್ರದಲ್ಲುಂಟು. ಈವರೆಗೆ ಸುಮಾರು 4,256 ಕ್ಕೂ ಹೆಚ್ಚು ವೈಜ್ಞಾನಿಕ ವಿಷಯ ಸಂಗ್ರಹಣ ಸೂಚಿಗಳನ್ನು ತಯಾರಿಸಲಾಗಿದೆ. ಸುಮಾರು 50,000ಕ್ಕೂ ಹೆಚ್ಚು ವೈಜ್ಞಾನಿಕ ಲೇಖನಗಳನ್ನು ಪತ್ತೆ ಮಾಡಿ ವಿಜ್ಞಾನಿಗಳಿಗೆ ಒದಗಿಸಲಾಗಿದೆ. 13,744ಕ್ಕೂ ಹೆಚ್ಚು ಲೇಖನಗಳನ್ನು ಭಾಷಾಂತರಿಸಲಾಗಿದೆ. ದಾಖಲೆಪತ್ರಗಳನ್ನು ಪತ್ತೆ ಮಾಡಿ ಒದಗಿಸುವ ಕಾರ್ಯ ಭಾರತಕ್ಕೆ ಮಾತ್ರ ಸೀಮಿತವಾಗಿರದೆ, ಇತರ ದೇಶಗಳಿಂದಲೂ ತರಿಸಿಕೊಡಲಾಗಿದೆ. ಅವನ್ನು ಮೈಕ್ರೊಫಿಲ್ಮ್ ರೂಪದಲ್ಲಿ ತರಿಸಿ ಕೇಂದ್ರದಲ್ಲಿ ದೊಡ್ಡದಾಗಿ ಚಿತ್ರಿಸಿ ಒದಗಿಸಲಾಗುತ್ತಿದೆ. ಈ ತನಕ 2,08,390 ಫೋಟೋಪ್ರತಿ ಮತ್ತು ಮೈಕ್ರೊಫಿಲಂಗಳನ್ನು ಒದಗಿಸಲಾಗಿದೆ.

ಈ ಕೇಂದ್ರ ಒದಗಿಸುತ್ತಿರುವ ಪ್ರಲೇಖನ ಸೇವೆಯನ್ನು ದಕ್ಷಿಣ ಮತ್ತು ಆಗ್ನೇಯ ಏಷ್ಯದ ರಾಷ್ಟ್ರಗಳು, ವೈಜ್ಞಾನಿಕ ಸಂಸ್ಥೆಗಳು ಉಪಯೋಗ ಮಾಡಿಕೊಳ್ಳುತ್ತಿವೆ. ಪ್ರತಿವರ್ಷವೂ ಈ ರೀತಿಯ ಕೋರಿಕೆಗಳು, ಬರ್ಮ, ಶ್ರೀಲಂಕ, ಚೀನ, ಹಾಂಕಾಂಗ್, ಇಂಡೊನೇಷ್ಯ, ಜಪಾನ್, ಮಲಯ, ಪಾಕಿಸ್ತಾನ, ಫಿಲಿಪೀನ್ಸ್ ಮುಂತಾದ ದೇಶಗಳಿಂದ ಬರುತ್ತವೆ. ಈ ಕೇಂದ್ರವೂ ಇತರ ದೇಶಗಳಿಂದ ಇಂಥದೇ ಉಪಯೋಗಗಳನ್ನು ಪಡೆಯುತ್ತದೆ. ಇದರಿಂದಾಗಿ ಪ್ರಾದೇಶಿಕ ಸಹಕಾರ ಮತ್ತು ಸಹೋದ್ಯಮ ವೃದ್ಧಿಯಾಗಲು ಹೆಚ್ಚು ಅನುಕೂಲವಾಗಿದೆ.

ಭಾರತದ ಪ್ರಲೇಖನ ಕೇಂದ್ರವೂ ಭಾರತದ ಅನೇಕ ವೈಜ್ಞಾನಿಕ ಗ್ರಂಥಾಲಯ ಗಳಲ್ಲಿರುವ ವೈಜ್ಞಾನಿಕ ನಿಯತಕಾಲಿಕೆಗಳ ಸಂಯುಕ್ತಸೂಚಿಯನ್ನು ತಯಾರಿಸುವ ಕಾರ್ಯವನ್ನು ಕೈಗೊಂಡಿತು. ಯುನೆಸ್ಕೊ ಸಹಕಾರದಿಂದ ಭಾರತ ಗ್ರಂಥಾಲಯ ಸಂಘ 1950ರಲ್ಲಿ ದಕ್ಷಿಣ ಏಷ್ಯ ಗ್ರಂಥಾಲಯಗಳಲ್ಲಿರುವ ವೈಜ್ಞಾನಿಕ ನಿಯತಕಾಲಿಕೆಗಳ ಸಂಯುಕ್ತಸೂಚಿಯನ್ನು ತಯಾರಿಸಲು ಆರಂಭಿಸಿತು. ಇದರ ಕೆಲಸ ಮತ್ತು ಕಾರ್ಯ ಯೋಜನೆಯನ್ನು ಎಸ್. ಆರ್. ರಂಗನಾಥನ್ ಅವರಿಗೆ ವಹಿಸಿ ಕೊಡಲಾಯಿತು. ಬರ್ಮ, ಶ್ರೀಲಂಕ, ಮಲಯ, ಇಂಡೊನೇಷ್ಯ ಮತ್ತು ಭಾರತದ ಗ್ರಂಥಾಲಯಗಳಿಂದ ವೈಜ್ಞಾನಿಕ ನಿಯತಕಾಲಿಕೆಗಳ ಪಟ್ಟಿ ಬಂದವು. ಈ ಕಾರ್ಯದಲ್ಲಿ ಸುಮಾರು 210 ಗ್ರಂಥಾಲಯಗಳು ಭಾಗವಹಿಸಿದವು. ಇವುಗಳಲ್ಲಿ 74 ಗ್ರಂಥಾಲಯಗಳು ಹೊರ ದೇಶಗಳವು. ಎಸ್.ಆರ್. ರಂಗನಾಥನ್ ಕ್ರೋಡೀಕರಿಸಿ ಸಂಪಾದಿಸಿರುವ ಈ ಸಂಯುಕ್ತಸೂಚಿ ದಕ್ಷಿಣ ಏಷ್ಯ ಗ್ರಂಥಾಲಯಗಳಲ್ಲಿರುವ ಭೌತ ವಿಜ್ಞಾನ ಮತ್ತು ಜೀವ ವಿಜ್ಞಾನ ನಿಯತಕಾಲಿಕೆಗಳ ಸೂಚೀ ಸಂಪುಟ 1 (ಲರ್ನೆಡ್ ಪೀರಿಯಾಡಿಕಲ್ ಪಬ್ಲಿಕೇಷನ್ಸ್ ಇನ್ ಸೌತ್ ಏಷ್ಯ ವಾಲ್ಯೂಮ್ 1, ಫಿಸಿಕಲ್ ಅಂಡ್ ಬಯಲಾಜಿಕಲ್ ಸೈನ್ಸಸ್) ಎಂಬ ಹೆಸರಿನಲ್ಲಿ

ಪ್ರಕಟವಾಯಿತು (1953). ದಕ್ಷಿಣ ಏಷ್ಯದ ಸು. 6,000 ನಿಯತಕಾಲಿಕೆಗಳ ಸೂಚಿ ಈ ಸಂಪುಟದಲ್ಲಿದೆ. ಈ ಪ್ರಕಟಣೆಯಿಂದ ನಮ್ಮ ರಾಷ್ಟ್ರೀಯ ವಿಜ್ಞಾನ ಪ್ರಲೇಖನ ಕೇಂದ್ರಕ್ಕೆ ನಿಯತಕಾಲಿಕೆ ಲೇಖನಗಳನ್ನು ಪತ್ತೆ ಹಚ್ಚುವ ಮತ್ತು ಅವುಗಳನ್ನು ತರಿಸುವ ಕೆಲಸಕ್ಕೆ ತುಂಬ ಅನುಕೂಲವಾಯಿತಲ್ಲದೆ ಈ ಕೇಂದ್ರದ ಸೇವೆಯನ್ನು ಚುರುಕುಗೊಳಿಸಲು ತುಂಬ ಸಹಾಯವಾಯಿತು. ಈ ದಿಸೆಯಲ್ಲಿ ಮುಂದುವರಿದು ಈ ಕೇಂದ್ರ ಭಾರತದ ವೈಜ್ಞಾನಿಕ ನಿಯತಕಾಲಿಕೆಗಳ ಸಂಯುಕ್ತಸೂಚಿಯ ಪರಿಷ್ಕರಣ ಕಾರ್ಯವನ್ನು ಆರಂಭಿಸಿತು.

ಯುನೆಸ್ಕೊ ನೆರವು ಪಡೆದು ಈ ಕೇಂದ್ರ ದೆಹಲಿಯಲ್ಲಿ ದಕ್ಷಿಣ ಮತ್ತು ಆಗ್ನೇಯ ಏಷ್ಯದಲ್ಲಿ ಪ್ರಲೇಖನ ಕಾರ್ಯ ಎಂಬ ವಿಷಯದ ಮೇಲೆ ಒಂದು ವಿಚಾರ ಗೋಷ್ಠಿ ನಡೆಸಿತು (1960). ಈ ವಿಚಾರ ಗೋಷ್ಠಿಯಲ್ಲಿ ದಕ್ಷಿಣ ಮತ್ತು ಆಗ್ನೇಯ ಏಷ್ಯದ ರಾಷ್ಟ್ರಗಳನ್ನು ತಮ್ಮ ತಮ್ಮ ದೇಶಗಳ ವೈಜ್ಞಾನಿಕ ನಿಯತಕಾಲಿಕೆಗಳ ಸಂಯುಕ್ತಸೂಚಿಯನ್ನು ತಯಾರಿಸುವಂತೆ ಕೇಳಿಕೊಳ್ಳಲಾಯಿತು.

ಪ್ರಚಲಿತ ವೈಜ್ಞಾನಿಕ ಸಾಹಿತ್ಯ ಪ್ರಸರಣ : ದಕ್ಷಿಣ ಮತ್ತು ಆಗ್ನೇಯ ಏಷ್ಯ ರಾಷ್ಟ್ರಗಳಲ್ಲಿ ಪ್ರಕಟವಾಗಿ ಸಂಗ್ರಹವಾಗಿರುವ ಪ್ರಚಲಿತ ವೈಜ್ಞಾನಿಕ ವಿಷಯಗಳ ಪ್ರಸರಣ ಕಾರ್ಯ ಬಹುಮುಖ್ಯವಾದ ಸೇವಾ ಕಾರ್ಯವಾಗಿತ್ತು. ಭಾರತದಲ್ಲಿ ಪ್ರಕಟವಾಗಿರುವ ವೈಜ್ಞಾನಿಕ ವಿಷಯಗಳ ಸಾಹಿತ್ಯವನ್ನು ಕ್ರೋಡೀಕರಿಸುವ ಕಾರ್ಯವನ್ನು ದೆಹಲಿಯಲ್ಲಿರುವ ಯುನೆಸ್ಕೊದ ದಕ್ಷಿಣ ಏಷ್ಯ ವೈಜ್ಞಾನಿಕ ಸಹಕಾರ ಕಚೇರಿ ದಕ್ಷಿಣ ಏಷ್ಯ ಸಾಹಿತ್ಯ ಸೂಚಿಯ ಮೂಲಕ 1949ರಲ್ಲಿ ಪ್ರಾರಂಭಿಸಿತು.

ಈ ಸೂಚಿ ತಿಂಗಳಿಗೆ ಎರಡು ಬಾರಿ ಪ್ರಕಟವಾಗುತ್ತಿತ್ತು. ಬರ್ಮ, ಶ್ರೀಲಂಕ ಮತ್ತು ಭಾರತ ದೇಶಗಳಲ್ಲಿ ಪ್ರಕಟವಾದ ವೈಜ್ಞಾನಿಕ ನಿಯತಕಾಲಿಕೆಗಳಲ್ಲಿರುವ ಲೇಖನಗಳನ್ನು ಪಟ್ಟಿಮಾಡಿ, ಪ್ರತಿ ವರ್ಷವೂ ಸುಮಾರು 250 ವೈಜ್ಞಾನಿಕ ನಿಯತಕಾಲಿಕೆಗಳಿಂದ ಆಯ್ದ 4,000 ಲೇಖನಗಳನ್ನು ಈ ಸೂಚಿ ಪ್ರಕಟಿಸುತ್ತಿತ್ತು. ಇದರ ಪ್ರಕಟಣೆಯನ್ನು ರಾಷ್ಟ್ರೀಯ ವಿಜ್ಞಾನ ಪ್ರಲೇಖನ ಕೇಂದ್ರ 1955ರಲ್ಲಿ ತೆಗೆದುಕೊಂಡಿತು. ಅನಂತರ ಈ ಸೂಚಿ ಮಾಸಿಕ ನಿಯತಕಾಲಿಕೆ ಸೂಚಿಯಾಗಿ ಯುನೆಸ್ಕೊದ ವೈಜ್ಞಾನಿಕ ಸಹಕಾರ ಕಚೇರಿಯ ದೆಹಲಿ ಮತ್ತು ಜಕಾರ್ತ ಶಾಖೆಗಳಿಂದ ಸಂಗ್ರಹಿತವಾಗಿ ಏಷ್ಯ ಮತ್ತು ಆಗ್ನೇಯ ಏಷ್ಯ ವೈಜ್ಞಾನಿಕ ಪ್ರಕಟಣೆಗಳ ಸೂಚಿ ಎಂಬ ಶೀರ್ಷಿಕೆಯಲ್ಲಿ ಪ್ರಕಟವಾಗುತ್ತಿತ್ತು.

ವೈಜ್ಞಾನಿಕ ನಿಯತಕಾಲಿಕೆಗಳು ವಿದೇಶಗಳಲ್ಲಿ ಪ್ರಕಟವಾದ ಮೇಲೆ ಭಾರತಕ್ಕೆ ಅವು ಬರಲು ತೆಗೆದುಕೊಳ್ಳುತ್ತಿದ್ದ ಕಾಲ ಬಹಳವಾದುದರಿಂದ ಸುಮಾರು 650 ಇಂಥ ವಿದೇಶೀ ನಿಯತಕಾಲಿಕೆಗಳ ವಿಷಯಾನುಕ್ರಮಣಿಕೆ ಪಟ್ಟಿಯನ್ನು ವಿಮಾನಯಾನ ಅಂಚೆ ಮೂಲಕ ಹೊರದೇಶದ ಪ್ರಲೇಖನ ಕೇಂದ್ರಗಳಿಂದ ಮೈಕ್ರೊಫಿಲ್ಮ್ ರೂಪದಲ್ಲಿ ತರಿಸಿ ಕ್ರೋಡೀಕರಿಸಿ ಒಂದು ಪಟ್ಟಿಯನ್ನು ತಯಾರಿಸಲಾಗುತ್ತಿತ್ತು. ಆದರೆ ಈಗ ಈ ಪಟ್ಟಿ ತಯಾರಾಗುತ್ತಿಲ್ಲ. ಪ್ರಕಟಣೆ ನಿಂತಿದೆ.

ಈಗ ಈ ಕೇಂದ್ರದಿಂದ ಪ್ರಕಟವಾಗುತ್ತಿರುವ 15 ಕ್ಕೂ ಹೆಚ್ಚಿನ ನಿಯತಕಾಲಿಕೆಗಳಲ್ಲಿ ಮುಖ್ಯವಾದವು ಇವು : 1. ಭಾರತ ವಿಜ್ಞಾನ ಸಾರಾಂಶ ಸೂಚಿ, 2. ಭಾರತ ಶಿಕ್ಷಣ ವಿಷಯಗಳು, 3. ಗ್ರಂಥಾಲಯ ವಿಜ್ಞಾನ ಮತ್ತು ಪ್ರಲೇಖನ ಕಾರ್ಯ ನಿಯತಕಾಲಿಕೆ.

**ಸಿಬ್ಬಂದಿ ತರಬೇತಿ :** ಪ್ರಲೇಖನ ಸೇವೆಯನ್ನು ಅತ್ಯಂತ ದಕ್ಷತೆಯಿಂದ ನಿರ್ವಹಿಸಲು ಸಾಕಷ್ಟು ಉನ್ನತವಾದ ತಾಂತ್ರಿಕ ತರಬೇತಿಯನ್ನು ಹೊಂದಿದ ಸಿಬ್ಬಂದಿ ಬೇಕಾಗುತ್ತದೆ. ಇಂಥ ತರಬೇತಿ ನೀಡಲು ಭಾರತದಲ್ಲಿ ಎರಡು ಕೇಂದ್ರಗಳಿವೆ. ಒಂದು ನವದೆಹಲಿಯ ರಾಷ್ಟ್ರೀಯ ವೈಜ್ಞಾನಿಕ ಪ್ರಲೇಖನ ಕೇಂದ್ರ, ಇನ್ನೊಂದು ಬೆಂಗಳೂರಿನ ಪ್ರಲೇಖನ ಸಂಶೋಧನ ತರಬೇತಿ ಕೇಂದ್ರ. ಇತ್ತೀಚೆಗೆ ದೆಹಲಿ, ಮೈಸೂರು, ಕರ್ನಾಟಕ ವಿಶ್ವವಿದ್ಯಾಲಯಗಳು ಮಾಸ್ಟರ್ ಆಫ್ ಲೈಬ್ರರಿ ಸೈನ್ಸ್ ತರಗತಿಗಳಲ್ಲಿ ಪ್ರಲೇಖನ ತರಬೇತಿಗೆ ಸಂಬಂಧಿಸಿದಂತೆ ಪ್ರಲೇಖನ ವಿಷಯಗಳನ್ನು ತಮ್ಮ ಪಠ್ಯಕ್ರಮಪಟ್ಟಿಯಲ್ಲಿ ಸೇರಿಸಿವೆ. ಆದರೆ ಪೂರ್ಣ ಪ್ರಮಾಣದಲ್ಲಿ ದೆಹಲಿಯ ಪ್ರಲೇಖನ ಕೇಂದ್ರ ಮಾತ್ರವೇ ತರಬೇತಿ ನೀಡುತ್ತಿರುವುದು. 1957ರಲ್ಲಿ ಥೈಲೆಂಡ್, ಬರ್ಮ, ಶ್ರೀಲಂಕ ಮತ್ತು ಭಾರತಗಳ 7 ಜನ ಗ್ರಂಥಪಾಲರಿಗೆ ಅಲ್ಪಾವಧಿಯ ಪ್ರಲೇಖನ ತರಬೇತಿಯನ್ನು ದೆಹಲಿಯ ಯುನೆಸ್ಕೊ ವೈಜ್ಞಾನಿಕ ಸಹಕಾರಿ ಕಚೇರಿ ಏರ್ಪಡಿಸಿತ್ತು.

1964ರಿಂದ ದೆಹಲಿಯ ಈ ಪ್ರಲೇಖನ ಕೇಂದ್ರ ಪೂರ್ಣ ಪ್ರಮಾಣದಲ್ಲಿ ಪ್ರಲೇಖ ಮತ್ತು ಲೇಖನ ಪ್ರತೀಕರಣದಲ್ಲಿ ಒಂದು ವರ್ಷ ಅವಧಿಯ ಶಿಕ್ಷಣ ನೀಡುತ್ತಿತ್ತು. ಈ ಶಿಕ್ಷಣ ಮಾಸ್ಟರ್ ಆಫ್ ಲೈಬ್ರರಿ ಸೈನ್ಸ್ ಮಟ್ಟದ್ದಾಗಿದ್ದು ಭಾರತ ಸರ್ಕಾರದಿಂದ ಮಾಸ್ಟರ್ ಡಾಕ್ಯುಮೆಂಟೇಷನ್ ಮತ್ತು ರೆಪ್ರೋಗ್ರಫಿ ಎಂಬುದಾಗಿ ಮನ್ನಣೆ ಪಡೆದಿದೆ. ಇದಲ್ಲದೆ ಭಾಷಾಂತರದಲ್ಲೂ ತಜ್ಞ ಶಿಕ್ಷಣವನ್ನು ಈ ಕೇಂದ್ರ ನೀಡುತ್ತಿತ್ತು.

ಭಾರತ ರಾಷ್ಟ್ರೀಯ ವೈಜ್ಞಾನಿಕ ಪ್ರಲೇಖನ ಕೇಂದ್ರ ಅಂತಾರಾಷ್ಟ್ರೀಯ ಪ್ರಲೇಖನ ಸಂಸ್ಥೆಯ (ಎಫ್.ಐ.ಡಿ.) ಕಾರ್ಯ ಚಟುವಟಿಕೆ ಮತ್ತು ವಿಚಾರ ಗೋಷ್ಠಿಗಳಲ್ಲಿ ಭಾರತದ ಪರವಾಗಿ ಪ್ರತಿನಿಧಿಸುತ್ತದೆ. ಈ ಕೇಂದ್ರದ ನಿರ್ದೇಶನಾಧಿಕಾರಿ ಯುನೆಸ್ಕೊವಿನಲ್ಲಿ ಭಾರತವನ್ನು ಪ್ರತಿನಿಧಿಸುತ್ತಾನೆ. ಯುನೆಸ್ಕೊವಿಗೆ ಈ ಕೇಂದ್ರ ಭಾರತದ ಕಾಯಂ ಪ್ರತಿನಿಧಿಯಾಗಿದೆ.

ದೂರದಿಂದ ಬರುವ ಕೋರಿಕೆಗಳನ್ನು ಶೀಘ್ರವಾಗಿ ಪೂರೈಸಲು ಪ್ರಾದೇಶಿಕ ಕೇಂದ್ರಗಳನ್ನು ಸ್ಥಾಪಿಸಲು ನಿರ್ಧರಿಸಲಾಯಿತು. ಈಗ ಬೆಂಗಳೂರಿನಲ್ಲಿ ಇಂಥ ಒಂದು ಕೇಂದ್ರವಿದೆ. ಈ ಕೇಂದ್ರದಲ್ಲಿ ದ್ವಿಪ್ರತಿ ಮತ್ತು ಫೋಟೋ ಪ್ರತಿ ಮಾಡಲು ಬೇಕಾದ ಎಲ್ಲ ಯಂತ್ರಗಳೂ ಇವೆ. ಈ ಕೇಂದ್ರಕ್ಕೆ ಯುನೆಸ್ಕೊ ಸಹಾಯದಿಂದಾಗಿ ಸಲಕರಣೆಯನ್ನು ಒದಗಿಸಲಾಗಿದೆ. ಈ ಕೇಂದ್ರ ಲೇಖನಗಳನ್ನು ತರಿಸಿಕೊಡುವ ಸೇವೆ, ಸುದ್ದಿ ತಿಳಿಸುವ ಸೇವೆ, ಲೇಖನ ಪ್ರತೀಕರಣ ಸೇವೆ, ವೈಜ್ಞಾನಿಕ ಮತ್ತು ತಾಂತ್ರಿಕ ಪ್ರಲೇಖನ ಸೇವೆಯ ಬಗ್ಗೆ ಸಲಹೆ ನೀಡುವ ಕಾರ್ಯವನ್ನು ಮಾಡುತ್ತಿದೆ. ಅಲ್ಲದೆ ಅನೇಕ ಅಭಿವೃದ್ಧಿ ಯೋಜನೆಗಳನ್ನು ಪೂರ್ಣಗೊಳಿಸುತ್ತ ಬಂದಿದೆ: ಭಾರತ ರಾಷ್ಟ್ರೀಯ ವಿಜ್ಞಾನ ಗ್ರಂಥಭಂಡಾರವನ್ನು ಅಭಿವೃದ್ಧಿಪಡಿಸುವುದು; ದೇಶಕ್ಕೆ ಉಪಯೋಗವಾಗುವ ಸಂಯುಕ್ತ ಸೂಚಿಗಳ ಪ್ರಕಟಣೆ; ಲೇಖನ ಪ್ರತೀಕರಣ ವಿಷಯದ ಬಗ್ಗೆ ಹೆಚ್ಚು ತಾಂತ್ರಿಕತೆಯನ್ನು ಸಾಧಿಸುವುದು; ಫೋಟೋ ಪ್ರತಿಮಾಡುವ ಯೂನಿಟ್ ಕೇಂದ್ರಗಳನ್ನು ಮುಂಬಯಿ ಕೋಲ್ಕತ, ಕೊಚ್ಚಿನ್, ಚೆನ್ನೈ, ಹೈದರಾಬಾದು, ಚಂಡಿಗಡ, ಕಾನ್‍ಪುರ್, ಅಹಮದಾಬಾದ್, ಮತ್ತು ಡೆಹರಾಡೂನ್ ಮುಂತಾದ ನಗರಗಳಲ್ಲಿ ಸ್ಥಾಪಿಸುವುದು; ಯಾಂತ್ರಿಕವಾಗಿ ವಿಷಯಗಳನ್ನು ಪುನಃ ಸಂಪಾದನೆ ಮಾಡುವುದು. ಈ ದಿಸೆಯಲ್ಲಿ ಈಗಾಗಲೇ ಭಾರತದ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಸಮಿತಿಯ (ಸಿಎಸ್‍ಐಆರ್) ಪ್ರಯೋಗಶಾಲೆಗಳು ಕಂಪ್ಯೂಟರ್‌ಗಳನ್ನು ಬಳಸುತ್ತಿವೆ; ವೈಜ್ಞಾನಿಕ ಸಂಸ್ಥೆಗಳಿಗೆ ಎಲ್ಲ ರೀತಿಯಲ್ಲೂ ಸಹಾಯವನ್ನು ಒದಗಿಸುವುದು; ಭಾಷಾಂತರ ಸೇವೆಯನ್ನು ಉತ್ತಮಪಡಿಸಲು ಇತರ ದೇಶಗಳ ಪ್ರಲೇಖನ ಕೇಂದ್ರಗಳ ಜೊತೆ ಸಹಕಾರದ ಒಪ್ಪಂದಗಳನ್ನು ಮಾಡಿಕೊಳ್ಳುವುದು.

**ಮಾದರಿ :** ಯುನೆಸ್ಕೊ ಮತ್ತು ಭಾರತ ತನ್ನ ಈ ವೈಜ್ಞಾನಿಕ ಪ್ರಲೇಖನ ಕೇಂದ್ರದ ಮೂಲಕ ತೋರಿಸಿರುವ ಮುಂದಾಳತ್ವ ಪಾಶ್ಚಾತ್ಯ ದೇಶಗಳ ಮೇಲೆ ತುಂಬ ಪರಿಣಾಮಕಾರಿಯಾದ ಪ್ರಭಾವವನ್ನು ಬೀರಿದೆ. ಮೊದಲನೆಯದಾಗಿ ತನ್ನ ದೇಶದ ವಿಜ್ಞಾನಿಗಳಿಗೆ ಈ ಕೇಂದ್ರ ವೈಜ್ಞಾನಿಕ ಆಕರವಾಗಿರುವುದಲ್ಲದೆ ಇತರ ದೇಶಗಳು ಈ ರೀತಿಯ ವೈಜ್ಞಾನಿಕ ಪ್ರಲೇಖನ ಕೇಂದ್ರಗಳನ್ನು ಸ್ಥಾಪಿಸಲು ಮಾದರಿಯೂ ಆಗಿದೆ. (ಎಸ್.ಎನ್.ಎಲ್.)

(c) ಭಾರತೀಯ ಸಮಾಜ ವಿಜ್ಞಾನ ಸಂಶೋಧನ ಸಂಸ್ಥೆ: ಭಾರತ ಸರ್ಕಾರದ ಯೋಜನಾ ಆಯೋಗದ ಶಿಫಾರಸಿನ ಮೇಲೆ ದೆಹಲಿಯಲ್ಲಿ ಸ್ಥಾಪಿತವಾದ (1969) ಸಂಸ್ಥೆ (ಇಂಡಿಯನ್ ಕೌನ್ಸಿಲ್ ಆಫ್ ಸೋಷಿಯಲ್ ಸೈನ್ಸ್ ರಿಸರ್ಚ್). ದೇಶದ ನಾನಾ ಭಾಗಗಳಲ್ಲಿ ನಡೆಯುವ ಸಮಾಜ ವಿಜ್ಞಾನ ಸಂಶೋಧನೆಗೆ ಸಂಬಂಧಿಸಿದ ಚಟುವಟಿಕೆಗಳನ್ನು ಪರಿಶೀಲಿಸುವುದು ಈ ಸಂಸ್ಥೆಯ ಮುಖ್ಯ ಕೆಲಸಗಳಲ್ಲೊಂದು. ಸಂಸ್ಥೆಯ ಮುಖ್ಯ ಅಂಗವಾಗಿ ರಾಷ್ಟ್ರೀಯ ಸಮಾಜ ವಿಜ್ಞಾನಪ್ರಲೇಖನ ಕೇಂದ್ರವೊಂದಿದೆ. ಇದಿರುವುದು ದೆಹಲಿಯ ಜವಾಹರಲಾಲ ನೆಹರು ವಿಶ್ವವಿದ್ಯಾಲಯದ ಆವರಣದಲ್ಲಿ. ಸಮಾಜ ವಿಜ್ಞಾನಶಾಸ್ತ್ರ ವ್ಯಾಸಂಗಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಅನುಕೂಲಗಳು ಇಲ್ಲಿವೆ. ಕೇಂದ್ರ ಕೈಗೊಂಡಿರುವ ಪ್ರಮುಖ ಚಟುವಟಿಕೆಗಳಿವು:

1. ಭಾರತದ ವಿಶ್ವವಿದ್ಯಾಲಯಗಳು ಸಮಾಜ ವಿಜ್ಞಾನದಲ್ಲಿ ಕೊಡುವ ಡಾಕ್ಟರೇಟ್ ಪದವಿ ಪ್ರಬಂಧಗಳ ಸೂಚಿಯನ್ನು ಸಿದ್ಧಪಡಿಸುವುದು. ಈ ದಾರಿಯಲ್ಲಿ 1969ರ ವರೆಗೆ ಮನ್ನಣೆ ಪಡೆದ ಪ್ರಬಂಧಗಳ ಸೂಚಿ ಪ್ರಕಟವಾಗಿದೆ (1970). 2. ಅಂಗೀಕೃತ ಡಾಕ್ಟರೇಟ್ ಪದವಿಗಳ ಒಂದೊಂದು ಪ್ರತಿಯನ್ನು ಕೇಂದ್ರದಲ್ಲಿಡುವುದು. ಇವನ್ನು ಗ್ರಂಥರೂಪದಲ್ಲಿ ಪ್ರಕಟಿಸುವ ಯೋಜನೆಯೂ ಇದೆ. 3. ಸಂಶೋಧಕರಿಗೆ ಸೂಚಿ ಮತ್ತು ಪ್ರಲೇಖನ ಸೇವೆಯನ್ನು ಒದಗಿಸುವುದು. 4. ಸಮಾಜ ವಿಜ್ಞಾನಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ಒದಗಿಸುವ ಮಾಹಿತಿ ಗ್ರಂಥಾಲಯಗಳನ್ನು (ಡೇಟ ಲೈಬ್ರರೀಸ್) ದೇಶದ ಆಯ್ದ ಸ್ಥಳಗಲ್ಲಿ ಸ್ಥಾಪಿಸುವುದು. 5. ಸಮಾಜ ವಿಜ್ಞಾನ ವಿಷಯದ ನಿಯತಕಾಲಿಕೆಗಳ ಸಂಯುಕ್ತ ಸೂಚಿಯನ್ನು ತಯಾರಿಸುವುದು. ಮೊದಲ ಹಂತವಾಗಿ 107 ಗ್ರಂಥಾಲಯಗಳಲ್ಲಿರುವ 4,074 ನಿಯತಕಾಲಿಕೆಗಳ ಸಂಯುಕ್ತ ಸೂಚಿಯನ್ನು ಪ್ರಕಟಿಸಲಾಗಿದೆ, (1970). ದೇಶದಲ್ಲಿ ಉಳಿದ ಗ್ರಂಥಾಲಯಗಳಲ್ಲಿರುವ ನಿಯತಕಾಲಿಕೆಗಳ ಸೂಚಿಯನ್ನು ಪ್ರಕಟಿಸುವ ಕಾರ್ಯ ಈಗ ನಡೆಯುತ್ತಿದೆ. 6. ಸಂಶೋಧನೆಯಲ್ಲಿ ದೇಶದ ಪ್ರಮುಖ ಗ್ರಂಥಾಲಯಗಳೊಂದಿಗೆ ಸಹಕರಿಸುವುದು. 7. ನಿಯತಕಾಲಿಕೆಗಳಲ್ಲಿ ಪ್ರಕಟವಾಗುವ ಮುಖ್ಯ ಲೇಖನಗಳ ಫೋಟೋ ಪ್ರತಿಗಳನ್ನು ಮತ್ತು ಮೈಕ್ರೊಫಿಲ್ಮ್‌ಗಳನ್ನು ಸಂಗ್ರಹಿಸುವುದು. 8. ಮಹಾತ್ಮ ಗಾಂಧಿ ಶತಮಾನೋತ್ಸವ ಸಂದರ್ಭದಲ್ಲಿ ದೇಶದ ಎಲ್ಲ ಭಾಷೆಗಳಲ್ಲಿ ಗಾಂಧಿಯವರ ಬಗ್ಗೆ ಪ್ರಕಟವಾದ ಪುಸ್ತಕಗಳ ಸೂಚಿಯನ್ನು ತಯಾರಿಸುವುದು.

**ಕೇಂದ್ರದ ಪ್ರಕಟಣೆಗಳಿವು :** ಮನಃಶಾಸ್ತ್ರ ಮತ್ತು ಭೂಗೋಳಶಾಸ್ತ್ರದಲ್ಲಿ ನಡೆದಿರುವ ಸಂಶೋಧನೆಗಳನ್ನು ಕುರಿತು ಸಮೀಕ್ಷಾ ಗ್ರಂಥಗಳು. ಇದಲ್ಲದೆ ಎರಡು ನಿಯತಕಾಲಿಕೆಗಳು

ಪ್ರಕಟವಾಗುತ್ತಿವೆ. ಒಂದು–ಕೇಂದ್ರದ ಚಟುವಟಿಕೆಗಳ ಸಮಾಚಾರ ಪತ್ರ (ನ್ಯೂಸ್ ಲೆಟರ್). ಇನ್ನೊಂದು–ಭಾರತೀಯ ಪ್ರಬಂಧಸಾರ. ಸಮಾಜಶಾಸ್ತ್ರದಲ್ಲಿ ಭಾರತೀಯ ವಿಶ್ವವಿದ್ಯಾಲಯಗಳು ಕೊಟ್ಟ ಡಾಕ್ಟರೇಟ್ ಪ್ರಬಂಧಗಳ ಸಾರಸಂಗ್ರಹ ಇದರಲ್ಲಿ ಪ್ರಕಟವಾಗುತ್ತದೆ. ಸಂಶೋಧನೆಗಳಲ್ಲಿನ ವಿಷಯ ಪುನರುಕ್ತಿಯನ್ನು (ಡೂಪ್ಲಿಕೇಷನ್) ತಪ್ಪಿಸಲು ಇದರಿಂದ ಸಾಧ್ಯ ಎನ್ನಲಾಗಿದೆ.

ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿರುವ, ಮುಖ್ಯವಾಗಿ ಅಮೆರಿಕ, ಆಫ್ರಿಕ ಮತ್ತು ಏಷ್ಯಗಳಲ್ಲಿರುವ, ಈ ಮಾದರಿಯ ಸಂಸ್ಥೆಗಳೊಂದಿಗೆ ಕೇಂದ್ರ ಸಂಬಂಧವನ್ನು ಹೊಂದಿದೆ.

(ಬಿ.ಎಸ್.ವೈ.)

## IV ಗ್ರಂಥಾಲಯ ಮತ್ತು ಸ್ವಯಂತ್ರೀಕರಣ

ಗ್ರಂಥಾಲಯದಲ್ಲಿ ಲಭಿಸುವ ವಿವಿಧ ಸೇವೆಗಳನ್ನು ಓದುಗರ ಅಗತ್ಯಗಳಿಗೆ ತಕ್ಕಂತೆ ಅತಿಶೀಘ್ರವಾಗಿ ಒದಗಿಸಲು ಯಂತ್ರಗಳನ್ನು ಹೇಗೆ ಬಳಸಲಾಗುತ್ತಿದೆ ಎಂಬ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಲಾಗಿದೆ. ಪ್ರಪಂಚದಲ್ಲಿ ಜ್ಞಾನಾರ್ಜನೆಯ ಮಹತ್ತ್ವ ಹೆಚ್ಚಿದಂತೆಲ್ಲ ಓದುಗರ ಹಾಗೂ ಪುಸ್ತಕಗಳ ಸಂಖ್ಯೆ ಭರದಿಂದ ಬೆಳೆಯತೊಡಗಿದೆ. ಬರಿಯ ಪುಸ್ತಕ, ಪತ್ರಿಕೆ, ಇತರ ಪ್ರಕಟಣೆಗಳು ಮಾತ್ರವಲ್ಲದೆ ಸ್ಟ್ಯಾಂಡರ್ಡ್ಸ್, ಪೇಟೆಂಟ್ಸ್, ಪ್ರಯೋಗ ವರದಿಗಳು ಪ್ರಕಟಣ ಪೂರ್ವಬರೆಹಗಳು ಮುಂತಾದ ಅಸಾಂಪ್ರದಾಯಿಕ ಪ್ರಕಟಣೆಗಳು ಬಹುಸಂಖ್ಯೆಯಲ್ಲಿ ಹೊರಬರುತ್ತಿವೆ. ಸಂಶೋಧನ ಲೇಖನಗಳಂತೂ ಪ್ರತಿ ವರ್ಷ ಲಕ್ಷಗಟ್ಟಲೆ ಬೆಳಕು ಕಾಣುತ್ತಲಿವೆ. ಮೂವತ್ತು ಸಾವಿರಕ್ಕೆ ಮೇಲ್ಪಟ್ಟ ಪತ್ರಿಕೆಗಳು ಸಂಶೋಧನ ಪ್ರಕಟಣೆಗೆಂದೇ ಮೀಸಲಾಗಿವೆ. ಈ ಬೃಹತ್ ಸೃಷ್ಟಿಯನ್ನು ವಾಚನ ಸಾಮಗ್ರಿಯ ಸ್ಫೋಟ ಎಂದು ಕರೆಯುವುದುಂಟು. ಇದರ ಬೆಳೆವಣಿಗೆ ಚಲಘಾತ ಸ್ವರೂಪದ್ದಾಗಿರುವುದರಿಂದ ಎಲ್ಲ ವಾಚನ ಸಾಮಗ್ರಿಗಳ ಪರಿಮಾಣ ಕೇವಲ ಏಳೆಂಟು ವರ್ಷಗಳಲ್ಲಿ ದ್ವಿಗುಣವಾಗುತ್ತದೆಂದು ತಿಳಿಯಲಾಗಿದೆ.

ವೈಜ್ಞಾನಿಕ ಶೋಧ ಹಾಗೂ ಕೈಗಾರಿಕೆಯ ಬೆಳೆವಣಿಗೆಗಳಿಗೆ ವಿಶೇಷ ಮಹತ್ತ್ವ ಪ್ರಾಪ್ತವಾದದ್ದೇ ಈ ಬಗೆಯ ಸಾಹಿತ್ಯ ನಿರ್ಮಾಣಕ್ಕೆ ಕಾರಣ. ಸಂಶೋಧನೆ ಮತ್ತು ಅಭಿವೃದ್ಧಿಕಾರ್ಯದ ಮುಂದುವರಿಕೆಗಾಗಿ ಓದುಗರ ಅಗತ್ಯಗಳಿಗೆ ತಕ್ಕಂತೆ ಈ ವಾಚನಸಾಮಗ್ರಿಯನ್ನು ಅಣಿಗೊಳಿಸಬೇಕಾಗುತ್ತದೆ. ಇದರ ಪ್ರಯೋಜನ ಪಡೆಯುವವರ ಬೇಡಿಕೆಯೂ ವಿಶಿಷ್ಟವಾದ್ದು. ಪುಸ್ತಕಗಳು ಮತ್ತು ಪತ್ರಿಕಾಸಂಪುಟಗಳ ಜೊತೆಗೆ ಒಂದು ನಿರ್ದಿಷ್ಟ ವಿಷಯವೊಂದರ ಎಲ್ಲ ಬಗೆಯ ಬರೆಹಗಳೂ ಓದುಗರಿಗೆ ಬೇಕಾಗಬಹುದು. ಉದಾಹರಣೆಗೆ, ರಸಾಯನಶಾಸ್ತ್ರದಲ್ಲಿ ಲಕ್ಷಾಂತರ ಸಂಯುಕ್ತವಸ್ತುಗಳಿದ್ದು ಅವುಗಳಲ್ಲಿ ಯಾವುದಾದರೊಂದನ್ನು ಕುರಿತು ಸಮಗ್ರ ವಾಚನಸಾಮಗ್ರಿಯ ಶೀಘ್ರಪೂರೈಕೆ. ಇಂಥವನ್ನು ಆಯ್ದ ವಾಚನ ಸಾಮಗ್ರಿಯ ವಿಸರಣ (ಸೆಲೆಕ್ಟಿವ್ ಡಿಸೆಮಿನೇಷನ್ ಆಫ್ ಇನ್‌ಫರ್ಮೇಷನ್) ಎಂದು ಕರೆಯುವುದುಂಟು. ಗ್ರಂಥಾಲಯಗಳಲ್ಲಿ ಅನುಸರಿಸುವ ಸಾಮಾನ್ಯ ವಿಧಾನಗಳಿಂದ ಇದು ತ್ವರಿತವಾಗಿ ಸಾಗುವುದು ಅಷ್ಟು ಸುಲಭವಲ್ಲ. ಗ್ರಂಥಾಲಯದಲ್ಲಿ ಲಕ್ಷಗಟ್ಟಲೆ ಪ್ರಕಟಣೆಗಳಿದ್ದರಂತೂ ಅದರ ವಾಚನಸಾಮಗ್ರಿಯನ್ನು ವ್ಯವಸ್ಥಿತವಾಗಿ ಮತ್ತು ಆದಷ್ಟು ಜಾಗ್ರತೆ ವಾಚಕರಿಗೆ ಒದಗಿಸುವುದು ಮತ್ತಷ್ಟೂ ದುಸ್ತರವಾಗುತ್ತದೆ. ಸಿಬ್ಬಂದಿಯ ಕೊರತೆ ಇದ್ದಲ್ಲಿ ಸಮಸ್ಯೆಗೆ ಪೋಷಣೆ ದೊರಕಿದಂತೆ. ಇದರಿಂದ ಗ್ರಂಥಾಲಯ ಸೇವೆಯ ಕಾರ್ಯದಕ್ಷತೆ ಕುಂಠಿತವಾಗುತ್ತದೆ. ದೊಡ್ಡ ದೊಡ್ಡ ಗ್ರಂಥಾಲಯಗಳಲ್ಲಿ ವಿಶಿಷ್ಟವಾಚನಸಾಮಗ್ರಿಯ ಬೇಡಿಕೆಯನ್ನು ಶೀಘ್ರವಾಗಿ, ಸಮರ್ಪಕವಾಗಿ ಹಾಗೂ ಒಂದು ಕ್ರಮಬದ್ಧ ರೀತಿಯಲ್ಲಿ ಪೂರೈಸುವ ಕಾರ್ಯದಲ್ಲಿ ಯಂತ್ರೀಕರಣದ ಅಗತ್ಯ ಕಂಡುಬರುತ್ತದೆ.

ಯಂತ್ರೀಕರಣದ ವಿವಿಧ ವಿಧಾನಗಳು ಪ್ರಪಂಚದ ಹಲವಾರು ಗ್ರಂಥಾಲಯಗಳಲ್ಲಿ ಬಳಕೆಯಲ್ಲಿವೆ. ಅವುಗಳಲ್ಲಿ ಹೆಚ್ಚು ಪ್ರಚಾರದಲ್ಲಿರುವ, ತುದಿ ಕಚ್ಚುಗಳುಳ್ಳ ಕಾರ್ಡುಗಳ (ಎಜ್ ನಾಚ್ಡ್ ಕಾರ್ಡ್ಸ್) ವಿಧಾನವನ್ನು ಇಲ್ಲಿ ಸಂಕ್ಷಿಪ್ತವಾಗಿ ಪ್ರಸ್ತಾಪಿಸಿದೆ. ಈ ಕಾರ್ಡುಗಳು ಸೂಚೀಕರಣದಲ್ಲಿ ಬಳಸುವ ಕಾರ್ಡುಗಳಿಗಿಂತಲೂ ಸ್ವಲ್ಪ ದೊಡ್ಡವಿದ್ದು ತುದಿಗಳಲ್ಲಿ ರಂಧ್ರಗಳಿರುತ್ತವೆ. ಯಾವುದಾದರೊಂದು ವಿಷಯದ ಹಲವು ಮುಖಗಳಲ್ಲಿ (ಫ್ಯಾಸೆಟ್ಸ್) ಒಂದನ್ನು ಸೂಚಿಸುವಂತೆ ನಿಶ್ಚಿತ ಸ್ಥಳವೊಂದರಲ್ಲಿ ಆ ಕಚ್ಚಿಗೆ ರಂಧ್ರ ಮಾಡುತ್ತಾರೆ. ಇಂಥ ನೂರಾರು ಕಾರ್ಡುಗಳಿಂದ ಬೇಕಾದ ವಿಷಯವೊಂದರ ಸಾಮಗ್ರಿಯನ್ನು ಆಯ್ದುಕೊಳ್ಳುವುದಿದ್ದಲ್ಲಿ ಒಂದು ಉದ್ದನೆಯ ಸೂಜಿಯನ್ನು ಅದರಲ್ಲಿ ಹಾಯಿಸಬೇಕು. ಆಗ ಆ ವಿಷಯದ ಮೇಲಿನ ಕಾರ್ಡುಗಳು ಕೂಡಲೇ ಪ್ರತ್ಯೇಕಗೊಳ್ಳುತ್ತವೆ. ಇಂಥ ಕಾರ್ಡುಗಳು ಸಾವಿರಾರು ಇದ್ದರೆ ಪ್ರತ್ಯೇಕಿಸುವ ಕಾರ್ಯ ಯಂತ್ರದ ಸಹಾಯದಿಂದ ನಡೆಯುತ್ತದೆ. ಸಾಂಪ್ರದಾಯಿಕ ಯಂತ್ರಗಳನ್ನುಪಯೋಗಿಸಿ ಈ ಕಾರ್ಯ ಮಾಡುವುದರಲ್ಲಿ ಸುಧಾರಣೆ ಕಂಡುಬಂದು ಗಣಕಗಳ (ಕಂಪ್ಯೂಟರ್ಸ್) ಬಳಕೆ ಇತ್ತೀಚೆಗೆ ನಡೆದಿದೆ. ಇದರಿಂದ ಯಂತ್ರೀಕರಣದಲ್ಲಿ ಇನ್ನೊಂದು ಹೆಜ್ಜೆ ಮುಂದೆ ಹೋಗಿ ಸ್ವಯಂತ್ರೀಕರಣ ವಿಧಾನ ಬಳಕೆಗೆ ಬಂದಿರುವುದನ್ನು ಕಾಣಬಹುದು.


ಗಣಕಗಳ ಬಳಕೆ ಮೊದಲಿಗೆ ಅಮೆರಿಕದ ರಕ್ಷಣಾಪಡೆಗಳ ಪುಸ್ತಕಭಂಡಾರಗಳಲ್ಲಿ ಆಯಿತೆನ್ನಬಹುದು. ಗಣಕಗಳನ್ನು ತಯಾರಿಸುವ ಪ್ರಮುಖ ಸಂಸ್ಥೆಯಾದ ಐ.ಬಿ.ಎಂ.ನ ಗ್ರಂಥಾಲಯಗಳಲ್ಲಿ ಸಮಗ್ರ ಸೇವಾಸೌಲಭ್ಯವನ್ನು ಸಂಪೂರ್ಣವಾಗಿ ಸ್ವಯಂತ್ರೀಕರಿಸಲಾಗಿದೆ. ಬ್ರಿಟನ್, ರಷ್ಯ, ಕೆನಡ, ಫ್ರಾನ್ಸ್ ಮುಂತಾದ ದೇಶಗಳಲ್ಲಿಯ ವೈಜ್ಞಾನಿಕ ಗ್ರಂಥಾಲಯಗಳಲ್ಲಿ ಸ್ವಯಂತ್ರೀಕರಣದ ವಿವಿಧ ಪ್ರಯೋಗಗಳು ನಡೆದಿವೆ. 1967ರಲ್ಲಿ ಅಮೆರಿಕದ ಲೈಬ್ರರಿ ಆಫ್ ಕಾಂಗ್ರೆಸ್‌ನಲ್ಲಿ ಯಂತ್ರವಾಚನ ಸೂಚಿಯ (ಮಷೀನ್ ರೀಡಬಲ್ ಕ್ಯಾಟಲಾಗ್) ಜಾಗತಿಕ ಯೋಜನೆ (ಮಾರ್ಕ್ ಪ್ರಾಜೆಕ್ಟ್) ರೂಪುಗೊಂಡಾಗಿನಿಂದ, ಗ್ರಂಥಾಲಯಗಳಲ್ಲಿ ಸ್ವಯಂತ್ರೀಕರಣದ ವ್ಯಾಪ್ತಿ ಹೆಚ್ಚಿದೆ. ಗ್ರಂಥಾಲಯಗಳಲ್ಲಿ ಅಂಕಗಣಕದ (ಡಿಜಿಟಲ್ ಕಂಪ್ಯೂಟರ್) ಬಳಕೆ ಈಗ ಹೆಚ್ಚುತ್ತಿದೆ.

ಓದುಗನ ಅಗತ್ಯಗಳನ್ನು ಗಣಕದ ಪರಿಭಾಷೆಯಲ್ಲಿ ಒದಗಿಸಿದರೆ ಅವನಿಗೆ ಅಗತ್ಯವಿದ್ದ ವಾಚನಸಾಮಗ್ರಿ ತಾನಾಗಿ ಅವನತ್ತ ಸಾಗಿಬರುತ್ತದೆ. ಗ್ರಂಥಾಲಯಗಳಲ್ಲಿ ಗಣಕದ ಸ್ಥಾಪನೆ, ಮೇಲ್ವಿಚಾರಣೆ ಇತ್ಯಾದಿಗಳು ಆಯಾ ಗ್ರಂಥಾಲಯಗಳ ಆರ್ಥಿಕ ಸ್ಥಿತಿ, ಅಗತ್ಯಗಳನ್ನವಲಂಬಿಸಿದೆ. ಪೂರ್ಣವಾಗಿ ಅಲ್ಲದಿದ್ದರೂ ಆಂಶಿಕವಾಗಿಯಾದರೂ ಗಣಕಗಳನ್ನು ಬಳಸಿ ಓದುಗರ ಅಗತ್ಯಗಳನ್ನು ಪೂರೈಸುವ ಕಾರ್ಯ ಪ್ರಪಂಚದ ಎಲ್ಲಾ ಪ್ರಮುಖ ಗ್ರಂಥಾಲಯಗಳಲ್ಲಿ ನಡೆದಿದೆ.

ಭಾರತದಲ್ಲಿ ಮೊಟ್ಟಮೊದಲಿಗೆ 1963–64ರಲ್ಲಿ ಕಾನ್ಪುರದ ಭಾರತೀಯ ತಾಂತ್ರಿಕ ಸಂಸ್ಥೆ (ಐ.ಐ.ಟಿ) ಮತ್ತು ಮುಂಬಯಿಯ ತಾತಾ ಮೂಲಭೂತ ಸಂಶೋಧನ ಸಂಸ್ಥೆಗಳ (ಟಿಐಎಫ್‌ಆರ್) ಗ್ರಂಥಾಲಯಗಳಲ್ಲಿ ಗಣಕಗಳನ್ನು ಬಳಸಲಾಯಿತು. ಅಲ್ಲದೆ ಟ್ರಾಂಬೆಯಲ್ಲಿಯ ಭಾಭಾ ಅಣುಸಂಶೋಧನ ಕೇಂದ್ರ (ಬಾರ್ಕ್), ಅಹಮದಾಬಾದಿನ ಭೌತಶಾಸ್ತ್ರ ಸಂಶೋಧನ ಪ್ರಯೋಗಾಲಯ (ಪಿಆರ್‌ಎಲ್), ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನ ಮಂಡಲಿ (ಸಿಎಸ್‌ಐಆರ್)– ಮುಂತಾದ ವಿವಿಧ ಸಂಸ್ಥೆಗಳ ಗ್ರಂಥಾಲಯಗಳು ತಮ್ಮ ಅಗತ್ಯಗಳಿಗೆ ಅನುಗುಣವಾಗಿ ಸ್ವಯಂತ್ರೀಕರಣದ ಕಾರ್ಯವನ್ನು ಕೈಕೊಂಡಿವೆ. ನವದೆಹಲಿಯಲ್ಲಿರುವ ಭಾರತ ರಾಷ್ಟ್ರೀಯ ವಿಜ್ಞಾನ ಮತ್ತು ಪ್ರಲೇಖನ ಕೇಂದ್ರ ಮತ್ತು ಬೆಂಗಳೂರಿನಲ್ಲಿರುವ ಪ್ರಲೇಖನ ಸಂಶೋಧನೆ ಮತ್ತು ತರಬೇತಿ ಕೇಂದ್ರಗಳಲ್ಲಿ (ಡಿಆರ್‌ಟಿಸಿ) ಗಣಕವನ್ನು ಬಳಸಿ ಸ್ವಯಂತ್ರೀಕರಣವನ್ನು ಹೇಗೆ ಸಾಧಿಸಬಹುದೆಂಬುದರ ಬಗ್ಗೆ ತರಬೇತಿಯನ್ನು ಕೊಡಲಾಗುತ್ತಿದೆ.

ಗ್ರಂಥಾಲಯದಲ್ಲಿ ಗಣಕದ ಅನ್ವಯ ಓದುಗರ ಬೇಡಿಕೆಯನ್ನೂ ಗ್ರಂಥಾಲಯದ ವಿವಿಧ ಸೇವೆಗಳ ಕಾರ್ಯದಕ್ಷತೆಯನ್ನು ಅಧಿಕಗೊಳಿಸುವುದನ್ನೂ ಕುರಿತಂತೆ ಇರುವ ವಿಚಾರ. ಸ್ವಯಂತ್ರೀಕರಣದಿಂದ ಓದುಗರ ಬೇಡಿಕೆಯ ಪೂರೈಕೆಯಲ್ಲಿ ಕಾಲದ ವಿಳಂಬ ಬಹಳಷ್ಟು ಕಡಿಮೆಯಾಗಿದೆ.

ವಿವಿಧ ವಿಷಯಗಳ ಸಂಬಂಧಿಸಿದಂತೆ ಮಾಹಿತಿಗಳ ಸಂಗ್ರಹಣೆ ಮತ್ತು ಪುನಸ್ಸಂಪಾದನೆಯಲ್ಲೂ (ಇನ್‌ಫರ್ಮೇಷನ್ ಸ್ಟೋರೇಜ್ ಅಂಡ್ ರಿಟ್ರೀವಲ್) ಗಣಕಗಳ ಉಪಯೋಗ ಬಹಳ. ಗ್ರಂಥಾಲಯದ ಪರಿಕರ್ಮಗಳಲ್ಲಿ ದಸ್ತಾವೇಜು ಸಂಸ್ಕರಣೆ, ಯಂತ್ರಾನುವಾದ, ಮಾಹಿತಿ ವಿಂಗಡನೆ ಹಾಗೂ ಶೋಧನ ಮತ್ತು ಸೂಚೀ ತಯಾರಿಕೆ–ಇವೆಲ್ಲವೂ ಸೇರುತ್ತವಾದ್ದರಿಂದ ಈ ಕೆಲಸಗಳ ನಿರ್ವಹಣೆಗೆ ಗಣಕದ ಬಳಕೆ ಹೆಚ್ಚು ಉಪಯುಕ್ತವೂ ಕಾಲವಿಳಂಬವನ್ನು ಕಡಿಮೆಮಾಡುವುದೂ ಆಗಿದೆ. ಈ ವಿಧಾನದ ಸೂಕ್ಷ್ಮ ಪರಿಚಯ ಇಲ್ಲಿ ಕೊಟ್ಟಿದೆ.



ಕಾಗದದ ಟೇಪು

ಪುಸ್ತಕ, ಪತ್ರಿಕಾಲೇಖನ ಹಾಗೂ ಇತರ ಕಡೆಗಳಲ್ಲಿಯ ವಾಚನಮಾಹಿತಿಯನ್ನು 8×18.5 ಸೆಂಮೀ ಆಕಾರದ ರಂಧ್ರಿತ ಕಾರ್ಡುಗಳ (ಪಂಚ್ಡ್ ಕಾರ್ಡ್ಸ್) ಮೇಲೆ ಮೊದಲು ಮೂಡಿಸಲಾಗುತ್ತದೆ. ಅನಂತರ ಅದನ್ನು ಕಾಗದದ ಅಥವಾ ಕಾಂತದ ಟೇಪುಗಳಲ್ಲಿ ಸಂಗ್ರಹಿಸಿಡಲಾಗುತ್ತದೆ. 2400 ಮೀ ಉದ್ದದ ಒಂದು ಟೇಪು ಒಂದು ಕೋಟಿಗಿಂತ ಹೆಚ್ಚು ಅಕ್ಷರಾದಿ ಸಂಜ್ಞೆಗಳನ್ನು ಒಳಗೊಳ್ಳಬಲ್ಲುದಾಗಿದೆ. ಸೂಕ್ತ ಕ್ರಮವಿಧಾಯಕದ (ಪ್ರೋಗ್ರಾಮ್) ಮೂಲಕ, ಬೇಕಾದ ವಿಷಯದ ಮೇಲಿನ ವಾಚನಸಾಮಗ್ರಿಯ ಪಟ್ಟಿಯನ್ನು ಗಣಕ ಪ್ರತ್ಯೇಕಿಸುತ್ತದೆ. ಬಳಿಕ ಅದರ ಮುದ್ರಿತರೂಪ ಕೆಲವೇ ಕ್ಷಣದಲ್ಲಿ ಓದುಗರಿಗೆ ಲಭಿಸುತ್ತದೆ. ಕಾಂತಟೇಪುಗಳಲ್ಲಿ

(ಮ್ಯಾಗ್ನೆಟಿಕ್ ಟೇಪ್ಸ್) ಆ ಮಾಹಿತಿಯನ್ನು ಸಮಗ್ರವಾಗಿ ಸಂಗ್ರಹಿಸಿಡುವ ಸಾಧ್ಯತೆ ಉಂಟು. ಗಣಕವಿರುವ ಸ್ಥಳ ಬಹುದೂರದಲ್ಲಿದ್ದರೂ ಗ್ರಂಥಾಲಯದಲ್ಲೇ ಕುಳಿತು ಅಗತ್ಯಗಳ ಬಗ್ಗೆ ಮಾಹಿತಿಯನ್ನು ಗಣಕಕ್ಕೆ ಒದಗಿಸುವ ಸಾಧ್ಯತೆ ಉಂಟು. ಓದುಗರಿಗೆ ಬೇಕಾದ ಮಾಹಿತಿಯನ್ನು ಟೆಲೆಕ್ಸ್ ಮಾದರಿಯ ವಿಶಿಷ್ಟ ಟೈಪ್‌ರೈಟರಿನ ಮೂಲಕ ಗಣಕಕ್ಕೆ ಉಣಿಸಿ, ಹೆಚ್ಚಿನ ಮಾಹಿತಿಯನ್ನು ನೇರವಾಗಿ ಮುದ್ರಿತ ರೂಪದಲ್ಲಾಗಲೀ ಟೆಲಿವಿಷನ್ ಮೂಲಕವಾಗಲೀ ಪಡೆಯುವ ಸೌಲಭ್ಯ ಕೆಲವು ಗ್ರಂಥಾಲಯಗಳಲ್ಲಿದೆ. ವಿತರಣೆ ಕಾರ್ಯವನ್ನು ಕೂಡ ಗಣಕದ ಸಹಾಯದಿಂದ ನಡೆಸಲು ಬರುತ್ತದೆ. ಗ್ರಂಥಾಲಯ ತರಿಸುವ ಪತ್ರಿಕೆಗಳ ದಾಖಲೆಯನ್ನು ಗಣಕಕ್ಕೆ ಒದಗಿಸಿದ್ದಾದರೆ, ಒಂದು ಪತ್ರಿಕೆಗೆ ಸಂಬಂಧಿಸಿದಂತೆ ಎಲ್ಲ ಮಾಹಿತಿಗಳೂ ತತ್‌ಕ್ಷಣದಲ್ಲೇ ಲಭ್ಯವಾಗುತ್ತದೆ. ಈ ಬಗೆಯ ಸ್ವಯಂತ್ರೀಕರಣದಿಂದ ಗ್ರಂಥಾಲಯದಲ್ಲಿನ ಸ್ಥಳಾಭಾವವೂ ಬಹುಮಟ್ಟಿಗೆ ನೀಗುತ್ತದೆ.

ಗ್ರಂಥಾಲಯಗಳಲ್ಲಿ ಸಹಕಾರಿ ಪದ್ಧತಿಯಿಂದ ಸ್ವಯಂತ್ರೀಕರಣದ ಹೆಚ್ಚಿನ ಪ್ರಯೋಜನ ಪಡೆಯುವುದು ಸಾಧ್ಯ. ಒಂದು ದೇಶದಲ್ಲಿಯ ಪ್ರತಿಯೊಂದು ಗ್ರಂಥಾಲಯದ ವಾಚನ ಸಂಪನ್ಮೂಲಗಳನ್ನು ಕೇಂದ್ರಿಯ ಗಣಕಯಂತ್ರಾಗಾರದಲ್ಲಿ ಶೇಖರಿಸಿ ಇಡಬೇಕು. ಈ

TATA INSTITUTE OF FUNDAMENTAL RESEARCH
LIBRARY
RECENT ADDITIONS DECEMBER, 1972

---

NOTE - x (NOT EQUAL TO) SIGN IS BEING USED IN PLACE OF INVERTED COMMAS

GENERAL

001,89135 (47056)
SPAEY, J. ET AL
SCIENCE FOR DEVELOPMENTS AN ESSAY ON THE ORIGIN AND ORGANIZATION OF NATIONAL SCIENCE POLICIES.
PARIS UNESCO 1971

058 YEARBOOKS, DIRECTORIES

058,7(54)R ( 47008)
SHAM LAL ( ED.)
TIMES OF INDIA DIRECTORY AND YEARBOOK INCLUDING WHOXS WHO. 1972
BOMBAY TIMES OF INDIA PR, 1972

ಗಣಕದಿಂದ ಮುದ್ರಿತವಾದ ಗ್ರಂಥಸೂಚಿಯ ಮಾದರಿ

ಕೇಂದ್ರ ಗಣಕಯಂತ್ರಾಗಾರ ಮತ್ತು ದೇಶದ ವಿವಿಧ ಗ್ರಂಥಾಲಯಗಳ ನಡುವೆ ಯಾಂತ್ರಿಕ ಸಂಪರ್ಕವಿದ್ದ ಪಕ್ಷಕ್ಕೆ ಯಾವುದೇ ಒಂದು ಮಾಹಿತಿ ಅಥವಾ ವಾಚನ ಸಾಮಗ್ರಿಯನ್ನು ಯಾವುದೇ ಪುಸ್ತಕ ಭಂಡಾರ ನೇರವಾಗಿ ಪಡೆಯಬಹುದು. ಯಂತ್ರವಾಚನ ಸೂಚಿ ಯೋಜನೆಯನ್ನು (MARC) ಸಹಕಾರಿ ತತ್ತ್ವದ ಮೇಲೆ ರೂಪಿಸಲಾಗಿದೆ. ಪ್ರಪಂಚದಲ್ಲಿ ಪ್ರಕಟವಾಗುವ ಹೊಸ ಪುಸ್ತಕಗಳ ಬಗ್ಗೆ ಮಾಹಿತಿಯನ್ನು ಅಮೆರಿಕದ ಲೈಬ್ರರಿ ಆಫ್ ಕಾಂಗ್ರೆಸ್‌ನಲ್ಲಿ ಸಿದ್ಧಗೊಳಿಸಲಾಗುತ್ತಿದ್ದು ಅದರ ಪ್ರಯೋಜನವನ್ನು ಅಮೆರಿಕದ ಗ್ರಂಥಾಲಯಗಳಲ್ಲದೆ ಯುರೋಪ್, ಏಷ್ಯಗಳಲ್ಲಿನ ಗ್ರಂಥಾಲಯಗಳೂ ಪಡೆಯುವಂತಾಗಿದೆ. ಇದೇ ರೀತಿ ಹಳೆಯ ಪತ್ರಿಕಾಸಂಪುಟಗಳ ಬಗ್ಗೆ ಮಾಹಿತಿಗಳು ಯಾವುದೇ ಒಂದು ಗ್ರಂಥಾಲಯದಲ್ಲಿದ್ದರೂ ಇತರ ಗ್ರಂಥಾಲಯಗಳು ಅವುಗಳ ಉಪಯೋಗ ಪಡೆದುಕೊಳ್ಳಲು ಅವುಗಳ ಲಭ್ಯತಾ ವಿವರಗಳು ಕೇಂದ್ರ ಗಣಕ ಯಂತ್ರಾಗಾರದಿಂದ ದೊರಕುವಂತೆಯೂ ವ್ಯವಸ್ಥೆಯಾದಲ್ಲಿ ಸ್ವಯಂತ್ರೀಕರಣದ ಸೇವಾಮಹತ್ತ್ವ ಹೆಚ್ಚುತ್ತದೆ.

ಗ್ರಂಥಾಲಯದಲ್ಲಿನ ಯಂತ್ರೀಕರಣ ಎಷ್ಟರಮಟ್ಟಿಗೆ ಶಿಕ್ಷಕರ, ಸಂಶೋಧಕರ, ಸಾರ್ವಜನಿಕರ, ಇನ್ನಿತರ ಅಗತ್ಯಗಳನ್ನು–ಆಲೇಖ್ಯಗಳ, ನಕ್ಷೆಗಳ, ಪುಸ್ತಕದ ಯಾವುದೇ ಒಂದು ಭಾಗದ, ಒಂದು ವಿಶಿಷ್ಟ ವಿಷಯದ, ಭೂಪಟಗಳ, ಇವೇ ಮೊದಲಾದ ಹಲವಾರು ವಿಷಯಗಳ ಪ್ರತಿಗಳನ್ನು–ಪೂರೈಸಲು ನೆರವಾಗಿದೆ ಮತ್ತು ಗ್ರಂಥಾಲಯಗಳಲ್ಲಿ ಕಾಣುವ ವಿವಿಧ ಬಗೆಯ ಯಂತ್ರಸಾಮಗ್ರಿಗಳು ಯಾವುವು ಎಂಬ ವಿಷಯವನ್ನು ಈ ಕೆಳಗೆ ಪ್ರಸ್ತಾಪಿಸಲಾಗಿದೆ. (ಎಸ್.ಎಚ್.)

**ರಿಪ್ರೋಗ್ರಫಿ :** ಆಲೇಖ್ಯ, ನಕ್ಷೆ, ಭೂಪಟ, ರೇಖಾಚಿತ್ರ, ಛಾಯಾಚಿತ್ರ, ವ್ಯವಹಾರಪತ್ರ, ಒಂದು ಪುಸ್ತಕ ಇಲ್ಲವೇ ನಿಯತಕಾಲಿಕೆಯಿಂದ ಆಯ್ದ ಯಾವುದೇ ಅಂಶ, ದಾಖಲೆ–ಇವೇ ಮುಂತಾದವುಗಳ ಛಾಯಾಚಿತ್ರ ಗ್ರಹಿಸಿ ತನ್ಮೂಲಕ ಪ್ರತಿಗಳನ್ನು ತಯಾರಿಸುವ ತಂತ್ರ. ಇಂಗ್ಲಿಷ್ ಭಾಷೆಯ ರಿಪ್ರೊಡಕ್ಷನ್ ಮತ್ತು ಫೋಟೋಗ್ರಫಿ ಎನ್ನುವ ಪದಗಳಿಂದ ಅನುಕ್ರಮವಾಗಿ ಪೂರ್ವಾರ್ಧವನ್ನೂ ಉತ್ತರಾರ್ಧವನ್ನೂ ಆಯ್ದು ಸಂಯೋಜಿಸಿ ತಯಾರಿಸಿದ ಪದವಿದು. ರಿಪ್ರೋಗ್ರಫಿ ತಂತ್ರಕ್ಕೆ ಸಂಬಂಧಿಸಿದಂತೆ ಕರಡುಗಳ ತಯಾರಿಕೆ, ಆಲೇಖ್ಯರಚನೆ, ಯಂತ್ರನಿರ್ಮಾಣ, ಪ್ರತಿಗಳ ತಯಾರಿಕೆ ಮೊದಲಾದವುಗಳ ಶಾಸ್ತ್ರೀಯ ಅಭ್ಯಾಸಕ್ಕೆ ರಿಪ್ರೋಗ್ರಫಿಕ್ಸ್ ಎಂದು ಹೆಸರು. ದೊಡ್ಡ ಕಾರ್ಖಾನೆಗಳು, ಕಚೇರಿಗಳು, ವಿದ್ಯಾಸಂಸ್ಥೆಗಳು, ಗ್ರಂಥಭಂಡಾರಗಳು, ತಾಂತ್ರಿಕ ಸಂಸ್ಥೆಗಳು ಮುಂತಾದೆಡೆಗಳಲ್ಲಿ ರಿಪ್ರೋಗ್ರಫಿ ತಂತ್ರದ ಉಪಯುಕ್ತತೆ ಕಂಡುಬಂದಿದೆ.

ಲೋಹದ ಅಥವಾ ಮರದ ಒಂದು ಉರುಳೆಯ ಮೇಲೆ ವಿಪರ್ಯಯ ಅಕ್ಷರಗಳನ್ನು ಕೆತ್ತಿ, ಉರುಳೆಯನ್ನು ಮೆತ್ತಗಿನ ಜೇಡಿಮಣ್ಣಿನ ಹಲಗೆಯ ಮೇಲೆ ಹೊರಳಿಸಿದಾಗ ನೇರ ಅಕ್ಷರ ಮುದ್ರೆಗಳು ಹಲಗೆಯ ಮೇಲೆ ಮೂಡುತ್ತವೆ. ಬಳಿಕ ಜೇಡಿಮಣ್ಣಿನ ಹಲಗೆಯನ್ನು ಬಿಸಿಲಿನಲ್ಲಿ ಒಣಗಿಸಿ ಪ್ರತಿಯನ್ನು ಪಡೆಯಬಹುದು. ಎಷ್ಟೆಷ್ಟು ಪ್ರತಿಗಳು ಬೇಕೋ ಅಷ್ಟಷ್ಟು ಜೇಡಿಮಣ್ಣಿನ ಹಲಗೆಯನ್ನು ಮಾಡಿಕೊಳ್ಳುವುದು, ಉರುಳೆಯನ್ನು ಹೊರಳಿಸುವುದು, ಒಣಗಿಸುವುದು ಈ ಕ್ರಮ ಬಲು ಹಿಂದೆ ರೂಢಿಯಲ್ಲಿತ್ತು.

ಕಾರ್ಬನ್ ನಕಲೆತ್ತುವಿಕೆ : ಎರಡು ಬಿಳಿಯ ಹಾಳೆಗಳ ನಡುವೆ ಒಂದು ಕಾರ್ಬನ್ ಕಾಗದವನ್ನಿರಿಸಿ, ಮೇಲಿನ ಬಿಳಿಯ ಹಾಳೆಯ ಮೇಲೆ ಚಿತ್ರಗಳನ್ನೋ ಅಕ್ಷರಗಳನ್ನೋ ಬರೆದಾಗ ಅವುಗಳ ಪ್ರತಿಕೃತಿ ಕೆಳಗಿನ ಬಿಳಿಯ ಕಾಗದದ ಮೇಲೆ ಮೂಡುತ್ತದೆ. ಈ ಕ್ರಮದಲ್ಲಿ ದೊರೆಯುವ ಪ್ರತಿಗಳ ಸಂಖ್ಯೆಗೆ ಒಂದು ಮಿತಿ ಉಂಟು. ಬರೆಯುವವ ಮೇಲಿನ ಕಾಗದದ ಮೇಲೆ ಹಾಕುವ ಒತ್ತಡ, ಕೆಳಗಿರಬಹುದಾದ ಬಿಳಿಯ ಕಾಗದಗಳ ಸಂಖ್ಯೆ ಹಾಗೂ ದಪ್ಪ ಕಾರ್ಬನ್ ಕಾಗದದ ಯೋಗ್ಯತೆ–ಇವನ್ನು ಆಧರಿಸಿ ಈ ಸಂಖ್ಯೆ ವ್ಯತ್ಯಾಸವಾಗುತ್ತದೆ. ಬೆರಳಚ್ಚು ಯಂತ್ರದಿಂದ ಕಾರ್ಬನ್ ಪ್ರತಿಗಳನ್ನು ಪಡೆಯುವಲ್ಲಿಯೂ ಮೂಲಭೂತ ತತ್ತ್ವ ಇದೇ. ಇಲ್ಲಿಯೂ ದೊರೆಯುವ ಸ್ಫುಟಪ್ರತಿಗಳ ಸಂಖ್ಯೆಗೆ ಮಿತಿಯಿರುವ ಕಾರಣ ಹೆಚ್ಚು ಪ್ರತಿಗಳು ಬೇಕಾದಾಗ ಒಂದು ಪಾರದೀಪಕ ಹಾಳೆಯ ಮೇಲೆ ಬೆರಳಚ್ಚು ಯಂತ್ರದಿಂದ ವಿಷಯದ ಮಾದರಿ ಪ್ರತಿಯನ್ನು (ಮಾಸ್ಟರ್ ಕಾಪಿ) ತಯಾರಿಸಿಕೊಂಡು ನಕಲುಯಂತ್ರದ ಸಹಾಯದಿಂದ ಬೇಕಾದಷ್ಟು ಪ್ರತಿಗಳನ್ನು ಪಡೆಯಬಹುದು. ಪಾರದೀಪಕ ಹಾಳೆ ಎನ್ನುವುದೊಂದು ಕೊರೆಯಚ್ಚು ಕಾಗದ (ಸ್ಟೆನ್ಸಿಲ್ ಪೇಪರ್). ಇದರ ಮೇಲೆ ಕೊರೆಲೇಖನಿಯಿಂದ (ಸ್ಟೈಲಸ್) ಬರೆಯುವುದು ಸಾಧ್ಯ. ಈ ವಿಧಾನದಿಂದ ಸುಮಾರು 5,000ದಷ್ಟು ಸ್ಫುಟಪ್ರತಿಗಳನ್ನು ತೆಗೆಯಲು ಬರುತ್ತದೆ (**ನೋಡಿ – ಕಚೇರಿಯ ಯಂತ್ರೋಪಕರಣಗಳು; ಕೊರೆಯಚ್ಚು ಮುದ್ರಣ**).

ರಿಪ್ರೋಗ್ರಫಿಯ ಬೇರೆ ವಿಧಾನಗಳನ್ನು ಮುಂದೆ ಸಂಕ್ಷೇಪವಾಗಿ ತಿಳಿಸಿದೆ.

ಛಾಯಾಗ್ರಹಣ ತಂತ್ರ್ಯಾಧಾರಿತ ವಿಧಾನಗಳು : ಒಂದು ಚಿತ್ರದ ಅಥವಾ ಒಂದು ವಿಷಯದ ಮೂಲಪ್ರತಿ ಛಾಯಾಚಿತ್ರಿಸಿಕೊಂಡರೆ ಸೂಕ್ಷ್ಮಗ್ರಾಹಿ ಹಾಳೆಯ (ಸೆನ್ಸಿಟಿವ್ ಫಿಲ್ಮ್) ಮೇಲೆ ಮೂಡಿದ ವಾಸ್ತವಿಕ ನಕಲು ದೊರೆಯುತ್ತದೆ. ಇದನ್ನು ಛಾಯಾಚಿತ್ರ ವಿಧಾನದ ವಿವಿಧ ಸಂಸ್ಕರಣೆಗಳಿಗೆ ಒಳಪಡಿಸಿ ಅಗತ್ಯವಿದ್ದಷ್ಟು ಮುದ್ರಿತ ಪ್ರತಿಗಳನ್ನು ಪಡೆಯಬಹುದು. ಈ ವಿಧಾನವನ್ನು ಐದು ವಿಧಗಳಾಗಿ ವಿಂಗಡಿಸಲಾಗಿದೆ. (i) ನೀಲನಕಾಶೆ (ಬ್ಲೂಪ್ರಿಂಟ್) ವಿಧಾನ, (ii) ಡೈಆಝೋ ವಿಧಾನ, (iii) ಪ್ರಸರಣೆ–ವರ್ಗಾವಣೆ ವಿಧಾನ, (iv) ಉಷ್ಣಲೇಖೀಯ ವಿಧಾನ, (v) ವಿದ್ಯುಚ್ಛಾಯಾಗ್ರಹಣ ವಿಧಾನ.

(i) ನೀಲನಕಾಶೆ ವಿಧಾನ : ನಕ್ಷೆ ಅಥವಾ ರೇಖಾಚಿತ್ರದ ಮೂಲಪ್ರತಿಯನ್ನು ಒಂದು ಟ್ರಾನ್ಸ್‌ಲ್ಯೂಸೆಂಟ್ ಹಾಳೆಯ ಮೇಲೆ ಮೊದಲು ನಮೂದಿಸಿಕೊಳ್ಳಲಾಗುತ್ತದೆ. ಇದು ಸಾಮಾನ್ಯವಾಗಿ ರೇಖಿಸುವ ಬಟ್ಟೆಯೋ ಇಲ್ಲವೇ ಕಾಗದವೋ ಅಥವಾ ನಾರಗಸೆಯ ಬಟ್ಟೆಯೋ ಆಗಿರಬಹುದು. ಇದನ್ನು ಫೆರ್ರೋಪ್ರಸ್ಸಿಯೇಟ್ ಎಂಬ ರಾಸಾಯನಿಕ ದ್ರಾವಣವನ್ನು ಲೇಪಿಸಿರುವ ಸೂಕ್ಷ್ಮಗ್ರಾಹಿ ಕಾಗದದ ಮೇಲೆ ಇಡಲಾಗುತ್ತದೆ. ಅನಂತರ ಬೆಳಕಿನ ಕಿರಣಗಳನ್ನು ಒಂದು ನಿರ್ದಿಷ್ಟ ಅವಧಿಗೆ ಹಾಳೆಯ ಮೇಲೆ ಹಾಯಿಸಲಾಗುತ್ತದೆ. ಸೂಕ್ಷ್ಮಗ್ರಾಹಿ ಕಾಗದದ ಕೆಲವು ಭಾಗಗಳು ಮಾತ್ರ ನಕ್ಷೆಯ ಪ್ರತಿರೂಪವನ್ನು ಬೆಳೆಸಿಕೊಳ್ಳುತ್ತವೆ. ಅನಂತರ ಈ ಸೂಕ್ಷ್ಮಗ್ರಾಹಿ ಕಾಗದವನ್ನು ಅಮೋನಿಯ ಅನಿಲದ ಆವಿಗೆ ಕೆಲವು ಮಿನಿಟುಗಳ ಕಾಲ ಒಡ್ಡಿದರೆ ನಕ್ಷೆ ಮೂಡಿದ ಭಾಗಗಳು ನೀಲಿ ಬಣ್ಣದಿಂದ ಗೋಚರಿಸುತ್ತವೆ. ಇದರಿಂದ ಮೂಡಿಬಂದ ಚಿತ್ರವನ್ನು ಬ್ಲೂಪ್ರಿಂಟ್ ಎಂದೂ ಕರೆಯುವುದಿದೆ. ಇದಕ್ಕೆ ಫೆರ್ರೋಪ್ರಸ್ಸಿಯೇಟ್ ವಿಧಾನ ಎಂದೂ ಹೆಸರಿದೆ.

(ii) ಬ್ಲೂಪ್ರಿಂಟ್ ವಿಧಾನವನ್ನೇ ಬಹುಮಟ್ಟಿಗೆ ಹೋಲುವ ಡೈಆಜೋ ವಿಧಾನದಲ್ಲಿ ಡೈಆಝೋ ರಸಾಯನಕ್ರಿಯೆಗೊಳಪಟ್ಟ ಸೂಕ್ಷ್ಮಗ್ರಾಹಿ ಕಾಗದದ ಉಪಯೋಗ ಉಂಟು. ಬಿಳಿಯ ಕಾಗದದ ಮೇಲೆ ಕಪ್ಪು ಮಿಶ್ರಿತ ನೀಲಿಬಣ್ಣದ ನಕಲು ಸಿದ್ಧಗೊಳ್ಳುತ್ತದೆ.

(iii) ಪ್ರಸರಣೆ–ವರ್ಗಾವಣೆ ವಿಧಾನ : ಜರ್ಮನಿಯ ಆಗ್ಫ ಮತ್ತು ಬೆಲ್ಜಿಯಮಿನ ಗೇವರ್ಟ್ ಸಂಸ್ಥೆಗಳು ಈ ವಿಧಾನವನ್ನು ಮೊಟ್ಟಮೊದಲಿಗೆ ಯುರೋಪಿನಲ್ಲಿ ಬಳಸಿದುವು.

ಯಾವುದೇ ಬಗೆಯ ಮೂಲಪ್ರತಿಯನ್ನಾದರೂ ಈ ವಿಧಾನದಿಂದ ನಕಲಿಸಬಹುದು. ಚಿನ್ನದ ಹಾಲೈಡನ್ನು ಲೇಪಿಸಿರುವ ಹಾಳೆಯನ್ನುಪಯೋಗಿಸಿ ಸೂಕ್ಷ್ಮಗ್ರಾಹಿ ವಿಷಮ ಪ್ರತಿಯ ನಕಲಚ್ಚನ್ನು ಮೊದಲು ತಯಾರಿಸಿಕೊಳ್ಳಲಾಗುತ್ತದೆ. ಈ ವಿಷಮಪ್ರತಿಯ ಒಂದು ಪಾರ್ಶ್ವದಲ್ಲಿ ಮೂಲಪ್ರತಿಯನ್ನು ಇಟ್ಟು ಮತ್ತೊಂದು ಪಾರ್ಶ್ವಕ್ಕೆ ಅಸೂಕ್ಷ್ಮಗ್ರಾಹಿ ಧನಕಾಗದದ ಹಾಳೆಯನ್ನು ಇಡಲಾಗುತ್ತದೆ. ಅನಂತರ ಬೆಳಕಿನ ಕಿರಣಗಳನ್ನು ವಿಷಮಹಾಳೆಯ ಮೂಲಕ ಹಾಯಿಸಿದಾಗ, ಕಿರಣಗಳು ಮೂಲಪ್ರತಿಯ ಮೇಲ್ಮೈಯಿಂದ ಪ್ರತಿಫಲಿತಗೊಳ್ಳುತ್ತವೆ. ವಿಷಮ ಪ್ರತಿಯ ಕೆಲವು ಅಂಶಗಳು ಮಾತ್ರ ಧನಕಾಗದಕ್ಕೆ ವರ್ಗಾವಣೆಯಾಗುತ್ತವಾಗಿ ಮೂಲ ಚಿತ್ರದ ಬಿಂಬ ಮೂಡುತ್ತದೆ. ಈ ವಿಧಾನವನ್ನನುಸರಿಸಿ ತಯಾರಿಸಿದ ಧನಪ್ರತಿಗಳನ್ನು ಬಹಳ ಕಾಲದವರೆಗೆ ಸಂಗ್ರಹಿಸಿಡಬಹುದು.

ಪಾರದೀಪಕ ಅಚ್ಚೊತ್ತಿಗೆಯನ್ನು (ಟ್ರಾನ್ಸ್‌ಲ್ಯೂಸೆಂಟ್ ಮ್ಯಾಟ್ರಿಕ್ಸ್) ತಯಾರಿಸಿ ಡೈಆಫ್ಲೋ ವಿಧಾನವನ್ನು ಬಳಸಿಕೊಂಡು ಪ್ರತಿಗಳನ್ನು ತೆಗೆಯುವ ಆಫ್ಲೋಫ್ಲೆಕ್ಸ್ ಎಂಬ ವಿಧಾನವೂ ಉಂಟು. ಇದನ್ನು ಮೊದಲಿಗೆ ವ್ಯಾನ್ ಡರ್ ಗ್ರಿಂಟನ್ ಎಂಬಾತ ಹಾಲೆಂಡಿನಲ್ಲಿ ಬಳಸಿದ.

ಆಗ್ಫ ಮತ್ತು ಗೇವರ್ಟ್ ಸಂಸ್ಥೆಗಳು ಬಳಕೆಗೆ ತಂದ ವೆರಿಫ್ಯಾಕ್ಸ್ ವಿಧಾನದಲ್ಲಿ ಅಚ್ಚೊತ್ತಿಕೆ ಸಿಲ್ವರ್ ಹಾಲೈಡಿನಿಂದ ಕೂಡಿರುವ ಬಣ್ಣದ ಎಮಲ್ಷನ್ನಿನಿಂದ ಲೇಪಿತವಾಗಿರುತ್ತದೆ. ಈ ಅಚ್ಚೊತ್ತಿಕೆಯಿಂದ ಸೂಕ್ಷ್ಮಗ್ರಾಹಕ ವಿಷಮಪ್ರತಿಯನ್ನು ತಯಾರಿಸುತ್ತಾರೆ. ಈ ಪ್ರತಿಯನ್ನು ಧನಕಾಗದದ ಸಂಪರ್ಕದಲ್ಲಿ ಇಟ್ಟಾಗ ಅಚ್ಚೊತ್ತಿಕೆಯ ಬಣ್ಣದ ಎಮಲ್ಷನ್ನಿನ ಭಾಗಗಳು ಮೂಲಪ್ರತಿಯ ಬಿಂಬವನ್ನು ಧನಕಾಗದಕ್ಕೆ ವರ್ಗಾಯಿಸುತ್ತವೆ. ಈ ವಿಧಾನದಿಂದ ಐದು ಪ್ರತಿಗಳನ್ನು ತೆಗೆಯಬಹುದು.

(iii) ಉಷ್ಣಲೇಖೀಯ ವಿಧಾನ : ಉಷ್ಣವನ್ನು ಹೀರಿಕೊಳ್ಳುವ ಒಂದು ವಿಶೇಷ ಕಾಗದದ (ಉಷ್ಣಗ್ರಾಹಿ) ಮೇಲೆ ಮೂಲಪ್ರತಿಯನ್ನು ಇಟ್ಟು, ಅದರ ಮೇಲೆ ಅತಿರಕ್ತ (ಇನ್‌ಫ್ರಾ ರೆಡ್) ಕಿರಣಗಳನ್ನು ಹಾಯಿಸಿದಾಗ ಉಷ್ಣಸಹಿತವಾಗಿರುವ ಈ ಕಿರಣಗಳು ಮೂಲಪ್ರತಿಯ ಮೂಲಕ ಹಾದು, ಉಷ್ಣಗ್ರಾಹಿ ಕಾಗದದ ಮೇಲೆ ಮೂಲದ ತದ್ವತ್ ಬಿಂಬ ಮೂಡುತ್ತದೆ. ಹೀಗಾಗಿ ಮೂಲದ ನಕಲು ತಯಾರಾಗುತ್ತದೆ. ಇದನ್ನು ಥರ್ಮೋಫ್ಯಾಕ್ಸ್ ವಿಧಾನವೆಂತಲೂ ಕರೆಯುವುದಿದೆ.

ವಿಷಮ-ಧನ ಪ್ರತಿಫಲನ ವಿಧಾನವನ್ನನುಸರಿಸಿ ನಕಲನ್ನು ತೆಗೆಯುವ ಸಿಲ್ವರ್ ನಕಲಿಸುವ ವಿಧಾನವೂ ಉಂಟು.

(iv) ವಿದ್ಯುಚ್ಛಾಯಾಗ್ರಹಣ ವಿಧಾನಗಳು: ಬೆಳಕಿಗೆ ಗ್ರಾಹ್ಯವಾದ ಕೆಲವಾರು ಧಾತುಗಳ ಎಮಲ್ಷನ್ನಿನ ಲೇಪನವುಳ್ಳ ಫಲಕದ್ದೊ ಅಥವಾ ಉರುಳೆಯದೊ ನಕಲಚ್ಚುಗಳನ್ನು (ಇಂಟರ್ ಮೀಡಿಯೇಟ್ ಮಾಸ್ಟರ್) ತಯಾರಿಸಿ ಅನಂತರ ಸಾಧಾರಣ ಇಲ್ಲವೇ ಸೂಕ್ಷ್ಮಗ್ರಾಹಿ ಕಾಗದದ ಮೇಲೆ ನಕಲನ್ನು ತೆಗೆಯುತ್ತಾರೆ. ಎಲೆಕ್ಟ್ರೋಫ್ಯಾಕ್ಸ್ ಎಂದೆನ್ನುವ ಒಂದು ವಿಧಾನದಲ್ಲಿ ನಕಲೆತ್ತುವ ಕಾಗದ ಸ್ಥಿರವಿದ್ಯುದಾವೇಶವನ್ನು ಹೊಂದಿರುತ್ತದೆ. ಫೋಟೋನಿಕ್ ರಿಪ್ರೊಡ್ಯೂಸರ್ ಎಂಬ ಮತ್ತೊಂದು ವಿಧಾನದಲ್ಲಿ ಲೋಹದ ತೆಳುಪೊರೆಯ ಮೇಲೆ ಮೂಲಪ್ರತಿಯ ಸ್ಥಿರವಿದ್ಯುತ್‌ಬಿಂಬವನ್ನು ಮೂಡಿಸಿ ಪ್ರತಿಯ ನಕಲನ್ನು ತೆಗೆಯುತ್ತಾರೆ.

ಫೋಟೋಸ್ಟ್ಯಾಟ್ ವಿಧಾನ : ಫೋಟೋಸ್ಟ್ಯಾಟ್ ಎಂಬ ಪದ ಒಂದು ನಿರ್ದಿಷ್ಟ ಉಪಕರಣದ ಮತ್ತು ಈ ವಿಧಾನವನ್ನನುಸರಿಸಿ ತಯಾರಾದ ಪ್ರತಿಗಳಿಗಿರುವ ಒಂದು ವ್ಯಾವಹಾರಿಕ ಹೆಸರು ಮಾತ್ರ. ದಸ್ತಾವೇಜು ಮುಂತಾದ ದಾಖಲೆಗಳ ಪ್ರತಿಗಳನ್ನು ತಯಾರಿಸುವಲ್ಲಿ ಈ ವಿಧಾನದ ಬಳಕೆ ಉಂಟು.

ಈ ವಿಧಾನದ ಯಂತ್ರಸಲಕರಣೆಯ ಭಾಗಗಳು ಹೀಗಿವೆ. ಒಂದು ದೊಡ್ಡ ಕ್ಯಾಮೆರ. ಇದರ ಮಸೂರಕ್ಕೆ ಒಂದು ಆಶ್ರಕೀಯ ಕನ್ನಡಿಯನ್ನು ಹೊಂದಿಸಿರಲಾಗುತ್ತದೆ. ಈ ಕ್ಯಾಮೆರದಲ್ಲಿ 350' ಉದ್ದದ ಸೂಕ್ಷ್ಮಗ್ರಾಹಿ ಕಾಗದದ ಸುರುಳಿ ಇರಲು ಅವಕಾಶವುಂಟು. ಮೂಲಪ್ರತಿಯನ್ನು ಕ್ಯಾಮರದ ಮಸೂರದ ಅಡಿಯಲ್ಲಿಟ್ಟು ಪ್ರತಿಯ ಮೇಲೆ ಪ್ರಕಾಶಮಾನವಾದ ಬೆಳಕನ್ನು ಹಾಯಿಸಿದಾಗ, ಮೂಲಚಿತ್ರದ ವಿಪರ್ಯಯ ಬಿಂಬ ಸೂಕ್ಷ್ಮಗ್ರಾಹಿ ಕಾಗದದ ಮೇಲೆ ಬೀಳುತ್ತದೆ. ಈ ಬಿಂಬವನ್ನು ಕನ್ನಡಿ ಅವಿಪರ್ಯಯಗೊಳಿಸುತ್ತದೆ. ಈ ಸೂಕ್ಷ್ಮಗ್ರಾಹಿ ಕಾಗದವನ್ನು ಹೊರತೆಗೆದು ಛಾಯಾಚಿತ್ರ ಗ್ರಹಣದ ಸಂಸ್ಕರಣೆಗಳಿಗೆ ಒಳಪಡಿಸುತ್ತಾರೆ. ಓದಲು ಸಾಧ್ಯವಾಗುವಂಥ ವಿಷಮಪ್ರತಿ ತಯಾರಾಗುತ್ತದೆ. ಇದನ್ನು ಫೋಟೋಸ್ಟ್ಯಾಟ್ ಯಂತ್ರಕ್ಕೆ ಕೊಟ್ಟು ಮೂಲಪ್ರತಿಯ ಪ್ರತಿಕೃತಿಯನ್ನು ಪಡೆಯಲಾಗುತ್ತದೆ. ಯಂತ್ರದ ಪರಿಮಿತಿಗಳಿಗೆ ಅನುಗುಣವಾಗಿ ವಿಸ್ತರಿತ ಪ್ರತಿಗಳನ್ನು ಪಡೆಯಲು ಸಾಧ್ಯವಿದೆ. ಪೆಡೆಸ್ಟಲ್ ಮತ್ತು ವಾಲ್ ಎಂಬ ಎರಡು ಬಗೆಯ ಫೋಟೋಸ್ಟ್ಯಾಟ್ ಯಂತ್ರಗಳು ಸಾಮಾನ್ಯವಾಗಿ ಬಳಕೆಯಲ್ಲಿವೆ. ಇವೆರಡರಲ್ಲೂ 18" ಅಗಲದ ಸುರುಳಿಗಳನ್ನು ಬಳಸಬಹುದು. 40×30 ಇಂಚು ಉದ್ದಗಲದ ದಾಖಲೆಗಳ 18×24 ಇಂಚು ಉದ್ದಗಲದ ಪ್ರತಿಗಳನ್ನು ಈ ಯಂತ್ರದಿಂದ ಪಡೆಯಬಹುದು.

ಜೀರೋಗ್ರಫಿ ವಿಧಾನ : ಬಿಂಬಪ್ರತೀಕರಣದ ವೈದ್ಯುತ ಮತ್ತು ಯಾಂತ್ರಿಕ ವಿಧಾನ ಇದು. ಈ ವಿಧಾನದಲ್ಲಿ ರಾಸಾಯನಿಕಗಳಾವುವೂ ಇರವು. ಆದ್ದರಿಂದಲೇ ಇದನ್ನು ಶುಷ್ಕ ವಿಧಾನವೆಂದೂ ಕರೆಯುವುದಿದೆ. ಛಾಯಾಗ್ರಾಹೀಪಟಲವೆಂದೆನಿಸುವ ಹಾಳೆಯ ಮೇಲ್ಮೈಗೆ ಧನವಿದ್ಯುದಾವೇಶವನ್ನು ಒದಗಿಸಲಾಗುತ್ತದೆ. ಕ್ಯಾಮರಾದಿಂದ ಛಾಯಾಗ್ರಹಿಸುವಂತೆಯೇ ಈ ಗ್ರಾಹೀಪಟಲವನ್ನು ಕ್ಯಾಮರದೊಳಗೆ ಅಳವಡಿಸಿ ಮೂಲಪ್ರತಿಯನ್ನು ಛಾಯಾಚಿತ್ರಿಸಿ ಕೊಳ್ಳಲಾಗುತ್ತದೆ. ಮೂಲಪ್ರತಿಯಿಂದ ಬೆಳಕಿನ ಕಿರಣಗಳು ಗ್ರಾಹಕಪಟಲವನ್ನು ಮುಟ್ಟಿದಾಗ ಬಿಂಬ ಬಿದ್ದ ಜಾಗದಲ್ಲಿ ಮಾತ್ರ ಧನ ಆವೇಶಗಳು ಅದೃಶ್ಯವಾಗಿ ಉಳಿದ ಜಾಗದಲ್ಲಿ ಇವು ಉಳಿಯುತ್ತವೆ. ಇದರಿಂದಾಗಿ ಮೂಲಪ್ರತಿಯ ತದ್ವತ್ ಗುಪ್ತಬಿಂಬಗ್ರಾಹೀ ಪಟಲದ ಮೇಲೆ ಮೂಡುತ್ತದೆ. ಋಣ ವಿದ್ಯುದಾವಿಷ್ಟ ಪುಡಿಯನ್ನು ಈ ಪಟಲದ ಮೇಲೆ ಲೇಪಿಸಿದರೆ ಮೂಡಿದ ಬಿಂಬಕ್ಕೆ ಆ ಪುಡಿ ಅಂಟಿಕೊಂಡು ಬಿಂಬ ಸ್ಫುಟವಾಗುತ್ತದೆ. ಪುಡಿಸಂಸ್ಕರಣೆಯನ್ನು ಮಾಡಿದ ಬಳಿಕ ಈ ಗ್ರಾಹೀಪಟಲದ ಮೇಲೆ ಒಂದು ಕಾಗದದ ಹಾಳೆಯನ್ನಿರಿಸಿದಾಗ ಧನವಿದ್ಯುದಾವೇಶಗಳನ್ನು ಅದು ಪಡೆಯುತ್ತದೆ. ಧನವಿದ್ಯುದಾವಿಷ್ಟ ಕಾಗದದ ಹಾಳೆ ಪುಡಿಯನ್ನು ಆಕರ್ಷಿಸಿಕೊಳ್ಳುವುದರಿಂದ ಕಾಗದದ ಮೇಲೆ ಧನಬಿಂಬ ಮೂಡುತ್ತದೆ. ಧನಬಿಂಬದ ಮುದ್ರಿತ ಹಾಳೆಯನ್ನು ಉಷ್ಣವಿಸರಣಕಾರಿಗೆ (ಹೀಟ್ ರೇಡಿಯೇಟರ್) ಒಡ್ಡಿದಾಗ ಪುಡಿ ಕಾಗದದ ಮೇಲೆ ಚೆನ್ನಾಗಿ ಅಂಟಿಕೊಂಡು ಶಾಶ್ವತಪ್ರತಿ ಲಭಿಸುತ್ತದೆ.

ಎಲೆಕ್ಟ್ರೊಫ್ಯಾಕ್ಸ್ ವಿಧಾನ, ಫೋಟ್ರೋನಿಕ್ ವಿಧಾನ, ಡೈಲೈನ್ ಕ್ರಮ, ಹೆಕ್ಟೊಗ್ರಾಫಿಕ್ ವಿಧಾನ, ಡೈರೆಕ್ಟ್ ಮತ್ತು ಆಫ್‌ಸೆಟ್ ಲಿಥೋಗ್ರಫಿ ಮುಂತಾದವು ಪ್ರತೀಕರಣದಲ್ಲಿ ಬಳಕೆಯಲ್ಲಿರುವ ಇನ್ನಿತರ ಪ್ರಕ್ರಮಗಳು. (ಎಸಿಎಚ್.)

## VII ಗ್ರಂಥಾಲಯದ ಸಂಘಗಳು

ಗ್ರಂಥಾಲಯಗಳ ಬೆಳೆವಣಿಗೆಯಲ್ಲಿ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಸಂಘಗಳ ಪಾತ್ರ ಹಿರಿದು. ಗ್ರಂಥಾಲಯಗಳಿಗೆ ಸಂಬಂಧಿಸಿದಂತೆ ಮೂಲಭೂತ ತೊಂದರೆಗಳನ್ನು ನಿವಾರಿಸುವಲ್ಲಿ, ರಾಷ್ಟ್ರೀಯವಾಗಿ ಹಾಗೂ ಅಂತಾರಾಷ್ಟ್ರೀಯವಾಗಿ ಗ್ರಂಥಾಲಯಗಳ ವ್ಯಹಾರಗಳಲ್ಲಿ ಏಕತೆಯನ್ನು ತರುವಲ್ಲಿ, ಗ್ರಂಥಾಲಯಗಳ ಮೂಲೋದ್ದೇಶಗಳನ್ನು ಶೀಘ್ರವಾಗಿ ನೆರವೇರಿಸುವಲ್ಲಿ ಈ ಸಂಘಗಳು ಸಾಕಷ್ಟು ಶ್ರಮಿಸಿವೆ. ವಿಶ್ವಸಂಸ್ಥೆಯ ಅಂಗವಾದ ಯುನೆಸ್ಕೊ ಇಂಥ ಸಂಸ್ಥೆಗಳಲ್ಲೊಂದು. ಅಂತಾರಾಷ್ಟ್ರೀಯ ಗ್ರಂಥಾಲಯಗಳ ಸಂಯುಕ್ತ ಮಹಾಸಂಘವೊಂದಿದೆ. ಇಂಥ ಸಂಘಗಳ ಪರಿಚಯವನ್ನು ಇಲ್ಲಿ ಕೊಡಲಾಗಿದೆ.

**1. ಯುನೆಸ್ಕೊ ಮತ್ತು ಗ್ರಂಥಾಲಯಗಳ ಅಭಿವೃದ್ಧಿ :** ವಿಶ್ವಸಂಸ್ಥೆಯ 14 ಅಂಗಸಂಸ್ಥೆಗಳಲ್ಲಿ ಒಂದಾದ ಯುನೆಸ್ಕೊ 1946ರ ನವೆಂಬರ್ 4ರಂದು ಅಸ್ತಿತ್ವಕ್ಕೆ ಬಂತು. ಶಿಕ್ಷಣ, ವಿಜ್ಞಾನ, ಸಂಸ್ಕೃತಿಗಳ ಬೆಳೆವಣಿಗೆಗೆ ಹಾಗೂ ಜ್ಞಾನಪ್ರಸಾರಗಳಲ್ಲಿ ನೆರವಾಗಲು ಇದನ್ನು ರೂಪಿಸಲಾಯಿತು. ಇದರ ಕಾರ್ಯವ್ಯಾಪ್ತಿ ನಾನಾ ರಾಷ್ಟ್ರಗಳನ್ನು ಒಳಗೊಂಡಿದೆ. ಅಂತಾರಾಷ್ಟ್ರೀಯ ಸಹಕಾರದಿಂದ ನಾನಾ ಭಾಷೆಗಳ ಮಾಧ್ಯಮದಲ್ಲಿ ಇದರ ಕಾರ್ಯ ನಡೆಯುತ್ತ ಬಂದಿದೆ. ಪರಸ್ಪರ ಅರಿವು, ಅಭಿವೃದ್ಧಿಯನ್ನು ಸಾಧಿಸಲು ಸಾಕ್ಷರತೆ ಅವಶ್ಯವೆಂದು ಭಾವಿಸಿದ ಈ ಸಂಸ್ಥೆ ಗ್ರಂಥ ಹಾಗೂ ಗ್ರಂಥಾಲಯಗಳ ಪಾತ್ರವನ್ನು ಮನಗಂಡು ಗ್ರಂಥಾಲಯಗಳ ಅಭಿವೃದ್ಧಿಗಾಗಿ ವಿಶೇಷ ಗಮನವನ್ನು ಹರಿಸಿದೆ.

**ಗ್ರಂಥಗಳ ಅಂತಾರಾಷ್ಟ್ರೀಯ ವಿನಿಮಯ :** ಗ್ರಂಥಾಲಯ ಕ್ಷೇತ್ರದಲ್ಲಿ ಯುನೆಸ್ಕೊದ ಕಾರ್ಯತತ್ಪರತೆ, ಸಾಧನೆ, ಅದರ ನೀತಿನಿಯಮಗಳು ಮತ್ತು ಅನುಷ್ಠಾನ ಮಾದರಿಯನ್ನು ಮೂರು ನಿಟ್ಟುಗಳಲ್ಲಿ ಗುರುತಿಸಬಹುದು: 1. ಗ್ರಂಥಾಲಯಗಳ ಅಂತಾರಾಷ್ಟ್ರೀಯ ಸಂಘಗಳ ಸಂಘಟನೆ ಮತ್ತು ಅವುಗಳ ಪ್ರಕಟಣೆಗಳ ವಿನಿಮಯದಲ್ಲಿ ನೆರವಾಗುವುದು; 2. ಸಾರ್ವಜನಿಕ ಮತ್ತು ರಾಷ್ಟ್ರೀಯ ಗ್ರಂಥಾಲಯಗಳ ಅಭಿವೃದ್ಧಿಗೆ ಸಹಾಯ ಮಾಡುವುದು ಮತ್ತು 3. ಗ್ರಂಥ ಮಾಹಿತಿ ಸೂಚೀಕರಣ ಮತ್ತು ಪ್ರಲೇಖನ ಕಾರ್ಯಗಳಲ್ಲಿ ನೆರವಾಗುವುದು. ಈ ಮೂರು ಬಗೆಯ ಕಾರ್ಯಗಳು ಪೂರಕವಾಗಿವೆ.

ಎರಡನೆಯ ಮಹಾಯುದ್ಧಾನಂತರ ದಿನಗಳಲ್ಲಿ ಪ್ರಪಂಚದ ಅನೇಕ ಗ್ರಂಥಾಲಯಗಳು ಬಹು ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿದ್ದವು. ಯುದ್ಧದ ನೇರ ಪೆಟ್ಟಿನಿಂದ ಗಾಸಿಗೊಂಡ ಅನೇಕ ರಾಷ್ಟ್ರಗಳ ಪ್ರಮುಖ ಗ್ರಂಥಾಲಯಗಳು ತಮ್ಮ ಪುನರುಜ್ಜೀವನಕ್ಕೆ ದಾರಿಗಾಣದೆ ಇದ್ದವು. ಈ ಸಮಸ್ಯೆಯ ನಿವಾರಣೆಗೆ ಯುನೆಸ್ಕೊ ನೀಡಿದ ಪರಿಹಾರ ಸ್ತುತ್ಯಾರ್ಹವಾದುದ್ದು. ಗ್ರಂಥಗಳ ಹೆಚ್ಚುವರಿ ಪ್ರತಿಗಳನ್ನು ಇಂಥಿಂಥ ಗ್ರಂಥಾಲಯಗಳಿಗೆ ಉಚಿತವಾಗಿ ಕೊಡಬೇಕೆಂದು ಯುನೆಸ್ಕೊ ಮಾಡಿಕೊಂಡ ಮನವಿಯನ್ನು ಮನ್ನಿಸಿ ಅನೇಕ ಗ್ರಂಥಾಲಯಗಳು ತಮ್ಮ ಆವಶ್ಯಕತೆಗಿಂತ ಹೆಚ್ಚಾದ ಪ್ರತಿಗಳನ್ನು ಉಡುಗೊರೆಯಾಗಿ ನೀಡಿದವು. ಇಲ್ಲವೆ ಬೇರೆ ಬೇರೆ ಗ್ರಂಥಗಳಿಗೆ ವಿನಿಮಯ ಮಾಡಿಕೊಂಡವು. ವಿವಿಧ ರಾಷ್ಟ್ರಗಳು ತಮ್ಮ ಅಧಿಕೃತ ಪ್ರಕಟಣೆಗಳನ್ನು ಬೇರೆಯವುಗಳೊಡನೆ ವಿನಿಮಯ ಮಾಡಿಕೊಳ್ಳುವ ಯೋಜನೆಯೂ ಜಾರಿಗೆ ಬಂತು. ಪ್ರಕಟನೆಗಳ ಅಂತಾರಾಷ್ಟ್ರೀಯ ವಿನಿಮಯ ಕೈಪಿಡಿ ಎಂಬ ಗ್ರಂಥವನ್ನು

ಈ ಸಂಸ್ಥೆ ಪ್ರಕಟಿಸಿ, ಅದನ್ನು ಕಾಲಕಾಲಕ್ಕೆ ಪರಿಷ್ಕರಿಸುತ್ತಿದೆ. ಇಂಥ ವಿನಿಮಯ ಕಾರ್ಯದಲ್ಲಿ ಸಂಭವಿಸಬಹುದಾದ ಅನೇಕ ಕುಂದುಕೊರತೆಗಳನ್ನು ನಿವಾರಿಸಿ ಅದನ್ನು ಸುಗಮಗೊಳಿಸುವ ವಿಧಾನಗಳನ್ನು ಕಂಡುಹಿಡಿಯಲು ಅನೇಕ ವಿಚಾರಗೋಷ್ಠಿಗಳನ್ನು ಏರ್ಪಡಿಸಿದೆ. ಯುನೆಸ್ಕೊ ಬುಲೆಟಿನ್ ಫಾರ್ ಲೈಬ್ರರೀಸ್ ಎಂಬ ಪತ್ರಿಕೆ ಸತತವಾಗಿ ಈ ಬಗ್ಗೆ ಮಾಹಿತಿ ಪ್ರಕಟಿಸುತ್ತದೆ.

ಅಭಿವೃದ್ಧಿ ಯೋಜನೆಗಳು ಪ್ರಾರಂಭದಲ್ಲಿ ಸಾರ್ವಜನಿಕ ಗ್ರಂಥಾಲಯಗಳಿಗೆ ಮಾತ್ರ ಸೀಮಿತವಾಗಿದ್ದವು. ಅವು ಇತ್ತಿಚೇಗೆ ಹೆಚ್ಚು ವ್ಯಾಪಕಗೊಂಡು ಎಲ್ಲ ಬಗೆಯ ಗ್ರಂಥಗಳನ್ನೂ ಒಳಗೊಂಡಿವೆ. ಇಂಥ ಯೋಜನೆಗಳಲ್ಲಿ ಯುನೆಸ್ಕೊ ಸಂಸ್ಥೆ ಅನೇಕ ಪರಿಣತರನ್ನು ನೇಮಿಸಿಕೊಂಡು ಅವರ ಸೇವೆಯನ್ನು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಹೊಸ ಗ್ರಂಥಾಲಯಗಳನ್ನು ನಿರ್ಮಿಸುವುದಕ್ಕೂ ಆಗಲೇ ಅಸ್ತಿತ್ವದಲ್ಲಿದ್ದ ಗ್ರಂಥಾಲಯಗಳ ಜೀರ್ಣೋದ್ಧಾರಕ್ಕೂ ಉಪಯೋಗಿಸಿಕೊಳ್ಳುತ್ತಿದೆ. ಈ ರೀತಿಯ ಅಭಿವೃದ್ಧಿ ಕಾರ್ಯಕ್ರಮಗಳು ವಿಶೇಷವಾಗಿ ಲ್ಯಾಟಿನ್ ಅಮೆರಿಕ, ಏಷ್ಯ ಮತ್ತು ಆಫ್ರಿಕ ರಾಷ್ಟ್ರಗಳಲ್ಲಿ ನಡೆಯುತ್ತಿವೆ.

ಪ್ರಪಂಚದ ಅನೇಕ ಗ್ರಂಥಾಲಯಗಳು ಹಾಗೂ ಪ್ರಲೇಖನ ಕೇಂದ್ರಗಳಿಗೆ ನೀಡುತ್ತಿರುವ ಸಹಾಯವಲ್ಲದೆ ತಜ್ಞರ ಸಲಹೆ, ಮಾರ್ಗದರ್ಶನ ನೀಡಲು ಅಂತಾರಾಷ್ಟ್ರೀಯ ಪ್ರಲೇಖನ ಸಂಘ (ಎಫ್ಐಡಿ) ಮತ್ತು ಅಂತಾರಾಷ್ಟ್ರೀಯ ಗ್ರಂಥಾಲಯ ಮಹಾ ಸಂಘಗಳು (ಐಎಫ್ಎಲ್ಎ) ಯುನೆಸ್ಕೊದ ಗ್ರಂಥಾಲಯ ಕಾರ್ಯಕ್ರಮಗಳಲ್ಲಿ ಸಲಹಾ ಸಮಿತಿಗಳಾಗಿ ಕೆಲಸ ಮಾಡುತ್ತಿವೆ.

ಗ್ರಂಥಾಲಯಗಳಿಗೆ ಯುನೆಸ್ಕೊ ನೀಡುತ್ತಿರುವ ತಾಂತ್ರಿಕಸಹಾಯ ಮತ್ತು ತಜ್ಞರ ಸಲಹೆಗಳು ಬಹುಮಟ್ಟಿಗೆ ಪ್ಯಾರಿಸಿನಲ್ಲಿ ಜರುಗಿದ 1949 ಮತ್ತು 1950ರ ಎರಡು ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಕೈಗೊಂಡ ನಿರ್ಣಯಗಳಿಗೆ ಅನುಸಾರವಾಗಿದೆ. ಯುನೆಸ್ಕೊದ ಪ್ರಧಾನ ನಿರ್ದೇಶಕರಿಗೆ ಈ ವಿಷಯದಲ್ಲಿ ಕಾಲಕಾಲಕ್ಕೆ ಸಲಹೆಗಳನ್ನು ನೀಡಲು ತಜ್ಞರ ವಿಶೇಷ ಸಮಿತಿಗಳನ್ನು ನೇಮಿಸಲಾಗಿದೆ.

ಗ್ರಂಥಾಲಯಗಳಲ್ಲಿ ಅನುಸರಿಸಬೇಕಾದ ಸೂಚೀಕರಣ ನಿಯಮಗಳನ್ನು ರೂಪಿಸಲು 1961ರಲ್ಲಿ ಪ್ಯಾರಿಸ್ ನಗರದಲ್ಲಿ ಅಂತಾರಾಷ್ಟ್ರೀಯ ಗ್ರಂಥಾಲಯಗಳ ಸಂಘ ಅಂತಾರಾಷ್ಟ್ರೀಯ ಮಟ್ಟದ ಸಮ್ಮೇಳನವೊಂದನ್ನು ಏರ್ಪಡಿಸಿತ್ತು. ಸೂಚೀಕರಣ ನಿಯಮಗಳನ್ನು ಬಹುಮಟ್ಟಿಗೆ ಸರ್ವಸಾಮಾನ್ಯವಾಗುವಂತೆ ಮಾಡುವುದರಲ್ಲಿ ಈ ಸಮ್ಮೇಳನ ಯುಶಸ್ವಿಯಾಯಿತು. 1962ರಲ್ಲಿ ಪ್ರಕಟವಾದ ಆಂಗ್ಲೊ ಅಮೆರಿಕನ್ ಸೂಚೀಕರಣ ನಿಯಮಗಳು ಎಂಬ ಗ್ರಂಥ ಈ ಸಮ್ಮೇಳನದ ಫಲಶ್ರುತಿಯನ್ನು ಸಾರುತ್ತದೆ.

ಗ್ರಂಥಸೂಚಿಗಳನ್ನು ತಯಾರಿಸುವಾಗ, ಅದರಲ್ಲೂ ಮಾಹಿತಿಸೂಚಿಗಳನ್ನು ತಯಾರಿಸುವಾಗ ಸೂಚೀಕಾರ ಸರ್ವಮಾನ್ಯ ಪದಗಳನ್ನು ಉಪಯೋಗಿಸಬೇಕಾಗುತ್ತದೆ. ಒಂದೇ ವಸ್ತು ಅಥವಾ ಒಂದೇ ವಿಷಯದ ಬಗ್ಗೆ ಹಲವಾರು ಪದಗಳು ಬಳಕೆಯಲ್ಲಿರ ಬಹುದು. ಅಲ್ಲದೆ ಒಂದೇ ಪದಕ್ಕೆ ಹಲವಾರು ಅರ್ಥ ವಿವರಣೆಗಳಿರಬಹುದು. ಇಂಥ ಸಂದರ್ಭಗಳಲ್ಲಿ ಸೂಚೀಕರಣದ ಕೆಲಸ ಮತ್ತಷ್ಟು ಕ್ಲಿಷ್ಟವಾಗುತ್ತದೆ. ವಿಜ್ಞಾನಗಳಲ್ಲಿ ಬಳಕೆಯಾಗುತ್ತಿರುವ ಪದಗಳು ಸರ್ವಸಾಮಾನ್ಯವಾಗಿರುವುದು ಇನ್ನೂ ಆವಶ್ಯಕ. ಯುನೆಸ್ಕೊ ಸಂಸ್ಥೆ ಈ ದಿಶೆಯಲ್ಲಿಯೂ ಶ್ಲಾಘನೀಯ ಕೆಲಸ ಮಾಡಿದೆ. ಸೂಚಿಗಳಲ್ಲಿ ಬಳಸಲಾಗುವ ಪದಗಳ ಗುಣಮಟ್ಟ ಮತ್ತು ಏಕರೂಪತೆಗಳನ್ನು ಕಾಪಾಡಿಕೊಂಡು ಬರಲು ಸಹಾಯವಾಗುವಂತೆ ವೊಕ್ಯಾಬುಲೇರಿಯಂ ಬಿಬ್ಲಿಯೊಥಕರಿ ಎಂಬ ಸೂಚೀಪದಗಳ ವಿವರಣ ಪಟ್ಟಿಯೊಂದನ್ನು ಪ್ರಕಟಿಸಿದೆ.

ಗ್ರಂಥಸೂಚಿಯ ವಿಷಯದಲ್ಲಿ ಯುನೆಸ್ಕೊದ ಕೊಡುಗೆ ಅದ್ವಿತೀಯವಾದುದು. ಉದಾಹರಣೆಗೆ ಅದು ಪ್ರಕಟಿಸುತ್ತಿರುವ ಭಾಷಾಂತರ ಸೂಚಿ (ಇಂಡಕ್ಸ್ ಟ್ರಾನ್ಸ್ಲೇಷನಂ) ಒಂದು ವಾರ್ಷಿಕ ಸೂಚಿಗ್ರಂಥ. 1969ರ ವರೆಗೆ ಇದರ 22 ಸಂಪುಟಗಳು ಹೊರಬಂದಿದ್ದವು. 22ನೆಯ ಸಂಪುಟ  65 ರಾಷ್ಟ್ರಗಳಲ್ಲಿ ಪ್ರಕಟವಾದ 38 ಸಾವಿರಕ್ಕೂ ಮಿಕ್ಕ ಭಾಷಾಂತರಿತ ಗ್ರಂಥಗಳನ್ನು ಸೂಚಿಸುತ್ತದೆ.

**ಸೂಕ್ಷ್ಮ ಛಾಯಾಚಿತ್ರಗಳು :** ಭಾವೀ ಜನಾಂಗದ ಉಪಯೋಗಕ್ಕಾಗಿ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಮೌಲ್ಯವುಳ್ಳ ಅಪರೂಪದ ಗ್ರಂಥಗಳನ್ನು ರಕ್ಷಿಸಿಡುವ ಸಲುವಾಗಿ ಯುನೆಸ್ಕೊ ಸಂಸ್ಥೆ 1954ರಲ್ಲಿ ಒಂದು ಸಂಚಾರಿ ಸೂಕ್ಷ್ಮಛಾಯಾಗ್ರಾಹಕ ಯಂತ್ರವನ್ನು ಬಳಸಲು ಪ್ರಾರಂಭಿಸಿತು. ಐದು ವರ್ಷಗಳ ಅವಧಿಯಲ್ಲಿ ಈ ಯಂತ್ರ ಲ್ಯಾಟಿನ್ ಅಮೆರಿಕದ ಎಂಟು ದೇಶಗಳಲ್ಲಿ ಕೆಲಸಮಾಡಿ ಎರಡು ದಶಲಕ್ಷ ಪುಟಗಳ ಛಾಯಾಗ್ರಹಣ ಮಾಡಿತು. 1962ರಿಂದೀಚೆಗೆ ಈ ಯಂತ್ರ ಅರಬ್‌ರಾಷ್ಟ್ರಗಳಲ್ಲಿ ಕೆಲಸಮಾಡಿದೆ. 1964ರಲ್ಲಿ ಇನ್ನೊಂದು ಯಂತ್ರ ಏಷ್ಯದ ಇತರ ಭಾಗಗಳಲ್ಲಿ ಕೆಲಸಮಾಡಲು ಪ್ರಾರಂಭಿಸಿತು. ಹೀಗೆ ತಯಾರಿಸಿದ ಛಾಯಾಚಿತ್ರಗಳ ಋಣಪ್ರತಿಗಳನ್ನು ಆಯಾ ಗ್ರಂಥಾಲಯಗಳಿಗೇ ಕೊಡುವ ವ್ಯವಸ್ಥೆ ಮಾಡಲಾಗಿದೆ.

**ಗ್ರಂಥಪಾಲರ ತರಬೇತಿ :** ತರಬೇತಿ ಪಡೆದ ಗ್ರಂಥಪಾಲರ ಅಭಾವ ಸಾಮಾನ್ಯವಾಗಿ ಎಲ್ಲ ದೇಶಗಳಲ್ಲೂ ಕಾಣಬರುತ್ತಿದೆ. ಇಂಥ ಕೊರತೆಯನ್ನು ನಿವಾರಿಸಲು ಯುನೆಸ್ಕೊ ಅನೇಕ ಯೋಜನೆಗಳನ್ನು ರೂಪಿಸಿದೆ. ಈ ಯೋಜನೆಗಳು ಬಹುಮಟ್ಟಿಗೆ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಕಾರ್ಯರೂಪಕ್ಕೆ ಬಂದಿವೆ. ಆಫ್ರಿಕ ಖಂಡದಲ್ಲಿ ಎರಡು ಪ್ರಾದೇಶಿಕ ಗ್ರಂಥಾಲಯಶಾಸ್ತ್ರ ತರಬೇತಿ ಕೇಂದ್ರಗಳ ಸ್ಥಾಪನೆಗೆ ಯುನೆಸ್ಕೊ ನೆರವು ನೀಡಿದೆ. ಇಂಗ್ಲಿಷ್ ಭಾಷೆಯನ್ನಾಡುವ ಜನರಿಗಾಗಿ ಉಗಾಂಡದಲ್ಲಿ ಒಂದು ಕೇಂದ್ರವನ್ನೂ ಫ್ರೆಂಚ್ ಮಾತನಾಡುವ ಜನರಿಗಾಗಿ ಸೆರ್ಗೆಲ್‌ನಲ್ಲಿ ಮತ್ತೊಂದು ಕೇಂದ್ರವನ್ನೂ ಸ್ಥಾಪಿಸಿದೆ. ಅರ್ಜೆಂಟೀನ ಸರ್ಕಾರದ ಸಹಕಾರದೊಂದಿಗೆ ಬ್ಯೂನಸ್ ಐರಿಸ್ ವಿಶ್ವವಿದ್ಯಾಲಯದಲ್ಲಿ ಗ್ರಂಥಾಲಯಶಾಸ್ತ್ರ ಸಂಶೋಧನಾಕೇಂದ್ರ ಏರ್ಪಟ್ಟಿದೆ. ಧ್ವನಿಮುದ್ರಿತ ಪಾಠಗಳು, ಪೂರಕವಾಗಿ ನೂರಾರು ಬಣ್ಣದ ಸ್ಲೈಡುಗಳು, ಚಲನಚಿತ್ರಗಳು ಈ ಕೇಂದ್ರದಲ್ಲಿ ಬಳಕೆಯಲ್ಲಿವೆ. ಜೆ. ಇ. ಸೇಬರ್ ಅವರ ಗ್ರಂಥಾಲಯ ಶಾಸ್ತ್ರ ಶಿಕ್ಷಣ ಕೈಪಿಡಿ ಎಂಬ ಪುಸ್ತಕವನ್ನು ಹಲವು ಭಾಷೆಗಳಲ್ಲಿ ಪ್ರಕಟಿಸುವ ಕೆಲಸವೂ ಕಾರ್ಯರೂಪಕ್ಕೆ ಬಂದಿದೆ. ಈ ರೀತಿ ನೀಡುತ್ತಿರುವ ತರಬೇತಿಯ ಗುಣಮಟ್ಟವನ್ನು ಕಾಯ್ದುಕೊಳ್ಳುವ ಸಲುವಾಗಿ ಬ್ಯೂನಸ್‌ಐರಿಸ್‌ನಲ್ಲಿರುವ ಗ್ರಂಥಾಲಯ ಸಂಶೋಧನ ಕೇಂದ್ರ ಆಗಾಗ್ಗೆ ಸಮೀಕ್ಷೆಗಳನ್ನೂ ಸಂಶೋಧನೆಗಳನ್ನೂ ನಡೆಸುತ್ತದೆ. ಇಂಥ ಸಮೀಕ್ಷೆಗಳ ವ್ಯಾಪ್ತಿಗೆ ಅರ್ಜೆಂಟೀನ, ಬ್ರೆಜಿಲ್, ಚಿಲಿ, ಪೆರು ಮತ್ತು ಉರುಗ್ವೇ ಪ್ರದೇಶಗಳು ಒಳಪಡುತ್ತವೆ. ಬದಲಾಗುತ್ತಿರುವ ಸಾಮಾಜಿಕ ಹಾಗೂ ಶೈಕ್ಷಣಿಕ ಪರಿಸ್ಥಿತಿಗಳಿಗನುಗುಣವಾಗಿ ಗ್ರಂಥಾಲಯಗಳ ಸೇವೆಯೂ ಪರಿವರ್ತನೆ ಹೊಂದಲು ಇಂಥ ಸಮೀಕ್ಷೆ ಮತ್ತು ಸಂಶೋಧನೆಗಳು ಸಹಾಯಕವಾಗುತ್ತವೆ. ಈ ಎಲ್ಲ ಯೋಜನೆಗಳನ್ನೂ ಅವುಗಳಿಗೆ ಸಂಬಂಧಿಸಿದ ಲೇಖನಗಳನ್ನೂ ಯುನೆಸ್ಕೊ ಗ್ರಂಥಾಲಯಗಳ ಪತ್ರಿಕೆಯಲ್ಲಿ (ಮಾಸಿಕ) ಪ್ರಕಟಿಸಲಾಗುತ್ತಿದೆ.

**ಸಾಕ್ಷರತಾ ಚಳವಳಿ :** ತಾನು ಕೈಗೊಳ್ಳುವ ಪ್ರತಿಯೊಂದು ಯೋಜನೆಯನ್ನು ನೇರವಾಗಿ ಯಾವುದೇ ರಾಷ್ಟ್ರದ ಜನತೆಗೆ ಯುನೆಸ್ಕೊ ನೀಡುವುದಿಲ್ಲ. ಆಯಾ ದೇಶಗಳಿಂದ ನಿಯೋಜಿತವಾದ ಅಧಿಕೃತ ರಾಷ್ಟ್ರೀಯ ಯುನೆಸ್ಕೊ ಆಯೋಗಗಳ ಮುಖಾಂತರವೇ ಅವನ್ನು ಕಾರ್ಯರೂಪಕ್ಕೆ ತರಬೇಕಾಗುತ್ತದೆ. ಇಂಥ ರಾಷ್ಟ್ರೀಯ ಆಯೋಗಗಳು ಪ್ರಪಂಚದ ಅನೇಕ ರಾಷ್ಟ್ರಗಳಲ್ಲಿ ಯುನೆಸ್ಕೊ ಯೋಜನೆಯ ಅನುಷ್ಠಾನಕ್ಕೆ ಸಹಾಯಮಾಡುತ್ತವೆ. ನಿರಕ್ಷತೆಯನ್ನು ತೊಡೆದುಹಾಕುವ ಬಗ್ಗೆ ಯುನೆಸ್ಕೊ ಕೈಗೊಂಡ ಚಳವಳಿಯ ಯಶಸ್ಸಿನಲ್ಲಿ ವಿವಿಧ ರಾಷ್ಟ್ರೀಯ ಆಯೋಗಗಳ ಪಾತ್ರ ಹಿರಿದಾಗಿದೆ. ಈ ಚಳವಳಿ ಫಲಪ್ರದವಾಗಲು ಗ್ರಂಥಾಲಯಗಳೂ ಅಪೂರ್ವ ಸೇವೆ ಸಲ್ಲಿಸುತ್ತಿವೆ. ಯುನೆಸ್ಕೊ ಸಂಸ್ಥೆ ಸಾರ್ವಜನಿಕ ಗ್ರಂಥಾಲಯಗಳ ಸ್ಥಾಪನೆಗೆ ನೀಡುತ್ತಿರುವ ಸಹಾಯ ಸಾಕ್ಷರತಾ ಚಳವಳಿ ಯಶಸ್ವಿಯಾಗುವಂತೆ ಮಾಡುವುದರಲ್ಲಿ ಬಹಳ ಉಪಯುಕ್ತವಾಗಿದೆ.

ಸಾರ್ವಜನಿಕ ಗ್ರಂಥಾಲಯಗಳ ಸ್ಥಾಪನೆ ಮತ್ತು ಅಭಿವೃದ್ಧಿಯ ವಿಷಯಗಳಲ್ಲಿ ಯುನೆಸ್ಕೊ 1948ರಿಂದಲೇ ಆಸಕ್ತಿ ತೋರಲಾರಂಭಿಸಿತು. ಈ ಮಹತ್ತರ ಅಭಿಲಾಷೆ ಕಾರ್ಯರೂಪಕ್ಕೆ ಬಂದದ್ದು 1951ರಲ್ಲಿ. ಯುನೆಸ್ಕೊ ಮತ್ತು ಭಾರತ ಸರ್ಕಾರಗಳ ಪರಸ್ಪರ ಸಹಕಾರದಿಂದ ಏಷ್ಯ ಖಂಡದ ಪ್ರಪ್ರಥಮ ಸುವ್ಯವಸ್ಥಿತ ಸಾರ್ವಜನಿಕ ಗ್ರಂಥಾಲಯವಾಗಿ ದೆಹಲಿಯ ಸಾರ್ವಜನಿಕ ಗ್ರಂಥಾಲಯ ಜನ್ಮ ತಳೆಯಿತು (1951). ಇದರ ಸ್ಥಾಪನೆಗೆ ಯುನೆಸ್ಕೊ ಸಂಸ್ಥೆ ಧನ ಸಹಾಯದ ಜೊತೆಗೆ ವಿದೇಶೀ ತಜ್ಞರ ನೆರವನ್ನೂ ಒದಗಿಸಿಕೊಟ್ಟಿತು. ಭಾರತದಲ್ಲಿ ಸಾರ್ವಜನಿಕ ಗ್ರಂಥಾಲಯಗಳ ಸೇವೆಯನ್ನು ಉತ್ತಮಗೊಳಿಸುವ ಸಲುವಾಗಿ ಇಲ್ಲಿಯ ಗ್ರಂಥಪಾಲರನ್ನು ವಿದೇಶಗಳಿಗೆ ಕಳುಹಿಸಿ ಅಲ್ಲಿಯ ಸಾರ್ವಜನಿಕ ಗ್ರಂಥಾಲಯಗಳು ಸಲ್ಲಿಸುತ್ತಿರುವ ಸೇವೆಯನ್ನು ಅವರು ಸ್ವತಃ ಅಭ್ಯಸಿಸಿ ಅರಿತುಕೊಂಡು ಬರುವಂತೆ ಮಾಡಲಾಯಿತು. ಹಾಗೆಯೇ ಅನೇಕ ನೆರೆರಾಷ್ಟ್ರಗಳಿಂದ ಹಲವಾರು ಗ್ರಂಥಪಾಲರನ್ನು ದೆಹಲಿ ಸಾರ್ವಜನಿಕ ಗ್ರಂಥಾಲಯದಲ್ಲಿ ಕೆಲಸ ಮಾಡುವಂತೆ ಆಹ್ವಾನಿಸಿ ತರಬೇತಿ ಕೊಡಲಾಯಿತು. ಆಬದಾನ್, ಆಕ್ರಾ, ಅಂಕಾರಾ, ಬ್ಯಾಂಕಾಕ್, ಕೈರೋ, ಕೊಲಂಬೊ, ಢಾಕಾ, ಫ್ರೀಟೌನ್, ಕಾಬೂಲ್, ಕರಾಚಿ, ಕಠಮಂಡು, ಕೌಲಾಲಂಪುರ, ರಂಗೂನ್ (ಯಂಗನ್), ಸೈಗಾನ್, ಸಿಯೋಲ್, ಸಿಂಗಪುರ್, ಟೆಹರನ್ ಮತ್ತು ಟೋಕಿಯೊ ನಗರಗಳಿಂದ ಗ್ರಂಥಪಾಲರು ದೆಹಲಿಯ ಸಾರ್ವಜನಿಕ ಗ್ರಂಥಾಲಯವನ್ನು ವೀಕ್ಷಿಸಲು ಮತ್ತು ತರಬೇತಿ ಪಡೆಯಲು ಭೇಟಿ ನೀಡಿದ್ದರು.

ಕೊಲಂಬಿಯದಲ್ಲಿರುವ ಮೆಡಾಲಿನ್ ಸಾರ್ವಜನಿಕ ಗ್ರಂಥಾಲಯ, ನೈಜೀರಿಯದ ಎನಗು ಪ್ರಾದೇಶಿಕ ಗ್ರಂಥಾಲಯ ಮತ್ತು ಐವರಿ ತೀರಪ್ರದೇಶದ ಅಬಿಡ್ಜನ್ ಕೇಂದ್ರ ಗ್ರಂಥಾಲಯ ಇವೆಲ್ಲ ಯುನೆಸ್ಕೊದ ಧನ ಮತ್ತು ತಾಂತ್ರಿಕ ಸಹಾಯದಿಂದ ನಿರ್ಮಾಣಗೊಂಡುವು.

ವಿಜ್ಞಾನ, ಶಿಕ್ಷಣ ಮತ್ತು ಸಾಂಸ್ಕೃತಿಕ ಅಭಿವೃದ್ಧಿಯ ವಿಷಯಗಳಲ್ಲಿ ಯುನೆಸ್ಕೊ ನಿರ್ವಹಿಸುತ್ತಿರುವ ಪಾತ್ರ ಎಷ್ಟು ಹಿರಿದೋ ಅಷ್ಟೇ ಸೂಕ್ಷ್ಮವಾದುದು. ಆಯಾರಾಷ್ಟ್ರಗಳು

ಕೈಗೊಳ್ಳುವ ಇಂಥ ಅಭಿವೃದ್ಧಿ ಕಾರ್ಯಗಳಲ್ಲಿ ಅದು ಕೇವಲ ಒಂದು ಪ್ರಚೋದಕ ಮಾಧ್ಯಮದಂತೆ ವರ್ತಿಸುತ್ತಿದೆ. ತಾನು ನೀಡುತ್ತಿರುವ ಸಹಾಯ ಸೌಲಭ್ಯಗಳ ವಿಷಯದಲ್ಲಿ ಯುನೆಸ್ಕೊ ಮೂಲಗುರಿಯೊಂದನ್ನು ಇಟ್ಟುಕೊಂಡಿದೆ. ಆಯಾ ಜನತೆಯ ದೃಷ್ಟಿಕೋನವನ್ನು ಅಭಿವೃದ್ಧಿ ಹಾಗೂ ನಾವೀನ್ಯದ ಕಡೆ ತಿರುಗಿಸುವುದೇ ಆ ಗುರಿ. ದೆಹಲಿಯ ಸಾರ್ವಜನಿಕ ಗ್ರಂಥಾಲಯವನ್ನೇ ಇದಕ್ಕೆ ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಇದರ ಪ್ರಭಾವ ಏಷ್ಯದ ಗಡಿಗಳನ್ನು ದಾಟಿ ದಕ್ಷಿಣ ಅಮೆರಿಕದ ವರೆಗೆ ವ್ಯಾಪಿಸಿದೆ. ಈ ಯೋಜನೆಯ ಯಶಸ್ಸು ಸಾರ್ವಜನಿಕ ಗ್ರಂಥಾಲಯಗಳ ಬಗ್ಗೆ ಯುನೆಸ್ಕೊ ತೋರಿಸುತ್ತಿರುವ ಆಸಕ್ತಿಗೆ ಮತ್ತಷ್ಟು ಉತ್ತೇಜನ ಕೊಟ್ಟಿದೆ. ಒಮ್ಮೆ ಸಾಮಾನ್ಯ ಪ್ರಜೆಗಳಿಗೆ ಗ್ರಂಥಾಲಯಗಳ ಸೌಲಭ್ಯಗಳನ್ನು ಒದಗಿಸಿ ಅವರಿಗೆ ಜ್ಞಾನಾರ್ಜನೆಯ ಸುಲಭದಾರಿಯನ್ನು ತೋರಿಸಿದರೆ ಸಾಕು. ಹೆಚ್ಚು ಹೆಚ್ಚಾಗಿ ಓದಿ ತಮ್ಮ ಜ್ಞಾನದಾಹವನ್ನು ನೀಗಿಸಿಕೊಳ್ಳುವ ಮಾರ್ಗಗಳನ್ನು ತಮಗೆ ತಾವೇ ಹುಡುಕಿಕೊಳ್ಳುತ್ತಾರೆ.

ದೆಹಲಿ ಸಾರ್ವಜನಿಕ ಗ್ರಂಥಾಲಯ ಸ್ಥಾಪನೆಗೊಂಡ ಐದು ವರ್ಷಗಳ ಅನಂತರ ಅದರ ಸ್ಥಿತಿಗತಿಗಳನ್ನು ವಿಶ್ಲೇಷಿಸಿ ವರದಿ ಮಾಡಲು ಯುನೆಸ್ಕೊ 1957ರಲ್ಲಿ ಫ್ರ್ಯಾಂಕ್ ಗಾರ್ಡ್ನರ್ ಅವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿತು. ಈ ಸಮಿತಿ ತಯಾರಿಸಿದ ವರದಿ ಇಡೀ ಏಷ್ಯ ಖಂಡದಲ್ಲಿ ಸಾರ್ವಜನಿಕ ಗ್ರಂಥಾಲಯವನ್ನು ಕುರಿತ ಏಕೈಕ ತುಲನಾತ್ಮಕ ವರದಿಯಾಗಿದೆ.

ಶಾಲಾ ಗ್ರಂಥಾಲಯಗಳ ಅಭಿವೃದ್ಧಿಗಾಗಿಯೂ ಯುನೆಸ್ಕೊ ಸಾಕಷ್ಟು ಕೆಲಸ ಮಾಡುತ್ತಿದೆ. ಅಲ್ಲಿನ ಗ್ರಂಥಪಾಲರಿಗೆ ವಿಶೇಷ ತರಬೇತಿಯನ್ನು ಕೊಡುತ್ತಿರುವುದು ಗಮನಾರ್ಹ ಸಂಗತಿ.

ವಿಶ್ವವಿದ್ಯಾಲಯ ಗ್ರಂಥಾಲಯಗಳು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಅವುಗಳ ನಿವಾರಣೆಯನ್ನು ಕುರಿತು ಚರ್ಚೆ ನಡೆಸಲು ಯುನೆಸ್ಕೊ ಒಂದು ಸಮ್ಮೇಳನವನ್ನು 1962ರಲ್ಲಿ ಅರ್ಜಂಟೀನದ ಮೆಂಡೋಜದಲ್ಲಿ ಏರ್ಪಡಿಸಿತ್ತು. ಇದರಲ್ಲಿ ಲ್ಯಾಟಿನ್ ಅಮೆರಿಕದ 19 ದೇಶಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಇದೊಂದು ಪ್ರಾದೇಶಿಕ ಸಮ್ಮೇಳನವಾದರೂ ಇದರಲ್ಲಿ ಚರ್ಚಿಸಿದ ವಿಷಯಗಳೂ ಮಾಡಿದ ಶಿಫಾರಸ್ಸುಗಳೂ ಮಹತ್ತ್ವಪೂರ್ಣವಾಗಿವೆ. ಪ್ರತಿಯೊಂದು ವಿಶ್ವವಿದ್ಯಾಲಯವೂ ತನ್ನ ಒಟ್ಟು ವೆಚ್ಚದಲ್ಲಿ ಶೇಕಡ ಐದಕ್ಕೆ ಕಡಿಮೆ ಇಲ್ಲದಂತೆ ಹಣವನ್ನು ಗ್ರಂಥಾಲಯದ ಸಲುವಾಗಿ ನಿಗದಿ ಮಾಡಬೇಕೆಂಬ ಒಮ್ಮತದ ಸಲಹೆಯನ್ನು ಈ ಸಮ್ಮೇಳನ ಮಾಡಿತು. ಉಳಿದ ಸಲಹೆಗಳು ಈ ರೀತಿ ಇವೆ : 1. ಪ್ರತಿಯೊಂದು ವಿಶ್ವವಿದ್ಯಾಲಯ ಗ್ರಂಥಾಲಯವೂ ಕೇಂದ್ರೀಕೃತ ಗ್ರಂಥ ಸಂಗ್ರಹಣೆಗೆ ಯತ್ನಿಸಬೇಕು. 2. ಸಹಕಾರೀ ಹಾಗೂ ಕೇಂದ್ರೀಕೃತ ಸೂಚೀಕರಣ ವ್ಯವಸ್ಥೆ ಆಯಾ ದೇಶದ ಎಲ್ಲ ವಿಶ್ವವಿದ್ಯಾಲಯ ಗ್ರಂಥಾಲಯಗಳಿಗೂ ವ್ಯಾಪಿಸಿರಬೇಕು. 3. ರಾಷ್ಟ್ರೀಯ ಗ್ರಂಥಪಾಲರ ಸಂಘ ಸಂಸ್ಥೆಗಳಲ್ಲಿ ವಿಶ್ವವಿದ್ಯಾಲಯಗಳಿಗೆ ತಕ್ಕ ಪ್ರಾತಿನಿಧ್ಯಗಳೂ ವಿಭಾಗಗಳೂ ಇರಬೇಕು ಮತ್ತು 4. ದ್ವಿಪ್ರತಿಗಳ ಮತ್ತು ಪ್ರೌಢ ಪ್ರಬಂಧಗಳ ಪ್ರಕಟನೆಗಳನ್ನು ವಿವಿಧ ವಿಶ್ವವಿದ್ಯಾಲಯ ಗ್ರಂಥಾಲಯಗಳೊಂದಿಗೆ ಎರವಲು ಮತ್ತು ವಿನಿಮಯ ಮಾಡಿಕೊಳ್ಳುವ ವ್ಯವಸ್ಥೆಗೆ ಯುನೆಸ್ಕೊ ನೆರವು ನೀಡಬೇಕು.

ರಾಷ್ಟ್ರೀಯ ಗ್ರಂಥಾಲಯಗಳು : ರಾಷ್ಟ್ರೀಯ ಗ್ರಂಥಾಲಯಗಳ ಸ್ಥಿತಿಗಳಲ್ಲಿ ಅವುಗಳ ಇತಿಹಾಸ, ಬೆಳವಣಿಗೆ, ಕಾರ್ಯವ್ಯಾಪ್ತಿ ಇತ್ಯಾದಿ ವಿಷಯಗಳಲ್ಲಿ ವೈವಿಧ್ಯಗಳಿದ್ದರೂ ಅವು ಎದುರಿಸುತ್ತಿರುವ ಅನೇಕ ಸಮಸ್ಯೆಗಳಲ್ಲಿ ಸಾಮ್ಯ ಇದೆ. ಏಷ್ಯ ಮತ್ತು ಪೆಸಿಫಿಕ್ ವಲಯದಲ್ಲಿ ಗ್ರಂಥಾಲಯಗಳ ಅಭಿವೃದ್ಧಿ ಬಗ್ಗೆ ಮನಿಲದಲ್ಲಿ ಯುನೆಸ್ಕೊದ ಆಶ್ರಯದಲ್ಲಿ ಫೆಬ್ರುವರಿ 1964ರಲ್ಲಿ ನಡೆದ ಪ್ರಾದೇಶಿಕ ಸಮ್ಮೇಳನದಲ್ಲಿ ಇದು ಸ್ಪಷ್ಟವಾಯಿತು. ಇದರಲ್ಲಿ ಏಷ್ಯ ಮತ್ತು ಪೆಸಿಫಿಕ್ ವಲಯದ ರಾಷ್ಟ್ರಗಳ 24 ಪ್ರತಿನಿಧಿಗಳು ಭಾಗವಹಿಸಿದ್ದರು.

ಇಂಥದೇ ಒಂದು ಸಮ್ಮೇಳನ 1958ರಲ್ಲಿ ವಿಯನ್ನದಲ್ಲಿ ಜರುಗಿತು. ಈ ಎರಡು ಸಮ್ಮೇಳನಗಳು ರಾಷ್ಟ್ರೀಯ ಗ್ರಂಥಾಲಯಗಳ ಬಗ್ಗೆ ಸುದೀರ್ಘ ಚರ್ಚೆ ನಡೆಸಿ ಅವುಗಳು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹಿಡಿಯಲು ಪ್ರಯತ್ನಿಸಿವೆ. ವಿವಿಧ ರಾಷ್ಟ್ರೀಯ ಗ್ರಂಥಾಲಯಗಳ ಗ್ರಂಥಪಾಲರು ಮತ್ತು ನಿರ್ದೇಶಕರನ್ನು ಒಂದೆಡೆ ಸೇರಿಸಿ ಗ್ರಂಥಗಳ ಅಂತಾರಾಷ್ಟ್ರೀಯ ಎರವಲು ಮತ್ತು ವಿನಿಮಯಗಳನ್ನು ಕುರಿತು ಚರ್ಚಿಸುವುದು ಮತ್ತು ಈ ವಲಯದಲ್ಲಿ ರಾಷ್ಟ್ರೀಯ ಗ್ರಂಥಾಲಯಗಳು ಎದುರಿಸುತ್ತಿರುವ ಅನೇಕ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹಿಡಿಯುವುದು–ಇವು ಈ ಸಮ್ಮೇಳನದ ಉದ್ದೇಶಗಳಾಗಿದ್ದವು; ಗ್ರಂಥ ಸಂಗ್ರಹಣೆ, ಗ್ರಂಥಸೂಚಿ, ಪರಾಮರ್ಶನ ಸೇವೆ, ಪ್ರಲೇಖನವಿಧಾನ, ಗ್ರಂಥಸ್ವಾಮ್ಯ, ಗ್ರಂಥಾಲಯ ಸಹಕಾರ, ಗ್ರಂಥಪಾಲರ ತರಬೇತಿ, ಗ್ರಂಥಾಲಯದ ಕಟ್ಟಡ, ಗ್ರಂಥ ಸಂರಕ್ಷಣೆ ಮತ್ತು ಗ್ರಂಥಪಾಲರ ಸಂಸ್ಥೆ ಸಂಘಗಳು–ಇವನ್ನು ಕುರಿತು ಚರ್ಚಿಸಲಾಯಿತು.

ಮನಿಲ ಸಮ್ಮೇಳನಕ್ಕೆ ಮೊದಲು ನಡೆಸಿದ ಸಮೀಕ್ಷೆಯಿಂದ ಈ ಕೆಳಗಿನ ಅಂಶಗಳು ಬೆಳಕಿಗೆ ಬಂದುವು. 1. ಕೇವಲ 20 ರಾಷ್ಟ್ರೀಯ ಗ್ರಂಥಾಲಯಗಳು ರಾಷ್ಟ್ರೀಯ ಗ್ರಂಥ ಸೂಚಿಗಳನ್ನು ಪ್ರಕಟಿಸುತ್ತಿವೆ. 2. ಬಹುಸಂಖ್ಯಾತ ರಾಷ್ಟ್ರೀಯ ಗ್ರಂಥಾಲಯಗಳು ಸಾರ್ವಜನಿಕ ಗ್ರಂಥಾಲಯಗಳ ಮಾದರಿಯಲ್ಲಿ ಸೇವೆ ಸಲ್ಲಿಸುತ್ತಿವೆ. 3. ಶೇ. 61ರಷ್ಟು ಗ್ರಂಥಾಲಯಗಳು ಮಾತ್ರ ಅಂತಾರಾಷ್ಟ್ರೀಯ ಗ್ರಂಥ ವಿನಿಮಯ ಕಾರ್ಯದಲ್ಲಿ ಭಾಗವಹಿಸುತ್ತಿವೆ: 4. ಕೇವಲ 50 ರಾಷ್ಟ್ರೀಯ ಗ್ರಂಥಾಲಯಗಳು ತಮ್ಮ ತಮ್ಮ ವಲಯದಲ್ಲಿ ಗ್ರಂಥಗಳ ಎರವಲು ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿವೆ.

ಪ್ರಲೇಖನ ಕೇಂದ್ರಗಳ ಸ್ಥಾಪನೆಗೆ ನೆರವು ನೀಡುವುದನ್ನು ಯುನೆಸ್ಕೊ 1951ರಲ್ಲಿ ಪ್ರಾರಂಭಿಸಿತು. ಈವರೆಗೆ ಅಂಥ 12 ಕೇಂದ್ರಗಳು ಸ್ಥಾಪನೆಗೊಂಡಿವೆ. ಅಂಥ ಇನ್ನೂ 9 ಕೇಂದ್ರಗಳು ವಿವಿಧ ಹಂತದಲ್ಲಿ ರೂಪುಗೊಳ್ಳುತ್ತಿದೆ. ಇಂಥ ಕೇಂದ್ರಗಳಲ್ಲಿ ಭಾರತ ರಾಷ್ಟ್ರೀಯ ವೈಜ್ಞಾನಿಕ ಪ್ರಲೇಖನ ಕೇಂದ್ರವೂ (ಇಂಡಿಯನ್ ನ್ಯಾಷನಲ್ ಸೈಂಟಿಫಿಕ್ ಡಾಕ್ಯುಮೆಂಟೇಷನ್ ಸೆಂಟರ್) ಒಂದು. ಇದು ದೆಹಲಿಯಲ್ಲಿ 1952ರಲ್ಲಿ ಅಸ್ತಿತ್ವಕ್ಕೆ ಬಂತು. ಯುನೆಸ್ಕೊ ಮತ್ತು ಭಾರತ ಸರ್ಕಾರದಿಂದ ರೂಪಗೊಂಡ ಮಹಾನ್ ಸಂಸ್ಥೆಯಾಗಿ ಇದು ಬೆಳೆದು ನಿಂತಿದೆ. ಭಾರತದಲ್ಲಿರುವ ರಾಷ್ಟ್ರೀಯ ಪ್ರಯೋಗಶಾಲೆಗಳು, ವೈಜ್ಞಾನಿಕ ಸಂಶೋಧನ ಕೇಂದ್ರಗಳು–ಇವೇ ಮುಂತಾದವುಗಳಿಗೆ ಗ್ರಂಥಗಳನ್ನು, ಮಾಹಿತಿಗಳನ್ನು ಮತ್ತು ಲೇಖನಗಳ ನಕಲುಗಳನ್ನು ಒದಗಿಸುವುದರ ಮೂಲಕ ಸೇವೆ ಸಲ್ಲಿಸುತ್ತಿದೆ.

ಯುನೆಸ್ಕೊದ ಪ್ರಾದೇಶಿಕ ವಿಜ್ಞಾನ ಸಹಕಾರ ಕಚೇರಿಗಳು ಆಯಾ ವಲಯಗಳಲ್ಲಿ ವೈಜ್ಞಾನಿಕ ಮಾಹಿತಿ ಕೇಂದ್ರಗಳಾಗಿ ಕೆಲಸ ಮಾಡುತ್ತಿವೆ. ಬ್ಯಾಂಕಾಕ್, ಕೈರೊ, ಮಾಂಟೆವಿಡಿಯೋ, ನವದೆಹಲಿ ಮತ್ತು ನೈರೋಬಿಗಳಲ್ಲಿ ಸ್ಥಾಪಿತವಾಗಿರುವ ಕೇಂದ್ರಗಳು ಕ್ರಮವಾಗಿ ಆಗ್ನೇಯ ಏಷ್ಯ, ಮಧ್ಯಪ್ರಾಚ್ಯ, ಲ್ಯಾಟಿನ್ ಅಮೆರಿಕ, ದಕ್ಷಿಣ ಏಷ್ಯ ಮತ್ತು ಪೂರ್ವ ಆಫ್ರಿಕ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ವೈಜ್ಞಾನಿಕ ಹಾಗೂ ತಾಂತ್ರಿಕ ಪ್ರಲೇಖನ ಕೇಂದ್ರಗಳು ; ಅವುಗಳ ಅಭಿವೃದ್ಧಿಗೆ ಯುನೆಸ್ಕೊ ನೆರವು ಎಂಬ ಪುಸ್ತಕ 1965ರಲ್ಲಿ ಪ್ರಕಟವಾಗಿದೆ.

**ಗ್ರಂಥ ಮತ್ತು ಇತರ ವೈಜ್ಞಾನಿಕ ಸಲಕರಣೆಗಳ ಮೇಲಿನ ಸುಂಕ ಮತ್ತು ಅಂಚೆ ರಿಯಾಯಿತಿ :** ಯುದ್ಧಾನಂತರ ದಿವಸಗಳಲ್ಲಿ ಸಾಮಾನ್ಯವಾಗಿ ಎಲ್ಲ ಗ್ರಂಥಾಲಯಗಳೂ ಎದುರಿಸುತ್ತಿದ್ದ ಬಹು ದೊಡ್ಡ ಸಮಸ್ಯೆಯೆಂದರೆ ವಿದೇಶಗಳಿಂದ ತರಿಸಿದ ಗ್ರಂಥಗಳ ಮೇಲೆ ತೆರಬೇಕಾಗಿದ್ದ ಸುಂಕ. ಈ ಸಮಸ್ಯೆಯನ್ನು ನಿವಾರಿಸಲು ಯುನೆಸ್ಕೊ ಯತ್ನಿಸಿತು. ವಿಜ್ಞಾನ, ಸಂಸ್ಕೃತಿ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಅತ್ಯಾವಶ್ಯಕವಾದ ಸಲಕರಣೆಗಳ ಮೇಲೆ ವಿಧಿಸಲಾಗುತ್ತಿದ್ದ ಸುಂಕ ವಿನಾಯಿತಿಯ ಬಗ್ಗೆ ಒಂದು ಅಂತಾರಾಷ್ಟ್ರೀಯ ಒಡಂಬಡಿಕೆ ಏರ್ಪಡಿಸಿತ್ತು. ಈ ಒಡಂಬಡಿಕೆಗೆ 1952ರ ಮೇ 21ರಂದು ಒಟ್ಟು 45 ರಾಷ್ಟ್ರಗಳು ಸಹಿ ಹಾಕಿದವು. ಗ್ರಂಥಾಲಯಗಳು, ವಸ್ತು ಸಂಗ್ರಹಾಲಯಗಳು, ಪ್ರಯೋಗಶಾಲೆಗಳು, ಮತ್ತು ವಿದ್ಯಾಸಂಸ್ಥೆಗಳು ತಮಗೆ ಬೇಕಾದ ಸಲಕರಣೆಗಳನ್ನು ವಿದೇಶಗಳಿಂದ ತರಿಸಿಕೊಂಡಾಗ ಅವುಗಳ ಮೇಲೆ ಆಮದು ಸುಂಕವನ್ನು ಮೊದಲಿನಂತೆ ತೆರಬೇಕಾಗಿಲ್ಲ. ಕೆಲವಕ್ಕೆ ರಿಯಾಯಿತಿ ದೊರೆತರೆ ಮತ್ತೆ ಕೆಲವು ಸಂಪೂರ್ಣ ಸುಂಕ ವಿಮೋಚನೆ ಪಡೆಯುತ್ತವೆ.

ಯುನೆಸ್ಕೊದ ಸಲಹೆಯನ್ನು ಪುರಸ್ಕರಿಸಿ ವಿಶ್ವ ಅಂಚೆ ಸಂಸ್ಥೆ 1957 ರಲ್ಲಿ ಆಟ್ಟವದಲ್ಲಿ ನಡೆದ 14ನೆಯ ಸಮ್ಮೇಳನದಲ್ಲಿ ಅನೇಕ ಹೊಸ ರಿಯಾಯಿತಿಗಳನ್ನು ಪ್ರಕಟಿಸಿತು. ಅದರ ಪ್ರಕಾರ ಗ್ರಂಥಗಳು, ವರ್ತಮಾನ ಪತ್ರಿಕೆಗಳು ಇಲ್ಲವೇ ಮತ್ತಾವುದೇ ಮುದ್ರಿತವಾದ ವಾಚನ ಸಾಮಗ್ರಿಗಳ ಮೇಲೆ ತೆರಬೇಕಾಗಿದ್ದ ಅಂಚೆವೆಚ್ಚ ಬಹಳ ಮಟ್ಟಿಗೆ ತಗ್ಗಿದೆ. ಈ ಹೊಸ ಸೌಲಭ್ಯಗಳು 1958ರಲ್ಲಿ ಜಾರಿಗೆ ಬಂದು ಪ್ರಪಂಚದ ಮೂಲೆಮೂಲೆಗೂ ಯಾವ ಅಡೆತಡೆಯೂ ಇಲ್ಲದಂತೆ ಜ್ಞಾನ ಪ್ರವಹಿಸಲು ಸಾಧ್ಯವಾಗಿದೆ.

**ಗ್ರಂಥ ಕೂಪನ್ನುಗಳು :** ವಿದೇಶಗಳಿಂದ ನೇರವಾಗಿ ಗ್ರಂಥಗಳನ್ನು ಕೊಳ್ಳುವಾಗ ಇದ್ದ ವಿದೇಶೀ ವಿನಿಮಯದ ಆರ್ಥಿಕ ಸಮಸ್ಯೆಗಳನ್ನು ಈ ವ್ಯವಸ್ಥೆ ನಿವಾರಿಸುತ್ತದೆ. ಇದು 1948ರಲ್ಲಿ ಜಾರಿಗೆ ಬಂತು. ಅಂತಾರಾಷ್ಟ್ರೀಯ ಮೌಲ್ಯವುಳ್ಳ ಈ ಕೂಪನ್ನುಗಳನ್ನು ಗ್ರಂಥಾಲಯಗಳು ತಮ್ಮ ರಾಷ್ಟ್ರೀಯ ನಾಣ್ಯಗಳಿಗೇ ವಿನಿಮಯ ಮಾಡಿಕೊಂಡು ಅವನ್ನು ವಿದೇಶಗಳಲ್ಲಿ ಪ್ರಕಟವಾದ ಗ್ರಂಥಗಳನ್ನು ಕೊಳ್ಳಲು ಉಪಯೋಗಿಸಲಾಗುತ್ತಿದೆ. ಇತ್ತೀಚೆಗೆ ಮೈಕ್ರೊಫಿಲ್ಮ್, ವೈಜ್ಞಾನಿಕ ಸಲಕರಣೆ ಹಾಗೂ ಇತರ ಶೈಕ್ಷಣಿಕ ವಸ್ತುಗಳನ್ನು ಆಮದು ಮಾಡಿಕೊಳ್ಳಲು ಯುನೆಸ್ಕೊ ಅನುಮತಿ ನೀಡಿದೆ.

**ಪ್ರಕಟಣೆಗಳು, ನಿಯತಕಾಲಿಕೆಗಳು :** ಹಲವಾರು ಗ್ರಂಥಗಳನ್ನು ಮತ್ತು ನಿಯತಕಾಲಿಕೆಗಳನ್ನು ಪ್ರಕಟಿಸುವುದರ ಜೊತೆಗೆ ಯುನೆಸ್ಕೊ ವಿವಿಧ ಸಂಘಸಂಸ್ಥೆಗಳಿಗೆ ಅಂಥ ಪ್ರಕಟನ ಕಾರ್ಯದಲ್ಲಿ ನೆರವನ್ನು ನೀಡುತ್ತಿದೆ. ಈ ಗ್ರಂಥಗಳ ಪಟ್ಟಿ ಈವರೆಗೆ ಯುನೆಸ್ಕೊ ಹೊರತಂದಿರುವ ಗ್ರಂಥಗಳ ಬೃಹತ್ ಸಂಖ್ಯೆಯನ್ನಷ್ಟೇ ಅಲ್ಲ, ಅವು ಎಂಥ ಅಮೂಲ್ಯ ಜ್ಞಾನಸಂಪತ್ತು, ಎಷ್ಟು ವೈವಿಧ್ಯಮಯ ಎಂಬುದನ್ನು ತೋರಿಸುತ್ತದೆ. ಯುನೆಸ್ಕೊ ಪ್ರಕಟಿಸಿದ ಹಲವಾರು ಗ್ರಂಥಗಳು ಅನೇಕ ಭಾಷೆಗಳಿಗೆ ತರ್ಜುಮೆಗೊಂಡಿವೆ.

ಯುನೆಸ್ಕೊ ಬುಲೆಟಿನ್ ಫಾರ್ ಲೈಬ್ರರೀಸ್ ಎಂಬ ದ್ವೈಮಾಸಿಕ ಪತ್ರಿಕೆ 1947ರಲ್ಲಿ ಜನ್ಮ ತಳೆಯಿತು. ಇದು ಇಂಗ್ಲಿಷ್, ಫ್ರೆಂಚ್, ರಷ್ಯನ್ ಮತ್ತು ಸ್ಪ್ಯಾನಿಷ್ ಭಾಷೆಗಳಲ್ಲಿ ಪ್ರಕಟವಾಗುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಇದರ ವ್ಯಾಪ್ತಿ ವಿಸ್ತಾರಗೊಂಡಿದೆ. ವಿಶ್ವದ ಗ್ರಂಥಸೂಚಿ ವರದಿಗಳಿಗೆ ಮೀಸಲಾಗಿದ್ದು ಈ ಪತ್ರಿಕೆ ಈಗ ಗ್ರಂಥಪಾಲನೆ ಮತ್ತು ಪ್ರಲೇಖನ ಕ್ಷೇತ್ರಗಳಿಗೆ ಸಂಬಂಧಿಸಿದ ಸಾರ್ವತ್ರಿಕ ಅಭಿಪ್ರಾಯಗಳ ಕೈಗನ್ನಡಿಯಾಗಿದೆ. ಯುನೆಸ್ಕೊದಿಂದ ನಿಯೋಜಿತವಾದ ಸಮಿತಿಗಳ ವರದಿಗಳನ್ನೂ ಸಮೀಕ್ಷೆಗಳನ್ನೂ ಮೊದಲು ಈ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ಅನಂತರ ಅವನ್ನು ಪ್ರತ್ಯೇಕವಾಗಿ ಪುನರ್ಮುದ್ರಿಸಿ ಹಂಚಲಾಗುವುದು.

ಬಿಬ್ಲಿಯಾಗ್ರಫಿ, ಡಾಕ್ಯುಮೆಂಟೇಷನ್, ಟರ್ಮಿನಾಲಜಿ–ಎಂಬುದೂ ಒಂದು ದ್ವೈಮಾಸಿಕ ಪತ್ರಿಕೆ. ನಾಲ್ಕು ಭಾಷೆಗಳಲ್ಲಿ ಪ್ರಕಟವಾಗುತ್ತಿದೆ. ಇದನ್ನು ಗ್ರಂಥಾಲಯಗಳಿಗೆ ಉಚಿತವಾಗಿ ಹಂಚಲಾಗುತ್ತಿದೆ. 1961ರಲ್ಲಿ ಬೆಳಕಿಗೆ ಬಂದ ಈ ಪತ್ರಿಕೆ ಯುನೆಸ್ಕೊದ ಅಂತಾರಾಷ್ಟ್ರೀಯ ಸಲಹಾ ಸಮಿತಿ ಮತ್ತು ಇತರ ತಾಂತ್ರಿಕ ಸಮಿತಿಗಳ ಸಹಾಯದಿಂದ ಪ್ರಕಟವಾಗುತ್ತಿದೆ. ಇದರಲ್ಲಿ ಯುನೆಸ್ಕೊ ವಾರ್ತೆ, ಮಾನವೀಯ, ಸಾಮಾಜಿಕ ಹಾಗೂ ಸಾಮಾನ್ಯ ಸಂಗತಿ ಮತ್ತು ವಿಜ್ಞಾನ ಎಂಬ ಮೂರು ವಿಭಾಗಗಳಿವೆ.

ಕಳೆದ 60 ವರ್ಷಗಳಿಂದ ವಿವಿಧ ರಾಷ್ಟ್ರಗಳಿಗೆ ಯುನೆಸ್ಕೊ ಗ್ರಂಥಾಲಯ ಅಭಿವೃದ್ಧಿಗಾಗಿ ನೀಡಿದ ನೆರವು ಹಲವು ಹಿಂದುಳಿದ ರಾಷ್ಟ್ರಗಳ ದೃಷ್ಟಿಯಿಂದ ಗಮನಾರ್ಹವಾದುದಾಗಿದೆ. (ಬಿ.ಎನ್‌ಎಜಿ.)

ಯುನೆಸ್ಕೊದ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ (i) ಅಂತಾರಾಷ್ಟ್ರೀಯ ಗ್ರಂಥವರ್ಷ, (ii) ಗ್ರಂಥ ಪ್ರಣಾಳಿಕೆ ಮತ್ತು (iii) ಜಾಗತಿಕ ಗ್ರಂಥ ಪ್ರದರ್ಶನ–ಎಂಬ ವಿಷಯಗಳನ್ನಿಲ್ಲಿ ಪ್ರಸ್ತಾವಿಸಲಾಗಿದೆ.

**(i) ಅಂತಾರಾಷ್ಟ್ರೀಯ ಗ್ರಂಥವರ್ಷ 1972 :** 'ಎಲ್ಲರಿಗೂ ಪುಸ್ತಕ' ಎಂಬ ಘೋಷಣೆಯೊಂದಿಗೆ 1972ರಲ್ಲಿ ಪ್ರಪಂಚಾದ್ಯಂತ ಆಚರಿಸಲಾದ ಗ್ರಂಥೋತ್ಸವ. ಇದನ್ನು ಆಚರಿಸಲು ಚಾಲನೆ ನೀಡಿದ್ದು ಯುನೆಸ್ಕೊ.

1971ರ ಅಕ್ಟೋಬರ್ ತಿಂಗಳಿನಲ್ಲಿ ಬ್ರಸಲ್ಸಿನಲ್ಲಿ ಸೇರಿದ ಅಂತಾರಾಷ್ಟ್ರೀಯ ಗ್ರಂಥವರ್ಷದ ಪ್ರೋತ್ಸಾಹ ಸಮಿತಿ ಹತ್ತು ಕವಲುಗಳ ಮಾರ್ಗದರ್ಶಿ ತತ್ತ್ವಗಳನ್ನು ವಿವರಿಸುವ ಪುಸ್ತಕ ಪ್ರಣಾಳಿಕೆಗೆ (ಚಾರ್ಟರ್ ಆಫ್ ದಿ ಬುಕ್) ಒಪ್ಪಿಗೆಯನ್ನಿತ್ತಿತು. ಈ ಪ್ರಣಾಳಿಕೆಯ ಮುಖ್ಯ ಉದ್ದೇಶಗಳು ಹೀಗಿವೆ: ಗ್ರಂಥಗಳ ಮುಕ್ತ ಓಡಾಟ, ಓದುವಿಕೆಗೆ ಪ್ರೋತ್ಸಾಹ, ಭಾಷಾಂತರಗಾರರಿಗೆ ಮತ್ತು ಬರೆಹಗಾರರಿಗೆ ಪ್ರೋತ್ಸಾಹ, ಗ್ರಂಥಗಳ ವಿಸ್ತೃತ ಉತ್ಪಾದನೆ ಮತ್ತು ವಿತರಣೆ, ಶಿಕ್ಷಣಕ್ಕಾಗಿ ಗ್ರಂಥಗಳ ಉಪಯೋಗ ಮತ್ತು ಅಂತಾರಾಷ್ಟ್ರೀಯ ತಿಳಿವಳಿಕೆ ಹೆಚ್ಚಲು ಅವುಗಳ ಬಳಕೆ–ಮುಂತಾದವು.

ಪ್ರಪಂಚದ ವಿವಿಧ ಭಾಗಗಳಲ್ಲಿನ ಬರೆಹಗಾರರನ್ನು ಪುಸ್ತಕ ವ್ಯವಸಾಯದವರನ್ನು ಹಾಗೂ ಅಭಿರುಚಿ ಹೊಂದಿದ ಓದುಗರನ್ನು ಒಂದೆಡೆ ತರುವುದೇ ಈ ಗ್ರಂಥವರ್ಷದ ಗುರಿಯಾಗಿತ್ತು. ಇದಲ್ಲದೆ ಬರೆಹಗಾರನ ಸೃಜನಶೀಲತೆಗೆ ಸುಗಮ ಮಾರ್ಗವನ್ನೊದಗಿಸುವುದು, ಪ್ರಕಾಶೋದ್ಯಮದ ವಿಕಾಸಕ್ಕೆ ಮತ್ತು ಗ್ರಂಥೋತ್ಪಾದನೆಗೆ ಸೌಲಭ್ಯವನ್ನೊದಗಿಸುವುದು, ಕೃತಿಸ್ವಾಮ್ಯವಿರುವ ಉತ್ತಮ ಗ್ರಂಥಗಳನ್ನು ಅಂತಾರಾಷ್ಟ್ರೀಯ ಬಳಕೆಗಾಗಿ ಪಡೆದುಕೊಳ್ಳುವುದು, ಭಾಷೆಗಳಿಗೆ ತರ್ಜುಮೆ ಮಾಡುವುದು–ಇವು ಅದು ಇಟ್ಟುಕೊಂಡಿದ್ದ ಕೆಲವು ಉದ್ದೇಶಗಳು. ಈ ಗ್ರಂಥಗಳಿಗೆ ಬೇಡಿಕೆಯನ್ನೊದಗಿಸುವುದರೊಂದಿಗೆ ಅವು ಜನರಿಗೆ ಸುಲಭವಾಗಿ ಲಭ್ಯವಾಗುವಂತೆ ಮಾಡುವುದು ಗ್ರಂಥವರ್ಷದ ಆಚರಣೆಯ ಮುಖ್ಯೋದ್ದೇಶವಾಗಿತ್ತು. ಪ್ರಪಂಚದಾದ್ಯಂತ ಅಂತಾರಾಷ್ಟ್ರೀಯ ಗ್ರಂಥ ವರ್ಷವನ್ನು ತುಂಬ ಉತ್ಸಾಹದಿಂದ ಆಚರಿಸಲಾಯಿತು. ಈ ಸಂಬಂಧವಾಗಿ ಕೆಲವು ದೇಶಗಳು ವಿಶೇಷ ಅಂಚೆಚೀಟಿಗಳನ್ನು ಹೊರಡಿಸಿದವು. ಬಹಳ ರಾಷ್ಟ್ರಗಳಲ್ಲಿ ಪುಸ್ತಕ ಪ್ರದರ್ಶನ, ರಾಷ್ಟ್ರೀಯ ಅಂತಾರಾಷ್ಟ್ರೀಯ ಗ್ರಂಥ ಸಮ್ಮೇಳನ, ಚಲನಚಿತ್ರಗಳ ಪ್ರದರ್ಶನ, ಟೆಲಿವಿಷನ್‌ಗಳ ಮೂಲಕ ಪ್ರಸಾರ– ಮೊದಲಾದ ಆಕರ್ಷಕ ಕಾರ್ಯಕ್ರಮಗಳೇರ್ಪಟ್ಟುವು. 1972ರ ಸೆಪ್ಟೆಂಬರ್ ತಿಂಗಳಿನಲ್ಲಿ ಮಾಸ್ಕೋದಲ್ಲಿ ಜರುಗಿದ ಅಂತಾರಾಷ್ಟ್ರೀಯ ವಿಚಾರ ಸಂಕಿರಣ ಮಹತ್ತ್ವದ್ದು. (ಸಿ.ವಿ.ಎಚ್.)

**ಕನ್ನಡ ಸಾಹಿತ್ಯ ಪರಿಷತ್ತು ಆಚರಿಸಿದ ಅಂತಾರಾಷ್ಟ್ರೀಯ ಪುಸ್ತಕ ವರ್ಷ :** ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಅಂತಾರಾಷ್ಟ್ರೀಯ ಪುಸ್ತಕ ವರ್ಷವನ್ನು ಭಾರತದ ಸ್ವಾತಂತ್ರ್ಯದ ಬೆಳ್ಳಿಹಬ್ಬದೊಡನೆ ಸಮನ್ವಯಿಸಿ ತುಂಬ ಯಶಸ್ವಿಯಾಗಿ ಆಚರಿಸಿತು. ಪುಸ್ತಕ ವರ್ಷ ಎಂಬ ಹೆಸರು ಖಚಿತವಾಗಿ ಕನ್ನಡಿಗರಿಗೆ ಪುಸ್ತಕದ ವರ್ಷವೇ ಆಯಿತು. ಕನ್ನಡ ಸಾಹಿತ್ಯ ಪರಿಷತ್ತು ಅಂತಾರಾಷ್ಟ್ರೀಯ ಪುಸ್ತಕ ವರ್ಷವನ್ನು ಆಚರಿಸುವ ಸಲುವಾಗಿ ಹಾಕಿಕೊಂಡ ಕಾರ್ಯಕ್ರಮವೆಂದರೆ ಜಿಲ್ಲಾ ಕೇಂದ್ರಗಳಲ್ಲಿ ಬೃಹತ್ ಪುಸ್ತಕ ಪ್ರದರ್ಶನ ಮೂಲಕ ಮತ್ತು ಅಲ್ಲಿಂದ ಸುತ್ತಮುತ್ತಲಿನ ತಾಲ್ಲೂಕು ಗ್ರಾಮ ಪ್ರದೇಶಗಳಲ್ಲಿ ವಾಹನದ ಮೂಲಕ ಪುಸ್ತಕ ಪ್ರದರ್ಶನವನ್ನು ಏರ್ಪಾಡು ಮಾಡುವುದು ಮತ್ತು ಸಾಧ್ಯವಾದಷ್ಟು ಮಾರಾಟ ಮಾಡುವುದು. ಜೊತೆಗೆ ಆ ಪ್ರದರ್ಶನ ಸಂದರ್ಭದಲ್ಲಿಯೇ ಆಯಾ ಪ್ರದೇಶದ ಶಾಲಾ ಕಾಲೇಜುಗಳಲ್ಲಿ ಪುಸ್ತಕದ ಬಗ್ಗೆ ಚರ್ಚೆಗಳನ್ನೂ ಪ್ರಬಂಧಸ್ಪರ್ಧೆಗಳನ್ನೂ ನಡೆಸುವುದು. ಮೊದಲ ಪುಸ್ತಕ ಪ್ರದರ್ಶನ ಬೆಂಗಳೂರಿನಲ್ಲಿ 1972ರ ಆಗಸ್ಟ್ 13ರಂದು ಮೈಸೂರು ರಾಜ್ಯಪಾಲರಿಂದ ಆರಂಭಗೊಂಡಿತು.

ಪುಸ್ತಕ ಪ್ರದರ್ಶನದಲ್ಲಿ ಐದು ಸಾವಿರಕ್ಕೂ ಮಿಕ್ಕ ಪುಸ್ತಕಗಳಿರುತ್ತಿದ್ದುವು. ಪುಸ್ತಕಗಳನ್ನು ವಿಷಯಕ್ಕನುಗುಣವಾಗಿ ವಿಂಗಡಿಸಿ ಪ್ರತ್ಯೇಕವಾದ ನಿಲುವುಗಳಲ್ಲಿ (ಸ್ಟ್ಯಾಂಡ್ಸ್) ಜೋಡಿಸಲಾಗುತ್ತಿತ್ತು. ಯಾವ ಪುಸ್ತಕವೂ ಸಂದರ್ಶಕರ ಕಣ್ಣನ್ನು ತಪ್ಪಿಸಿಕೊಳ್ಳುವಂತಿರಲಿಲ್ಲ. ಪ್ರದರ್ಶನದ ಜೊತೆಗೇ ಮಾರಾಟದ ಏರ್ಪಾಡೂ ಸುಸಜ್ಜಿತವಾಗಿ ನಡೆಯಲು ಎಚ್ಚರಿಕೆ ವಹಿಸಲಾಗುತ್ತಿತ್ತು. ಜಿಲ್ಲಾ ಸಮಿತಿಗಳು ಪ್ರದರ್ಶನಕ್ಕೆ ಸುಮಾರು ಒಂದು ತಿಂಗಳಿಗೆ ಮುಂಚೆಯೇ ಅಲ್ಲಲ್ಲಿಯ ಸಾರ್ವಜನಿಕರಿಗೆ, ಶಾಲಾಕಾಲೇಜುಗಳಿಗೆ ಪುಸ್ತಕದ ಕೂಪನ್ನುಗಳನ್ನು ಮಾರಾಟ ಮಾಡಿ ಪ್ರದರ್ಶನದ ಆರಂಭದ ವೇಳೆಗೆ ಪುಸ್ತಕಗಳನ್ನು ಪಡೆಯುವ ಅವಕಾಶಗಳನ್ನು ಕಲ್ಪಿಸಿಕೊಟ್ಟಿದ್ದವು.

ಪುಸ್ತಕ ಪ್ರದರ್ಶನ ಕರ್ನಾಟಕದ ಹದಿನಾಲ್ಕು ಜಿಲ್ಲೆಗಳಲ್ಲಿ ಯಶಸ್ವಿಯಾಗಿ ನಡೆದವು. ಬರಗಾಲದ ಇಕ್ಕಟ್ಟಿನ ಪರಿಸ್ಥಿತಿಯಿಂದ ಉಳಿದ ಜಿಲ್ಲೆಗಳಲ್ಲಿ ಪ್ರದರ್ಶನ ನಡೆಯಲಿಲ್ಲ. ಮೈಸೂರಿನ ದಸರಾ ವಸ್ತುಪ್ರದರ್ಶನಾಲಯದಲ್ಲಿ ಪುಸ್ತಕ ಭಾಗ್ಯದ ಮಳಿಗೆ ಇಪ್ಪತ್ತೆಂಟು ದಿನಗಳ ಪರ್ಯಂತ ಸಂದರ್ಶಕರಿಗೆ ಒಂದು ಹಬ್ಬವಾಗಿತ್ತು. ಬೆಂಗಳೂರಿನಲ್ಲಂತೂ ಹೆಚ್ಚುಕಡಿಮೆ ಪ್ರತಿ ಬಡಾವಣೆಯಲ್ಲಿ ಮತ್ತು ಕಾಲೇಜಿನ ಆವರಣಗಳಲ್ಲಿ ಪ್ರದರ್ಶನಗಳು ನಡೆದವು.

ಮನೆಗೊಂದು ಪುಸ್ತಕ ಭಂಡಾರ ಎಂಬ ಒಂದು ಚಳವಳಿಯನ್ನು ಪರಿಷತ್ತು ಘೋಷಿಸಿತು. ಆ ಯೋಜನೆಯ ಪ್ರಕಾರ ಮೊದಲ ಚಳವಳಿಯನ್ನು ಪರಿಷತ್ತೇ ಪ್ರಾರಂಭಿಸಿತು. 1973ರ ಫೆಬ್ರುವರಿ 11ರಿಂದ ಮೂರು ದಿನಗಳವರೆಗೆ ಕನ್ನಡದ ಕಾರ್ಯಕರ್ತರು ನಗರದ ವಿವಿಧ ಹರಹುಗಳಲ್ಲಿ ಪಾದಯಾತ್ರೆ ನಡೆಸಿ ಕೈಚೀಲಗಳಲ್ಲಿ ಪುಸ್ತಕಗಳನ್ನು ಹೊತ್ತು ಮನೆಮನೆಗೆ ಭೇಟಿಕೊಟ್ಟು ಪುಸ್ತಕಗಳನ್ನು ಮಾರಿದರು. ಯಜಮಾನರಿಗೆ, ಗೃಹಿಣಿಯರಿಗೆ, ವಿದ್ಯಾರ್ಥಿಗಳಿಗೆ, ಮಕ್ಕಳಿಗೆ ಬೇಕಾದ ಹೊತ್ತಗೆಗಳನ್ನು ಅವರವರ ಅಭಿರುಚಿಗೆ ತಕ್ಕಂತೆ ಒದಗಿಸಿದರು. ಈ ಕಾರ್ಯಕ್ರಮಕ್ಕೆ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ಆಶೀರ್ವಾದದ ಮೂಲಕ ಚಾಲನೆ ಕೊಟ್ಟರು. ಕೇಂದ್ರ ಯುವಜನ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವೆ ಸರೋಜಿನಿ ಮಹಿಷಿಯವರು ಸ್ತ್ರೀ ಕಾರ್ಯಕರ್ತರ ನೇತಾರರಾಗಿ ಒಂದು ದಿನದ ಪಾದಯಾತ್ರೆ ಕಾರ್ಯಕ್ರಮವನ್ನು ದಿನಾಂಕ 1973ರ ಮೇ 27 ರಂದು ಆಗುಮಾಡಿಸಿಕೊಟ್ಟರು. ಪ್ರಸಿದ್ಧ ಲೇಖಕಿಯರು ಈ ಪಾದಯಾತ್ರೆಯಲ್ಲಿ ಭಾಗವಹಿಸಿದ್ದರು.

**(ii) ಗ್ರಂಥ ಪ್ರಣಾಳಿಕೆ :** 'ಎಲ್ಲರಿಗೂ ಪುಸ್ತಕ' ಎಂಬ ಘೋಷಣೆಯನ್ನು ಕಾರ್ಯಗತಗೊಳಿಸುವಲ್ಲಿ 1970ನೆಯ ನವೆಂಬರಿನಲ್ಲಿ ಪ್ಯಾರಿಸ್ಸಿನಲ್ಲಿ ಜರುಗಿದ ಯುನೆಸ್ಕೊದ 16ನೆಯ ಅಧಿವೇಶನ ಮತ್ತು 1971ನೆಯ ಅಕ್ಟೋಬರಿನಲ್ಲಿ ಬ್ರಸಲ್ಸಿನಲ್ಲಿ ನಡೆದ ಯುನೆಸ್ಕೊದ ಅಂತಾರಾಷ್ಟ್ರೀಯ ಗ್ರಂಥವರ್ಷದ ಪ್ರೋತ್ಸಾಹೀ ಸಮಿತಿ ಸಭೆ–ಇವುಗಳ ಪ್ರಯತ್ನ ಬಹುಮಟ್ಟಿಗೆ ಯಶಸ್ಸುಗಳಿಸಿತು. ಬ್ರಸಲ್ಸ್‌ನ ಸಭೆಯಲ್ಲಿ ಪ್ರಪಂಚದ ಪ್ರಮುಖ ರಾಷ್ಟ್ರಗಳ ಲೇಖಕರೂ ಪ್ರಕಾಶಕರೂ ಪುಸ್ತಕ ಮಾರಾಟಗಾರರೂ ಭಾಗವಹಿಸಿದ್ದರು. ರಾಷ್ಟ್ರೀಯ ಇಲ್ಲವೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗ್ರಂಥಗಳ ಬಳಕೆ, ವಿತರಣಾ ನಿರ್ವಹಣೆಯನ್ನು ಕುರಿತಂತೆ ಮಾರ್ಗದರ್ಶನವನ್ನೀಡುವ ನಿರ್ದೇಶನಾ ತತ್ತ್ವಗಳನ್ನೊಳಗೊಂಡ ಪ್ರಣಾಳಿಕೆಯೊಂದನ್ನು ರಚಿಸುವ ಸಂಬಂಧದಲ್ಲಿ ಗ್ರಂಥ ಮಾರಾಟಗಾರರ ಸಂಘಗಳ ಅಂತಾರಾಷ್ಟ್ರೀಯ ಸಂಸ್ಥೆ, ಗ್ರಂಥಕರ್ತ ಸಂಘಗಳ ಅಂತಾರಾಷ್ಟ್ರೀಯ ಒಕ್ಕೂಟ, ಅಂತಾರಾಷ್ಟ್ರೀಯ ಪ್ರಲೇಖನ ಸಂಸ್ಥೆ, ಗ್ರಂಥಾಲಯ ಸಂಘಗಳ ಅಂತಾರಾಷ್ಟ್ರೀಯ ಮಹಾಮಂಡಳ, ಭಾಷಾಂತರಕಾರರ ಅಂತಾರಾಷ್ಟ್ರೀಯ ಮಹಾಮಂಡಳ, ಅಂತಾರಾಷ್ಟ್ರೀಯ ಬರೆಹಗಾರರ ಸಂಘ ಮತ್ತು ಅಂತಾರಾಷ್ಟ್ರೀಯ ಪ್ರಕಾಶಕರ ಸಂಘ–ಇವು ಒಂದು ನಿರ್ಧಾರಕ್ಕೆ ಬಂದವು. ಈ ನಿರ್ಧಾರದ ಫಲವೇ, ಗ್ರಂಥ ಪ್ರಣಾಳಿಕೆಯ (ಚಾರ್ಟರ್ ಆಫ್ ದಿ ಬುಕ್) ಉಗಮಕ್ಕೆ ದಾರಿ ಮಾಡಿಕೊಟ್ಟಿತು. ಅಂಗೀಕೃತವಾದ ಗ್ರಂಥ ಪ್ರಣಾಳಿಕೆಯಲ್ಲಿ ಹತ್ತು ಕಲಮುಗಳಿವೆ.

1. ಪ್ರತಿಯೊಬ್ಬನಿಗೂ ಓದುವ ಹಕ್ಕು ಇದೆ.

ವಾಚನಾಭಿರುಚಿಯ ಅವಕಾಶ ಪ್ರತಿಯೊಬ್ಬನಿಗೂ ಲಭಿಸುವಂತೆ ನೋಡಿಕೊಳ್ಳುವುದು ಸಮಾಜದ ಆದ್ಯ ಕರ್ತವ್ಯ. ನಿರಕ್ಷರತೆಯಿಂದ ಪ್ರಪಂಚದ ಬಹು ಭಾಗಗಳಲ್ಲಿಯ ಜನ ಗ್ರಂಥಗಳಿಂದ ವಿಮುಖರಾಗಿರುವುದರಿಂದ ನಿರಕ್ಷರತೆಯನ್ನು ನಿರ್ಮೂಲಗೊಳಿಸುವುದು ಸರ್ಕಾರದ ಹೊಣೆ. ಗ್ರಂಥಗಳು ಓದುಗರ ಹಾಗೂ ಬದಲಾಗುತ್ತಿರುವ ಸಮಾಜದ ಆವಶ್ಯಕತೆಗಳನ್ನು ಪೂರೈಸಬಲ್ಲದು ಎಂಬ ಕಲ್ಪನೆಯ ಹೊಣೆಯನ್ನು ಹೊತ್ತ ಪ್ರಕಾಶಕರು ಮತ್ತು ಹಂಚಿಕೆದಾರರು, ಸಮಾಜ ಹಾಗೂ ಸರ್ಕಾರ, ವಾಚನಾಭಿರುಚಿಗಳನ್ನು ಹುಟ್ಟಿಸಲು ಹಾಗೂ ಅದನ್ನು ವೃದ್ಧಿಗೊಳಿಸಲು ಬಹುಮುಖ ಸಹಾಯವನ್ನು ನೀಡಬೇಕು.

2. ಶಿಕ್ಷಣಕ್ಕೆ ಗ್ರಂಥಗಳು ಅತ್ಯಾವಶ್ಯಕ.

ಕ್ರಾಂತಿಕಾರಿ ಬದಲಾವಣೆಗಳಿಗೊಳಗಾಗುವ ಶೈಕ್ಷಣಿಕ ಕ್ಷೇತ್ರದಲ್ಲಿ, ದೂರಗಾಮಿ ವಿಸ್ತೃತ ಕಾರ್ಯಕ್ರಮಗಳಿಗನುಗುಣವಾಗಿ ಯೋಗ್ಯ ಪಠ್ಯಪುಸ್ತಕಗಳ ಯೋಜನೆ ಅವಶ್ಯ. ಅಂತೆಯೇ ಶೈಕ್ಷಣಿಕ ಗ್ರಂಥಗಳ ವಿಷಯ ಹಾಗೂ ಗುಣಮಟ್ಟದಲ್ಲಿಯೂ ಎಲ್ಲ ರಾಷ್ಟ್ರಗಳಲ್ಲಿ ನಿರಂತರ ಸುಧಾರಣೆಯಾಗುವುದೂ ಅವಶ್ಯ.

ಶಾಲಾ ಗ್ರಂಥಾಲಯಗಳಿಗೆ ಪಠ್ಯಪುಸ್ತಕಗಳ ಹಾಗೂ ಸಾಕ್ಷರತಾ ಪ್ರಸಾರ ಯೋಜನೆಗಳಿಗೆ ಅವಶ್ಯವಿರುವ ಸಾಮಾನ್ಯ ಗ್ರಂಥಗಳ ಬೇಡಿಕೆಯನ್ನೊದಗಿಸಲು ರಾಷ್ಟ್ರೀಯ ಪ್ರಕಾಶಕರು ಪ್ರಾದೇಶಿಕ ಗ್ರಂಥೋತ್ಪಾದನೆಯನ್ನು ಅವಲೋಕಿಸಬೇಕಾಗುತ್ತದೆ.

3. ಲೇಖಕರು ರಚನಾತ್ಮಕವಾಗಿ ಪಾತ್ರವಹಿಸಲು ಅವರಿಗೆ ಅನುಕೂಲ ಪರಿಸ್ಥಿತಿಯನ್ನೊದಗಿಸುವುದು ಸಮಾಜದ ವಿಶಿಷ್ಟ ಕರ್ತವ್ಯ.

ಯಾವುದೇ ವೈಜ್ಞಾನಿಕ, ಸಾಹಿತ್ಯಕ ಅಥವಾ ಕಲಾತ್ಮಕ ಕೃತಿಯಿಂದ ಉಂಟಾಗುವ ನೈತಿಕ ಮತ್ತು ಭೌತಿಕ ಹಿತಾಸಕ್ತಿಗಳನ್ನು ಸಂರಕ್ಷಿಸುವುದು ಪ್ರತಿಯೊಬ್ಬನ ಹಕ್ಕು ಎಂದು ಪ್ರತಿಪಾದಿಸುವ ಮಾನವಹಕ್ಕುಗಳ ಜಾಗತಿಕ ಘೋಷಣೆಯ ರಕ್ಷೆಯನ್ನು, ಭಾಷೆಯ ಮೇರೆಯಾಚೆಗೆ ಇರುವ ಕ್ಷಿತಿಜಗಳತ್ತ ಒಯ್ಯಬಲ್ಲ, ಜನತೆ ಹಾಗೂ ಗ್ರಂಥಕರ್ತರ ನಡುವೆ ಅವಶ್ಯವಿರುವ ಸೇತುವೆಯನ್ನು ನಿರ್ಮಿಸುವ ಭಾಷಾಂತರಕಾರರಿಗೂ ಒದಗಿಸಬೇಕು. ಹೀಗೆ ಲೇಖಕರನ್ನು ಅವರ ರಚನಾತ್ಮಕ ಪಾತ್ರದಲ್ಲಿ ಪ್ರೋತ್ಸಾಹಿಸಬೇಕು ಮತ್ತು ಅನುವಾದಗಳ ಮುಖಾಂತರ ಇತರ ಭಾಷೆಗಳ ಸಾಹಿತ್ಯದಲ್ಲಡಗಿರುವ ಸಿರಿವಂತಿಕೆಯನ್ನು ಒದಗಿಸಬೇಕು.

4. ರಾಷ್ಟ್ರೀಯ ಅಭಿವೃದ್ಧಿಗಾಗಿ ಯೋಗ್ಯ ಪ್ರಕಾಶನ ವೃತ್ತಿ ಅವಶ್ಯ. ಗ್ರಂಥ ಪ್ರಕಟಣೆಯಲ್ಲಿ ಹಲವಾರು ಏರುಪೇರುಗಳಿರುವುದರಿಂದ ಕೆಲವು ರಾಷ್ಟ್ರಗಳು ಸಾಕಷ್ಟು ಓದುವ ಸಾಮಗ್ರಿಯನ್ನೊದಗಿಸುವಲ್ಲಿ ಹಿಂದುಳಿದಿವೆ. ಅದಕ್ಕಾಗಿ ರಾಷ್ಟ್ರೀಯ ಪ್ರಜ್ಞೆ ಮತ್ತು ಅಂತಾರಾಷ್ಟ್ರೀಯ ಸಹಕಾರ ಬೇಕು. ಪ್ರಕಾಶನ ವೃತ್ತಿಯ ಅಭಿವೃದ್ಧಿ ಶಿಕ್ಷಣದೊಡನೆ ಒಂದಾಗುವುದೂ ಆರ್ಥಿಕ ಹಾಗೂ ಸಾಮಾಜಿಕ ಯೋಜನೆಗಳನ್ನು ರಾಷ್ಟ್ರೀಯ ಗ್ರಂಥಾಭಿವೃದ್ಧಿ ಸಮಿತಿಗಳ ಮುಖಾಂತರ ವಿಸ್ತರಿಸುವುದೂ ಬಹುಮುಖ ತಳಹದಿಯ ಆರ್ಥಿಕ ನೀತಿಯನ್ನವಲಂಬಿಸಿದೆ.

5. ಪುಸ್ತಕ ತಯಾರಿಕೆಯ ಅನುಕೂಲತೆಗಳು ಪ್ರಕಾಶನಾಭಿವೃದ್ಧಿಗೆ ಅವಶ್ಯ. ಪುಸ್ತಕ ತಯಾರಿಕೆಯ ಅಭಿವೃದ್ಧಿಗೆ ಅವಶ್ಯವಿರುವ ಕಾಗದ, ಮುದ್ರಣ ಮತ್ತು ರಟ್ಟುಕಟ್ಟುವ ಉಪಕರಣಗಳಿತ್ಯಾದಿಗಳನ್ನೊದಗಿಸುವ ಏರ್ಪಾಡನ್ನು ತಮ್ಮ ಆರ್ಥಿಕ ಯೋಜನೆಯಲ್ಲಿ ಆಯಾ ಸರ್ಕಾರಗಳು ಮಾಡಿಕೊಳ್ಳಬೇಕು. ತಮ್ಮ ರಾಷ್ಟ್ರೀಯ ಸಂಪನ್ಮೂಲಗಳಿಂದ ಹಾಗೂ ಸುಲಭತರ ಉಪಕರಣಗಳ ಆಮದಿನೊಂದಿಗೆ, ಕಡಿಮೆ ಬೆಲೆಯಲ್ಲಿ ಆಕರ್ಷಕವಾಗಿರುವ ಓದುವ ಸಾಮಗ್ರಿಯನ್ನು ಒದಗಿಸಬಹುದಾಗಿದೆ. ಅಲ್ಲದೆ ಪುಸ್ತಕ ತಯಾರಕರು ಪ್ರಕಟಣೆಯಲ್ಲಿ ಉನ್ನತಮಟ್ಟವನ್ನು ಕಾಯ್ದುಕೊಳ್ಳಬೇಕು.

6. ಪ್ರಕಾಶಕರು ಹಾಗೂ ಓದುಗರ ನಡುವೆ ಗ್ರಂಥ ಮಾರಾಟಗಾರರು ಸೇತುವೆಯಂತೆ ಮಹತ್ತ್ವಪೂರ್ಣ ಸೇವೆಯನ್ನು ಒದಗಿಸುವರು. ವಾಚನಾಭಿರುಚಿಯನ್ನು ಬೆಳೆಸುವ ಪ್ರಯತ್ನದಲ್ಲಿ ಗ್ರಂಥ ಮಾರಾಟಗಾರರ ಮೇಲೆ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಹೊಣೆಯಿರುತ್ತದೆ. ಓದುಗರಿಗೆ ಸಾಕಷ್ಟು ಹಾಗೂ ಯೋಗ್ಯ ಗ್ರಂಥಗಳು ನಿಲುಕುವಂತೆ ನೋಡಿಕೊಳ್ಳುವಲ್ಲಿ ಗ್ರಂಥ ಮಾರಾಟಗಾರರು ಮಹತ್ತ್ವದ ಪಾತ್ರವನ್ನು ವಹಿಸಬಲ್ಲರು. ಅಂಚೆ ರಿಯಾಯತಿಯಿಂದಾಗಿ ಈ ಕರ್ತವ್ಯವನ್ನು ನಿರ್ವಹಿಸುವುದು ಸಾಧ್ಯವಾಗಬಹುದಾಗಿದೆ.

7. ಬೌದ್ಧಿಕ ವಿಕಾಸ ಹಾಗೂ ಸಮಾಚಾರ ವಿತರಣೆ ಮತ್ತು ಜ್ಞಾನ ಸಂವರ್ಧನೆ ಹಾಗೂ ಸೌಂದರ್ಯಾನುಭೂತಿಗಳಿಗೆ ಗ್ರಂಥಾಲಯಗಳು ರಾಷ್ಟ್ರೀಯ ಸಂಪನ್ಮೂಲಗಳಾಗಿವೆ. ಗ್ರಂಥಾಲಯಗಳು ಗ್ರಂಥ ವಿತರಣೆಯ ಕೇಂದ್ರಗಳಷ್ಟೇ ಆಗಿರದೆ ಓದುಗನ ಬೇಡಿಕೆಯನ್ನು ಪೂರೈಸುವ ಪರಿಣಾಮಕಾರಿ ಸಾಧನಗಳೂ ಆಗಿವೆ. ಸಾರ್ವಜನಿಕ ಸೇವೆಯಲ್ಲಿ ಅವು ವ್ಯಕ್ತಿಯ ಉನ್ನತಿಗೂ ಜೀವಾವಧಿ ಶೈಕ್ಷಣಿಕ ಪ್ರಗತಿಗೂ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೂ ಬೇಕಾದ ತಿಳಿವಳಿಕೆಯನ್ನೊದಗಿಸುತ್ತವೆ. ಗ್ರಂಥಾಲಯಗಳ ಸೇವೆ ರಾಷ್ಟ್ರದ ಅಂತಃಶಕ್ತಿಗಳಿಗೆ ಹಾಗೂ ಆವಶ್ಯಕತೆಗಳಿಗನುಗುಣವಾಗಿರಬೇಕಾಗುತ್ತದೆ. ನಗರಗಳಲ್ಲಿ ಮಾತ್ರವಲ್ಲದೆ ಗ್ರಂಥಪೂರೈಕೆಗಳಿಲ್ಲದ ಬಹುಸಂಖ್ಯಾತ ಹಳ್ಳಿಗಳಲ್ಲಿ ಮತ್ತು ಪ್ರತಿ ಶಾಲೆಯಲ್ಲಿ ನಿಪುಣಗ್ರಂಥಪಾಲರು ಇರುವುದರ ಜೊತೆಗೆ ಗ್ರಂಥಾಲಯದ ಆರ್ಥಿಕ ಪರಿಸ್ಥಿತಿ ಸುಧಾರಿಸುವಂತಾಗಬೇಕು.

8. ಪ್ರಲೇಖನ ವ್ಯವಸ್ಥೆ ಗ್ರಂಥಗಳನ್ನು ಸಂರಕ್ಷಿಸುವುದರೊಂದಿಗೆ ಅವುಗಳಲ್ಲಿ ಅಡಕವಾಗಿರುವ ಜ್ಞಾನವನ್ನು ಪ್ರತಿಕೃತಿಯಲ್ಲೊದಗಿಸುವ ಮಹತ್ತ್ವದ ಸೇವೆಯನ್ನೀಯುತ್ತಿದೆ. ವೈಜ್ಞಾನಿಕ ತಾಂತ್ರಿಕ ಮತ್ತು ಇತರ ವಿಶಿಷ್ಟ ಗ್ರಂಥಗಳಿಗಂತೂ ಪ್ರಲೇಖನ ಸೇವೆ ಅತ್ಯಾವಶ್ಯಕವೆನಿಸಿದೆ. ಕಾರಣ ಇಂಥ ಸೇವೆಯನ್ನು ಸರ್ಕಾರ ಹಾಗೂ ಗ್ರಂಥ ಪ್ರಪಂಚಕ್ಕೆ ಸಂಬಂಧಿಸಿದ ಸಕಲರ ನೆರವಿನಿಂದ ಅಭಿವೃದ್ಧಿಗೊಳಿಸಬೇಕು. ಎಲ್ಲ ಕಾಲದಲ್ಲಿಯೂ ಗರಿಷ್ಠ ಮಾಹಿತಿ ಲಭ್ಯವಾಗುವುದಕ್ಕೋಸ್ಕರ ಆವಶ್ಯಕ ಸಾಧನಗಳ ಉಚಿತ ಸೇವಾವ್ಯವಸ್ಥೆಗೆ ಪರಮಾವಧಿ ಉತ್ತೇಜನವೀಯಬೇಕು.

9. ರಾಷ್ಟ್ರ ರಾಷ್ಟ್ರಗಳಲ್ಲಿಯ ಗ್ರಂಥಗಳ ಮುಕ್ತ ವಿತರಣೆ ಆಯಾ ರಾಷ್ಟ್ರದ ಗ್ರಂಥ ಪೂರೈಕೆಗೆ ಸಹಾಯಕವಾಗುವುದಲ್ಲದೆ ಅಂತಾರಾಷ್ಟ್ರೀಯ ತಿಳಿವಳಿಕೆಯನ್ನು ಹೆಚ್ಚಿಸುತ್ತದೆ. ಜಾಗತಿಕ ರಚನಾತ್ಮಕ ಶಕ್ತಿಯಲ್ಲಿ ಎಲ್ಲರೂ ಭಾಗಿಗಳಾಗಲು ಶಕ್ತರಾಗಬೇಕಾದರೆ ಗ್ರಂಥಗಳ ಅನಿರ್ಬಂಧಿತ ಸಾಗಾಣಿಕೆ ಅವಶ್ಯ. ಸುಂಕ ಹಾಗೂ ಇತರ ಕರಪಟ್ಟಿಗಳಂಥ ತೊಡಕುಗಳನ್ನು ಯುನೆಸ್ಕೊದ ಕರಾರುಗಳು ಉಳಿದ ಅಂತಾರಾಷ್ಟ್ರೀಯ ಶಿಫಾರಸುಗಳು ಒಪ್ಪಂದಗಳ ವಿಸ್ತೃತ ಕಾರ್ಯಾಚರಣೆಯ ಮುಖಾಂತರ ನಿವಾರಿಸಬಹುದು. ಗ್ರಂಥಗಳನ್ನು ಮತ್ತು ಗ್ರಂಥಗಳ ರಚನೆಗೆ ಅವಶ್ಯವಿರುವ ಕಚ್ಚಾಸಾಮಗ್ರಿಯನ್ನು ಕೊಳ್ಳುವುದಕ್ಕೆ ಬೇಕಾಗಿರುವ ರಹದಾರಿಗಳನ್ನು ಮತ್ತು ವಿದೇಶೀ ಹಣ ವಿನಿಮಯವನ್ನು ಇದಕ್ಕಾಗಿ ಧಾರಾಳವಾಗಿ ಕೊಡಬೇಕು. ಮತ್ತು ಒಳಾಡಳಿತ ಕರ ಹಾಗೂ ಗ್ರಂಥ ವ್ಯಾಪಾರದಲ್ಲಿರುವ ಇತರ ಆತಂಕಗಳನ್ನು ಸಾಧ್ಯವಿದ್ದಷ್ಟು ಕಡಿಮೆ ಮಾಡಬೇಕು.

10. ಗ್ರಂಥಗಳು ಅಂತಾರಾಷ್ಟ್ರೀಯ ತಿಳಿವಳಿಕೆ ಮತ್ತು ಶಾಂತಿ ಸಹಕಾರಕ್ಕೆ ಸಹಾಯಕಾರಿಯಾಗುವುವು. ಮಾನವನ ಮನಸ್ಸಿನಲ್ಲಿ ಯುದ್ಧಗಳ ವಿಚಾರಗಳು ಉದ್ಭವವಾಗುವಂತೆಯೇ ಶಾಂತಿ ಸಂರಕ್ಷಣೆಯ ಅಗತ್ಯ ಅಲ್ಲಿಯೇ ಅಂಕುರಿಸುವಂತೆ ಮಾಡಬೇಕೆಂದು ಯುನೆಸ್ಕೊ ಸಭೆ ಪ್ರತಿಪಾದಿಸುತ್ತದೆ. ಸ್ನೇಹ, ಶಾಂತಿ, ಸಂರಕ್ಷಣೆ ಮತ್ತು ಪರಸ್ಪರ ತಿಳಿವಳಿಕೆಯ ವಿವೇಕಯುತವಾದ ವಾತಾವರಣವನ್ನು ನಿರ್ಮಿಸುವಲ್ಲಿ ಗ್ರಂಥಗಳು ಅತ್ಯಂತ ಪ್ರಭಾವಶಾಲಿಗಳಾಗಿರುತ್ತವೆ. ಗ್ರಂಥಗಳಲ್ಲಿರುವ ಜ್ಞಾನ ಆತ್ಮೋನ್ನತಿ, ಸಾಮಾಜಿಕ ಹಾಗೂ ಆರ್ಥಿಕ ಪ್ರಗತಿ, ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ತಿಳಿವಳಿಕೆ ಮತ್ತು ಶಾಂತತೆಯನ್ನು ಸಾಧಿಸಲು ಸಹಾಯಕಾರಿಯಾಗುವಂತೆ ನೋಡಿಕೊಳ್ಳುವುದು ಪ್ರತಿ ರಾಷ್ಟ್ರದ ಕರ್ತವ್ಯವಾಗಿದೆ. (ಸಿ.ವಿ.ಎಚ್.)

**(iii) ಜಾಗತಿಕ ಗ್ರಂಥ ಪ್ರದರ್ಶನ (1972):** 1970ನೆಯ ನವೆಂಬರ್‌ನಲ್ಲಿ ಪ್ಯಾರಿಸ್ಸಿನಲ್ಲಿ ಜರುಗಿದ ಯುನೆಸ್ಕೊದ 16ನೆಯ ಅಧಿವೇಶನದಲ್ಲಿ 1972ನೆಯ ವರ್ಷವನ್ನು ಅಂತಾರಾಷ್ಟ್ರೀಯ ಗ್ರಂಥ ವರ್ಷವೆಂದು ಪ್ರಪಂಚದಾದ್ಯಂತ ಆಚರಿಸಲಾಯಿತಷ್ಟೆ 'ಎಲ್ಲರಿಗೂ ಪುಸ್ತಕ' ಎಂಬ ಘೋಷಣೆಯನ್ನು ಕಾರ್ಯರೂಪಕ್ಕೆ ತರುವಲ್ಲಿ ಅಗತ್ಯವೆನಿಸುವ ಹಲವಾರು ಚಟುವಟಿಕೆಗಳನ್ನು ಆ ಅಧಿವೇಶನದಲ್ಲಿ ಕೈಕೊಳ್ಳಲಾಯಿತು. ಅವುಗಳಲ್ಲಿ ಮುಕುಟಪ್ರಾಯವೆನಿಸಿದ ಜಾಗತಿಕ ಗ್ರಂಥಪ್ರದರ್ಶನವನ್ನು ದೆಹಲಿಯಲ್ಲಿ 1972ರಲ್ಲಿ ಮಾರ್ಚ್ 18ರಿಂದ ಏಪ್ರಿಲ್ 2ರ ವರೆಗೆ ಎರಡು ವಾರಗಳ ಕಾಲ ಜರುಗಿಸಲಾಯಿತು.

ಓದುಗರಲ್ಲಿ ಗ್ರಂಥಗಳ ಬಗೆಗೆ ಅಭಿರುಚಿ ಹಾಗೂ ಆದರವನ್ನು ಉಂಟು ಮಾಡುವುದು, ಬರೆಹಗಾರರನ್ನೂ ಭಾಷಾಂತರಕಾರರನ್ನೂ ಪ್ರಕಾಶಕರನ್ನೂ ಪ್ರೋತ್ಸಾಹಿಸುವುದು, ಓದುಗರಿಗೆ ವಿವಿಧ ಗ್ರಂಥಗಳ ಅಸ್ತಿತ್ವದ ಬಗೆಗೆ ತಿಳಿವಳಿಕೆಯನ್ನುಂಟು ಮಾಡುವ ಅವಕಾಶವನ್ನು ಕಲ್ಪಿಸುವುದು, ಗ್ರಂಥೋತ್ಪಾದನೆಯಲ್ಲಿ ಸ್ವಾತಂತ್ರ್ಯೋತ್ತರ ಭಾರತದ ರಚನಾತ್ಮಕ ಪ್ರಯತ್ನವನ್ನು ವಿವಿಧ ದೇಶಗಳ ಪ್ರಕಾಶಕರ ಹಾಗೂ ಹಂಚಿಕೆದಾರರ ಗಮನಕ್ಕೆ ತರುವುದು–ಇವು ಈ ಪ್ರದರ್ಶನದ ಮಹೋದ್ದೇಶಗಳಲ್ಲಿ ಮುಖ್ಯವಾದವು.

ಗ್ರಂಥ ಪ್ರಕಾಶನವೃತ್ತಿ ಶಿಖರಕ್ಕೇರಿದ ದೇಶಗಳಲ್ಲಿ ಉತ್ಪಾದಿತ ಗ್ರಂಥಗಳಿಗೆ ಓದುಗರನ್ನು ಹೇಗೆ ದೊರಕಿಸಬೇಕೆಂಬ ಸಮಸ್ಯೆಯಿದ್ದರೆ ಅಭಿವೃದ್ಧಿ ಹೊಂದುತ್ತಿರುವ ಇತರ ದೇಶಗಳಲ್ಲಿ ಗ್ರಂಥಗಳ ಉತ್ಪಾದನೆ ಹಾಗೂ ಬೆಳೆಯುತ್ತಿರುವ ಜನಸಂಖ್ಯೆಗಳ ನಡುವಣ ಅತೀವ ಅಂತರದಿಂದಾಗಿ ಗ್ರಂಥಗಳ ಅಭಾವ ಕಂಡುಬರುತ್ತಿದೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಪ್ರಪಂಚದ ಒಟ್ಟು ಉತ್ಪಾದಿತ ಗ್ರಂಥಗಳ $^1/_5$ ರಷ್ಟು ಗ್ರಂಥಗಳನ್ನು ಮಾತ್ರ ಉತ್ಪಾದಿಸುತ್ತವೆಯೆಂದು ಅಂದಾಜು ಮಾಡಲಾಗಿದೆ. 1972ರ ಜಾಗತಿಕ ಗ್ರಂಥಪ್ರದರ್ಶನ ಮಾಡಿದ ದೊಡ್ಡ ಕೆಲಸವೆಂದರೆ ಗ್ರಂಥೋತ್ಪಾದನೆ ಹಾಗೂ ವಿತರಣೆಗಳಲ್ಲಿ ಪ್ರತಿಯೊಂದು ರಾಷ್ಟ್ರವೂ ಕೈಕೊಂಡ ಪರಿಶ್ರಮದ ನೈಜಕಲ್ಪನೆಯನ್ನು ಜನತೆಯ ಮುಂದೆ ಇಟ್ಟಿದ್ದು.

ಭಾರತದ ನ್ಯಾಷನಲ್ ಬುಕ್ ಟ್ರಸ್ಟ್ ಸಂಸ್ಥೆಯವರು ಏರ್ಪಡಿಸಿದ ಈ ಪ್ರದರ್ಶನವನ್ನು ಭಾರತದ ರಾಷ್ಟ್ರಪತಿ ವಿ.ವಿ. ಗಿರಿಯವರು 1972ರ ಮಾರ್ಚ್ 18ರಂದು ಉದ್ಘಾಟಿಸಿದರು. 48 ರಾಷ್ಟ್ರಗಳನ್ನು ಪ್ರತಿನಿಧಿಸಿದ ಸುಮಾರು 500 ಪ್ರಕಾಶಕರು ಹಾಗೂ ಹಂಚಿಕೆದಾರರು ಇದರಲ್ಲಿ ಭಾಗವಹಿಸಿದ್ದರು. ಭಾರತೀಯ ಭಾಷೆಗಳಲ್ಲಿ ಇತ್ತೀಚೆಗೆ ಪ್ರಕಟಗೊಂಡ ಚಿಕ್ಕ ಮಕ್ಕಳ 1,000 ಗ್ರಂಥಗಳನ್ನೊಳಗೊಂಡಂತೆ ಒಟ್ಟು 10,000ಕ್ಕೂ ಮಿಕ್ಕಿದ ವಿವಿಧ ಗ್ರಂಥಗಳನ್ನು ಪ್ರದರ್ಶಿಸಲಾಗಿತ್ತು. ಸುಮಾರು 20,000ಕ್ಕೂ ಹೆಚ್ಚಿನ ಜನ ಪ್ರತಿದಿನ ಪ್ರದರ್ಶನಕ್ಕೆ ಬರುತ್ತಿದ್ದರೆನ್ನಲಾಗಿದೆ. ಪ್ರದರ್ಶನದ ಅವಧಿಯಲ್ಲಿ ವೈಯಕ್ತಿಕವಾಗಿ ಪುಸ್ತಕ ಕೊಳ್ಳುವ ಓದುಗರನ್ನು ಪ್ರೋತ್ಸಾಹಿಸಲೋಸುಗ ಬೆಲೆಯ ಮೇಲೆ ವಿಶೇಷ ರಿಯಾಯತಿಯನ್ನೂ ಕೊಡಲಾಯಿತು.

ಪ್ರಪಂಚದಲ್ಲೇ ಅತಿ ದೊಡ್ಡದಾದ ಹಾಗೂ 306 ವರ್ಷಗಳಷ್ಟು ಹಳೆಯದಾದ ಅಟ್ಲಾಸ್ ಆಫ್ ದಿ ಗ್ರೇಟ್ ಎಲೆಕ್ಟರ್ ಎಂಬ ಗ್ರಂಥವನ್ನು ಈ ಸಮಯದಲ್ಲಿ ಜರ್ಮನ್ ಗಣರಾಜ್ಯ ಪ್ರದರ್ಶಿಸಿದ್ದು ವೈಶಿಷ್ಟ್ಯಪೂರ್ಣವಾಗಿತ್ತು.

ಜಾಗತಿಕ ಗ್ರಂಥ ಪ್ರದರ್ಶನದ ಚಟುವಟಿಕೆಗಳ ಅಂಗವಾಗಿ ಭಾರತದ ನ್ಯಾಷನಲ್ ಬುಕ್ ಟ್ರಸ್ಟ್ ಸಂಸ್ಥೆಯವರ ಮನವಿಯ ಮೇರೆಗೆ ಅಖಿಲ ಭಾರತ ಗ್ರಂಥಾಲಯ ಸಂಘದವರು ಮಾರ್ಚ್ 24–27ರ ವರೆಗೆ 19ನೆಯ ಅಖಿಲ ಭಾರತ ರಾಷ್ಟ್ರೀಯ ಗ್ರಂಥ ಸಮ್ಮೇಳನವನ್ನು ಏರ್ಪಡಿಸಿದ್ದರು. ಈ ಸಮ್ಮೇಳನಕ್ಕೆ ಭಾರತದ ಹೆಸರಾಂತ ಗ್ರಂಥಪಾಲರು ಆಗಮಿಸಿ ಎಲ್ಲರಿಗೂ ಪುಸ್ತಕ ಚಳವಳಿಯನ್ನು ಅನುಮೋದಿಸಿದರು. ಮಾರ್ಚ್ 27–30ರ ವರೆಗೆ ಸೇರಿದ ರಾಷ್ಟ್ರೀಯ ಬರೆಹಗಾರರ ಬಳಗದ (ನ್ಯಾಷನಲ್ ರೈಟರ್ಸ್ ಕ್ಯಾಂಪ್) ಸಭೆಯಲ್ಲಿ ಬರೆಹಗಾರರ ಹಾಗೂ ಪ್ರಕಾಶಕರ ಸಮಸ್ಯೆಗಳ ಬಗೆಗೆ ದೇಶದ ಹೆಸರಾಂತ ಸುಮಾರು 100 ಲೇಖಕರು ಸಾದರಪಡಿಸಿದ ವಿವಿಧ ಪ್ರಬಂಧಗಳನ್ನು ಓದಲಾಯಿತು.

1972ನೆಯ ವರ್ಷ ದೆಹಲಿಯಲ್ಲಿ ಮಾತ್ರವಲ್ಲದೆ ಭಾರತದ ಎಲ್ಲ ಕಡೆಯೂ ಎಲ್ಲರಿಗೂ ಪುಸ್ತಕ ಚಳವಳಿಯೂ ಗ್ರಂಥ ಪ್ರದರ್ಶನ, ಮಾರಾಟಗಳೂ ನಡೆದುವು. (ಸಿ.ವಿ.ಎಚ್.)

**2. ಅಂತಾರಾಷ್ಟ್ರೀಯ ಗ್ರಂಥಾಲಯಗಳ ಸಂಯುಕ್ತ ಮಹಾಸಂಘ :** ಹೆಸರೇ ತಿಳಿಸುವಂತೆ ಇದು ಪ್ರಪಂಚದ ಪ್ರಮುಖ ಗ್ರಂಥಾಲಯಗಳನ್ನು ಪ್ರತಿನಿಧಿಸುವ ಒಂದು ಮಹಾಸಂಘ. ಸಂಕ್ಷೇಪವಾಗಿ ಇದನ್ನು ಇಫ್ಲ ಎನ್ನುತ್ತಾರೆ. ಈ ಸಂಘ 1928ರಲ್ಲಿ ಒಂದು ಸಣ್ಣ ಅಂತಾರಾಷ್ಟ್ರೀಯ ಸಮಿತಿಯಾಗಿ ತನ್ನ ಕಾರ್ಯಾಚರಣೆಯನ್ನು ಆರಂಭಿಸಿತು. 1953ರ ಹೊತ್ತಿಗೆ ಈ ಪುಟ್ಟ ಸಮಿತಿಗೆ ಎಂದಿನ ಸ್ಥಾನಮಾನಗಳು ದೊರೆತವು. ಸದ್ಯಕ್ಕೆ ಇದರಲ್ಲಿ ಹನ್ನೊಂದು ಉಪಸಮಿತಿಗಳಿದ್ದು ಅವು ಸಂಯುಕ್ತ ಸೂಚಿ (ಯೂನಿಯನ್ ಕ್ಯಾಟಲಾಗ್), ಅಂತಾರಾಷ್ಟ್ರೀಯ ಎರವಲುಗಳು (ಇಂಟರ್ ನ್ಯಾಷನಲ್ ಲೋನ್ಸ್), ಏಕರೀತಿಯ ಸೂಚೀಕರಣ ಸೂತ್ರಗಳು (ಯೂನಿಫಾರಂ ಕ್ಯಾಟಲಾಗಿಂಗ್ ರೂಲ್ಸ್) ಮೊದಲಾದ ಅನೇಕ ವಿಷಯಗಳ ಮೇಲೆ ಕೆಲಸಮಾಡುತ್ತಲಿವೆ. ಇಫ್ಲದ ಮುಖ್ಯ ಕಚೇರಿ ಜಿನೀವದಲ್ಲಿನ ವಿಶ್ವ ಸಂಸ್ಥೆಯ ಗ್ರಂಥಾಲಯದಲ್ಲಿದೆ. ಇದು ಮೊದಲು ಐದು ವರ್ಷಗಳಿಗೊಮ್ಮೆ ಗ್ರಂಥಪಾಲರ ಅಂತಾರಾಷ್ಟ್ರೀಯ ಸಮ್ಮೇಳನಗಳನ್ನು ಜಿನೀವದಲ್ಲೇ ಕರೆಯುತ್ತಿತ್ತು. 1964ರಿಂದೀಚೆಗೆ ಈ ಸಮ್ಮೇಳನಗಳನ್ನು ಬೇರೆ ಬೇರೆ ದೇಶಗಳಲ್ಲಿ ನಡೆಸುತ್ತಿದೆ. 1970ರ ಸಮ್ಮೇಳನ ಮಾಸ್ಕೊದಲ್ಲೂ 1971ರ ಸಮ್ಮೇಳನ ಲಿವರ್‌ಪೂಲ್‌ನಲ್ಲೂ ಜರುಗಿತ್ತು.

ಗ್ರಂಥಾಲಯಶಾಸ್ತ್ರಕ್ಕೆ ಸಂಬಂಧಿಸಿದ ಕ್ಷೇತ್ರಗಳಲ್ಲಿ ಸಹಕಾರವನ್ನು ಹೆಚ್ಚಿಸುವುದೇ ಇಫ್ಲದ ಗುರಿಯಾಗಿದ್ದು ಅದರಲ್ಲಿಯೂ ಮುಖ್ಯವಾಗಿ ಗ್ರಂಥಪಾಲರಲ್ಲಿ, ಗ್ರಂಥಾಲಯ ಸಂಘಗಳಲ್ಲಿ, ಗ್ರಂಥಸೂಚಿಗಳ ತಯಾರಕರಲ್ಲಿ (ಬಿಬ್ಲಿಯೋಗ್ರಫರ್ಸ್) ಅಂತಾರಾಷ್ಟ್ರೀಯ ಸಂಬಂಧವೇರ್ಪಡಲು ಸಹಾಯ ಮಾಡುವಲ್ಲಿ ಇದು ಹೆಚ್ಚಿನ ಕೆಲಸ ಮಾಡುತ್ತಿದೆ. ಈ ದೃಷ್ಟಿಯಲ್ಲಿ ಇದು ಅಂತಾರಾಷ್ಟ್ರೀಯ ಮಾನಕ ಸಂಸ್ಥೆಯ (ಇಂಟರ್‌ನ್ಯಾಷನಲ್ ಆರ್ಗನೈಸೇಷನ್ ಫಾರ್ ಸ್ಟ್ಯಾಂಡರ್ಡೈಸೇಷನ್) ನಿಕಟವರ್ತಿಯಾಗಿ ಕೆಲಸಮಾಡುತ್ತಿದೆ. ಇಫ್ಲ ಈ ಕೆಲವು ವಿಷಯಗಳಲ್ಲಿ ಆಸ್ಥೆವಹಿಸುತ್ತಿದೆ; 1. ಅಂತಾರಾಷ್ಟ್ರೀಯ ಮಟ್ಟದಲ್ಲಿ ಗ್ರಂಥಗಳ ಅದಲು–ಬದಲು ವಿತರಣೆ ಮತ್ತು ಎರವಲುಗಳನ್ನು ಹೆಚ್ಚಿಸುವುದು. 2. ಸೂಚೀಕರಣ ಸೂತ್ರಗಳಲ್ಲಿ ಅಂತಾರಾಷ್ಟ್ರೀಯ ಏಕತೆಯನ್ನು ಕಾಯ್ದುಕೊಳ್ಳುವುದು. 3. ಸಂಯುಕ್ತಸೂಚಿ ಮತ್ತು ಎರವಲು ಕೇಂದ್ರಗಳ ವ್ಯವಸ್ಥೆ. 4. ಆಯಾ ದೇಶಗಳ ಗ್ರಂಥ ಪ್ರಕಾಶನಕ್ಕೆ ಸಂಬಂಧಿಸಿ ಅಂಕಿ–ಸಂಖ್ಯೆಗಳನ್ನು ಸಂಗ್ರಹಿಸುವುದು. ಗ್ರಂಥಗಳ ಮಟ್ಟ ಉತ್ತಮಗೊಳ್ಳಲು ಅಗತ್ಯವಾದ ಸಲಹೆ ನೀಡುವುದು. 5. ವಾರ್ಷಿಕೆ, ಗ್ರಂಥಸೂಚಿಗಳಿಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಬಿಡಿಸುವುದು. 6. ಇದರ ಎಲ್ಲ ಸಮ್ಮೇಳನಗಳಲ್ಲಿ ಚರ್ಚಿಸಿದ ವಿಷಯಗಳ ಪ್ರಕಟಣೆಗೆ ಸಂಬಂಧಿಸಿದ ಸಮಾಚಾರಕೇಂದ್ರವನ್ನು ಸ್ಥಾಪಿಸುವುದು.

**ಇತಿಹಾಸ :** ಎಲ್ಲ ರಾಷ್ಟ್ರೀಯ ಗ್ರಂಥಾಲಯ ಸಂಘಗಳನ್ನು ಪ್ರತಿನಿಧಿಸುವ ಒಂದು ಅಂತಾರಾಷ್ಟ್ರೀಯ ಸಮಿತಿಯನ್ನು ಸ್ಥಾಪಿಸಬೇಕೆನ್ನುವ ಸಲಹೆ ಬಂದದ್ದು ಪ್ರಾಗ್‌ನಲ್ಲಿ 1926ರಲ್ಲಿ ಸೇರಿದ್ದ ಅಂತಾರಾಷ್ಟ್ರೀಯ ಗ್ರಂಥಪಾಲರ ಮತ್ತು ಗ್ರಂಥಪ್ರೇಮಿಗಳ ಸಮ್ಮೇಳನದಲ್ಲಿ. ಫ್ರಾನ್ಸಿನ ಪ್ರತಿನಿಧಿಯಿಂದ ಬಂದ ಈ ಸೂಚನೆಯನ್ನು ಸಭೆ ಸರ್ವಾನುಮತದಿಂದ ಅಂಗೀಕರಿಸಿತು. ಅದೇ ವರ್ಷ ಅಕ್ಟೋಬರ್ ತಿಂಗಳಲ್ಲಿ ಅಮೆರಿಕದ ಗ್ರಂಥಾಲಯ ಸಂಘದ (ಎಎಲ್‌ಎ) 50ನೆಯ ವಾರ್ಷಿಕ ಸಮ್ಮೇಳನ ಅಟ್ಲಾಂಟಿಕ್ ನಗರದಲ್ಲಿ ಜರುಗಿತು. ಆಗ ಪ್ರಾಗ್ ಸಮ್ಮೇಳನದ ಸಮಿತಿ ಅಂತಾರಾಷ್ಟ್ರೀಯ ಗ್ರಂಥಾಲಯವನ್ನು ಸ್ಥಾಪಿಸುವಲ್ಲಿ ಅಮೆರಿಕದ ಗ್ರಂಥಾಲಯ ಸಂಘ ಮುಂದಾಗಬೇಕೆಂದು ಕೇಳಿಕೊಂಡಿತು. ಮುಂದಿನ ವರ್ಷ ಅಂದರೆ 1927ರಲ್ಲಿ ಬ್ರಿಟಿಷ್ ಗ್ರಂಥಾಲಯ ಸಂಘದ ಸುವರ್ಣ ಮಹೋತ್ಸವ ಸಮ್ಮೇಳನ ಎಡಿನ್‌ಬರೊದಲ್ಲಿ ಜರುಗಿತು. ಈ ಸಮ್ಮೇಳನದಲ್ಲಿ ಅಮೆರಿಕದ ಗ್ರಂಥಾಲಯ ಸಂಘದ ಪ್ರತಿನಿಧಿಗಳು ಮತ್ತು ಉಳಿದ ರಾಷ್ಟ್ರೀಯ ಸಂಘಗಳು ಭಾಗವಹಿಸಿದ್ದವು. ಆ ಸಭೆಯಲ್ಲಿ ಅಂತಾರಾಷ್ಟ್ರೀಯ ಗ್ರಂಥಾಲಯ ಮತ್ತು ಗ್ರಂಥಸೂಚಿ ಸಮಿತಿ ರೂಪುಗೊಂಡಿತು(1927). ಇದರ ಮೊದಲ ಸಭೆ ರೋಮಿನಲ್ಲಿ ಕೂಡಿದಾಗ (1928) 14 ರಾಷ್ಟ್ರಗಳು ಇದರ ಸದಸ್ಯರಾದುವಲ್ಲದೆ ಸಮಿತಿ ಕಾನೂನುಬದ್ಧವಾಗಿ ಸ್ಥಾಪಿಸಲ್ಪಟ್ಟಿತು. ಇದಕ್ಕೆ ಕಾಯಂ ಕಾರ್ಯದರ್ಶಿಯೊಬ್ಬರ ನೇಮಕವಾದ್ದು 1929ರಲ್ಲಿ.

ಇದರ ಶಾಸನದ ಕರಡು ಪ್ರತಿ 1929ರ ವೆನಿಸ್ ಗೋಷ್ಠಿಯಲ್ಲಿ ಮಂಜೂರಾಗಿ ಪಡೆದು ಪರಿಷ್ಕೃತ ಪೂರ್ಣ ಶಾಸನ 1964ರಲ್ಲಿ ರೋಮಿನಲ್ಲಿ ಅಂಗೀಕರಿಸಲ್ಪಟ್ಟಿತು.

**ಇಫ್ಲದ ಶಾಖೆಗಳು ಹೀಗಿವೆ :** 1. ಶಾಸನ ಸಭೆಯ ಮತ್ತು ಆಡಳಿತ ಗ್ರಂಥಾಲಯಗಳು. 2. ತಾಂತ್ರಿಕ ವಿಶ್ವವಿದ್ಯಾಲಯ ಗ್ರಂಥಾಲಯಗಳು. 3. ವಿಶಿಷ್ಟ ಗ್ರಂಥಾಲಯಗಳು. 4. ನಾಟಕ ಮಂದಿರ ಗ್ರಂಥಾಲಯಗಳು ಮತ್ತು ಸಂಗ್ರಹಾಲಯಗಳು. 5. ಜುಡೈಕಾ ಮತ್ತು ಹೈಬ್ರೈಕಾ ಇನ್ ಯುರೋಪ್. 6. ಕೃಷಿ ಗ್ರಂಥಪಾಲರು ಮತ್ತು ಆಲೇಖನಕಾರರು. 7. ಕಾಯಿದೆ ಗ್ರಂಥಾಲಯಗಳು. 8. ಆಸ್ಪತ್ರೆ ಗ್ರಂಥಾಲಯಗಳು 9. ಸಾರ್ವಜನಿಕ ಗ್ರಂಥಾಲಯಗಳು. 10. ರಾಷ್ಟ್ರೀಯ ಮತ್ತು ವಿಶ್ವವಿದ್ಯಾಲಯ ಗ್ರಂಥಾಲಯಗಳು. 11. ಅಂತಾರಾಷ್ಟ್ರೀಯ ಗ್ರಂಥಾಲಯಗಳು. 12. ಮಕ್ಕಳಿಗಾಗಿ ಗ್ರಂಥಾಲಯ ಸೇವೆ.

**ಇಫ್ಲದಲ್ಲಿ ಒಂದೊಂದು ವಿಷಯಕ್ಕೂ ಒಂದೊಂದು ಸಮಿತಿ ಇದೆ :** 1. ಸಮನಾದ ಸೂಚೀಕರಣ ಸೂತ್ರಗಳು (ನಿಯಮಗಳು), 2. ಸಂಯುಕ್ತಸೂಚಿಗಳು ಮತ್ತು ಅಂತಾರಾಷ್ಟ್ರೀಯ ಎರವಲುಗಳು 3. ಪ್ರಕಟಣೆಗಳ ಅದಲು–ಬದಲು ವಿತರಣೆ, 4. ನಿಯತಕಾಲಿಕೆಗಳು ಮತ್ತು ವಾರ್ಷಿಕೆಗಳು, 5. ಅಂಕಿ–ಸಂಖ್ಯೆ, 6. ದುರ್ಲಭ ಮತ್ತು ಅಮೂಲ್ಯ ಗ್ರಂಥಗಳು ಮತ್ತು ದಾಖಲೆಗಳು, 7. ಗ್ರಂಥಾಲಯ ಶಿಕ್ಷಣ, 8 ಗ್ರಂಥಾಲಯ ಕಟ್ಟಡಗಳು, 9. ರಿಪ್ರೋಗ್ರಫಿ, 10. ಯಂತ್ರೀಕರಣ.

**ಈ ಕೆಲವು ವಿಷಯಗಳಲ್ಲಿ ಇಫ್ಲ ಸಾಕಷ್ಟು ಕೆಲಸಮಾಡಿದೆ :** 1. ದೇಶಗಳ ಹೆಸರಿನೊಂದಿಗೆ ಪ್ರಾಚೀನ ಗ್ರಂಥಗಳ ಸೂಚಿ ಉಲ್ಲೇಖ, 2. ಲೀಗಲ್ ಡೆಪೊಸಿಟ್ ಕೈಪಿಡಿ, 3. ಗ್ರಂಥಾಲಯಗಳಲ್ಲಿ ದುರ್ಲಭ ಗ್ರಂಥ ವಿಭಾಗಗಳ ವ್ಯವಸ್ಥೆ, 4. ಸಂಯುಕ್ತಸೂಚಿಗಳು, 5. ಟೆಲಿಕೋಡ್ ಮತ್ತು ವಿಳಾಸ ಗ್ರಂಥ, 6. ನಾಟಕ ಮಂದಿರ ಸಂಗ್ರಹಗಳ ಕೈಪಿಡಿ, 7 ಪ್ರಾಚ್ಯದೇಶಗಳಿಗೆ ಸಂಬಂಧಿಸಿದ ಗ್ರಂಥಗಳ ಸೂಚಿಗಳು.

ಇಫ್ಲ ಮುಖ್ಯವಾಗಿ ಯುನೆಸ್ಕೊದೊಂದಿಗೆ ಸಹಕರಿಸಿ ಅದರ ಸಾಮಾನ್ಯಸಭೆಯ ನಿರ್ಣಯಗಳನ್ನು ಕಾರ್ಯಗತಗೊಳಿಸಲು ಪ್ರಯತ್ನಿಸುತ್ತಿದೆ. ರಾಷ್ಟ್ರೀಯ ಗ್ರಂಥಾಲಯಗಳ ಅಭ್ಯಾಸ ಮತ್ತು ವರದಿ, ಕಾಯಿದೆ ಶೇವಣಿಗಳ ಅಭ್ಯಾಸ ಮತ್ತು ವರದಿ, ಅಂತಾರಾಷ್ಟ್ರೀಯ ಮಾನಕಗಳ ರಚನೆ ಮತ್ತು ಅಂಗೀಕಾರ ಈ ಮುಂತಾದ ವಿಷಯಗಳಲ್ಲಿ ಇಫ್ಲ ವಿಶೇಷ ಕೆಲಸಮಾಡಿದೆ.

**ಇಫ್ಲದ ಕೆಲವು ಮುಖ್ಯ ಪ್ರಕಟಣೆಗಳು ಹೀಗಿವೆ :** 1. ಸದಸ್ಯ ವರದಿ. 2. ಇಫ್ಲ ಸುದ್ದಿ: ಮೂರು ತಿಂಗಳಿಗೊಮ್ಮೆ ಪ್ರಕಟವಾಗುವುದು. ಇದು ಇಂಗ್ಲಿಷ್‌ನಲ್ಲಿ 1962ರಲ್ಲಿ ಪ್ರಕಟಿಸಲ್ಪಟ್ಟಿತು. ಫ್ರೆಂಚ್ ಆವೃತ್ತಿ ಡಿಸೆಂಬರ್ 1962ರಲ್ಲೂ ರಷ್ಯನ್ ಆವೃತ್ತಿ ಜನವರಿ 1964ರಲ್ಲೂ ಪ್ರಕಟವಾದುವು. 3. ಇಫ್ಲದ ಚಟುವಟಿಕೆಗಳು 1953ರಲ್ಲಿ ಲಿಬ್ರಿಯಲ್ಲಿ ಪ್ರಕಟಗೊಳ್ಳಲು ಆರಂಭವಾದವು. 4. ಜಾಗತಿಕ ಗ್ರಂಥಾಲಯಗಳ ಕೈಪಿಡಿ 1963ರಲ್ಲಿ ಇಂಗ್ಲಿಷ್ ಮತ್ತು ಫ್ರೆಂಚ್ ಆವೃತ್ತಿಗಳಲ್ಲಿ ಪ್ರಕಟಗೊಂಡಿತು. 5. ಇನ್‌ಸ್ಪೆಲ್ ಎಂಬುದು ವಿಶಿಷ್ಟ ಗ್ರಂಥಾಲಯಗಳ ವಿಷಯವಾಗಿ ಅಂತಾರಾಷ್ಟ್ರೀಯ ಪತ್ರಿಕೆ. 6. ಯುದ್ಧದ ಅವಧಿಯನ್ನು ಬಿಟ್ಟು ಮಿಕ್ಕಂತೆ ಇಫ್ಲ ವಾರ್ಷಿಕ ಸಮ್ಮೇಳನಗಳನ್ನು ತಪ್ಪದೇ ನಡೆಸುವುದಲ್ಲದೆ ಅವುಗಳ ಕಾರ್ಯಕಲಾಪಗಳನ್ನು 28 ಸಂಪುಟಗಳಲ್ಲಿ ಪ್ರಕಟಿಸಿದೆ.

ಲ್ಯಾಟಿನ್ ಅಮೆರಿಕದಲ್ಲಿ ಸದಸ್ಯಸಂಘಗಳ ಪ್ರಾದೇಶಿಕ ಶಾಖೆಯನ್ನು ಅಕ್ಟೋಬರ್ 1962ರಲ್ಲಿ ಸ್ಥಾಪಿಸಲಾಯಿತು.

ಇಫ್ಲ ಪ್ರತಿವರ್ಷ ಪ್ರಬಂಧ ಸ್ಪರ್ಧೆಯೊಂದನ್ನು ಏರ್ಪಡಿಸಿ ಅತ್ಯುತ್ತಮ ಪ್ರಬಂಧಕ್ಕೆ 1,000 ಸ್ವಿಸ್ ಫ್ರಾಂಕ್‌ಗಳ ಸವೆನ್ಸ್‌ಮನ ಬಹುಮಾನವನ್ನು ನೀಡುತ್ತದೆ. ಈ ಬಹುಮಾನವನ್ನು 1939ರಲ್ಲಿ ಇಫ್ಲದ ಆಗಿನ ಮಹಾಕಾರ್ಯದರ್ಶಿಯಾಗಿದ್ದ ಸವೆನ್ಸ್‌ಮನ 60ನೆಯ ಹುಟ್ಟುಹಬ್ಬದ ನೆನಪಿಗಾಗಿ ಏರ್ಪಡಿಸಲಾಗಿದೆ. 1970ರ ಈ ಬಹುಮಾನ ಎಸ್.ಆರ್. ರಂಗನಾಥನ್ ಅವರಿಗೆ ಬಂತೆಂಬುದನ್ನು ಇಲ್ಲಿ ನೆನೆಯಬಹುದು. **(ಕೆ.ಎಸ್.ಡಿಇ.; ಟಿ.ಎಲ್.ಬಿ.)**

**3. ಅಂತಾರಾಷ್ಟ್ರೀಯ ಸಂಗೀತ ಗ್ರಂಥಾಲಯಗಳ ಸಂಘ :** ಯುನೆಸ್ಕೊದ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಸಂಗೀತ ಗ್ರಂಥಾಲಯಗಳ ಮೂರನೆಯ ಸಭೆ 1951ರಲ್ಲಿ ಪ್ಯಾರಿಸ್‌ನಲ್ಲಿ ನಡೆದ ಸಂದರ್ಭದಲ್ಲಿ ಈ ಸಂಘ ಔಪಚಾರಿಕ ಪ್ರಾರಂಭೋತ್ಸವದೊಂದಿಗೆ ಸ್ಥಾಪನೆಗೊಂಡಿತು. ಸಂಗೀತ ಗ್ರಂಥಾಲಯಗಳ ಮೊದಲ ಸಭೆ 1949ರಲ್ಲಿ ಫ್ಲಾರೆನ್ಸ್‌ನಲ್ಲಿ, ಎರಡನೆಯ ಸಭೆ 1950ರಲ್ಲಿ ಲ್ಯುನಬರ್ಗ್‌ದಲ್ಲಿ ಸೇರಿದ್ದವು. 1951ರ ಪ್ಯಾರಿಸ್ ಪ್ರಾರಂಭೋತ್ಸವದಲ್ಲಿ 23 ದೇಶಗಳ ಪ್ರತಿನಿಧಿಗಳು ಹಾಜರಿದ್ದರು. ಸಂಗೀತ ಗ್ರಂಥಾಲಯಗಳ ಚಟುವಟಿಕೆಗಳನ್ನು ಸುಸಂಘಟಿತಗೊಳಿಸುವುದು ಮತ್ತು ಸಂಗೀತ ಸೂಚಿ (ಬಿಬ್ಲಿಯಾಗ್ರಫಿ)

ತಯಾರಿಸುವಲ್ಲಿ ಉತ್ತೇಜನ ಕೊಡುವುದು ಇದರ ಮುಖ್ಯ ಉದ್ದೇಶ. ಈ ಸಂಘದಲ್ಲಿ 40 ದೇಶಗಳ 1,000ಕ್ಕೂ ಹೆಚ್ಚು ಸದಸ್ಯರಿದ್ದರು. ಸಂಘದಲ್ಲಿ 1. ರೆಕಾರ್ಡ್ ಗ್ರಂಥಾಲಯಗಳು 2. ಸಾರ್ವಜನಿಕ ಸಂಗೀತ ಗ್ರಂಥಾಲಯಗಳು 3. ಪ್ರಸಾರ ಮಾಡುವ ಸಂಗೀತ ಗ್ರಂಥಾಲಯಗಳು ಮತ್ತು 4. ಸಂಗೀತ ಸೂಚೀಕರಣ ಸೂತ್ರಗಳು ಎಂಬ ನಾಲ್ಕು ಶಾಖೆಗಳಿವೆ. ಈ ಸಂಘ ಆರು ತಿಂಗಳಿಗೊಮ್ಮೆ ಫಿಂಟೆಸ್ ಆರ್ಟಿಸ್ ಮ್ಯೂಸಿಕೆ ಎಂಬ ಪತ್ರಿಕೆಯೊಂದನ್ನು ಪ್ರಕಟಿಸುವುದು. ಇದರ ಇಂಗ್ಲೆಂಡ್ ಶಾಖೆ 200ಕ್ಕೂ ಹೆಚ್ಚಿನ ಸದಸ್ಯತ್ವವನ್ನು ಹೊಂದಿದ್ದು ಕಾಲಕಾಲಕ್ಕೆ ಸಭೆಗಳನ್ನು ಕರೆಯುವುದಲ್ಲದೆ ಲಘುಪ್ರಕಟನೆಗಳನ್ನೂ ಹೊರಡಿಸುವುದು. ಈ ಸಂಘ ಸಂಗೀತಸೂಚಿ ಮತ್ತು ಗ್ರಾಮೊಫೋನ್ ರೆಕಾರ್ಡ್ ಗ್ರಂಥಾಲಯಗಳ ಬಗೆಗೆ ಸಾಕಷ್ಟು ಕೆಲಸ ಮಾಡುತ್ತಿದೆ.

ಸಂಗೀತ ಗ್ರಂಥಾಲಯಗಳಲ್ಲಿ ಸಾಧ್ಯವಾದಷ್ಟು ಸಹಕಾರವನ್ನು ತರುವುದು, ಸಂಗೀತ ಗ್ರಂಥ ಸೂಚಿಗಳ ಸಹಕಾರೀ ಸಂಕಲನ, ಸಾಮಗ್ರಿಗಳ ಅದಲು-ಬದಲಾವಣೆ, ಸಂಗೀತ ಗ್ರಂಥಪಾಲರ ಶಿಕ್ಷಣ-ಈ ಬಾಬುಗಳಲ್ಲಿ ಸಂಘ ಸಾಕಷ್ಟು ಕೆಲಸ ಮಾಡುತ್ತಿದೆ.

**ಸಂಘದ ಮುಖ್ಯ ಪ್ರಕಟಣೆಗಳು ಹೀಗಿವೆ.**

1. ಇಂಟರ್‌ನ್ಯಾಷನಲ್ ಇನ್‌ವೆಂಟರಿ ಆಫ್ ಮ್ಯೂಸಿಕಲ್ ಸೋರ್ಸಸ್ (1950) ಇದರಲ್ಲಿ 16 ಮತ್ತು 17ನೆಯ ಶತಮಾನಗಳಲ್ಲಿ ಅಚ್ಚಾದ ಸಂಗೀತ ಸಂಗ್ರಹಗಳ ವಿವರಗಳಿವೆ.

2. ಫ್ರಾನ್ಸ್ ಗ್ರಾಸ್‌ಬರ್ಗರ್, ಮೂರು ಸಂಪುಟಗಳು-ಇದು ಪ್ರಕಟಿತ ಸಂಗೀತ ಲೇಖಕ ಸೂಚಿ.

3. ದುರ್ಲಭ ಇಲ್ಲವೆ ಅಪೂರ್ವ ಸಾಮಗ್ರಿಗಳ ಸೂಚಿ ಮತ್ತು ಪುರವಣಿಗಳು; ಪೋಕ್ ಲಿಂಡ್‌ಬರ್ಗ್ (1959).

4. ಬ್ರಿಟಿಷ್ ಕ್ಯಾಟಲಾಗ್ ಆಫ್ ಮ್ಯೂಸಿಕ್. ಇದನ್ನು ಇಂಗ್ಲೆಂಡಿನ ಶಾಖೆ ತಯಾರಿಸಿದೆ. ಈ ಸೂಚಿ 1957ರಲ್ಲಿ ಮೊದಲಿಗೆ ನಾಲ್ಕು ತಿಂಗಳಿಗೊಮ್ಮೆ ಹೊರಡುತ್ತಿತ್ತು. ಇದರಲ್ಲಿ ಬ್ರಿಟಿಷ್ ಮ್ಯೂಸಿಯಮ್‌ನಲ್ಲಿ ದಾಖಲಾಗಿರುವ ಸಂಗೀತ ಸಾಮಗ್ರಿಯನ್ನೆಲ್ಲ ಕೂಡಿಸಿಕೊಳ್ಳಲಾಗುವುದು.

5. ಬ್ರಿಯೊ ಎಂಬುದು ಇಂಗ್ಲೆಂಡ್ ಶಾಖೆಯ ನಿಯತಕಾಲಿಕ (1964).

6. ಆರ್‌ಐಎಲ್‌ಎಮ್ ಅಬ್ಸ್‌ಟ್ರ್ಯಾಕ್ಟ್ಸ್ ಆಫ್ ಮ್ಯೂಸಿಕ್ ಲಿಟರೆಚರ್ (1968). ಇದು ಸಂಗೀತ ಸಾಮಗ್ರಿಯ ಸಂಕ್ಷಿಪ್ತಸಾರವನ್ನೊದಗಿಸುವ ನಿಯತಕಾಲಿಕೆ. (ಕೆ.ಎಸ್.ಡಿಇ.; ಟಿ.ಎಲ್.ಬಿ.)

**4. ಅಮೆರಿಕದ ಗ್ರಂಥಾಲಯ ಸಂಘ :** ಅಮೆರಿಕದ ರಾಷ್ಟ್ರೀಯ ಗ್ರಂಥಾಲಯ ಸಂಘವಾಗಿರುವ ಈ ಸಂಸ್ಥೆ ವ್ಯಾಪಕವಾದ ಕಾರ್ಯಕ್ರಮಗಳಿಂದೊಡಗೂಡಿ ಗ್ರಂಥಾಲಯ ವಿಜ್ಞಾನಕ್ಕೆ ಸಂಬಂಧಿಸಿದ ವಿವಿಧ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಮಸ್ಯೆಗಳನ್ನು ಪರಿಹರಿಸಲು ಶ್ರಮಿಸುತ್ತಿದೆ. ಈ ಸಂಘ 1876ರಲ್ಲಿ ಫಿಲಡೆಲ್ಫಿಯದಲ್ಲಿ ಪೆನ್‌ಸಿಲ್ವೇನಿಯ ಹಿಸ್ಟಾರಿಕಲ್ ಸೊಸೈಟಿಯಲ್ಲಿ ನಡೆದ ಮೂರು ದಿನಗಳ ಗ್ರಂಥಪಾಲರ ಸಮ್ಮೇಳನದಲ್ಲಿ ರೂಪುಗೊಂಡಿತು. ಇದರ ಹುಟ್ಟಿನಿಂದಲೇ ಆಧುನಿಕ ಗ್ರಂಥಾಲಯ ವಿಜ್ಞಾನ ಪ್ರಾರಂಭವಾಯಿತೆನ್ನಲಾಗಿದೆ. ಇಂಥದೊಂದು ಸಂಘದ ಅಗತ್ಯವನ್ನು ಕುರಿತು 1853ರ ಹೊತ್ತಿಗಾಗಲೇ ನ್ಯೂಯಾರ್ಕಿನಲ್ಲಿ ಸೇರಿದ್ದ ಗ್ರಂಥಪಾಲರ ಸಮ್ಮೇಳನ ಒಂದು ನಿರ್ಣಯವನ್ನು ಕೈಗೊಂಡಿತ್ತಾದರೂ ಅದು ಕಾರ್ಯರೂಪಕ್ಕೆ ಬಂದುದು 23 ವರ್ಷಗಳ ಅನಂತರ.

1876ರ ಸಮ್ಮೇಳನ ಮೂಲಪ್ರೇರಕ ಅಂದಿಗೆ ಆಮ್‌ಹರ್ಸ್ಟ್ ಕಾಲೇಜು ಗ್ರಂಥಾಲಯದ ತರುಣ ಗ್ರಂಥಪಾಲನಾಗಿದ್ದ, ಮುಂದೆ ಗ್ರಂಥಾಲಯದ ಕ್ಷೇತ್ರದಲ್ಲಿ ಖ್ಯಾತನಾಮನಾದ ಮೆಲ್‌ವಿಲ್ ಡ್ಯೂಯಿ. ಅಮೆರಿಕದ ಗ್ರಂಥಾಲಯ ಸಂಘದ ಮೊದಲ ಅಧ್ಯಕ್ಷ ಬಾಸ್ಟನ್, ಸಾರ್ವಜನಿಕ ಗ್ರಂಥಾಲಯದ ಗ್ರಂಥಪಾಲ ಜಸ್ಟಿನ್‌ವಿನ್ಸರ್, ಕಾರ್ಯದರ್ಶಿ, ಮೆಲ್‌ವಲ್ ಡ್ಯೂಯಿ.

ಅತಿ ಕಡಿಮೆ ಖರ್ಚಿನಲ್ಲಿ ಎಲ್ಲರಿಗೂ ಉತ್ತಮ ಓದಿನ ಸೌಲಭ್ಯವನ್ನು ಏರ್ಪಡಿಸುವುದೇ ಈ ಸಂಘದ ಮುಖ್ಯ ಉದ್ದೇಶ. ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ವ್ಯಾಪ್ತಿಯಲ್ಲಿ ಇದನ್ನು ಸಾಧಿಸುವುದು ಹೇಗೆ ಎಂಬ ಬಗ್ಗೆ ಸಂಘ ಹೆಚ್ಚಿನ ಕೆಲಸ ಮಾಡಿದೆ.

**ಸದಸ್ಯತ್ವ :** ಈ ಸಂಘದ ಸದಸ್ಯತ್ವ ಗ್ರಂಥಪಾಲರಿಗಷ್ಟೇ ಸೀಮಿತವಾಗಿರದೆ ಗ್ರಂಥಾಲಯ ಸೇವೆಯಲ್ಲಿ ಅಭಿರುಚಿಯುಳ್ಳ ಯಾವುದೇ ವ್ಯಕ್ತಿ ಅಥವಾ ಗ್ರಂಥಾಲಯ ಸೇವೆಯಲ್ಲಿ ಆಸಕ್ತಿ ಮತ್ತು ಹಿತಾರ್ಥವುಳ್ಳ ಪ್ರತಿಯೊಬ್ಬನೂ ಇದರ ಸದಸ್ಯನಾಗಬಹುದು. ಅಂತೆಯೇ 1876ರಲ್ಲಿ 103 ಇದ್ದ ಸದಸ್ಯ ಸಂಖ್ಯೆ 1969ರ ಹೊತ್ತಿಗೆ 39,115ಕ್ಕೆ ಏರಿತು.

ಸಂಘದ ಕಾರ್ಯ ಆಡಳಿತ ಮಂಡಳಿಯ ಮುಖಾಂತರ ನಡೆಯುತ್ತದೆ. ಮಂಡಳದಲ್ಲಿನ 220 ಸದಸ್ಯರಲ್ಲಿ 104 ಮಂದಿ ಚುನಾಯಿತರು. ಆಡಳಿತದ ಎಲ್ಲ ಜವಾಬ್ದಾರಿಯೂ ಈ ಮಂಡಳಿಗೆ ಸೇರಿರುತ್ತದೆ. ಆಡಳಿತ ಮಂಡಳಿಯ ಕೇಂದ್ರವಾಗಿ ಒಂದು ಕಾರ್ಯನಿರ್ವಾಹಕ ಸಮಿತಿ ಇದೆ. ಸಂಘ ತನ್ನ ಹಿರಿದಾದ ಉದ್ದೇಶವನ್ನು ಸಫಲವಾಗಿ ಪೂರೈಸಲು ಅನುಕೂಲವಾಗುವಂತೆ ತನ್ನ ಕಾರ್ಯಕ್ಷೇತ್ರವನ್ನು 14 ಭಾಗಗಳಾಗಿ ವಿಂಗಡಿಸಿಕೊಂಡಿದೆ. ಅವುಗಳಲ್ಲಿ ಮುಖ್ಯವಾದುವು ಅಮೆರಿಕದ ಶಾಲಾ ಗ್ರಂಥಪಾಲರ ಸಂಘ, ಕಾಲೇಜು ಮತ್ತು ವಿಶಿಷ್ಟ ಗ್ರಂಥಾಲಯಗಳ ಸಂಘ, ಪ್ರಾದೇಶಿಕ ಗ್ರಂಥಾಲಯ ಸಂಘಗಳು, ತರುಣ ಸೇವಾ ವಿಭಾಗ, ಮಕ್ಕಳ ಸೇವಾ ವಿಭಾಗ, ಗ್ರಂಥಾಲಯ ಆಡಳಿತ ವಿಭಾಗ, ಗ್ರಂಥಾಲಯ ಶಿಕ್ಷಣ ವಿಭಾಗ, ಪರಾಮರ್ಶನ ಸೇವಾ ವಿಭಾಗ, ಸಾಮಗ್ರಿ ಮತ್ತು ತಾಂತ್ರಿಕ ಸೇವಾ ವಿಭಾಗ, ಸಮಾಚಾರ ಮತ್ತು ಯಂತ್ರೀಕರಣ ವಿಭಾಗ, ನವತರುಣ ಸೇವಾ ವಿಭಾಗ, ಅಮೆರಿಕದ ಗ್ರಂಥಾಲಯ ಕಾರ್ಯನಿರ್ವಾಹಕ ಸಮಿತಿಗಳ ಸಂಘ.

ಈ ಸಂಘದ ಮುಖ್ಯ ಕಚೇರಿ ಶಿಕಾಗೋದಲ್ಲಿದ್ದು ಆಡಳಿತ ಕಚೇರಿ ವಾಷಿಂಗ್‌ಟನ್ನಿನಲ್ಲಿದೆ. ಈ ಸಂಘಕ್ಕೆ ಹಣಕಾಸು ಮೂರು ರೀತಿಯಿಂದ ಒದಗುತ್ತಿದೆ. 1. ಸದಸ್ಯ ಶುಲ್ಕ ಮತ್ತು ದತ್ತಿ ವರಮಾನ, 2. ಪ್ರಕಟಣೆಗಳ ಮಾರಾಟ ಮತ್ತು 3. ದಾನಧನ.

**ಕಾರ್ಯಕ್ಷೇತ್ರ :** ಇಂದು ಅಮೆರಿಕ ಗ್ರಂಥಾಲಯಗಳ ನಾಡೆಂದೆನಿಸಿಕೊಂಡಿದ್ದರೆ ಅದರ ಕೀರ್ತಿಯೆಲ್ಲ ಅಮೆರಿಕದ ಗ್ರಂಥಾಲಯ ಸಂಘಕ್ಕೆ ಸಲ್ಲತಕ್ಕದ್ದು. 1876ರಿಂದ ಇಲ್ಲಿಯವರೆಗೆ ಸಂಘ ಸಾಕಷ್ಟು ಉಪಯುಕ್ತವಾದ ಕೆಲಸ ಮಾಡಿದೆ. ಸೂಚೀಕರಣ ಮತ್ತು ವರ್ಗೀಕರಣದಿಂದ ಪ್ರಾರಂಭಿಸಿ ಟೇಪು ಮತ್ತು ಮೈಕ್ರೊಫಿಲ್ಮ್‌ಗಳವರೆಗೆ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡಿರುವ ಈ ಸಂಘ ಅಮೆರಿಕದ ಅದೇಕೆ ಪ್ರಪಂಚದ ಗ್ರಂಥಾಲಯ ಮತ್ತು ಗ್ರಂಥಾಲಯ ಸೇವೆಗಳಿಗೆ ದಾರಿದೀಪವಾಗಿದೆ. ಅದರ ವಿವಿಧ ಕಾರ್ಯಕ್ರಮಗಳಲ್ಲಿ ಕೆಳಗಿನವುಗಳು ಮುಖ್ಯವಾಗಿದೆ:

***ಗ್ರಂಥಾಲಯ ಶಿಕ್ಷಣ :*** ಸಂಘ ಸ್ಥಾಪನೆಯಾದ ಕೆಲವೇ ವರ್ಷಗಳಲ್ಲಿ ಪ್ರಪಂಚದಲ್ಲಿಯೇ ಮೊದಲನೆಯದಾದ ಗ್ರಂಥಾಲಯ ಶಾಲೆ ಡ್ಯೂಯಿಯವರ ನೇತೃತ್ವದಲ್ಲಿ ಕೊಲಂಬಿಯ ವಿಶ್ವವಿದ್ಯಾಲಯದಲ್ಲಿ ತೆರೆಯಲ್ಪಟ್ಟಿತು (1887). ಇಂದು 40 ಕ್ಕೂ ಹೆಚ್ಚು ಶಾಲೆಗಳು ಗ್ರಂಥಾಲಯ ವಿಜ್ಞಾನದಲ್ಲಿ ಮುಂದುವರಿದ ತರಬೇತಿಯನ್ನು ಕೊಡುತ್ತಲಿರುವುವು. ತರಬೇತಿ ಪಡೆದ ಗ್ರಂಥಪಾಲರಿಗೆ ಉದ್ಯೋಗಾವಕಾಶ ಕಲ್ಪಿಸಿಕೊಡುವಲ್ಲಿ ಸಂಘ ವ್ಯಾಪಕ ಕಾರ್ಯಕ್ರಮವನ್ನು ಕೈಗೊಂಡಿದೆ. ಅಮೆರಿಕದ ಪ್ರತಿಯೊಂದು ಗ್ರಂಥಾಲಯದ ಆವಶ್ಯಕತೆಯನ್ನೂ ಸಂಪೂರ್ಣವಾಗಿ ಪೂರೈಸುವಲ್ಲಿ ರೇಡಿಯೋ, ಟೆಲಿವಿಷನ್ ಮತ್ತು ಸಮಾಚಾರ ಪತ್ರಗಳ ಮುಖಾಂತರ ಪ್ರಯತ್ನಿಸುತ್ತಿದೆ.

**ಪ್ರಮಾಣಗಳು :** ಶಾಲೆ, ಕಾಲೇಜು, ರಾಜ್ಯ, ಸಾರ್ವಜನಿಕ ಮತ್ತು ಆಸ್ಪತ್ರೆ ಗ್ರಂಥಾಲಯಗಳ ಗ್ರಂಥಾಲಯ ಸೇವೆಯ ಪ್ರಮಾಣಗಳನ್ನು ಸಂಘ ನಿಗದಿಮಾಡಿದೆ. ಗ್ರಂಥಾಲಯ ಸೇವೆಯ ಗುಣಮಟ್ಟಗಳನ್ನು ಕಾಯ್ದುಕೊಳ್ಳುವಲ್ಲಿ ಸಂಘ ಶ್ರಮಿಸುತ್ತಲಿದೆ. ಅಂತೆಯೇ ಇಂದು ಅಮೆರಿಕದ ಗ್ರಂಥಾಲಯಗಳಲ್ಲಿ ಸೇವೆ ಉನ್ನತಮಟ್ಟದಲ್ಲಿದ್ದು ಗ್ರಂಥಾಲಯ ಸೇವೆಯಲ್ಲಿ ನಿಖರವಾದ ಏಕರೂಪತೆ ಮತ್ತು ಹೊಂದಾಣಿಕೆಗಳನ್ನು ಕಾಣುತ್ತೇವೆ.

***ಗ್ರಂಥಾಲಯ ಕಾಯದೆ :*** ಈ ಸಂಘ ಅಮೆರಿಕದ ಪ್ರತಿಯೊಂದು ರಾಜ್ಯದಲ್ಲೂ ಗ್ರಂಥಾಲಯ ಕಾಯದೆ ಆಚರಣೆಗೆ ಬರುವಂತೆ ಸಕ್ರಿಯವಾಗಿ ಶ್ರಮಿಸುತ್ತಿದೆ. ಈ ಪರಿಶ್ರಮದಿಂದಾಗಿ ಸಾರ್ವಜನಿಕ ಗ್ರಂಥಾಲಯ ಸೇವೆಯಂತೂ ಪ್ರತಿಯೊಬ್ಬ ನಾಗರಿಕನಿಗೂ ಮುಟ್ಟುವಂತಾಗಿದೆ. ಈ ದಿಶೆಯಲ್ಲಿ ಪ್ರಯತ್ನಿಸಲು 1909ರಲ್ಲಿಯೇ ಸಂಘ ಒಂದು ಸಮಿತಿಯನ್ನು ನೇಮಿಸಿತು. 1956ರಲ್ಲಿ ಗ್ರಂಥಾಲಯ ಸೇವೆಯ ಕಾಯದೆ ಅಂಗೀಕೃತವಾಯಿತು. ಸಂಘಕ್ಕೆ ಫೆಡರಲ್ ಮತ್ತು ರಾಜ್ಯ ಸರ್ಕಾರಗಳ ಪೂರ್ಣ ಬೆಂಬಲವಿದೆ.

**ಬೌದ್ಧಿಕ ಸ್ವಾತಂತ್ರ್ಯ :** ಒಂದನೆಯ ಮಹಾಯುದ್ಧದ ಅನಂತರ ಅಮೆರಿಕದಲ್ಲಿ ಬೌದ್ಧಿಕ ಸ್ವಾತಂತ್ರ್ಯಕ್ಕೆ ಕೆಲವು ಕಟ್ಟುಪಾಡುಗಳಿತ್ತಾಗಿ ಕೆಲವೊಂದು ಗ್ರಂಥಗಳು ಗ್ರಂಥಾಲಯದ ವ್ಯಾಪ್ತಿಗೆ ಬರುತ್ತಿರಲಿಲ್ಲ. ಇಂಥ ಪರಿಸ್ಥಿತಿಯಲ್ಲಿ ಸಂಘದ ಆಗಿನ ಕಾರ್ಯನಿರ್ವಾಹಕ ಕಾರ್ಯದರ್ಶಿಯಾಗಿದ್ದ ಕಾರ್ಲ್ ಮಿಲಮ್ ಎಂಬಾತ 1939ರಲ್ಲಿ ಇಂಥ ದಿಗ್ಬಂಧನಗಳ ವಿರುದ್ಧ ಪ್ರತಿಭಟನೆಗೆ ಕರೆಕೊಟ್ಟ, ಎರಡನೆಯ ಮಹಾಯುದ್ಧ ಅನಂತರ ಈ ಪ್ರತಿಭಟನೆ ಪ್ರಬಲಗೊಂಡಿತಲ್ಲದೆ ಈ ಸಂಘದ ಮಂಡಳ ಮೊದಲನೆಯ ಗ್ರಂಥಾಲಯ ಹಕ್ಕಿನ ಮಸೂದೆಯನ್ನು (ಲೈಬ್ರರಿ ಬಿಲ್ ಆಫ್ ರೈಟ್ಸ್) ಸ್ವೀಕರಿಸಿತು. ಈ ಮಸೂದೆ 1961ರಲ್ಲಿ ಅಂಗೀಕೃತವಾಗಿ ಮತ್ತೆ 1967ರಲ್ಲಿ ಪರಿಷ್ಕೃತಗೊಂಡಿತು. ಇದರಿಂದ ಗ್ರಂಥಗಳ ಮೇಲಿನ ದಿಗ್ಬಂಧನ ಸಂಪೂರ್ಣವಾಗಿ ಹೋಗಿ ಓದುಗನ ಅಭಿರುಚಿಗೆ ತಕ್ಕಂತೆ ಗ್ರಂಥಸಾಮಗ್ರಿಗಳನ್ನು ಸಜ್ಜುಗೊಳಿಸಲು ಗ್ರಂಥಪಾಲರಿಗೆ ಸಾಧ್ಯವಾಯಿತು.

ಈ ಸಂಘ 1876ರಿಂದಲೂ ವಾರ್ಷಿಕ ಸಮ್ಮೇಳನಗಳನ್ನೂ ಅಂತಾರಾಷ್ಟ್ರೀಯ ಸಮ್ಮೇಳನಗಳನ್ನೂ ನಡೆಸಿದೆ. ಈ ಎಲ್ಲ ಸಮ್ಮೇಳನಗಳ ಕಾರ್ಯಕಲಾಪಗಳು ಲೈಬ್ರರಿ ಜರ್ನಲ್ ಮುಂತಾದ ಪತ್ರಿಕೆಗಳಲ್ಲೋ ಇಲ್ಲವೆ ಪ್ರತ್ಯೇಕವಾಗಿಯೋ ಪ್ರಕಟವಾಗಿವೆ.

ಗ್ರಂಥಾಲಯ ಸೇವೆಯಲ್ಲಿ ಉದಾತ್ತಸೇವೆ ಸಲ್ಲಿಸಿದವರಿಗೆ, ಉನ್ನತ ಮಟ್ಟದ ಪ್ರಕಟನೆಗಳಿಗೆ ಇಲ್ಲವೆ ಸಂಶೋಧನೆಗಳಿಗೆ ಸಂಘ ಪಾರಿತೋಷಕಗಳನ್ನು ಮತ್ತು ವಿದ್ಯಾರ್ಥಿ ವೇತನಗಳನ್ನು ನೀಡುತ್ತದೆ.

ಅಮೆರಿಕದ ಗ್ರಂಥಾಲಯ ಸಂಘದ ವತಿಯಲ್ಲಿ ಅನೇಕ ಉಪವಿಭಾಗಗಳು ಕೆಲಸ ಮಾಡುತ್ತಿದ್ದು, ಅಂಥವುಗಳಿಂದ ಗ್ರಂಥಾಲಯ ಸೇವೆಯ ಔಚಿತ್ಯ ಹೆಚ್ಚಿದೆ.

**ಕಾಲೇಜು ಮತ್ತು ವಿಶಿಷ್ಟ ಗ್ರಂಥಾಲಯಗಳ ಸಂಘ :** ಸಂಘದ ಈ ವಿಭಾಗ ಕಾಲೇಜು ಮತ್ತು ವಿಶಿಷ್ಟ ಗ್ರಂಥಾಲಯಗಳ ಸಮಸ್ಯೆಗಳಲ್ಲಿ ಆಸ್ಥೆವಹಿಸಿ, ಅವುಗಳ ಅಭ್ಯಾಸ ಮತ್ತು ಉಪಾಯಗಳನ್ನು ಕುರಿತು ವಿಶ್ಲೇಷಣೆ ನಡೆಸುತ್ತದೆ. ಕಾಲೇಜ್ ಅಂಡ್ ರಿಸರ್ಚ್ ಲೈಬ್ರರೀಸ್ ಎನ್ನುವ ಒಂದ ಪ್ರೌಢ ನಿಯತಕಾಲಿಕೆಯನ್ನು ಇದು ಪ್ರಕಟಿಸುತ್ತಿದೆ.

**ಅಮೆರಿಕದ ಶಾಲಾ ಗ್ರಂಥಪಾಲರ ಸಂಘ :** ಇದು ಶಾಲಾ ಗ್ರಂಥಾಲಯ ಕಾರ್ಯ ಕಲಾಪಗಳ ಪ್ರಮಾಣಗಳನ್ನು ಪರಿಷ್ಕರಿಸಿ 1960ರಲ್ಲಿ ಪ್ರಕಟಿಸಿತಲ್ಲದೆ ಶಾಲಾ ಗ್ರಂಥಾಲಯಗಳ ಸೇವಾ ಮಟ್ಟವನ್ನು ಸುಧಾರಿಸುವಲ್ಲಿ 5 ವರ್ಷಗಳ ಅವಧಿಯ ನ್ಯಾಪ್ ಶಾಲಾ ಗ್ರಂಥಾಲಯಗಳ ಯೋಜನೆಯ (ನ್ಯಾಪ್ ಸ್ಕೂಲ್ ಲೈಬ್ರರೀಸ್ ಪ್ರಾಜೆಕ್ಟ್) ಕಾರ್ಯನಿರ್ವಹಣೆಯನ್ನೂ ನೆರವೇರಿಸಿತು. ಈ ವಿಭಾಗದಲ್ಲಿ ಸ್ಕೂಲ್ ಲೈಬ್ರರೀಸ್ ಎನ್ನುವ ತ್ರೈಮಾಸಿಕವೊಂದು ಪ್ರಕಟವಾಗುತ್ತಿದೆ.

**ಆಸ್ಪತ್ರೆ ಮತ್ತು ಸಂಸ್ಥೆಗಳ ಗ್ರಂಥಾಲಯ ಸಂಘ :** ಈ ವಿಭಾಗ 1944ರಲ್ಲಿ ಸ್ಥಾಪನೆ ಯಾಯಿತು. ರೋಗಿಗಳು, ವೈದ್ಯರು ಮತ್ತು ದಾದಿಗಳು–ಇವರಿಗೆ ಅಗತ್ಯವಾದ ಗ್ರಂಥಾಲಯ ಸೇವೆಯ ಕಾರ್ಯದಲ್ಲಿ ಈ ವಿಭಾಗ ಆಸ್ಥೆ ವಹಿಸಿದೆ. ಅಸೋಸಿಯೇಷನ್ ಆಫ್ ಹಾಸ್ಪಿಟಲ್ ಅಂಡ್ ಇನ್ಸ್ಟಿಟ್ಯೂಷನ್ ಲೈಬ್ರರೀಸ್ ಎಂಬ ಹೆಸರಿನ ತ್ರೈಮಾಸಿಕವನ್ನು ಈ ವಿಭಾಗ ಪ್ರಕಟಿಸುತ್ತಿದೆ.

**ಸಾರ್ವಜನಿಕ ಗ್ರಂಥಾಲಯಗಳ ಸಂಘ :** ಇದು ಸಾರ್ವಜನಿಕ ಗ್ರಂಥಾಲಯಗಳ ಕನಿಷ್ಠ ಪ್ರಮಾಣಗಳನ್ನು ಪರಿಷ್ಕರಿಸಿತು (1966). ಸಾರ್ವಜನಿಕ ಗ್ರಂಥಾಲಯ ಪದ್ಧತಿಗಳ ಅಭ್ಯಾಸವೂ ಇದರ ವ್ಯಾಪ್ತಿಗೆ ಈಗ ಬಂದಿದೆ. ಬಿಟ್‌ವೀನ್ ಅವರ್‌ಸೆಲ್ವ್ಸ್ ಮತ್ತು ನ್ಯೂಸ್ ಲೆಟರ್ ಆಫ್ ದಿ ಆರ್ಮ್ಡ್ ಫೋರ್ಸಸ್ ಲೈಬ್ರರೀಸ್ ಸೆಕ್ಷನ್–ಎಂಬ ಎರಡು ಸುದ್ದಿಪತ್ರಗಳನ್ನು ಇದು ಪ್ರಕಟಿಸುತ್ತಿದೆ.

**ತರುಣ ಸೇವಾ ವಿಭಾಗ :** 1924ರಿಂದಲೂ ತರುಣರ ಶಿಕ್ಷಣದಲ್ಲಿ ಈ ವಿಭಾಗ ಆಸ್ಥೆ ವಹಿಸಿತ್ತು. ವಿಭಾಗದ ಆದೇಶದಂತೆ ಜಡ್‌ಸನ್ ಟಿ. ಜೆನ್ನಿಂಗ್ಸ್‌ರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚನೆಗೊಂಡು 1926ರಲ್ಲಿ ಗ್ರಂಥಾಲಯಗಳು ಮತ್ತು ತರುಣರ ಶಿಕ್ಷಣ ಎನ್ನುವ ವರದಿ ತಯಾರಾಯಿತು. ಈ ವರದಿಯ ಆದೇಶದಂತೆ ಅಡಲ್ಟ್ ಎಜುಕೇಷನ್ ಬೋರ್ಡಿನ ರಚನೆ ಸಾಧ್ಯವಾಯಿತು. ಸಾರ್ವಜನಿಕ ಗ್ರಂಥಾಲಯಗಳಲ್ಲಿ ಸಾಕ್ಷರ ಕಾರ್ಯಕ್ರಮಗಳು ಎನ್ನುವ ವರದಿಯನ್ನು ಈ ಬೋರ್ಡು ಪ್ರಕಟಿಸಿದೆ. ತರುಣ ಸೇವಾ ವಿಭಾಗ ಒಂದು ಸುದ್ದಿ ಪತ್ರವನ್ನು ಪ್ರಕಟಿಸುವುದರ ಜೊತೆಗೆ ಉತ್ತಮ ಗ್ರಂಥಗಳ ವಾರ್ಷಿಕ ಯಾದಿಯನ್ನೂ ತಯಾರಿಸಿದೆ.

**ಮಕ್ಕಳ ಸೇವಾ ವಿಭಾಗ :** ಮಕ್ಕಳಿಗಾಗಿ ಉತ್ತಮ ಮತ್ತು ಯೋಗ್ಯವಾದ ಓದುವ ಸಾಮಗ್ರಿಗಳನ್ನು ಪೂರೈಸುವಲ್ಲಿ ಈ ವಿಭಾಗದ ಪ್ರಯತ್ನ ನಡೆದಿದೆ. ಮಕ್ಕಳಿಗೆ ಅವಶ್ಯವಿರುವ ವಿಶೇಷ ಸಂಗ್ರಹಗಳನ್ನು ಕೂಡಿಸುವಲ್ಲಿ ರಾಷ್ಟ್ರೀಯ ಯೋಜನೆಯೊಂದನ್ನು ಹಾಕಿಕೊಂಡಿತಲ್ಲದೆ 1964ರಲ್ಲಿ ಸಾರ್ವಜನಿಕ ಗ್ರಂಥಾಲಯಗಳಲ್ಲಿ ಮಕ್ಕಳ ಸೇವೆಯ ಪ್ರಮಾಣಗಳನ್ನೂ ಇದು ಪ್ರಕಟಿಸಿತು. ಈ ವಿಭಾಗದ ಇತರ ಪ್ರಕಟನೆಗಳಲ್ಲಿ ಮಕ್ಕಳಿಗಾಗಿ ಉತ್ತಮ ಗ್ರಂಥಗಳು ಎನ್ನುವ ವಾರ್ಷಿಕಪಟ್ಟಿ, 1940ರಿಂದ 1959ರ ವರೆಗಿನ ವಾರ್ಷಿಕ ಪಟ್ಟಿಯ ಸಂಚಿತ ಗ್ರಂಥ, ಟಾಪ್ ಆಫ್ ದಿ ನ್ಯೂಸ್ ಎಂಬ ತ್ರೈಮಾಸಿಕ–ಇವು ಸೇರಿಕೊಂಡಿವೆ.

**ಸಮಾಚಾರ ವಿಜ್ಞಾನ ಮತ್ತು ಪ್ರಲೇಖನ ವಿಭಾಗ :** ಈ ವಿಭಾಗ 1966ರಲ್ಲಿ ಅಸ್ತಿತ್ವಕ್ಕೆ ಬಂದು ಗ್ರಂಥಾಲಯ ಕಾರ್ಯದಲ್ಲಿ ಯಂತ್ರೀಕರಣವನ್ನು ಅನ್ವಯಿಸುವಲ್ಲಿ ಅಭ್ಯಾಸ ನಡೆಸಿದೆ. ಜರ್ನಲ್ ಆಫ್ ಇನ್‌ಫರ್‌ಮೇಷನ್ ಸೈನ್ಸ್ ಅಂಡ್ ಆಟೋಮೇಷನ್ ಎಂಬ ನಿಯತಕಾಲಿಕೆಯೊಂದನ್ನು 1968 ರಿಂದಲೂ ಈ ವಿಭಾಗ ಪ್ರಕಟಿಸುತ್ತಿದೆ.

**ಗ್ರಂಥಾಲಯ ಆಡಳಿತ ವಿಭಾಗ :** ಗ್ರಂಥಾಲಯದ ಸಾಮಾನ್ಯ ಆಡಳಿತದಲ್ಲಿ ಸುಧಾರಣೆಗಳನ್ನು ತರುವಲ್ಲಿ ಈ ವಿಭಾಗ ಶ್ರಮಿಸಿದೆಯಲ್ಲದೆ ಗ್ರಂಥಾಲಯ ಆಡಳಿತದ ಪ್ರಚಲಿತ ವಿಧಾನಗಳ ವಿಶೇಷಾಭ್ಯಾಸವನ್ನೂ ನಡೆಸಿದೆ. 1966ರಲ್ಲಿ ಲೈಬ್ರರಿ ಸ್ಟ್ಯಾಟಿಸ್ಟಿಕ್ಸ್ ಎಂಬ ಗ್ರಂಥವನ್ನೂ ಲೈಬ್ರರಿ ಸ್ಟ್ಯಾಟಿಸ್ಟಿಕ್ಸ್ ಫಾರ್ ಕಾಲೇಜ್ ಅಂಡ್ ಯೂನಿವರ್ಸಿಟಿ ಲೈಬ್ರರೀಸ್ ಎಂಬ ವಾರ್ಷಿಕವನ್ನೂ ಪ್ರಕಟಿಸಿದೆ.

**ಪರಾಮರ್ಶನ ಸೇವಾ ವಿಭಾಗ :** ಪರಾಮರ್ಶನ ಸೇವೆಗೆ ಸಂಬಂಧಿಸಿದಂತೆ ಹೊಸ ಹೊಸ ಆಯಾಮಗಳನ್ನು ಶೋಧಿಸಲು 1889ರಿಂದಲೂ ಈ ವಿಭಾಗ ಹೆಚ್ಚಿನ ಶ್ರಮವಹಿಸಿದೆ. ಎಚ್.ಡಬ್ಲ್ಯು. ವಿಲ್ಸನ್ ಕಂಪನಿಯವರು ತಯಾರಿಸುವ ಎಲ್ಲ ಅಕಾರಾದಿ ಸೂಚಿಗಳಿಗೆ ನಿಯತಕಾಲಿಕೆಗಳನ್ನು ಆರಿಸುವಲ್ಲಿ ಸಹಕರಿಸುವುದು, ಸಾರ್ವಜನಿಕ ಅಥವಾ ಕಾಲೇಜು ಗ್ರಂಥಾಲಯಗಳಿಗೆ ಬೇಕಾಗುವ ಸಂದರ್ಭ ಗ್ರಂಥಗಳ ಪಟ್ಟಿಯನ್ನು ಗ್ರಂಥಾಲಯ ನಿಯತಕಾಲಿಕೆಯಲ್ಲಿ ಪ್ರಕಟಿಸುವುದು, ಸಣ್ಣ ಸಾರ್ವಜನಿಕ ಗ್ರಂಥಾಲಯಗಳೇ ಅಲ್ಲದೆ ಮಧ್ಯಮ ಸಾರ್ವಜನಿಕ ಗ್ರಂಥಾಲಯಗಳಿಗೂ ಬೇಕಾಗುವ ಮೂಲ ಸಂದರ್ಭಗ್ರಂಥಗಳ ಪಟ್ಟಿಯನ್ನು ತಯಾರಿಸುವುದು, ಇಂಥ ಪರಾಮರ್ಶನ ಗ್ರಂಥಸೂಚಿಗಳ ಪರಿಶೀಲನೆ–ಹೀಗೆ ಈ ವಿಭಾಗದ ಕಾರ್ಯನಿರ್ವಹಣೆ ನಡೆದಿದೆ. ಪರಾಮರ್ಶನ ಸೇವೆಯಲ್ಲಿ ಸಹಕಾರ ವೃದ್ಧಿಸಲು ಅನುಕೂಲವಾಗುವಂತೆ ಒಂದು ಸಮಿತಿಯನ್ನು ಈ ವಿಭಾಗ ಸ್ಥಾಪಿಸಿದೆ. ಹೊಸ ಓದುಗರಿಗಾಗಿ ಗ್ರಂಥಾಲಯ ತರಬೇತಿಯನ್ನು ಕೊಡುವಲ್ಲಿಯ ಹೊಸ ಹೊಸ ವಿಧಾನಗಳನ್ನು ಶೋಧಿಸುವುದರಲ್ಲಿ ಈ ಸಮಿತಿ ಆಸ್ಥೆ ವಹಿಸಿದೆ. ಈ ವಿಭಾಗದ ವತಿಯಿಂದ ಒಂದು ದ್ವೈಮಾಸಿಕ ಹೊರಬರುತ್ತಿದೆ.

**ತಾಂತ್ರಿಕ ಸೇವಾ ವಿಭಾಗ :** ಇದರ ಕಾರ್ಯಾಚರಣೆ 1900ರಿಂದಲೂ ನಡೆಯುತ್ತಿದ್ದು ಸೂಚೀಕರಣದ ಸೂತ್ರಗಳನ್ನು ರೂಪಿಸುವಲ್ಲಿ ಈ ವಿಭಾಗ ವಿಶೇಷ ಪಾತ್ರ ವಹಿಸಿತು. ಇದರ ಸೂಚೀಕರಣ ಸೂತ್ರಗಳನ್ನು ಅಮೆರಿಕದ ಪ್ರತಿಯೊಂದು ಗ್ರಂಥಾಲಯವೂ ಹೆಚ್ಚು ಕಡಿಮೆ ಎಲ್ಲ ಐರೋಪ್ಯ ಗ್ರಂಥಾಲಯಗಳೂ ಬಳಸುತ್ತಿವೆ. ಲೈಬ್ರರಿ ಆಫ್ ಕಾಂಗ್ರೆಸ್ ವರ್ಗೀಕರಣ ಮತ್ತು ದಾಶಮಿಕ ವರ್ಗೀಕರಣ ಪದ್ಧತಿಗಳ ಯುಕ್ತಾಯುಕ್ತತೆಯ ವಿವೇಚನೆಯನ್ನು ಈ ವಿಭಾಗ ನಡೆಸಿದೆ. ಮೆಲ್‌ವಿಲ್ ಡ್ಯೂಯಿ 1876ರಲ್ಲಿ ಗ್ರಂಥಪಾಲರ ಸಮ್ಮೇಳನದಲ್ಲಿ ತಿಳಿಸಿದ ಸಹಕಾರೀ ಸೂಚೀಕರಣದ ಮಹತ್ತ್ವವನ್ನು ಈ ವಿಭಾಗ ಮನಗಂಡು ಅದರಂತೆ ರಾಷ್ಟ್ರೀಯ ಸಂಯುಕ್ತಸೂಚಿಯನ್ನು ತಯಾರಿಸುವ ಮತ್ತು ಪ್ರಕಟಿಸುವ ಕಾರ್ಯದಲ್ಲಿ ಅಭ್ಯಾಸ ನಡೆಸಿತು. ಈಗ ಈ ಸಂಯುಕ್ತಸೂಚಿ ಕಾರ್ಯವನ್ನು ಲೈಬ್ರರಿ ಆಫ್ ಕಾಂಗ್ರೆಸ್‌ನಲ್ಲಿ ವ್ಯವಸ್ಥೆಗೊಳಿಸಲಾಗಿದೆ. ಈ ಸಂಯುಕ್ತಸೂಚಿಯಲ್ಲಿ ಸುಮಾರು 16 ಕೋಟಿ ಪತ್ರಿಕಗಳಿವೆಯಲ್ಲದೆ ಅಮೆರಿಕ ಮತ್ತು ಕೆನಡ ರಾಷ್ಟ್ರಗಳಲ್ಲಿನ 2,000 ಗ್ರಂಥಾಲಯಗಳ ಗ್ರಂಥಸಂಗ್ರಹದ ಸಂಪೂರ್ಣ ಮಾಹಿತಿಯೂ ದೊರಕುತ್ತದೆ. ಈ ಸಂಯುಕ್ತ ಸೂಚಿಯನ್ನು 610 ಸಂಪುಟಗಳಲ್ಲಿ ಪ್ರಕಟಿಸುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ಲೈಬ್ರರಿ ರಿಸೋರ್ಸಸ್ ಅಂಡ್ ಟೆಕ್ನಿಕಲ್ ಸರ್ವಿಸಸ್ ಎಂಬ ತ್ರೈಮಾಸಿಕವನ್ನು ಈ ವಿಭಾಗ ಪ್ರಕಟಿಸುತ್ತಿದೆ.

**ಪ್ರಕಾಶನಕಾರ್ಯ ಮತ್ತು ಪ್ರಕಟಣೆಗಳು :** 19ನೆಯ ಶತಮಾನದ ಮಧ್ಯದ ವರೆಗೆ ಕುಂಠಿತಗೊಂಡಿದ್ದ ಅಮೆರಿಕ ಗ್ರಂಥಾಲಯ ಸಂಘದ ಪ್ರಕಾಶನ ಕಾರ್ಯ 1902ರಿಂದ ತ್ವರಿತ ಪ್ರಗತಿಯನ್ನು ಸಾಧಿಸಿತು. 1902ರಲ್ಲಿ ಆಂಡ್ರ್ಯೂ ಕಾರ್ನೇಗಿ (1835–1919) ಎಂಬ ಅಮೆರಿಕದ ಕೈಗಾರಿಕೋದ್ಯಮಿ 1 ಲಕ್ಷ ಡಾಲರಿನ ಕೊಡುಗೆಯನ್ನು ಸಂಘಕ್ಕೆ ಸಲ್ಲಿಸಿದ ಕಾರಣ ಪ್ರಕಾಶನ ಕಾರ್ಯ ಸಚೇತನಗೊಂಡಿತು.

ಸಂಘ 2000ಕ್ಕೂ ಹೆಚ್ಚಿನ ಪ್ರಕಟಣೆಗಳನ್ನು ಹೊರತಂದಿದೆಯಲ್ಲದೆ, 175 ಪ್ರಕಟಣೆಗಳ ಪುನರ್ ಮುದ್ರಣಕಾರ್ಯವನ್ನು ಕೈಗೊಂಡಿದೆ. ಸಂಘದ ಪ್ರಕಟಣೆ ಪ್ರಪಂಚದ ಬೇರೆ ಬೇರೆ ಭಾಷೆಗಳಲ್ಲೂ ಭಾಷಾಂತರಗೊಂಡಿವೆ.

**ನಿಯತಕಾಲಿಕೆಗಳು :** ಸಂಘ 28 ನಿಯತಕಾಲಿಕೆಗಳನ್ನು ಪ್ರಕಟಿಸುತ್ತಿದ್ದು ಇದರ ವಿಭಾಗಗಳು ಅನೇಕ ನಿಯತಕಾಲಿಕೆಗಳನ್ನು ಪ್ರತ್ಯೇಕವಾಗಿ ಪ್ರಕಟಿಸುತ್ತಿವೆ.

**ಸಂಘ ಪ್ರಕಟಿಸುವ ದಿ ಬುಕ್ ಲಿಸ್ಟ್ (ಆರಂಭ ವರ್ಷ : 1905)** ಎಂಬುದು ಗ್ರಂಥಪಾಲರಿಗೆ ಗ್ರಂಥ ಆರಿಸುವ ಸಾಧನವಾಗಿದೆ. ಇಂಥದೇ ಮತ್ತೊಂದು ಸಾಧನ ಸಬ್‌ಸ್ಕ್ರಿಪ್ಷನ್ ಬುಕ್ಸ್ ಬುಲೆಟಿನ್ ಎಂಬುದು 1930ರಲ್ಲಿ ಪ್ರಕಟವಾಗತೊಡಗಿತು. ಇವೆರಡೂ ನಿಯತಕಾಲಿಕೆಗಳನ್ನು ಕೂಡಿಸಿ ದಿ ಬುಕ್ ಲಿಸ್ಟ್ ಅಂಡ್ ಸಬ್‌ಸ್ಕ್ರಿಪ್ಷನ್ ಬುಕ್ಸ್ ಬುಲೆಟಿನ್ ಎಂಬ ಪ್ರಕಟಣೆಯನ್ನು 1956ರಲ್ಲಿ ಹೊರ ತರಲಾಯಿತು. (ಕೆ.ಎಚ್.ಬಿ.;ಟಿ.ಎಲ್.ಬಿ.)

**5. ಭಾರತೀಯ ಗ್ರಂಥಾಲಯಗಳ ಸಂಘ :** ಭಾರತೀಯ ಗ್ರಂಥಾಲಯಗಳ ಅಭಿವೃದ್ಧಿಗೆ ಮೀಸಲಾಗಿರುವ ಸಂಘ. ಮೊದಲನೆಯ ಅಖಿಲ ಭಾರತ ಗ್ರಂಥಾಲಯ ಪರಿಷತ್ತು ಆಗಿನ ಕೇಂದ್ರ ಸರ್ಕಾರದ ಶಿಕ್ಷಣಾಧಿಕಾರಿಯಾಗಿದ್ದ ಹೆನ್ರಿ ಷಾರ್ಪನ ಅಧ್ಯಕ್ಷತೆಯಲ್ಲಿ ಲಾಹೋರಿನಲ್ಲಿ ಸೇರಿತ್ತು (1918). ಈ ಸಂದರ್ಭದಲ್ಲಿ ಕೆ.ಎಂ. ಅಸದುಲ್ಲ, ಎ.ಸಿ.ಉಲ್ನರ್. ರೀಚಿ ಮೊದಲಾದವರ ಪರಿಶ್ರಮದ ಫಲವಾಗಿ ಈ ಸಂಘ ಸ್ಥಾಪಿತವಾಯಿತು. ಆದರೆ ಇದು ಬಹು ಬೇಗ ತನ್ನ ಅಸ್ತಿತ್ವವನ್ನು ಕಳೆದುಕೊಂಡಿತು. 1920ರಲ್ಲಿ ಈ ಸಂಘವನ್ನು ಪುನರುಜ್ಜೀವನಗೊಳಿಸುವ ಪ್ರಯತ್ನ ನಡೆಯಿತು.

1933ರ ಸೆಪ್ಟೆಂಬರ್ ತಿಂಗಳಲ್ಲಿ ಎಂ.ಓ. ಥಾಮಸ್‌ರ ನೇತೃತ್ವದಲ್ಲಿ ಅದೇ ವರ್ಷ ಅಖಿಲ ಭಾರತ ಗ್ರಂಥಾಲಯ ಷರಿಷತ್ತು ಕಲ್ಕತ್ತದಲ್ಲಿ ಸೇರಿದಾಗ (1933) ಭಾರತೀಯ ಗ್ರಂಥಾಲಯ ಸಂಘದ ಪುನರ್ ಉಗಮವಾಯಿತು. ಈ ಸಂಘದ ಮುಖ್ಯಕಾರ್ಯಾಲಯ ದೆಹಲಿಯ ಸಾರ್ವಜನಿಕ ಗ್ರಂಥಾಲಯದಲ್ಲಿದೆ. ಸಂಘಕ್ಕೆ ಕೇಂದ್ರ ಹಾಗೂ ಕೆಲವು ರಾಜ್ಯ ಸರ್ಕಾರಗಳು ಧನಸಹಾಯವನ್ನು ನೀಡುತ್ತಿವೆ. ಸದಸ್ಯ ಸಂಖ್ಯೆ ಸುಮಾರು 2,000. ಸಂಘದ ಕೆಲವು ಪ್ರಭಾವೀ ಅಧ್ಯಕ್ಷರಲ್ಲಿ ಎಸ್.ಆರ್. ರಂಗನಾಥನ್, ಬಿ.ಎಸ್. ಕೇಶವನ್, ನಿಹಾರರಂಜನ ರಾಯ್–ಇವರನ್ನು ಹೆಸರಿಸಬಹುದಾಗಿದೆ. ಮೊದಲನೆಯ ಗ್ರಂಥಾಲಯ ತರಬೇತಿ ತರಗತಿ ಪ್ರಾರಂಭವಾದ್ದು 1935ರಲ್ಲಿ. ಗ್ರಂಥಗಳ ಎರವಲು ವಿಷಯದಲ್ಲಿ ನಿಯಮಗಳನ್ನು ಮತ್ತು ಏಕರೂಪ ಸೂಚೀಕರಣ ಸಿದ್ಧಪಡಿಸಿದ್ದು, ಭಾರತೀಯರಿಗೆ ಬ್ರಿಟನಿನಲ್ಲಿ ಗ್ರಂಥಾಲಯಶಾಸ್ತ್ರದಲ್ಲಿ ಅವಕಾಶ ಕಲ್ಪಿಸಿಕೊಟ್ಟಿದ್ದು–ಇವು ಈ ಸಂಘದ ಕೆಲವು ಸಾಧನೆಗಳು.

ಎರಡು ವರ್ಷಕ್ಕೊಮ್ಮೆ ದೇಶದ ಹಲವಾರು ಸ್ಥಳಗಳಲ್ಲಿ ಸಂಘ ರಾಷ್ಟ್ರೀಯ ಸಮ್ಮೇಳನಗಳನ್ನು ನಡೆಸುತ್ತದೆ. ಇದರ 15ನೆಯ ಸಮ್ಮೇಳನ ಮೈಸೂರಿನಲ್ಲಿ ಜರುಗಿತು (1965). ಈ ಸಮ್ಮೇಳನದಲ್ಲಿ ಚರ್ಚಿಸಿದ ವಿಷಯ–ನಾಲ್ಕನೆಯ ಪಂಚವಾರ್ಷಿಕ

ಯೋಜನೆಯಲ್ಲಿ ಗ್ರಂಥಾಲಯಗಳ ಬೆಳವಣಿಗೆ. 19ನೆಯ ಸಮ್ಮೇಳನ ಅಂತಾರಾಷ್ಟ್ರೀಯ ಗ್ರಂಥ ವರ್ಷ ಹಾಗೂ ಜಾಗತಿಕ ಗ್ರಂಥ ಪ್ರದರ್ಶನಗಳ ಕಾಲದಲ್ಲಿ ಜರುಗಿತು (1972). ಆಗ ಗ್ರಂಥಗಳು ಹಾಗೂ ಇತರ ಪಠಣ ಸಾಮಗ್ರಿಗಳ ಸಂಗ್ರಹಣೆ ಎಂಬ ವಿಷಯದ ಮೇಲೆ ಚರ್ಚೆ ನಡೆಯಿತು. 20ನೆಯ ಸಮ್ಮೇಳನ ನಡೆದದ್ದು ಹೈದರಾಬಾದಿನಲ್ಲಿ (1973). ಭಾರತಿಯ ಗ್ರಂಥಾಲಯಗಳಲ್ಲಿನ ಗ್ರಂಥ ಸಂಗ್ರಹದ ಅತಿ ಹೆಚ್ಚಿನ ಉಪಯೋಗ ಹೇಗೆ ಎಂಬ ವಿಷಯದ ಬಗ್ಗೆ ಈ ಸಮ್ಮೇಳನ ಚರ್ಚೆ ನಡೆಸಿತು.

ಈ ಸಂಘ ಒಂದು ತ್ರೈಮಾಸಿಕವನ್ನು ಪ್ರಕಟಿಸುತ್ತದೆ. 1942–46ರ ವರೆಗೆ ಲೈಬ್ರರಿ ಬುಲೆಟಿನ್, 1949–53ರ ವರೆಗೆ ಅಬ್ಗಿಲಾ, 1953ರ ಬಳಿಕ ಜರ್ನಲ್ ಆಫ್ ದಿ ಇಂಡಿಯನ್ ಲೈಬ್ರರಿ ಅಸೋಸಿಯೇಷನ್ ಎಂಬ ಹೆಸರುಗಳಲ್ಲಿ ಬಂದ ಈ ಪತ್ರಿಕೆ ಸದ್ಯಕ್ಕೆ ಐಲಾ ಬುಲೆಟಿನ್ ಎಂಬ ಹೆಸರಿನಲ್ಲಿ ಪ್ರಕಟವಾಗುತ್ತಿದೆ. ಈ ಸಂಘ ಗ್ರಂಥಾಲಯಶಾಸ್ತ್ರಕ್ಕೆ ಸಂಬಂಧಿಸಿದ ಹಲವಾರು ಗ್ರಂಥಗಳನ್ನು ಪ್ರಕಟಿಸಿದೆ. ಡೈರೆಕ್ಟರಿ ಆಫ್ ಲೈಬ್ರರಿಸ್ ಇನ್ ಇಂಡಿಯ ಎಂಬ ಆಕರ ಗ್ರಂಥ ಪ್ರಕಟಣೆಗೊಂಡದ್ದು 1938ರಲ್ಲಿ. ಇದಲ್ಲದೆ ದಕ್ಷಿಣ ಏಷ್ಯದ ಗ್ರಂಥಾಲಯಗಳಲ್ಲಿ ನಿಯತಕಾಲಿಕೆಗಳ ಸಂಯುಕ್ತಸೂಚಿಯನ್ನು 1950ರಲ್ಲೂ ವೈಜ್ಞಾನಿಕ ನಿಯತಕಾಲಿಕೆಗಳ ಸಂಪುಟವನ್ನು 1952ರಲ್ಲೂ ಪ್ರಕಟಿಸಿತು. ಯುನೆಸ್ಕೊದ ಸಹಕಾರದೊಂದಿಗೆ ಏಷ್ಯದ ಹೆಸರುಗಳ ಉಲ್ಲೇಖದ ಸೂತ್ರಗಳನ್ನು ರೂಪಿಸುವ ಕಾರ್ಯವನ್ನು ರಂಗನಾಥನ್ ನೇತೃತ್ವದಲ್ಲಿ ನೆರವೇರಿಸಲಾಯಿತು.

ಗ್ರಂಥಪಾಲರಿಗೆ ಸಮಾನ ವೇತನ, ಶ್ರೇಣಿ, ಸಂಶೋಧಕರಿಗೆ ಬೇಕಾಗುವ ಸಾಮಗ್ರಿಗಳನ್ನು ಒದಗಿಸುವುದು, ಶೈಕ್ಷಣಿಕ ಮತ್ತು ತಾಂತ್ರಿಕ ಗ್ರಂಥಾಲಯಗಳಿಗೆ ಸಲಹೆ ನೀಡುವುದು, ಗ್ರಂಥ ಉತ್ಪಾದನೆ ಹಾಗೂ ಮಾರಾಟ ಕಾರ್ಯದಲ್ಲಿ ಸೂಚನೆಗಳನ್ನು ಕೊಡುವುದು, ರಾಜ್ಯ ಮತ್ತು ಕೇಂದ್ರ ಸರ್ಕಾರದೊಂದಿಗೆ ಸಂಪರ್ಕ ಬೆಳೆಸಿ ಆರ್ಥಿಕ ಸಹಾಯವನ್ನು ಕೋರುವುದು ಇತ್ಯಾದಿ ಹಲವಾರು ಚಟುವಟಿಕೆಗಳಲ್ಲಿ ಈ ಸಂಘ ಆಸ್ಥೆ ವಹಿಸಿದೆ. ಇದು ಅನೇಕ ಅಂತಾರಾಷ್ಟ್ರೀಯ ಸಂಘ ಸಂಸ್ಥೆಗಳೊಂದಿಗೆ ನಿಕಟ ಸಂಪರ್ಕವನ್ನಿರಿಸಿಕೊಂಡಿದೆ. (ಬಿ.ಎಂ.ಕೆ.)

**6. ಭಾರತೀಯ ವಿಶಿಷ್ಟ ಗ್ರಂಥಾಲಯಗಳ ಮತ್ತು ಸಮಾಚಾರ ಕೇಂದ್ರಗಳ ಸಂಘ :** ವಿಶಿಷ್ಟ ಗ್ರಂಥಾಲಯಗಳು ಮತ್ತು ಸಮಾಚಾರ ಕೇಂದ್ರಗಳಲ್ಲಿ ಪರಸ್ಪರ ನಿಕಟವಾದ ಸಂಬಂಧಗಳನ್ನು ಏರ್ಪಡಿಸಲು ಹಾಗೂ ಅವುಗಳ ಮುಖಾಂತರ ಸಂಶೋಧನಕ್ಷೇತ್ರದಲ್ಲಿ ಯೋಗ್ಯ ಸೇವೆ ಸಲ್ಲಿಸಲು ನೆರವಾಗಲು ಕಲ್ಕತ್ತದಲ್ಲಿ ಸ್ಥಾಪಿತವಾದ ಸಂಘ (ಐಎಸ್‌ಎಲ್‌ಐಸಿ–ಸೆಪ್ಟೆಂಬರ್ 3, 1955). ಇದರ ಪ್ರಥಮ ಅಧ್ಯಕ್ಷ ಎಸ್.ಎಲ್.ಹೋರಾ. ಎಸ್.ಎಲ್.ಹೋರಾ, ಜೆ.ಶಹಾ, ಎ.ಕೆ.ಮುಖರ್ಜಿ, ಜಿ.ಬಿ.ಘೋಷ್ ಮುಂತಾದ ಮಹನೀಯರು ಈ ಸಂಘವನ್ನು ಸ್ಥಾಪಿಸುವಲ್ಲಿ ಅವಿರತವಾಗಿ ಶ್ರಮಿಸಿದರು. ಸಂಘಕ್ಕೆ ಖ್ಯಾತಿವೆತ್ತ ವಿಜ್ಞಾನಿಗಳಾದ ಪಿ.ಸಿ.ಮಹಲನೋಬಿಸ್, ಡಿ.ಎಂ.ಬೋಸ್, ಟಿ.ಸೇನ್, ಜೆ.ಸಿ.ಘೋಷ್, ಎಚ್.ಜೆ.ಭಾಭಾ ಮೊದಲಾದವರ ಪ್ರೋತ್ಸಾಹ ದೊರೆಯಿತು. ಇದಲ್ಲದೆ ಅನೇಕ ಗ್ರಂಥಪಾಲರೂ ಪ್ರಲೇಖನಕಾರರೂ ಸಂಶೋಧನಕಾರರೂ ನೆರವಾದರು.

ಜ್ಞಾನ ವಿಷಯಗಳನ್ನು ಕಲೆಹಾಕುವಲ್ಲಿ, ಅದನ್ನು ವ್ಯವಸ್ಥಿತಗೊಳಿಸುವಲ್ಲಿ ಸಹಕಾರ, ಹಾಗೂ ಅದನ್ನು ತಿಳಿಯಪಡಿಸುವಲ್ಲಿ ಪ್ರೋತ್ಸಾಹ ನೀಡುವುದು: ಗ್ರಂಥಾಲಯಸೇವೆ, ಸಮಾಚಾರ ಸೇವೆ ಹಾಗೂ ಪ್ರಲೇಖನಕಾರ್ಯಗಳಲ್ಲಿ ಗುಣಮಟ್ಟವನ್ನು ಸುಧಾರಿಸುವುದು: ವಿಶಿಷ್ಟ ಗ್ರಂಥಾಲಯಗಳಲ್ಲಿ ವೈಜ್ಞಾನಿಕ, ತಾಂತ್ರಿಕ ಹಾಗೂ ಸಂಶೋಧನ ಸಂಸ್ಥೆಗಳಲ್ಲಿ, ವ್ಯಾಪಾರೀ ಸಂಸ್ಥೆಗಳಲ್ಲಿ, ಕೈಗಾರಿಕಾ ಸಂಶೋಧನ ಕೇಂದ್ರಗಳಲ್ಲಿ ಹಾಗೂ ಇನ್ನುಳಿದ ಸಮಾಚಾರ ಮತ್ತು ಪ್ರಲೇಖನ ಕೇಂದ್ರಗಳಲ್ಲಿ ಸಹಕಾರ ಭಾವವನ್ನು ಹೆಚ್ಚಿಸುವುದು; ಅವುಗಳ ಚಟುವಟಿಕೆಗಳನ್ನು ಕ್ರೋಡೀಕರಿಸುವುದು ಹಾಗೂ ಅವುಗಳಿಗೆ ಸಹಾಯ ಸಲ್ಲಿಸುವುದು; ವಿಶಿಷ್ಟ ಗ್ರಂಥಾಲಯೋದ್ಯಮ ಹಾಗೂ ಪ್ರಲೇಖನ ಕ್ಷೇತ್ರಗಳಲ್ಲಿ ನಡೆಯುವ ಸಂಶೋಧನೆಗಳಿಗೆ ಕೇಂದ್ರ ಬಿಂದುವಾಗಿರುವುದು ಇವು ಸಂಘದ ಕೆಲವು ಉದ್ದೇಶಗಳು.

ಗ್ರಂಥಾಲಯ ವಿಜ್ಞಾನದ ವಿವಿಧ ವಿಷಯಗಳ ಮೇಲೆ ಸಭೆ, ಸಮ್ಮೇಳನ ಹಾಗೂ ವಿಚಾರ ಸಂಕಿರಣಗಳನ್ನು ಸಂಘ ಏರ್ಪಡಿಸುತ್ತದೆ. ಅವುಗಳಲ್ಲಿ ಮುಖ್ಯವಾದವು–ಗ್ರಂಥಾಲಯ ಸೇವೆಯನ್ನು ಯಂತ್ರೀಕರಿಸುವುದು; ಗ್ರಂಥಸೂಚಿಗಳನ್ನು ಸಿದ್ಧಪಡಿಸುವುದು; ಭಾರತದಲ್ಲಿ ವಿಶಿಷ್ಟ ಗ್ರಂಥಾಲಯೋದ್ಯಮದಲ್ಲಿ ತರಬೇತಿ; ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಗ್ರಂಥಾಲಯಗಳ ಬೆಳವಣಿಗೆ; ವಿಶಿಷ್ಟ ಗ್ರಂಥಾಲಯಗಳ ಗ್ರಂಥಸೂಚಿಗಳನ್ನು ನಿಯಂತ್ರಿಸುವುದು; ಗ್ರಂಥಾಲಯ ವಿಜ್ಞಾನದಲ್ಲಿ ಶಿಕ್ಷಣ; ಭಾರತಕ್ಕೆ ರಾಷ್ಟ್ರೀಯ ವಿಜ್ಞಾನ ಗ್ರಂಥಾಲಯ; ಕೋಲನ್ ವರ್ಗೀಕರಣ ಹಾಗೂ ಭಾರತ ಮತ್ತು ವಿದೇಶಗಳಲ್ಲಿ ಅದರ ಉಪಯೋಗ, ಸಾಮಾಜಿಕ ವಿಜ್ಞಾನಗಳಲ್ಲಿ ಸಂಶೋಧನೆ ಇತ್ಯಾದಿ.

ಸಂಘದ 6ನೆಯ ವಿಚಾರ ಗೋಷ್ಠಿ ಬೆಂಗಳೂರಿನಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಸಂಸ್ಥೆಯ ಗ್ರಂಥಾಲಯದಲ್ಲಿ ಮೂರು ದಿನ ನಡೆಯಿತು (1970). ಇಲ್ಲಿ ವ್ಯಾವಹಾರಿಕವಾಗಿ ಪರಾಮರ್ಶನ ಸೇವೆಯ ವಿಚಾರ, ವಿಶೇಷ ವಿಷಯಗಳ ಸಂಸ್ಕರಣ ಹಾಗೂ ಸೇವಾವಿಚಾರ–ಇವುಗಳ ಬಗ್ಗೆ ಚರ್ಚೆ ನಡೆಯಿತು.

**ಶೈಕ್ಷಣಿಕ ವಿಭಾಗ :** ಪ್ರಕಾಶನ ಹಾಗೂ ಪ್ರಚಾರ ವಿಭಾಗ; ವಾಚನ ಸಾಮಗ್ರಿಗಳ ಪುನರ್ ಮುದ್ರಣ ಹಾಗೂ ಭಾಷಾಂತರ ವಿಭಾಗ; ವಾಚನ ಸಾಮಗ್ರಿ ಸಂಗ್ರಹ ವಿಭಾಗ; ಗ್ರಂಥಾಲಯ ಹಾಗೂ ಸಮಾಚಾರ ಸೇವೆಯ ವಿಭಾಗ, ಗ್ರಂಥಾಲಯ ಸಹಕಾರ ವಿಭಾಗ–ಇವು ಈ ಸಂಘದ ಕಾರ್ಯನಿರ್ವಹಿಸಲು ಇರುವ ಆರು ವಿಭಾಗಗಳು.

ಶೈಕ್ಷಣಿಕ ವಿಭಾಗ ಪ್ರತಿವರ್ಷ ಜರ್ಮನ್ ಮತ್ತು ರಷ್ಯನ್ ಭಾಷೆಗಳಲ್ಲಿ ತರಬೇತಿ ವರ್ಗಗಳನ್ನು ನಡೆಸುತ್ತದೆ.

ಸಂಘ ತ್ರೈಮಾಸಿಕ ಸಮಾಚಾರ ಪತ್ರಿಕೆಯನ್ನಲ್ಲದೆ ಅನೇಕ ಗ್ರಂಥಗಳನ್ನೂ ಪ್ರಕಟಿಸಿದೆ. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದ ವಾಚನ ಸಾಮಗ್ರಿಯ ಫೋಟೊ ಪ್ರತಿ ಇಲ್ಲವೆ ಮೈಕ್ರೊಫಿಲ್ಮ್ ಅನ್ನು ಕಡಿಮೆ ದರದಲ್ಲಿ ಮಾಡಿಕೊಡಲಾಗುತ್ತದೆ. ಭಾಷಾಂತರ ಕಾರ್ಯವನ್ನು ಕೈಗೊಂಡು, ಸಂಶೋಧಕರಿಗೆ ಸಹಾಯ ಸಲ್ಲಿಸುತ್ತದೆ. ಗ್ರಂಥಾಲಯ ವಿಜ್ಞಾನದ ನಿಯತಕಾಲಿಕೆಗಳ ಸಂಯುಕ್ತ ಗ್ರಂಥಸೂಚಿಯನ್ನು ಪ್ರಕಟಿಸಿದೆ.

ವಿಶಿಷ್ಟ ಗ್ರಂಥಾಲಯಕ್ಕೆ ಸಂಬಂಧಿಸಿದ ಅನೇಕ ಗ್ರಂಥಗಳು ಮತ್ತು ನಿಯತಕಾಲಿಕೆಗಳು ಇಲ್ಲಿವೆ. ಗ್ರಂಥಾಲಯ ಹಾಗೂ ಸಮಾಚಾರ ಸೇವೆಯ ವಿಭಾಗ ಸಂಶೋಧಕರಿಗೆ ಅವಶ್ಯವಿದ್ದ ಪ್ರಕಟಿತ ಮತ್ತು ಅಪ್ರಕಟಿತ ವಾಚನ ಸಮಗ್ರಿಗಳನ್ನು ಒದಗಿಸುತ್ತದೆ. ಹೊಸದಾಗಿ ಸ್ಥಾಪಿಸಲ್ಪಟ್ಟ ವಿಶಿಷ್ಟ ಗ್ರಂಥಾಲಯಗಳಿಗೆ ಹಾಗೂ ಸಂಸ್ಥೆಗಳಿಗೆ ಸೇವೆ ತುಂಬ ಉಪಯುಕ್ತವಾಗಿದೆ.

ಗ್ರಂಥಾಲಯ ಸಹಕಾರ ವಿಭಾಗ ಭಾರತದಲ್ಲಿಯ ವಿಶಿಷ್ಟ ಗ್ರಂಥಾಲಯ ಸಮಸ್ಯೆಯನ್ನು ಅವಲೋಕಿಸಿ ಅವುಗಳಿಗೆ ಪರಿಹಾರನ್ನು ಕಂಡುಹಿಡಿಯುವ ಜವಾಬ್ದಾರಿಯನ್ನು ಹೊತ್ತಿದೆ.

ಇಂಡಿಯನ್ ಲೈಬ್ರರಿ ಸೈನ್ಸ್ ಅಬ್‌ಸ್ಟ್ರಾಕ್ಟ್ಸ್ ಅನ್ನು ಪ್ರಕಟಿಸುವ ಹಾಗೂ ಪ್ರತಿವರ್ಷ ಉತ್ತಮ ಲೇಖಕರಿಗೆ ಪದಕವನ್ನೀಯುವ ಎರಡು ಮುಖ್ಯ ಕೆಲಸಗಳನ್ನು ಸಂಘ ನಿರ್ವಹಿಸುತ್ತಿದೆ. (ಬಿ.ಎಂ.ಕೆ.)

## VIII ಗ್ರಂಥಾಲಯ ಸಹಕಾರ

ಎರಡು ಅಥವಾ ಹೆಚ್ಚು ಗ್ರಂಥಾಲಯಗಳು ಸೇರಿ ಒಟ್ಟಿಗೆ ತಮ್ಮ ಆಯವ್ಯಯಗಳಿಗನು ಗುಣವಾಗಿ, ಹೆಚ್ಚಿನ ವೆಚ್ಚವಿಲ್ಲದೆ ಓದುಗರಿಗೆ ಸುಲಭದಲ್ಲಿ ಎಲ್ಲ ಸೇವಾ ಸೌಕರ್ಯಗಳನ್ನೂ ಒದಗಿಸುವುದೇ ಗ್ರಂಥಾಲಯ ಸಹಕಾರದ ಪರಮೋದ್ದೇಶ. ಎಲ್ಲ ಗ್ರಂಥಗಳ, ಗ್ರಂಥಪಾಲರ ವಿವಿಧ ಅನುಭವಗಳ, ಸಾಮೂಹಿಕ ಉಪಯೋಗ ಪಡೆಯುವುದೇ ಇಲ್ಲಿನ ಮಹತ್ತ್ವದ ಗುರಿ.

ಜನಸಂಖ್ಯೆಯ ಹೆಚ್ಚಳವೊಂದೆಡೆಯಿದ್ದರೆ ಇನ್ನೊಂದೆಡೆ ಸಾಹಿತ್ಯ, ವಿಜ್ಞಾನ ಹಾಗೂ ನವೀನ ವಿಷಯಗಳ ಸಂಶೋಧನೆ ಬಹುತ್ವರಿತಗತಿಯಲ್ಲಿ ಸಾಗುತ್ತಿರುವುದನ್ನು ಕಾಣಬಹುದು. ಗ್ರಂಥ ಹಾಗೂ ಜ್ಞಾನಸ್ಫೋಟದ ಸಮಸ್ಯೆಯನ್ನು ವಿವರಿಸುತ್ತ ವಾಲ್ಟರ್ ಬ್ರಾಮ್ ಹೀಗೆ ಹೇಳುತ್ತಾರೆ ; ಪ್ರತಿ ವರ್ಷ ವಿಜ್ಞಾನ ಹಾಗೂ ತಾಂತ್ರಿಕ ವಿಷಯಗಳಿಗೆ ಸಂಬಂಧಿಸಿದ ಸುಮಾರು 75,000 ನಿಯತಕಾಲಿಕೆಗಳು ಪ್ರಪಂಚದ 65 ವಿವಿಧ ಭಾಷೆಗಳಲ್ಲಿ ಹೊರಬರುತ್ತಿವೆ. ಈ ಎಲ್ಲ ಜ್ಞಾನವನ್ನೂ ವಿಜ್ಞಾನಿಗಳಿಗೂ ಪಂಡಿತರಿಗೂ ಶೀಘ್ರವಾಗಿ ಒದಗಿಸಿಕೊಡಲು ಸುಮಾರು 2,000 ಸಾರಾಂಶ ನಿಯತಕಾಲಿಕೆಗಳು ಉಗಮವಾಗಿವೆ. ವೈದ್ಯಕೀಯ ವಿಷಯದ ಮೇಲೆಯೇ ಸುಮಾರು 8,200 ನಿಯತಕಾಲಿಕೆಗಳಲ್ಲಿ ಮೂರು ಲಕ್ಷಕ್ಕೂ ಮೇಲ್ಪಟ್ಟ ಲೇಖನಗಳು ಪ್ರಕಟಗೊಳ್ಳುತ್ತಿವೆ. ಇವೆಲ್ಲವನ್ನೂ 400 ವಿಮರ್ಶಕ ಪತ್ರಿಕೆಗಳು ತರ್ಕಬದ್ಧವಾಗಿ ವಿಶ್ಲೇಷಿಸುತ್ತಿವೆ. ಹೊಸ ಹೊಸ ಜ್ಞಾನ ಮತ್ತು ವಿಶೇಷ ವಿಚಾರಸರಣಿಯಿಂದೊಡಗೂಡಿದ ಸುಮಾರು 2,000ಕ್ಕೂ ಹೆಚ್ಚಿನ ಮುದ್ರಿತಪುಟಗಳು ಪ್ರತಿ ನಿಮಿಷವೂ ಹೊರಬರುತ್ತಿವೆ.

ವಿಜ್ಞಾನ ಮತ್ತು ಕಲಾಸಾಹಿತ್ಯದ ಬೆಳೆವಣಿಗೆ ಪ್ರತಿ ದಶಕದಲ್ಲಿ ದ್ವಿಗುಣಿತವಾಗುತ್ತ ನಡೆದಿದೆಯೆಂದು ಪಂಡಿತರ ತರ್ಕ. ಪ್ರಪಂಚದಲ್ಲಿಯೇ ಬೃಹದಾಕಾರದ ಗ್ರಂಥಾಲಯವೆಂದು ಖ್ಯಾತವಾದ ಅಮೆರಿಕ ಕಾಂಗ್ರೆಸ್ ರಾಷ್ಟ್ರೀಯ ಗ್ರಂಥಾಲಯ, ಹಾರ್ವರ್ಡ್ ಮತ್ತು ಯೇಲ್ ವಿಶ್ವವಿದ್ಯಾಲಯಗಳು ಓದುಗನಿಗೆ ಬೇಕಾಗುವ ಎಲ್ಲ ಗ್ರಂಥಗಳನ್ನೂ ಪೂರೈಸಲು ಅಸಮರ್ಥವಾಗಿವೆ. ಪ್ರಪಂಚದ ಯಾವ ಗ್ರಂಥಾಲಯವೂ ಪರಿಪೂರ್ಣವಾಗಿ ಸ್ವಾವಲಂಬಿಯಾಗಿದೆ ಎಂದು ಹೇಳುವಂತಿಲ್ಲ.

ಜ್ಞಾನ ಮತ್ತು ವಿಜ್ಞಾನ ಸಂಶೋಧನೆಗಳ ಕಾರ್ಯಗಳಲ್ಲಿ ಬೇಕಾಗುವ ವಿದೇಶೀ ಗ್ರಂಥಗಳು ಮತ್ತು ವಿವಿಧ ಲೇಖನಗಳ ಸೂಚಿಗಳು ವಾಚಕರ ಕೈಸೇರುವ ಮೊದಲು ಕೆಲವು ವಿಶಿಷ್ಟ ಸಂಸ್ಕಾರಗಳನ್ನು ಪಡೆಯಬೇಕಾಗುತ್ತದೆ. ಇದಕ್ಕೆ ತಗಲುವ ವೆಚ್ಚ ಅಪಾರ. ವೈಜ್ಞಾನಿಕ ಸಂಶೋಧಕರಿಗೆ ಸರಿಯಾದ ಸಮಯದಲ್ಲಿ ಸರಿಯಾದ ಹೊತ್ತಿಗೆ ಇವು ದೊರಕದ್ದರಿಂದ ಅವರ ಸಂಶೋಧನೆಗಳಲ್ಲಿ ಅನಾವಶ್ಯಕವಾದ ಕಾಲವಿಳಂಬವೂ ಚರ್ವಿತ ಚರ್ವಣವೂ ಆಗುತ್ತಿದೆ. ಭಾರಿ ಪ್ರಮಾಣದಲ್ಲಿ ಹೊರಬೀಳುತ್ತಿರುವ ವಿಶಿಷ್ಟ ಸಂಶೋಧನ ಪ್ರಬಂಧಗಳನ್ನು ವಿದೇಶೀ ಗ್ರಂಥಗಳನ್ನು ಪಡೆಯುವಲ್ಲಿ ಎದುರಿಸಬೇಕಾದ ವಿದೇಶಿ ವಿನಿಮಯದ

ಸಮಸ್ಯೆಗಳು, ಹಣದ ಕೊರತೆ ಮತ್ತು ಗ್ರಂಥಗಳ ಆಯ್ಕೆಯ ಜಟಿಲ ಪ್ರಸಂಗಗಳು ಹಾಗೂ ವಿವಿಧ ಭಾಷೆಗಳಲ್ಲಿ ಪ್ರಕಾಶವಾಗುತ್ತಿರುವ ಗ್ರಂಥಗಳನ್ನು ಶೇಖರಿಸುವ ಸಮಸ್ಯೆಗಳು ಹಿತವಾಗಿ ಮಿತವಾಗಿ ಪರಿಹಾರಗೊಳ್ಳಲು ಗ್ರಂಥಾಲಯ ಸಹಕಾರ ಪರಿಣಾಮಕಾರಿ.

1876ರಲ್ಲಿ ಸೇರಿದ ಅಮೆರಿಕದ ಗ್ರಂಥಪಾಲರ ಸಮ್ಮೇಳನದ ಫಲವಾಗಿ ಜನ್ಮತಳೆದ ಅಮೆರಿಕದ ಗ್ರಂಥಾಲಯ ಸಂಘ (ಎಎಲ್ಎ) ಗ್ರಂಥಾಲಯ ಸಹಕಾರಕ್ಕೆ ನಾಂದಿ ಹಾಡಿತೆನ್ನಬಹುದು. ಅಮೆರಿಕದ ಕಾಂಗ್ರೆಸ್ ಗ್ರಂಥಾಲಯದ ಸುಪ್ರಸಿದ್ಧ ಗ್ರಂಥಪಾಲ ಹರ್ಬರ್ಟ್ ಪುಟ್‌ನಮ್ ಗ್ರಂಥಾಲಯ ಸಹಕಾರದ ವಿಷಯವಾಗಿ ಮನನೀಯ ವಿಚಾರಗಳನ್ನು ಮಂಡಿಸಿದ್ದಾನೆ. ಅಂತಾರಾಷ್ಟ್ರೀಯ ತಿಳಿವಳಿಕೆ ಹಾಗೂ ಸಹಕಾರ ಮುಂಬರುವ ಗ್ರಂಥಾಲಯಗಳಿಗೆ ಅವಶ್ಯವೆಂಬ ಮಾತನ್ನು ಒತ್ತಿಹೇಳಿದ್ದಾನೆ. 20ನೆಯ ಶತಮಾನದ ಪ್ರಾರಂಭದಲ್ಲಿಯೇ ಬ್ರಿಟನ್ ಕೂಡ ಗ್ರಂಥಾಲಯ ಸಹಕಾರದಲ್ಲಿ ಆಸಕ್ತಿ ತಳೆದಿತ್ತೆಂದು ಕೆನಿಯನ್ (1927), ಮೆಕಾಲ್ವಿನ್ (1942), ರಾಬರ್ಟ್ ಕಮಿಟಿ (1957) ವರದಿಗಳಿಂದ ತಿಳಿದುಬರುತ್ತದೆ. ಗ್ರಂಥಾಲಯಗಳು ಓದುಗರ ಸೌಲಭ್ಯಕ್ಕಾಗಿ ಗ್ರಂಥಗಳನ್ನು ಪರಸ್ಪರ ಎರವಲು ಪಡೆಯಬೇಕೆಂದು ಅಮೆರಿಕದ ಗ್ರಂಥಪಾಲರು ಹೇಳಿದ್ದುಂಟು (1924). ಗ್ರಂಥಾಲಯ ಸಹಕಾರದ ಇತಿಹಾಸ ಹಾಗೂ ವೈವಿಧ್ಯತೆ, ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಅದು ನಿರ್ವಹಿಸುವ ಕಾರ್ಯ-ಇವನ್ನು ರಾಬರ್ಟ್ ಡೌನ್ಸ್ ಎಂಬ ವಿಖ್ಯಾತ ಗ್ರಂಥಪಾಲ ತನ್ನ ಒನ್ ಫಾರ್ ಆಲ್; ಎ ಹಿಸ್ಟಾರಿಕಲ್ ಸ್ಕೆಚ್ ಆಫ್ ಲೈಬ್ರರಿ ಕೊ-ಆಪರೇಷನ್ ಇನ್ ದಿ ಲೈಬ್ರರೀಸ್ ಆಫ್ ಟುಮಾರೊ ಎಂಬ ವಿಚಾರಭರಿತ ಲೇಖನದಲ್ಲಿ ಚೆನ್ನಾಗಿ ಬಣ್ಣಿಸಿದ್ದಾನೆ.

ಪ್ರಾಚೀನ ಭಾರತದಲ್ಲಿ ಗ್ರಂಥಾಲಯ ಸಹಕಾರವಿದ್ದುದರ ಕುರುಹುಗಳನ್ನು ಕಾಣಬಹುದು. ಯುವಾನ್ ಚಾಂಗ್ ತನ್ನ ದೇಶಕ್ಕೆ ಮರಳುವಾಗ ನಾಲಂದ ಹಾಗೂ ತಕ್ಷಶಿಲೆಯ ವಿಶ್ವವಿದ್ಯಾಲಯ ಗ್ರಂಥಾಲಯಗಳ ಸಹಕಾರದಿಂದ ಸಹಸ್ರಾರು ಹಸ್ತಪ್ರತಿಗಳನ್ನು ಪ್ರತಿಮಾಡಿಸಿ ಕೊಂಡೊಯ್ದದ್ದನ್ನು ಇಲ್ಲಿ ಸ್ಮರಿಸಬಹುದು. ಭೌಗೋಳಿಕ ವಿಸ್ತಾರ, ಸಾಂಸ್ಕೃತಿಕ ಬೆಳೆವಣಿಗೆ, ಶೈಕ್ಷಣಿಕ ಪ್ರಸಾರ, ಸಾಮಾಜಿಕ ಪ್ರಜ್ಞೆ ಹಾಗೂ ಆರ್ಥಿಕ ಪರಿಸ್ಥಿತಿಗಳ ಮೇಲೆ ಗ್ರಂಥಾಲಯ ಸಹಕಾರದ ವಿವಿಧ ಪ್ರಕಾರಗಳು ನಿಂತಿವೆ.

**ಪ್ರಚಲಿತವಿರುವ ಹತ್ತಾರು ಗ್ರಂಥಾಲಯ ಸಹಕಾರಗಳಲ್ಲಿ ಮುಖ್ಯವಾದವು ಇವು :** 1. ಅಂತರ ಗ್ರಂಥಾಲಯ ಎರವಲು, 2. ಸಹಕಾರಿ ಕೇಂದ್ರೀಕೃತ ಸೂಚೀಕರಣ, 3. ಸಂಯುಕ್ತಸೂಚಿ ರಚನೆ, 4. ಗ್ರಂಥಗಳ ವಿನಿಮಯ, 5. ಸಹಕಾರಿ ಗ್ರಂಥಸಂಗ್ರಹಣೆ, 6. ಗೊತ್ತಾದ ವಿಷಯದಲ್ಲಿ ವಿಶೇಷ ಪರಿಶ್ರಮ, 7. ಸಹಕಾರಿ ಗ್ರಂಥಾಗಾರ ರಚನೆ, 8. ಗ್ರಂಥಸೂಚಿ ಸೇವೆ, 9. ಸಹಕಾರಿ ಛಾಯಾಚಿತ್ರ ಪ್ರತಿಕರಣ ಸೇವೆ, 10. ಸಹಕಾರಿ ವಾರ್ತಾ ಸೇವೆ.

**1. ಅಂತರ ಗ್ರಂಥಾಲಯ ಎರವಲು :** ಗ್ರಂಥಾಲಯ ಸಹಕಾರದ ಪ್ರಥಮ ಸೋಪಾನವೆಂದರೆ ಅಂತರ ಗ್ರಂಥಾಲಯ ಎರವಲು ಪದ್ಧತಿ. ವಿವಿಧ ಓದುಗರ ಭಿನ್ನ ಭಿನ್ನ ಬೇಡಿಕೆಗಳನ್ನು ಪೂರೈಸುವುದು ಯಾವ ಗ್ರಂಥಾಲಯಕ್ಕೂ ಸಾಧ್ಯವಿಲ್ಲ. ಗ್ರಂಥಗಳನ್ನು ಬೇರೆಡೆಯಿಂದ ಎರವಲು ತೆಗೆದುಕೊಂಡು ಓದುಗರಿಗೆ ಪೂರೈಸುವುದು ಶತಮಾನದಿಂದಲೂ ಬೆಳೆದು ಬಂದ ಪದ್ಧತಿ. ಇದು 17ನೆಯ ಶತಮಾನದಿಂದಲೂ ಯುರೋಪಿನಲ್ಲಿ ರೂಢಿಯಲ್ಲಿದೆಯೆಂದು ಸಿ.ಸಿ. ಕೊಲ್ಸನ್ ಉಲ್ಲೇಖಿಸಿದ್ದಾನೆ.

ಈ ಪದ್ಧತಿಯ ನಿಯಮಾವಳಿಗಳು ಮೊಟ್ಟಮೊದಲಿಗೆ 1938ರಲ್ಲಿ ಇಫ್ಲ ಸಮ್ಮೇಳನದಲ್ಲಿ ರೂಪುಗೊಂಡವು. 1942ರ ಮೆಕಾಲ್ವಿನ್ ವರದಿ ಇಂಗ್ಲೆಂಡಿನಲ್ಲಿ ಈ ಪದ್ಧತಿಗೆ ಸಾಕಷ್ಟು ಬೆಂಬಲ ಕೊಟ್ಟಿತು.

ಇವೆಲ್ಲವನ್ನೂ ಲಕ್ಷ್ಯದಲ್ಲಿಟ್ಟುಕೊಂಡು ಅಮೆರಿಕದ ಗ್ರಂಥಾಲಯ ಸಂಘ ಈ ದಿಶೆಯಲ್ಲಿ ನಿಯಮಗಳನ್ನು ರೂಪಿಸಿ ದೇಶದ ಎಲ್ಲ ಗ್ರಂಥಾಲಯಗಳಿಗೂ ಅನ್ವಯಿಸುವಂತೆ ಒಂದು ಸಾಮಾನ್ಯ ಪದ್ಧತಿಯನ್ನು ಹಾಕಿಕೊಟ್ಟಿತು. 1952ರಲ್ಲಿ ಈ ನಿಯಮಗಳನ್ನು ಎಲ್ಲ ಗ್ರಂಥಾಲಯಗಳಿಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿಸ್ತರಿಸಲಾಯಿತು.

ಅಂಚೆಯ ವೆಚ್ಚ, ಪ್ಯಾಕಿಂಗ್, ಎರವಲು ಅವಧಿ ಮತ್ತು ವಿಸ್ತಾರ-ಇವು ಈ ಸಹಕಾರದ ಮುಖ್ಯ ಅಂಗಗಳು. ಪಠ್ಯಗ್ರಂಥಗಳು, ಕಥಾಸಾಹಿತ್ಯ, ಸಂಶೋಧನ ಪ್ರಬಂಧಗಳು ಹಾಗೂ ಕಡಿಮೆ ಕ್ರಯದ ಗ್ರಂಥಗಳು ಹಾಗೂ ವಿರಳ ಗ್ರಂಥಗಳು ಈ ನಿಯಮದ ಕಕ್ಷೆಯಲ್ಲಿ ಬರುವುದಿಲ್ಲ.

ಇತ್ತೀಚೆಗೆ ಗ್ರಂಥ ಎರವಲು ಪಡೆಯುವುದರಲ್ಲಿ ಆಗುವ ಸಮಯ ವಿಳಂಬವನ್ನು ತಡೆಯಲು ಟೆಲಿಫೋನ್, ಟೆಲಿಕ್ಸ್, ಟೆಲಿಕೋಡ್, ಟೆಲಿವಿಷನ್ ಹಾಗೂ ಗಣಕಗಳ ಸಹಾಯ ಪಡೆಯಲಾಗುತ್ತಿದೆ.

**2. ಸಹಕಾರಿ ಕೇಂದ್ರೀಕೃತ ಸೂಚೀಕರಣ :** ಎರಡು ಅಥವಾ ಎರಡಕ್ಕಿಂತಲೂ ಹೆಚ್ಚು ಗ್ರಂಥಾಲಯಗಳು ಒಟ್ಟಿಗೆ ಸೇರಿ ತಮ್ಮ ಎಲ್ಲ ಗ್ರಂಥಗಳ ಸೂಚಿಗಳನ್ನು ಸಿದ್ಧಪಡಿಸುವುದು ತುಂಬ ಲಾಭದಾಯಕ. ಇದರಿಂದ ಸೂಚೀಕರಣ ತಂತ್ರದ ಅನುಭವ ಹಾಗೂ ಪಾಂಡಿತ್ಯ ಭಾಗವಹಿಸುವ ಎಲ್ಲ ಗ್ರಂಥಾಲಯಗಳಿಗೂ ದೊರೆಯುವುದಲ್ಲದೇ ವೆಚ್ಚ ಕಡಿಮೆ ಆಗುತ್ತದೆ. ಅಲ್ಲದೆ ಸೂಚಿಗಳಲ್ಲಿ ಏಕರೂಪತೆ ಬರುತ್ತದೆ. ಅಮೆರಿಕ ಹಾಗೂ ಇಂಗ್ಲೆಂಡಿನಲ್ಲಿ ಈ ಪದ್ಧತಿ ಬಳಕೆಯಲ್ಲಿದೆ. ಸಹಕಾರಿ ಸೂಚಿಯನ್ನು ತಯಾರಿಸುವ ವಿಧಾನವನ್ನು ಪ್ರಥಮವಾಗಿ ಬಳಕೆಗೆ ತಂದವ ಚಾರಲ್ಸ್ ಜ್ಯೂಯಟ್ (1851). 1902ರಿಂದ ಅಮೆರಿಕದ ರಾಷ್ಟ್ರೀಯ ಕಾಂಗ್ರೆಸ್ ಗ್ರಂಥಾಲಯ ಮುದ್ರಿತ ಸೂಚೀಪತ್ರಗಳನ್ನು ಪ್ರಪಂಚದ ಸುಮಾರು 2,000 ಗ್ರಂಥಾಲಯಗಳಿಗೆ ಪೂರೈಸುತ್ತಿದೆ.

ಇಂಗ್ಲೆಂಡಿನಲ್ಲಿ 1858ರಲ್ಲಿ ರಾಯಲ್ ಸೊಸೈಟಿ ಸಹಕಾರಿ ಕ್ರಮದಿಂದ ಮ್ಯಾನುಸ್ಕ್ರಿಪ್ಟ್ ಕ್ಯಾಟಲಾಗ್ ಆಫ್ ದಿ ಟೈಟಲ್ಸ್ ಆಫ್ ಸೈಂಟಿಫಿಕ್ ಪೀರಿಯಾಡಿಕಲ್ಸ್ ಇನ್ ಆಲ್ ಲ್ಯಾಂಗ್ವೇಜಸ್ ಎಂಬ ಸೂಚಿಯನ್ನು ಸಿದ್ಧಪಡಿಸಿದನು. ಅದೇ ರೀತಿಯಲ್ಲಿ 1898ರಲ್ಲಿ ವಿಜ್ಞಾನಿಗಳ ಸಹಕಾರದಿಂದ ಪ್ರಪಂಚದ ಎಲ್ಲ ವಿಜ್ಞಾನ ಪ್ರಪಂಚದ ಸಾಹಿತ್ಯವನ್ನೂ ಸೂಚೀಕರಿಸಲು ಪ್ರಯತ್ನ ನಡೆಸಿತು.

ಕೆ.ಡಿ. ಮೆಟ್‌ಕಾಫ್ ಸಮಿತಿಯ ವರದಿಯಂತೆ (1927) ಸಹಕಾರಿ ಸೂಚೀಕರಣ ಅಮೆರಿಕದ ರಾಷ್ಟ್ರೀಯ ಗ್ರಂಥಾಲಯದ ಪ್ರಧಾನ ಕಾರ್ಯವಾಯಿತು. ಹಾಗೂ ಕೇಂದ್ರೀಕೃತ ಸೂಚೀಕರಣ ವ್ಯವಸ್ಥೆ ರೂಢಿಗೆ ಬಂತು. 1966ರಲ್ಲಿ ಏರ್ಪಟ್ಟ ಮಾರ್ಕ್ 1 ಎಂಬ ಇನ್ನೊಂದು ರಾಷ್ಟ್ರೀಯ ಸಹಕಾರಿ ಸೂಚೀ ಯೋಜನೆಯಲ್ಲಿ ಸುಮಾರು 24 ಸದಸ್ಯ ಗ್ರಂಥಾಲಯಗಳು ಭಾಗವಹಿಸಿದವು. ಮುಂದೆ ಮಾರ್ಕ್ 2 ಎಂಬ ಪರಿಷ್ಕೃತ ಯೋಜನೆ ಬಳಕೆಗೆ ಬಂತು. ಈ ಯೋಜನೆಯನ್ವಯ ಸದಸ್ಯ ಗ್ರಂಥಾಲಯಗಳು ಗ್ರಂಥಸೂಚಿ ಮಾಹಿತಿಯನ್ನು ಮ್ಯಾಗ್ನೆಟಿಕ್ ಟೇಪ್ ರೂಪದಲ್ಲಿ ಪಡೆಯುವುವು. ಭಾರತದಲ್ಲಿ ರಂಗನಾಥನ್ ಅವರು ಇಂಥದೇ ಒಂದು ಯೋಜನೆಯನ್ನು ಮಂಡಿಸಿದರಾದರೂ ಕಾರ್ಯಗತಗೊಳ್ಳಲಿಲ್ಲ.

**3. ಸಂಯುಕ್ತಸೂಚಿ ರಚನೆ :** ಹಲವಾರು ಗ್ರಂಥಾಲಯಗಳ ಸಂಯುಕ್ತ ಸೂಚಿಯ ಸಹಾಯದಿಂದ ಓದುಗರ ಬೇಡಿಕೆಗಳನ್ನು ಬಹುಮಟ್ಟಿಗೆ ಪೂರೈಸಬಹುದು. ಇಂಥವನ್ನು ಸ್ಥಾನಿಕ, ಪ್ರಾದೇಶಿಕ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ರಚಿಸಬಹುದು. ಇದು ಗ್ರಂಥ ಎರವಲು ಪಡೆಯುವುದರಲ್ಲಿ ಓದುಗನ ಹಾಗೂ ಗ್ರಂಥಾಲಯ ಸಿಬ್ಬಂದಿಯ ಸಮಯವನ್ನು ಉಳಿಸುವುದರಲ್ಲಿ ತುಂಬ ಸಹಾಯಕವಾಗುವುದು. ಈ ಸೂಚಿಗಳನ್ನು ಎಲ್ಲ ಪ್ರಗತಿಶೀಲ ರಾಷ್ಟ್ರಗಳೂ ಸಂಶೋಧನೆಯ ಮೂಲ ಸಾಮಗ್ರಿಯೆಂದು ಭಾವಿಸುತ್ತವೆ.

ಸಂಯುಕ್ತಸೂಚಿಯ ರಚನೆಯಲ್ಲಿ ಭಾಗವಹಿಸುವ ಗ್ರಂಥಾಲಯಗಳು ತಾವು ಪಡೆದ ಎಲ್ಲ ಗ್ರಂಥಗಳಿಗೂ ಒಂದು ಹೆಚ್ಚಿನ ಸೂಚೀಪತ್ರವನ್ನು ಸಿದ್ಧಪಡಿಸಿ ಸಂಯುಕ್ತ ಸೂಚಿ ರಚನೆ ಕಾರ್ಯದಲ್ಲಿ ತೊಡಗಿರುವ ನಿರ್ದಿಷ್ಟ ಗ್ರಂಥಾಲಯಕ್ಕೆ ಕಳಿಸಿಕೊಡುತ್ತವೆ. ಅಲ್ಲಿ ಇವೆಲ್ಲವನ್ನೂ ಒಟ್ಟುಗೂಡಿಸಿ ಒಂದು ಮೂಲ ಪತ್ರವನ್ನು ತಯಾರಿಸಲಾಗುತ್ತದೆ. ಈ ಸೂಚೀಪತ್ರದಲ್ಲಿ ಗ್ರಂಥಾಲಯಗಳ ಹೆಸರನ್ನೂ ಕ್ರಮದಲ್ಲಿ ನಮೂದಿಸಲಾಗುತ್ತದೆ. ಅಮೆರಿಕ ಕಾಂಗ್ರೆಸ್ ಗ್ರಂಥಾಲಯ 1901ರಲ್ಲಿ ಅಮೆರಿಕ ಹಾಗೂ ಕೆನಡಗಳಲ್ಲಿಯ ಮಹತ್ತ್ವದ ಸುಮಾರು 700 ಗ್ರಂಥಾಲಯಗಳಲ್ಲಿನ ಗ್ರಂಥಗಳ ರಾಷ್ಟ್ರೀಯ ಸಂಯುಕ್ತಸೂಚಿ ತಯಾರಿಸುವ ಕಾರ್ಯ ಪ್ರಾರಂಭಿಸಿತು. 1967ರ ಹೊತ್ತಿಗೆ ಈ ಸೂಚಿಯಲ್ಲಿ 3 ಕೋಟಿಗೂ ಹೆಚ್ಚಿನ ಗ್ರಂಥಗಳ ಮಾಹಿತಿಯನ್ನು ಪತ್ರಗಳ ರೂಪದಲ್ಲಿ ಕಲೆಹಾಕಲಾಯಿತು. ಅದೇ ವರ್ಷದಿಂದ ಈ ಸೂಚಿಯನ್ನು 610 ಸಂಪುಟಗಳಲ್ಲಿ ಮುದ್ರಿಸುವ ಯೋಜನೆಯನ್ನು ಹಾಕಿಕೊಂಡಿತು.

ಭಾರತದಲ್ಲಿ ಸಂಯುಕ್ತಸೂಚಿ ತಯಾರಿಸುವ ಸಹಕಾರಿ ಯೋಜನೆ ಇಲ್ಲಿಯವರೆಗೂ ಆಗಿಲ್ಲ. ಆದರೆ ಈ ದಿಶೆಯಲ್ಲಿ ನಿಯತಕಾಲಿಕೆಗಳ ಸಂಯುಕ್ತಸೂಚಿ ತಯಾರಿಸುವಲ್ಲಿ ಕೆಲ ಪ್ರಯತ್ನಗಳಾಗಿವೆ. 1953ರಲ್ಲಿ ರಂಗನಾಥನ್ ದಕ್ಷಿಣ ಏಷ್ಯದ ಪ್ರೌಢ ನಿಯತಕಾಲಿಕೆಗಳ ಸಂಯುಕ್ತಸೂಚಿಯನ್ನು ಹೊರತಂದರು. 1966ರಲ್ಲಿ ಭಾರತದ ಗ್ರಂಥಾಲಯ ಅಭಿವೃದ್ಧಿ ಸಲಹಾ ಮಂಡಳಿ ಭಾರತದ ಗ್ರಂಥಾಲಯಗಳಲ್ಲಿನ ಅಮೆರಿಕನ್ ನಿಯತಕಾಲಿಕೆಗಳ ಸಂಯುಕ್ತಸೂಚಿಯನ್ನು ತಯಾರಿಸಿತು. ಭಾರತದ ರಾಷ್ಟ್ರೀಯ ವಿಜ್ಞಾನ ಪ್ರಲೇಖನ ಕೇಂದ್ರ ಈಗಾಗಲೇ 13 ಗ್ರಂಥಾಲಯಗಳಲ್ಲಿನ ವೈಜ್ಞಾನಿಕ ನಿಯತಕಾಲಿಕೆಗಳ ಪ್ರಾದೇಶಿಕ ಸಂಯುಕ್ತಸೂಚಿಗಳನ್ನು ತಯಾರಿಸಿದೆ. ಅಲ್ಲದೆ ಸಾಮಾಜಿಕ ವಿಜ್ಞಾನ ನಿಯತಕಾಲಿಕೆಗಳ ಸಂಯುಕ್ತಸೂಚಿಯನ್ನು ಭಾರತೀಯ ಸಾಮಾಜಿಕ ವಿಜ್ಞಾನ ಸಂಶೋಧನ ಮಂಡಳಿ ಪ್ರಕಟಿಸಿದೆ.

**4. ಗ್ರಂಥಗಳ ವಿನಿಮಯ :** ಈ ಪದ್ಧತಿ ಯುರೋಪಿನಲ್ಲಿ 18ನೆಯ ಶತಮಾನದ ಕೊನೆ ಹಾಗೂ 19ನೆಯ ಶತಮಾನದ ಆದಿಯಲ್ಲಿ ವಿಶ್ವವಿದ್ಯಾಲಯಗಳ ಸ್ಥಾಪನೆಯ ಅನಂತರ ಪ್ರಚಾರಕ್ಕೆ ಬಂತು. ಇದರ ಶ್ರೇಯಸ್ಸು ಅಲೆಗ್ಸಾಂಡರ್ ವಟ್ಟೆಮರ್‌ಗೆ ಸಲ್ಲುತ್ತದೆ. 1840ರಲ್ಲಿ ಈತ ಅಮೆರಿಕಕ್ಕೆ ತೆರಳಿ ಸ್ಮಿತ್‌ಸೋನಿಯನ್ ಎಕ್ಸ್‌ಚೇಂಜ್ ಸಂಸ್ಥೆಯನ್ನು ಸ್ಥಾಪಿಸಿದ. ಐರೋಪ್ಯ ದೇಶಗಳ ಅನುಕೂಲತೆಗಾಗಿ ಪ್ಯಾರಿಸಿನಲ್ಲಿಯೂ ಅಂಥ ಒಂದು ಸಂಸ್ಥೆಯನ್ನು ಸ್ಥಾಪಿಸಿದ. ಈ ಕಾರ್ಯಕ್ಕೆ ಇಂಗ್ಲೆಂಡ್ ಹಾಗೂ ವಿದ್ಯಾಸಂಸ್ಥೆಗಳು ಪ್ರಕಟಿಸಿದ ಸುಮಾರು ಮೂರು ಲಕ್ಷ ಗ್ರಂಥಗಳ ವಿನಿಮಯವಾಯಿತು. 1947ರಲ್ಲಿ ಅಮೆರಿಕದಲ್ಲಿ

ಜನ್ಮತಾಳಿದ ಯುನೈಟೆಡ್ ಸ್ಟೇಟ್ಸ್ ಬುಕ್ ಎಕ್ಸ್‌ಚೇಂಜ್ ಸಂಸ್ಥೆ ಇಲ್ಲಿಯವರೆಗೆ ಸುಮಾರು 2,000 ವಿದೇಶೀ ಗ್ರಂಥಾಲಯಗಳೊಡನೆ ಗ್ರಂಥಗಳ ಅದಲು ಬದಲು ಮಾಡಿಕೊಂಡಿದೆ. ಅಮೆರಿಕದ ಅನೇಕ ವಿಶ್ವವಿದ್ಯಾಲಯಗಳು ಈ ಆಂತರಿಕ ವ್ಯವಸ್ಥೆಗೆ ಪ್ರೋತ್ಸಾಹ ಕೊಟ್ಟಿವೆ.

ಹಲವಾರು ಅಂತಾರಾಷ್ಟ್ರೀಯ ಸಭೆ ಸಮ್ಮೇಳನಗಳಲ್ಲಿ ಈ ವಿಷಯದ ಮೇಲೆ ವೈಚಾರಿಕ ಚರ್ಚೆಗಳಾದವು. ಗ್ರಂಥವಿನಿಮಯ ವಿಚಾರವಾಗಿ ಆದ ಬ್ರಸಲ್ಸ್ ಒಪ್ಪಂದಕ್ಕೆ (1886) ಸಹಿ ಹಾಕಿದ ರಾಷ್ಟ್ರಗಳು ಈ ವಿಷಯವಾಗಿ ಸಾಕಷ್ಟು ಪ್ರಚಾರ ಕಾರ್ಯ ಕೈಗೊಂಡವು. ಎರಡನೆಯ ಮಹಾಯುದ್ಧದ ಪರಿಣಾಮವಾಗಿ ಆ ಒಪ್ಪಂದಕ್ಕೆ ಸಾಕಷ್ಟು ಯಶಸ್ಸು ದೊರೆಯಲಿಲ್ಲ.

1958ರಲ್ಲಿ ಯುನೆಸ್ಕೊ ಮುಖಾಂತರ ಎಲ್ಲ ಗ್ರಂಥಾಲಯಗಳು ಗ್ರಂಥಗಳ ವಿನಿಮಯ ಕರಾರಿಗೆ ಒಪ್ಪಿಗೆಯಿತ್ತುವಲ್ಲದೆ 1961ರಲ್ಲಿ ಅದು ಜಾರಿಗೆ ಬಂತು. ಇದಲ್ಲದೇ ಹಲವಾರು ಸರ್ಕಾರಗಳ ನಡುವೆ ಬಿಚ್ಚು ಮನಸ್ಸಿನ ದ್ವಿಪಕ್ಷೀಯ ಕರಾರುಗಳಾದವು.

1883ರಿಂದ ಬ್ರಿಟಿಷ್ ಸರ್ಕಾರ ಈ ಗ್ರಂಥ ವಿನಿಮಯ ಕಾರ್ಯವನ್ನು ಪ್ರಾರಂಭಿಸಿತು. 1960ರಲ್ಲಿ ಬ್ರಿಟಿಷ್ ನ್ಯಾಷನಲ್ ಬುಕ್ ಸೆಂಟರ್ ಸ್ಥಾಪನೆಯಾಗಿ ಅದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗ್ರಂಥವಿನಿಮಯ ಕಾರ್ಯವನ್ನು ನಡೆಸಿಕೊಂಡು ಬರುತ್ತಿದೆ.

ಯುನೆಸ್ಕೊ ಆಗಾಗ್ಗೆ ಸಭೆಸಮ್ಮೇಳನಗಳನ್ನು ಏರ್ಪಡಿಸಿ ಈ ತರಹದ ಸಹಕಾರ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಳೆಯಲನುಕೂಲವಾಗುವಂತೆ ಪ್ರಚಾರ ನಡೆಸುತ್ತಿದೆ. ಹ್ಯಾಂಡ್‌ಬುಕ್ ಆಫ್ ಇಂಟರ್‌ನ್ಯಾಷನಲ್ ಎಕ್ಸ್‌ಚೇಂಜ್ ಆಫ್ ಪಬ್ಲಿಕೇಷನ್ಸ್ ಮತ್ತು ಯುನೆಸ್ಕೊ ಬುಲೆಟಿನ್ ಫಾರ್ ಲೈಬ್ರರೀಸ್ ಎಂಬ ದ್ವೈಮಾಸಿಕ ಪತ್ರಿಕೆ ವಿನಿಮಯ ಮಾಡುವ ಗ್ರಂಥಾಲಯಗಳ ಹಾಗೂ ಗ್ರಂಥಗಳ ಪಟ್ಟಿಯನ್ನು ಪ್ರಸಿದ್ಧಿಸುತ್ತದೆ.

**5. ಸಹಕಾರಿ ಗ್ರಂಥಸಂಗ್ರಹಣೆ :** ಸಾಮೂಹಿಕವಾಗಿ ಗ್ರಂಥಗಳನ್ನು ಖರೀದಿಸುವುದರಿಂದ ಕಡಿಮೆ ಉಪಯೋಗಿಸಲಾಗುವ ಮತ್ತು ಪ್ರಸ್ತುತ ಪ್ರಸಂಗದಲ್ಲಿ ಅನಾವಶ್ಯಕವೆಂದೆನಿಸುವ ಗ್ರಂಥಗಳನ್ನು ಕೊಳ್ಳುವುದನ್ನು, ವಿದೇಶಗಳಲ್ಲಿ ಪ್ರಕಟವಾಗುವ ಗ್ರಂಥಗಳ ಆಯಾತ, ವಿದೇಶಿ ಹಣದ ವಿನಿಮಯದ ನಿರ್ಬಂಧ ಮುಂತಾದ ಸಮಸ್ಯೆಗಳನ್ನು ಸುಲಭವಾಗಿ ಪರಿಹರಿಸಬಹುದು. ಇಂಥ ಸಹಕಾರಿ ಯೋಜನೆಯ ಮಾದರಿಗೆ ಉದಾಹರಣೆ ಎಂದರೆ ಫಾರ್ಮಿಂಗ್‌ಟನ್ ಯೋಜನೆ.

1942ರಲ್ಲಿ ಕನೆಕ್ಟಿಕಟ್ ರಾಜ್ಯದ ಫಾರ್ಮಿಂಗ್‌ಟನ್ ಹಳ್ಳಿಯಲ್ಲಿ ಅಮೆರಿಕದ ಹಲವು ಪ್ರಮುಖ ಗ್ರಂಥಪಾಲರು ಸಭೆ ಸೇರಿ ಒಂದು ಯೋಜನೆಯನ್ನು ರೂಪಿಸಿದರು. ಅದು ಕಾರ್ಯರೂಪಕ್ಕೆ ಬಂದದ್ದು 1948ರಲ್ಲಿ. ವಿದೇಶಗಳಲ್ಲಿ ಪ್ರಕಟವಾಗುವ ಗ್ರಂಥಗಳನ್ನು ಒಟ್ಟಾರೆ ಕೊಂಡು ಅಮೆರಿಕದ ಸದಸ್ಯಗ್ರಂಥಾಲಯಗಳಿಗೆ ಪೂರೈಸುವುದೇ ಈ ಯೋಜನೆಯ ಗುರಿ. ಇದರ ಪ್ರಕಾರ ವಾರ್ಷಿಕ ವರದಿಗಳು, ಪಠ್ಯಗ್ರಂಥಗಳು, ಅನುವಾದಿತ ಗ್ರಂಥಗಳು (ತಾತ್ಪೂರ್ತಿಕ ಉಪಯೋಗ ಬೀಳುವ ವಿಷಯಗಳನ್ನೊಳಗೊಂಡ ಗ್ರಂಥಗಳನ್ನು ಹೊರತುಪಡಿಸಿ) ವರ್ಷಕ್ಕೆ ಸುಮಾರು 25,000ಕ್ಕೂ ಹೆಚ್ಚಿನ ವಿದೇಶೀ ಗ್ರಂಥಗಳನ್ನು ಅವುಗಳ ಭಾಷೆ ಹಾಗೂ ಆವಶ್ಯಕತೆಗಳನ್ನು ಪರಿಶೀಲಿಸಿ ಸದಸ್ಯ ಗ್ರಂಥಾಲಯಗಳಿಗೆ ಪೂರೈಸಲಾಗುತ್ತಿದೆ. ಈ ಯೋಜನೆಯಲ್ಲಿ ಸುಮಾರು 82 ಗ್ರಂಥಾಲಯಗಳು ಸಕ್ರಿಯವಾಗಿ ಭಾಗವಹಿಸಿವೆಯಲ್ಲದೆ ಅಮೆರಿಕದ ಗ್ರಂಥಾಲಯಗಳು ಸಾಕಷ್ಟು ವಿದೇಶೀ ಗ್ರಂಥಗಳನ್ನು ಪಡೆಯಲು ಅನುಕೂಲವಾಗಿದೆ. ಅಮೆರಿಕದ ಸಂಶೋಧನ ಗ್ರಂಥಾಲಯಗಳ ಸಂಘ ಈ ಯೋಜನೆಯ ಆಡಳಿತ ಸೂತ್ರವನ್ನು ಬಹುಮಟ್ಟಿಗೆ ತನ್ನ ಕೈಯಲ್ಲಿಟ್ಟುಕೊಂಡಿದೆ.

ಇಂಥ ಇನ್ನೊಂದು ಬೃಹತ್ ಯೋಜನೆಯೆಂದರೆ ಅಮೆರಿಕದ ಕಾಂಗ್ರೆಸ್ ಗ್ರಂಥಾಲಯ ಕೈಗೊಂಡ ಯುದ್ಧಕಾಲೀನ ಗ್ರಂಥಸಂಗ್ರಹಣೆ. ಇದು ಲೈಬ್ರರಿ ಆಫ್ ಕಾಂಗ್ರೆಸ್ ವಾರ್ ಟೈಮ್ ಅಕ್ವಿಸಿಷನ್ ಪ್ರೋಗ್ರಾಮ್ ಎಂದು ಹೆಸರುವಾಸಿಯಾಯಿತು. ಎರಡನೆಯ ಮಹಾಯುದ್ಧದಲ್ಲಿ ಅಮೆರಿಕ ಯುರೋಪಿನ ಗ್ರಂಥ ಮಾರುಕಟ್ಟೆಯಿಂದ ದೂರವಿರ ಬೇಕಾಯಿತು. ಆದುದರಿಂದ ಹಲವಾರು ಸಂಶೋಧನ ಗ್ರಂಥಾಲಯಗಳು ತಮ್ಮ ಅವಶ್ಯಕತೆಗಾಗಿ ಕಾಂಗ್ರೆಸ್ ಗ್ರಂಥಾಲಯಕ್ಕೆ ಒತ್ತಾದ ಬೇಡಿಕೆಗಳನ್ನು ಮಂಡಿಸಬೇಕಾಯಿತು. ಇದರ ಪರಿಣಾಮವಾಗಿ ಈ ಮಹಾಗ್ರಂಥಾಲಯ ಒಂದು ಯೋಜನೆಯನ್ನು ಸಿದ್ಧಪಡಿಸಿ 1945–48ರ ಅವಧಿಯಲ್ಲಿ ಸುಮಾರು ಎಂಟು ಲಕ್ಷ ವಿದೇಶೀ ಗ್ರಂಥಗಳನ್ನು ಅಮೆರಿಕದ ವಿವಿಧ ಗ್ರಂಥಾಲಯಗಳಿಗೆ ಪೂರೈಸಿತು. ಅಮೆರಿಕದ ಗ್ರಂಥಾಲಯದ ಇತಿಹಾಸದಲ್ಲಿಯೇ ಈ ಯೋಜನೆ ತುಂಬ ಮಹತ್ತ್ವದ್ದೆನಿಸಿತು.

1962ರಲ್ಲಿ ದೆಹಲಿಯಲ್ಲಿ ಸ್ಥಾಪಿಸಲ್ಪಟ್ಟ ಅಮೆರಿಕನ್ ಪ್ರೊಕ್ಯೂರ್‌ಮೆಂಟ್ ಸೆಂಟರ್ ಎಂಬ ಸಂಸ್ಥೆ ಭಾರತದಲ್ಲಿ ಎಲ್ಲ ಭಾಷೆಗಳಲ್ಲಿ ಪ್ರಕಟವಾಗುವ ಉತ್ತಮ ಗ್ರಂಥಗಳ ಸು.20 ಪ್ರತಿಗಳನ್ನು ಕೊಂಡು ಅಮೆರಿಕದ 19 ವಿಶ್ವವಿದ್ಯಾಲಯಗಳಿಗೆ ಕಳುಹಿಸಿ ಕೊಡುತ್ತದೆ. ಇದರಿಂದ ಭಾರತೀಯ ಗ್ರಂಥಗಳು ಇಂದು ಅಮೆರಿಕದ ಗ್ರಂಥಾಲಯಗಳಲ್ಲಿ ಸುಲಭವಾಗಿ ಲಭ್ಯವಾಗುತ್ತಲಿವೆ.

ಸ್ಕ್ಯಾಂಡಿನೇವಿಯನ್ ದೇಶಗಳು ತಮ್ಮದೇ ಆದ ಯೋಜನೆಯನ್ನು ಹಾಕಿಕೊಂಡು ಸದಸ್ಯ ದೇಶಗಳಲ್ಲಿಯ ಸರ್ಕಾರಿ ಹಾಗೂ ಇನ್ನಿತರ ಗ್ರಂಥಾಲಯಗಳಿಗೆ ಬೇಕಾಗುವ ವಿದೇಶೀ ಗ್ರಂಥಗಳನ್ನು ಪೂರೈಸುತ್ತಿವೆ.

ಪಶ್ಚಿಮ ಜರ್ಮನಿಯಲ್ಲಿ ಇರುವ ಇನ್ನೊಂದು ಯೋಜನೆ ಕೇವಲ ಸರ್ಕಾರಿ ಗ್ರಂಥಾಲಯಗಳಿಗೆ ಮೀಸಲಾಗಿದೆ.

**6. ಗೊತ್ತಾದ ವಿಷಯದಲ್ಲಿ ವಿಶೇಷ ಪರಿಶ್ರಮ :** ಸ್ಥಳ ಹಾಗೂ ಹಣದ ಅಭಾವವನ್ನು ಹೋಗಲಾಡಿಸುವುದರಲ್ಲಿ ಈ ರೀತಿಯ ಗ್ರಂಥಾಲಯ ಸಹಕಾರ ತುಂಬ ಸಹಾಯವಾಗುತ್ತದೆ. ಇಂಥ ಯೋಜನೆಗಳು ಇಂಗ್ಲೆಂಡಿನಲ್ಲಿ ಬಹುಮಟ್ಟಿಗೆ ಯಶಸ್ವಿಯಾಗಿವೆ. 1912ರಲ್ಲಿ ಸೇರಿದ ಗ್ರೇಟ್ ಬ್ರಿಟನ್ ಗ್ರಂಥಾಲಯ ಸಂಘದ ಸಭೆಯಲ್ಲಿ ಒಂದು ಯೋಜನೆ ಮಂಡಿಸಲ್ಪಟ್ಟು 35 ವರ್ಷಗಳ ಅನಂತರ ಕಾರ್ಯರೂಪಕ್ಕೆ ಬಂತು. 1948ರಲ್ಲಿ ಈ ಯೋಜನೆಗನುಸಾರವಾಗಿ 29 ಗ್ರಂಥಾಲಯಗಳು ಒಟ್ಟಿಗೆ ಸೇರಿ, ಪ್ರತಿಯೊಂದು ಗ್ರಂಥಾಲಯವೂ ವರ್ಷಕ್ಕೆ ಸುಮಾರು ರೂ. 5,000 ಬೆಲೆಬಾಳುವ ಗ್ರಂಥಗಳನ್ನು (ವಾಚಕರ ಬೇಡಿಕೆಗಳನ್ನು ಗಮನದಲ್ಲಿಟ್ಟುಕೊಂಡು) ಮತ್ತು ವಿಷಯದ ವೈಶಿಷ್ಟ್ಯವುಳ್ಳ ಗ್ರಂಥಗಳನ್ನು ಕೊಳ್ಳಬೇಕೆಂದು ನಿರ್ಧರಿಸಿದವು.

ಇದಲ್ಲದೆ 1946ರಲ್ಲಿ, ಲಂಡನ್ ಮಹಾನಗರಕ್ಕೆ ಸೀಮಿತವಾಗಿರುವ ಫಿಕ್ಷನ್ ರಿಸರ್ವ್ ಯೋಜನೆಯ ಪ್ರಕಾರ ಇಡೀ ಕಥಾಸಾಹಿತ್ಯವನ್ನು ಎಲ್ಲ ಗ್ರಂಥಾಲಯಗಳೂ ಹಂಚಿಕೊಂಡು ಕೊಳ್ಳುವ ವ್ಯವಸ್ಥೆ ರೂಢಿಗೆ ಬಂದಿದೆ. ಇದರಿಂದ ಎಲ್ಲ ಗ್ರಂಥಾಲಯಗಳೂ ಎಲ್ಲ ಗ್ರಂಥಗಳನ್ನು ಕೊಳ್ಳುವ ಪರಿಪಾಟಿ ತಪ್ಪಿದೆ.

**7. ಸಹಕಾರಿ ಗ್ರಂಥಾಗಾರ ರಚನೆ :** ಗ್ರಂಥ ಮುದ್ರಣದ ಕಾರ್ಯ ತುಂಬ ಸುಲಭವಾಗಿರುವುದರಿಂದ, ಗ್ರಂಥಾಲಯಗಳ ಬೆಳವಣಿಗೆಯೂ ಭರದಿಂದ ಸಾಗಿದೆ. ವಿವಿಧ ತರಹದ ಗ್ರಂಥಗಳು, ಮಿತಿಮೀರಿದ ಸಂಖ್ಯೆಯಲ್ಲಿ ಅಚ್ಚಾಗಿ, ಮುದ್ರಣಾಲಯದಿಂದ ಹೊರಬರುವಷ್ಟರಲ್ಲಿಯೇ ತಮ್ಮ ನಾವೀನ್ಯವನ್ನು ಕಳೆದುಕೊಳ್ಳುತ್ತವೆ. ಇಂಥ ಗ್ರಂಥಗಳನ್ನು ವ್ಯವಸ್ಥಿತ ರೀತಿಯಲ್ಲಿ ಕಾದಿಡುವುದು ಒಂದು ದೊಡ್ಡ ಸಮಸ್ಯೆ. ಹೆಚ್ಚು ಉಪಯೋಗವಿರದ ಮತ್ತು ಹಳೆಯ ಗ್ರಂಥಗಳನ್ನು ಕಾಯ್ದಿಡುವುದಕ್ಕೋಸ್ಕರ ಅಮೆರಿಕದ ದೊಡ್ಡ ಗ್ರಂಥಾಲಯಗಳು ಸುಮಾರು 50 ವರ್ಷಗಳ ಹಿಂದೆಯೇ ಒಂದು ರಾಷ್ಟ್ರೀಯ ಗ್ರಂಥಾಗಾರವನ್ನು ಪ್ರಾರಂಭಿಸಬೇಕೆಂಬ ಯೋಜನೆಯನ್ನು ಮಂಡಿಸಿದ್ದವು. ಆದರೆ ಪ್ರಾದೇಶಿಕ ಗ್ರಂಥಾಗಾರಗಳು ಅಮೆರಿಕದಲ್ಲಿ ಸಾಕಷ್ಟು ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಲಿವೆ. 1951ರಲ್ಲಿ ಅಮೆರಿಕ ಗ್ರಂಥಾಲಯ ಸಂಘದ ಸಭೆಯಲ್ಲಿ ಈ ತರಹದ ಉಗ್ರಾಣಗಳನ್ನು ಸ್ಥಾಪಿಸಬೇಕೆಂದು ನಿರ್ಧರಿಸಲಾಯಿತು.

1959ರ ಸುಮಾರಿಗೆ ಇಂಗ್ಲೆಂಡ್, ಸ್ಕಾಟ್ಲೆಂಡ್ ಮತ್ತು ವೇಲ್ಸ್‌ಗಳಲ್ಲಿ ಪ್ರಾದೇಶಿಕ ಉಗ್ರಾಣಗಳು ಸ್ಥಾಪಿಸಲ್ಪಟ್ಟವು. ರಾಷ್ಟ್ರೀಯ ವಿಜ್ಞಾನ ಹಾಗೂ ತಾಂತ್ರಿಕ ಗ್ರಂಥಾಲಯ ಈ ಉಗ್ರಾಣಗಳಲ್ಲಿ ವಿದೇಶೀ ಗ್ರಂಥಗಳಲ್ಲದೇ ನಿಯತಕಾಲಿಕೆಗಳನ್ನೂ ಕಾಯ್ದಿಡುತ್ತದೆ.

1942ರಲ್ಲಿ ಪ್ರಪ್ರಥಮವಾಗಿ ಬಾಸ್ಟನ್‌ನಲ್ಲಿ ನ್ಯೂ ಇಂಗ್ಲೆಂಡ್ ಡೆಪಾಸಿಟರಿ ಲೈಬ್ರರಿ ಎಂಬ ಸಂಸ್ಥೆ ಸ್ಥಾಪನೆಯಾಯಿತು. ನಗರದ ಸುತ್ತಮುತ್ತಲಿನ 14 ದೊಡ್ಡ ಗ್ರಂಥಾಲಯಗಳು ಈ ಸಹಕಾರಿ ಉಗ್ರಾಣದಲ್ಲಿ ಗ್ರಂಥಗಳನ್ನು ಸುವ್ಯವಸ್ಥಿತವಾಗಿ ಶೇಖರಿಸಿಡುವುದಲ್ಲದೇ ಅದಕ್ಕಾಗಿ ತಗಲುವ ವೆಚ್ಚವನ್ನು ಸಮನಾಗಿ ಹಂಚಿಕೊಂಡಿವೆ.

ಶಿಕಾಗೊ ಪಟ್ಟಣದಲ್ಲಿನ ಮಿಡ್‌ವೆಸ್ಟ್ ಇಂಟರ್ ಲೈಬ್ರರಿ ಸೆಂಟರ್ ಗ್ರಂಥಾಗಾರ ಅಮೆರಿಕದ ಉಳಿದೆಲ್ಲ ಗ್ರಂಥಾಗಾರಗಳಲ್ಲಿ ಶ್ರೇಷ್ಠವೆನಿಸಿದೆ. ಈ ಉಗ್ರಾಣ ಮಧ್ಯ ಹಾಗೂ ಪಶ್ಚಿಮ ಅಮೆರಿಕದ ಪ್ರದೇಶಗಳಲ್ಲಿನ ಗ್ರಂಥಾಲಯಗಳ ಸೇವೆ ಸಲ್ಲಿಸುತ್ತಿದೆ. 16 ವಿಶ್ವವಿದ್ಯಾಲಯಗಳು, ಜಾನ್ ಕ್ರ್ಯಾರರ್ ಲೈಬ್ರರಿ ಮತ್ತು ಇಲಿನಾಯ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಎಂಬ ಸಂಸ್ಥೆಗಳು ಒಟ್ಟಾಗಿ ಈ ಕೇಂದ್ರವನ್ನು ಸ್ಥಾಪಿಸಿವೆ. ವಿಜ್ಞಾನಿಗಳಿಗೆ ಬೇಕಾಗುವ ವಿಶಿಷ್ಟ ಸಾಹಿತ್ಯವನ್ನು ಸುಲಭವಾಗಿಯೂ ಮತ್ತು ಕಡಿಮೆ ವೆಚ್ಚದಲ್ಲಿ ಒದಗಿಸುವುದು ಹಾಗೂ ಅನಾವಶ್ಯಕವಾದ ಗ್ರಂಥಗಳನ್ನು ಬೇರೆಡೆಗೆ ಸ್ಥಳಾಂತರಿಸುವುದು ಈ ಗ್ರಂಥಾಗಾರದ ಉದ್ದೇಶ. ಈ ಭಂಡಾರ ನಾಲ್ಕು ಬಗೆಯ ಗ್ರಂಥಗಳನ್ನು ಶೇಖರಿಸುತ್ತದೆ.

(i) ಗ್ರಂಥಗಳ ಮೇಲಿನ ಸಂಪೂರ್ಣ ಅಧಿಕಾರವನ್ನು ಶಾಶ್ವತವಾಗಿ ಬಿಟ್ಟುಕೊಟ್ಟ ಸಂಸ್ಥೆಗಳ ಗ್ರಂಥಗಳು.

(ii) ಗ್ರಂಥಗಳನ್ನು ಶಾಶ್ವತವಾಗಿ ಬಿಟ್ಟುಕೊಟ್ಟರೂ ಅವುಗಳ ಮೇಲಿನ ಹಕ್ಕನ್ನು ಬಿಡದಿರುವ ಸಂಸ್ಥೆಗಳ ಗ್ರಂಥಗಳು.

(iii) ಗ್ರಂಥಗಳನ್ನು ಶಾಶ್ವತವಾಗಿ ಶೇಖರಿಸಲು ಕೊಟ್ಟರೂ ಮರಳಿ ಪಡೆಯುವ ಹಕ್ಕನ್ನುಳ್ಳ ಸಂಸ್ಥೆಗಳ ಗ್ರಂಥಗಳು.

(iv) ಶೇಖರಣೆಗೆ ಬಾಡಿಗೆ ಕೊಡುವ ಸಂಸ್ಥೆಗಳ ಗ್ರಂಥಗಳು. ಈ ಕೇಂದ್ರದ ಕಾರ್ಯವ್ಯಾಪ್ತಿಯಲ್ಲಿರುವ ದೊಡ್ಡ ಗ್ರಂಥಾಲಯಗಳು ನಿರುಪಯುಕ್ತ ಗ್ರಂಥಗಳನ್ನು ಈ

ಕೇಂದ್ರಕ್ಕೆ ಕಳಿಸಿಕೊಡುತ್ತವೆ. 55 ಸದಸ್ಯರಿರುವ ಈ ಗ್ರಂಥಾಗಾರ ಮತ್ತೊಂದು ವಿಶಿಷ್ಟ ಯೋಜನೆಯ ಮೇರೆಗೆ ತನ್ನ ಕಕ್ಷೆಯಲ್ಲಿರುವ ಗ್ರಂಥಾಲಯಗಳಿಗೆ ಬೇಕಾಗುವ ಅತಿ ವೆಚ್ಚದ ಪುಸ್ತಕಗಳನ್ನೂ ನಿಯತಕಾಲಿಕೆ ಹಾಗೂ ದಿನಪತ್ರಿಕೆಗಳನ್ನೂ ಕೊಳ್ಳುತ್ತದೆ. ಸದಸ್ಯ ಗ್ರಂಥಾಲಯಗಳಲ್ಲಿ ಇರದ 832 ನಿಯತಕಾಲಿಕೆಗಳನ್ನು ಮತ್ತು 142 ವಿದೇಶಿ ದಿನಪತ್ರಿಕೆಗಳನ್ನು ಸೂಕ್ಷ್ಮಛಾಯಾಪ್ರತಿಗಳನ್ನು ಪಡೆದು ವಾಚಕರಿಗೆ ಉಪಯೋಗಿಸಲು ಬರುವಂತೆ ಸಾಕಷ್ಟು ಅನುಕೂಲತೆಗಳನ್ನು ಕಲ್ಪಿಸಿಕೊಡುತ್ತದೆ. ಕೇಂದ್ರ ಗ್ರಂಥಾಗಾರದಲ್ಲಿ ಸುಮಾರು 30 ಲಕ್ಷ ಗ್ರಂಥಗಳನ್ನು ಸಂಗ್ರಹಿಸಲಾಗಿದೆ. ಈಗ ಈ ಕೇಂದ್ರವನ್ನು ಸೆಂಟರ್ ಫಾರ್ ರಿಸರ್ಚ್ ಲೈಬ್ರರೀಸ್ ಎಂದು ಕರೆಯುತ್ತಿದ್ದಾರೆ.

ಹ್ಯಾಂಪ್‌ಷಿರ್ ಇಂಟರ್ ರಿಸರ್ಚ್ ಲೈಬ್ರರಿ ಸೆಂಟರ್ ಎಂಬ ಸಂಸ್ಥೆ ಮೆಸಾಚುಸೆಟ್ಸ್ ವಿಶ್ವವಿದ್ಯಾಲಯ, ಆಮ್‌ಹರ್ಸ್ಟ್, ಸ್ಮಿತ್ ಮತ್ತು ಮೌಂಟ್ ಹೋಲಿಯೋಕ್ ಮಹಾವಿದ್ಯಾಲಯಗಳ ಸಹಕಾರದಿಂದ ಪ್ರಾರಂಭವಾದುದು (1951). ಈ ಗ್ರಂಥಾಗಾರದಲ್ಲಿ ನಿರುಪಯುಕ್ತ ಹಾಗೂ ಅಲ್ಪೋಪಯೋಗಿ ಗ್ರಂಥಗಳ ಸಂಗ್ರಹವಿದೆ. ಮೇಲೆ ಹೇಳಿದ ನಾಲ್ಕೂ ಶೈಕ್ಷಣಿಕ ಗ್ರಂಥಾಲಯಗಳ ಸಂಸ್ಥೆಗಳ ಸ್ಥಳ ಸಮಸ್ಯೆ ಮತ್ತು ಗ್ರಂಥಗಳನ್ನು ಕಾಯ್ದಿಡಲು ತಗಲುವ ವೆಚ್ಚವನ್ನು ಕಡಿಮೆ ಮಾಡುವುದರಲ್ಲಿ ಈ ಸಂಸ್ಥೆ ಸಹಾಯಕವಾಗಿದೆಯಲ್ಲದೆ ಸುಮಾರು 400 ನಿಯತಕಾಲಿಕೆಗಳಿಗಾಗಿ ಚಂದಾಹಣವನ್ನು ಪೂರೈಸುತ್ತಿದೆ.

8. ಗ್ರಂಥಸೂಚಿ ಸೇವೆ ಗ್ರಂಥಾಲಯ ಸಹಕಾರದ ಇನ್ನೊಂದು ಬಗೆಯನ್ನು ತೋರುತ್ತದೆ. ಈ ತರಹದ ಸಹಕಾರ ರಾಷ್ಟ್ರೀಯ ಮಟ್ಟದಲ್ಲಿ ಪ್ರಪಂಚದಾದ್ಯಂತ ಕಂಡುಬರುತ್ತದೆ. ರಾಷ್ಟ್ರೀಯ ಗ್ರಂಥಾಲಯಗಳ ಮುಖ್ಯ ಸೇವೆಗಳಲ್ಲಿ ಇದೊಂದು. ಯಾವುದೇ ದೇಶದ ರಾಷ್ಟ್ರೀಯ ಗ್ರಂಥಾಲಯ ತನ್ನ ದೇಶದ ಪಾಂಡಿತ್ಯ ಮತ್ತು ಬೌದ್ಧಿಕ ಪ್ರಗತಿಯನ್ನು ಪ್ರತಿಬಿಂಬಿಸುತ್ತದೆ. ಕಾರಣ ಇತ್ತೀಚೆಗೆ ಪ್ರಪಂಚದ ಹಲವಾರು ರಾಷ್ಟ್ರಗಳು ಹಳೆಯ ಹಾಗೂ ಹೊಸ ಗ್ರಂಥಗಳ ಸೂಚಿ ರಚನೆಯಲ್ಲಿ ಕಾರ್ಯನಿರತವಾಗಿವೆ.

ಇಂಗ್ಲೆಂಡಿನಲ್ಲಿ ಪ್ರಪ್ರಥಮವಾಗಿ 1950ರಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಗ್ರಂಥಸೂಚಿಯನ್ನು ಪ್ರಸಿದ್ಧಿಸಲಾಯಿತು. ಇತ್ತೀಚೆಗೆ ಈ ಯೋಜನೆಯಲ್ಲಿ ಹಲವಾರು ತಾಂತ್ರಿಕ ಮಾರ್ಪಾಡುಗಳು ಕಂಡುಬಂದಿವೆ. ಅಮೆರಿಕದ ಪ್ರಸಿದ್ಧ ಮಾರ್ಕ್ ಪ್ರಾಜೆಕ್ಟ್ ಮಾದರಿಯ ಮೇಲೆ ಮಾರ್ಕ್ ಪೈಲಟ್ ಯೋಜನೆಯನ್ನು ರೂಪಿಸಿ ಸೂಚಿಸೇವೆಯನ್ನು ಇಂಗ್ಲೆಂಡಿನ ಹಾಗೂ ಯುರೋಪಿನ ಹಲವಾರು ಗ್ರಂಥಾಲಯಗಳಿಗೆ ಒದಗಿಸಲಾಗುತ್ತದೆ.

ಅಮೆರಿಕದ ವಿವಿಧ ಸಂಘಸಂಸ್ಥೆಗಳು ಹಲವಾರು ಪ್ರಾದೇಶಿಕ ಹಾಗೂ ವಿಶಿಷ್ಟ ವಿಷಯಗಳಿಗೆ ಸಂಬಂಧಿಸಿದಂತೆ ಸೂಚಿಗಳನ್ನು ರಚಿಸಿವೆ. ಅಮೆರಿಕ ವಿಶ್ವವಿದ್ಯಾಲಯಗಳ ಸಾಮೂಹಿಕ ಸಂಶೋಧನ ಪ್ರಬಂಧಗಳ ಸೂಚಿ ಎಲ್ಲರ ಹೊಗಳಿಕೆಗೆ ಪಾತ್ರವಾಗಿದೆ.

ಭಾರತದಲ್ಲಿಯೂ ಇದೇ ರೀತಿಯಾಗಿ 1958ರಲ್ಲಿ ಮೊಟ್ಟಮೊದಲಿಗೆ ಕೋಲ್ಕತದ ರಾಷ್ಟ್ರೀಯ ಗ್ರಂಥಾಲಯ ರಾಷ್ಟ್ರಿಯ ಗ್ರಂಥಸೂಚಿಯನ್ನು ಪ್ರಕಟಿಸಿತು. ಇದಕ್ಕೆ ಪೂರ್ವಭಾವಿಯಾಗಿ 1954ರಲ್ಲಿ ಭಾರತ ಸರ್ಕಾರ ಡೆಲಿವರಿ ಆಫ್ ಬುಕ್ಸ್ ಕಾಯದೆಯನ್ನು ಜಾರಿಗೆ ತಂದಿತು. 1956ರ ತಿದ್ದುಪಡಿಯಂತೆ ಪುಸ್ತಕಗಳ ಜೊತೆಗೆ ನಿಯತಕಾಲಿಕೆಗಳೂ ಸೇರಿದವು. ಬಿ.ಎಸ್. ಕೇಶವನ್ ಅವರು ಸಂಪಾದಿಸಿರುವ ಈ ಭಾರತೀಯ ಗ್ರಂಥಸೂಚಿಯನ್ನು ಪ್ರಪಂಚದಲ್ಲಿನ ಇತರ ರಾಷ್ಟ್ರಗಳಲ್ಲಿಯ ಗ್ರಂಥಸೂಚಿಯ ಪಂಕ್ತಿಯಲ್ಲಿ ಸೇರಿಸಬಹುದಾಗಿದೆ.

**9. ಸಹಕಾರಿ ಛಾಯಾಚಿತ್ರ ಪ್ರತೀಕರಣ ಸೇವೆ :** ವಿಶಿಷ್ಟ ಸಂದರ್ಭಗಳಲ್ಲಿ ಕೆಲವು ಪ್ರಬಂಧಗಳು, ಸರ್ಕಾರಿ ದಾಖಲೆಗಳು, ಹಸ್ತಲಿಖಿತ ಪ್ರತಿಗಳು, ವಿರಳ ಗ್ರಂಥಗಳು ಮುಂತಾದವುಗಳನ್ನು ಬೇರೊಂದು ಗ್ರಂಥಾಲಯಕ್ಕೆ ಎರವಲು ಕೊಡಲು ಬರುವುದಿಲ್ಲ. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಛಾಯಾಚಿತ್ರ ಪ್ರತಿಗಳ ಮತ್ತು ಸೂಕ್ಷ್ಮ ಛಾಯಾಚಿತ್ರದ ಪ್ರತಿಗಳ ಸೇವೆ ಸಹಾಯಕವಾಗುತ್ತದೆ.

ಇಂಥ ಸೇವೆ ಶೈಕ್ಷಣಿಕ ಮತ್ತು ಸಂಶೋಧನ ಸಂಸ್ಥೆಗಳಿಗೆ ಅತ್ಯಂತ ಲಾಭದಾಯಕವೆಂದು ಎರಡನೆಯ ಮಹಾಯುದ್ಧಕಾಲದಲ್ಲಿ ಕಂಡುಬಂತು. ಯುದ್ಧದ ಭೀಕರ ಪರಿಣಾಮವಾಗಿ ಯುರೋಪಿನ ಹಲವಾರು ಗ್ರಂಥಸಂಗ್ರಹಗಳು ಬಾಂಬಿನ ದಾಳಿಗೆ ಸಿಲುಕಿ ನಾಶವಾದವು. ಅಂತೆಯೇ ಅಮೆರಿಕದ ರಾಷ್ಟ್ರೀಯ ಗ್ರಂಥಾಲಯ, ಇಂಗ್ಲೆಂಡಿನ ಬ್ರಿಟಿಷ್ ಮ್ಯೂಸಿಯಂ ಮತ್ತು ರಾಷ್ಟ್ರೀಯ ವಿಜ್ಞಾನ ಗ್ರಂಥಾಲಯಗಳು ತಮ್ಮ ಮತ್ತು ನಿಯತಕಾಲಿಕೆಗಳ ಸೂಕ್ಷ್ಮ ಛಾಯಾಚಿತ್ರವನ್ನು ತಯಾರಿಸಿದವು. ಇತ್ತೀಚೆಗೆ ಈ ತರಹದ ಸೇವೆ ಯುರೋಪ್ ಮತ್ತು ಅಮೆರಿಕ ಮತ್ತು ಕೆನಡ ದೇಶಗಳಲ್ಲಿ ತುಂಬ ಬಳಕೆಯಲ್ಲಿದೆ. ಇದು ಆಯಾ ದೇಶಗಳ ಸಂಯುಕ್ತ ಗ್ರಂಥಸೂಚಿ ರಚನೆಯಲ್ಲಿ ತುಂಬ ಸಹಾಯಕವಾಗಿ ಪರಿಣಮಿಸಿದೆ. ಗ್ರಂಥ ಎರವಲು ಕೊಡುವುದರ ಬದಲು ಸೂಕ್ಷ್ಮ ಛಾಯಾಚಿತ್ರದ ಪ್ರತಿಯನ್ನು ಕಳಿಸುವುದು ಮಿತವ್ಯಯಕಾರಿಯಾದ್ದರಿಂದ ಅಮೆರಿಕದ ಗ್ರಂಥಾಲಯಗಳು ಈ ವಿಧಾನವನ್ನು ಅನುಸರಿಸುತ್ತಿವೆ. ಜಾನ್ ಕ್ರೆರರ್ ಗ್ರಂಥಾಲಯ ಈ ಸೇವೆಯನ್ನು 1912ರಲ್ಲಿ ಪ್ರಾರಂಭಿಸಿತು. ಮಿಷಿಗನ್ ಮತ್ತು ಇತರ ಪ್ರದೇಶಗಳ ಗ್ರಂಥಾಲಯಗಳಿಗೆ ವರ್ಷಕ್ಕೆ ಸುಮಾರು 50,000 ಪ್ರತಿಗಳನ್ನು ಪೂರೈಸಿತಲ್ಲದೇ ಸೆಲೆಕ್ಟಿವ್ ಡಿಸಿಮಿನೇಷನ್ ಆಫ್ ನಾಲೆಡ್ಜ್ ಯೋಜನೆಯಲ್ಲಿಯೂ ಸಹಾಯಕವಾಗಿದೆ.

ನೆದರ್ಲೆಂಡಿನ ಡೆಲ್ಫ್ ಟೆಕ್ನಲಾಜಿಕಲ್ ವಿಶ್ವವಿದ್ಯಾಲಯ ಗ್ರಂಥಾಲಯವೂ ಇಂಥ ಸೇವೆಯನ್ನು ಪ್ರಾರಂಭಿಸಿದೆ. ಯುರೋಪಿಯನ್ ಟ್ರಾನ್ಸ್‌ಲೇಷನ್ ಸೆಂಟರ್ ಮತ್ತು ಇಂಟರ್‌ನ್ಯಾಷನಲ್ ಲಿಟರೇಚರ್ ಸರ್ವಿಸ್ ಸಂಸ್ಥೆಗಳ ಸೇವೆಯನ್ನು ಬಹುಮಟ್ಟಿಗೆ ಪಡೆದು ಪ್ರಪಂಚದ ಯಾವುದೇ ಮೂಲೆಯಿಂದ ಬಂದ ಬೇಡಿಕೆಯನ್ನೂ ಯಾವ ಬಂಧನವಿಲ್ಲದೆ ಮತ್ತು ಪುಕ್ಕಟೆಯಾಗಿ ಈ ಸಂಸ್ಥೆ ಒದಗಿಸುತ್ತದೆ. ಈ ತರಹದ ಸೇವೆ ಪ್ರಪಂಚದ ಬೇರೆ ಬೇರೆ ಗ್ರಂಥಾಲಯಗಳಿಗೆ ವಿಳಂಬವಾಗದೆ ತಲುಪಲೆಂಬ ಉದ್ದೇಶದಿಂದ ತ್ರೈಮಾಸಿಕ ವಾರ್ತಾಪತ್ರಗಳನ್ನು ಹೊರಡಿಸುತ್ತದೆ.

ಭಾರತದಲ್ಲಿಯೂ ಇತ್ತೀಚೆಗೆ ಇನ್‌ಸ್ಡಾಕ್ ಸಂಸ್ಥೆ ಛಾಯಾಚಿತ್ರ, ಸೂಕ್ಷ್ಮ ಛಾಯಾಚಿತ್ರ ಸೇವೆಗಳನ್ನು ವಿಜ್ಞಾನಿಗಳಿಗೆ ವಿಶ್ವವಿದ್ಯಾಲಯ ಹಾಗೂ ಸಂಶೋಧನ ಕೇಂದ್ರಗಳಿಗೆ ಬೇಗನೆ ಒದಗಿಸಿ ಅವರ ಮೆಚ್ಚುಗೆಗೆ ಪಾತ್ರವಾಗಿದೆ.

**10. ಸಹಕಾರಿ ವಾರ್ತಾಸೇವೆ :** ಯಾವುದೇ ವಿಜ್ಞಾನಿಗೆ ತನ್ನ ವಿಷಯಕ್ಕೆ ಸಂಬಂಧಿಸಿದ ವಿವಿಧ ನಿಯತಕಾಲಿಕೆಗಳಲ್ಲಿ ಬರುವ ಉಪಯುಕ್ತ ಮಾಹಿತಿಯನ್ನು ಕೂಡಲೆ ಒದಗಿಸುವುದು ಇಂದು ಸಾಧ್ಯವಾಗಿದೆ. ಗಣಕಯಂತ್ರಗಳು ಹಾಗೂ ಟೆಲಿವಿಷನ್ ವ್ಯವಸ್ಥೆಗಳಿಂದ ಬಹುಬೇಗ ಓದುಗರಿಗೆ ಅಗತ್ಯವಾದ ವಿಷಯಗಳನ್ನೂ ಒದಗಿಸಲಾಗುತ್ತಿದೆ. ವಿಜ್ಞಾನ ಪ್ರಪಂಚದಲ್ಲಿ ಪ್ರಸಿದ್ಧ ಸಾರಾಂಶ ನಿಯತಕಾಲಿಕೆಗಳಾದ ಕೆಮಿಕಲ್ ಅಬ್‌ಸ್ಟ್ರಾಕ್ಟ್ಸ್, ಬಯಲಾಜಿಕಲ್ ಅಬ್‌ಸ್ಟ್ರಾಕ್ಟ್ಸ್ ಮತ್ತು ಫಿಸಿಕ್ಸ್ ಆಬ್‌ಸ್ಟ್ರಾಕ್ಟ್ಸ್ ಇವನ್ನು ಪ್ರಕಟಿಸಿರುವ ಸಂಸ್ಥೆಗಳು ಇಂಥ ಸೇವೆಯ ತಮ್ಮದೇ ಆದ ಶಾಖೆಗಳನ್ನು ಅಮೆರಿಕದ ವಿವಿಧ ಭಾಗಗಳಲ್ಲಿ ಸ್ಥಾಪಿಸಿವೆ.

ಸೋವಿಯತ್ ದೇಶದಲ್ಲಿಯೂ ಇಂಥ ಕೇಂದ್ರ ಸಂಸ್ಥೆಯೊಂದು (ವಿನಿಟಿ) ಗಮನಾರ್ಹ ಸೇವೆ ಸಲ್ಲಿಸುತ್ತಿದೆ. 1952ರಲ್ಲಿ ಪ್ರಾರಂಭವಾದ ಇದು ರಾಷ್ಟ್ರೀಯ ಮಟ್ಟದ ಸಹಕಾರಿ ವಾರ್ತಾಸಂಸ್ಥೆಯೆಂದು ಹೆಸರುವಾಸಿಯಾಗಿದೆ. ಈ ಕೇಂದ್ರದ ಸೇವೆಯನ್ನು ಸುಮಾರು 16,000 ಇತರ ಗ್ರಂಥಾಲಯಗಳು ಪಡೆಯುತ್ತಿದ್ದವು. ವಿದೇಶೀ ಗ್ರಂಥಗಳು, ವಿಜ್ಞಾನ ಪ್ರಪಂಚದ ನಿಯತಕಾಲಿಕೆಗಳು ಮತ್ತು ಅನುವಾದಿತ ಲೇಖನಗಳು, ಗ್ರಂಥಸೂಚಿಗಳು ಮತ್ತು ಇತರ ಸಾಹಿತ್ಯವನ್ನು ಓದುಗರಿಗೆ ಈ ಸಂಸ್ಥೆ ಪೂರೈಸಿದೆ.

ಗ್ರೇಟ್ ಬ್ರಿಟನಿನ ಅಸಿಬ್ (ಅಸೋಸಿಯೇಷನ್ ಆಫ್ ಸ್ಪೆಷಲ್ ಲೈಬ್ರರೀಸ್ ಅಂಡ್ ಇನ್ಫರ್ಮೇಷನ್ ಬ್ಯೂರೋ, 1924) ಸಂಸ್ಥೆ ಸಹಕಾರಿ ಪರಾಮರ್ಶನ ಸೇವೆಯಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿದೆ. ಈ ಸಂಘ ಅನೇಕ ದೇಶಗಳಲ್ಲಿ ಸ್ಥಾಪಿಸಿದ ಕೇಂದ್ರಗಳ ಮುಖಾಂತರ ದುರ್ಲಭ ಲೇಖನಗಳ ಛಾಯಾಪ್ರತಿಗಳನ್ನು ಪಡೆಯಬಹುದು. ಇದರ ಸಂಶೋಧನ ವಿಭಾಗ ಪರಾಮರ್ಶನ ಸೇವೆ ಹಾಗೂ ಸಮಾಚಾರ ಸೇವೆಯ ವಿವಿಧ ಸಮಸ್ಯೆಗಳಿಗೆ ಪರಿಹಾರಗಳನ್ನು ಶೋಧಿಸುತ್ತಿದೆ.

ಭಾರತದಲ್ಲಿ ಇನ್‌ಸ್ಡಾಕ್ (ನಿಸ್ಕೇರ್) ಸಂಸ್ಥೆ ಪರಾಮರ್ಶನ ಸೇವೆಯಲ್ಲಿ ರಾಷ್ಟ್ರೀಯ ಸಂಸ್ಥೆಯಾಗಿದ್ದು ಭಾಷಾಂತರ, ಛಾಯಾಪ್ರತಿಗಳ ಪೂರೈಕೆ ಮುಂತಾದ ವಿಶಿಷ್ಟ ಸೇವೆಗಳನ್ನು ಸಲ್ಲಿಸುತ್ತಿದೆ.

ಅಮೆರಿಕದ ಮೆಡ್ಲರ್ಸ್ ಸಂಸ್ಥೆ ಮೆಡಿಕಲ್ ಲಿಟರೇಚರ್ ಅನಾಲಿಸಿಸ್ ಅಂಡ್ ರಿಟ್ರೀವಲ್ ಸಿಸ್ಟಮ್ 1948ರಲ್ಲಿ ತನ್ನ ಕಾರ್ಯಪ್ರಾರಂಭಿಸಿತು. ಯುನೆಸ್ಕೊದ ನೆರವಿನಿಂದ ಇತ್ತೀಚೆಗೆ (1964) ಐರೋಪ್ಯ ದೇಶಗಳಿಗೂ ವಿಸ್ತರಿಸಿದೆ. ಯುರೋಪಿಯನ್ ರಿಸರ್ಚ್ ಸೆಂಟರ್ ಎಂಬ ಮತ್ತೊಂದು ವಾರ್ತಾಕೇಂದ್ರವನ್ನು ಸ್ಥಾಪಿಸಲಾಗಿದೆ. 1969ರಿಂದ ಜಪಾನ್ ಮತ್ತು ಜರ್ಮನಿಗಳೂ ಇದರ ಲಾಭವನ್ನು ಪಡೆಯುತ್ತಿವೆ.

ಯುನೆಸ್ಕೊ ಹಾಗೂ ಇಕ್‌ಸು (ಇಂಟರ್‌ನ್ಯಾಷನಲ್ ಕೌನ್ಸಿಲ್ ಸೈಂಟಿಫಿಕ್ ಯೂನಿಯನ್ಸ್) ಸಭೆ 1966ರಲ್ಲಿ ಮುಂಬಯಿಯಲ್ಲಿ ಸೇರಿ ಅಂತಾರಾಷ್ಟ್ರೀಯ ಮಟ್ಟದ ವಿಜ್ಞಾನ ವಾರ್ತಾಕೇಂದ್ರವೊಂದನ್ನು ಸ್ಥಾಪಿಸಲು ಸಲಹೆಗಳನ್ನು ಕೊಟ್ಟಿತು.

ಗ್ರಂಥಾಲಯ ಸಹಕಾರವನ್ನು ಅಂತಾರಾಷ್ಟ್ರೀಯ, ರಾಷ್ಟ್ರೀಯ, ಪ್ರಾದೇಶಿಕ ಹಾಗೂ ಸ್ಥಳೀಯ ಮಟ್ಟಗಳಲ್ಲಿ ಕೈಗೊಳ್ಳಬಹುದಾಗಿದೆ. ಈ ನಾಲ್ಕೂ ಹಂತಗಳಲ್ಲಿ ಈಗ ಸಾಕಷ್ಟು ಪ್ರಗತಿಯಾಗಿದೆ. (ಬಿ.ಸಿ.ಜೆ.)

## IX ಪುಸ್ತಕಶಾಸ್ತ್ರ ; ಪುಸ್ತಕ ವಿಕಸನ

ಗ್ರಂಥ ಎಂಬ ಮಾತು ಪುಸ್ತಕದ ತಿರುಳನ್ನು ಸೂಚಿಸುತ್ತದಾಗಿ ಗ್ರಂಥದ ಬಾಹ್ಯಸ್ವರೂಪವನ್ನು ಪುಸ್ತಕ ಎಂದು ಕರೆಯಬಹುದು. ಇಲ್ಲಿ ಪುಸ್ತಕದ ಬಾಹ್ಯಸ್ವರೂಪ ಹೇಗಿರಬೇಕು, ಅದರ ಬಾಹ್ಯವಿವರಣೆಗಳೇನು ಎಂಬುದನ್ನು ಶಿಲೆಯಿಂದ ಮುದ್ರಿತ ಪುಸ್ತಕದವರೆಗಿನ ಅದರ ವಿಕಸನದ ವಿಷಯವನ್ನು ಕೊಡಲಾಗಿದೆ.

**1. ಪುಸ್ತಕಶಾಸ್ತ್ರ :** ಪುಸ್ತಕದ ಬಾಹ್ಯಸ್ವರೂಪ ಹೇಗಿರಬೇಕು ಎಂಬುದನ್ನು ವಿವರಿಸುವ ಶಾಸ್ತ್ರಕ್ಕೆ ಈ ಹೆಸರಿದೆ (ಫಿಸಿಕಲ್ ಬಿಬ್ಲಿಯಾಗ್ರಫಿ). ಇಂಗ್ಲಿಷಿನ ಬಿಬ್ಲಿಯಾಗ್ರಫಿ ಎಂಬುದನ್ನು ಗ್ರಂಥಸೂಚಿ ಅಥವಾ ವಾಙ್ಮಯಸೂಚಿ ಎಂಬ ಅರ್ಥದಲ್ಲೂ ಬಳಸಲಾಗಿದೆ.

ಪುಸ್ತಕಶಾಸ್ತ್ರದ ಅಭ್ಯಾಸ ಮೊದಲನೆಯದಾಗಿ ವಾಙ್ಮಯಸೂಚಿಗಳನ್ನು ತಯಾರಿಸುವಲ್ಲಿ ಉಪಯೋಗಕ್ಕೆ ಬರುತ್ತದೆ. ಎರಡನೆಯದಾಗಿ ಗ್ರಂಥಪಾಲರು ಅಪೂರ್ವ ಇಲ್ಲವೆ ಪ್ರಾಚೀನ ಪುಸ್ತಕಗಳನ್ನು ಕೊಳ್ಳುವ ಪ್ರಸಂಗ ಬಂದಾಗ, ಅವು ಮಾಸದವಲ್ಲ, ನಿಜವಾದ ಮೂಲಕೃತಿಗಳು– ಎಂದು ಕಂಡುಹಿಡಿಯಲಿಕ್ಕಾಗುವುದು. ಮೂರನೆಯದಾಗಿ ಗ್ರಂಥ ಸಂಪಾದಕಕಾರ್ಯದಲ್ಲಿ ಅದು ಭಾಷಾ ಪಂಡಿತನಿಗೆ ಶಾಸ್ತ್ರೀಯ ಹಿನ್ನೆಲೆಯನ್ನು ಒದಗಿಸುತ್ತದೆ.

ಆಧುನಿಕ ಪುಸ್ತಕವೊಂದನ್ನು ಕೈಗೆತ್ತಿಕೊಂಡಾಗ ಸಾಮಾನ್ಯವಾಗಿ ಕಂಡುಬರುವ ಅದರ ಬಾಹ್ಯಾಂಗಗಳಿವು:

**1. ಮೇಲು ಹೊದಿಕೆ :** ಇದನ್ನು ಮರೆಹಾಳೆ ಎಂದೂ ಕರೆಯುತ್ತಾರೆ (ಬುಕ್‌ಜಾಕೆಟ್). ಪುಸ್ತಕದ ಹೊರ ಮೈಗೆ ಹೊದ್ದಿಸಿರುವ ಈ ಕಾಗದ ಆಕರ್ಷಕವಾಗಿರುತ್ತದೆ. ಅದರ ಮಡಿಸಿದ ಒಳಬದಿಗಳಲ್ಲಿ ಆ ಪುಸ್ತಕದ ಬಗ್ಗೆ ಹಾಗೂ ಲೇಖಕನ ಬಗ್ಗೆ ಮಾಹಿತಿಯನ್ನು ಕೊಟ್ಟಿರುತ್ತಾರೆ.

**2. ರಟ್ಟಿನ ಮುಖಪುಟ :** ಇದರಲ್ಲಿ ಪುಸ್ತಕದ ಶೀರ್ಷಿಕೆ, ಲೇಖನ, ಪ್ರಕಾಶಕರ ಹೆಸರು ಇರುತ್ತದೆ. ಅದನ್ನೇ ಸಂಕ್ಷಿಪ್ತವಾಗಿ ರಟ್ಟಿನ ಬೆನ್ನಿನಲ್ಲಿ ಕೊಟ್ಟಿರುತ್ತಾರೆ. ಮುಖಪುಟದ ಮೇಲೆ ಚಿತ್ರವೂ ಇರಬಹುದು. ಗ್ರಂಥಾಲಯಗಳು ಯಾವಾಗಲೂ ದಪ್ಪ ರಟ್ಟಿನ (ಕ್ಯಾಲಿಕೊ ಆದರೆ ಉತ್ತಮ) ಸೆಕ್ಷನ್ ಹೊಲಿಗೆ ಹಾಕಿದ ಪುಸ್ತಕಗಳನ್ನೇ ಕೊಳ್ಳುವುದು ಒಳ್ಳೆಯದು. ಪಿನ್ನು ಹೊಲಿಗೆಯ ತೆಳುರಟ್ಟಿನ ಪುಸ್ತಕಗಳು ಹೆಚ್ಚು ಬಾಳಿಕೆ ಬರುವುದಿಲ್ಲ.

**3. ಜೋಡಣೆಯ ಕಾಗದ (ಫ್ಲೈಲೀಫ್) :** ಮುಖಪುಟವನ್ನು ತೆರೆದೊಡನೆ ಅದರ ರಟ್ಟಿಗೆ ಒಂದು ಕಾಗದ ಅಂಟಿಸಿ, ಅದರ ಇನ್ನೊಂದು ಪದರನ್ನು ಪುಸ್ತಕದ ಮುದ್ರಿತ ಪುಟಗಳಿಗೆ ಜೋಡಿಸಿರುತ್ತಾರೆ. ರಟ್ಟು ಪುಸ್ತಕದಿಂದ ಬಿಚ್ಚಿ ಅಥವಾ ಹರಿದು ಹೋಗದಂತೆ ಈ ಕಾಗದ ರಕ್ಷಿಸುತ್ತದೆ. ಇದು ಸಾಮಾನ್ಯವಾಗಿ ಒಂದೇ ಬಣ್ಣದ ದಪ್ಪ ಕಾಗದ. ಒಮ್ಮೊಮ್ಮೆ ಚಿತ್ರವನ್ನೋ ಭೂಪಟವನ್ನೋ ಇದರ ಮೇಲೆ ಮುದ್ರಿಸಿರುವುದೂ ಉಂಟು.

**4. ಹ್ರಸ್ವ ಶೀರ್ಷಿಕೆಯ ಪುಟ (ಷಾರ್ಟ್ ಟೈಟಲ್ ಪೇಜ್) :** ಪುಸ್ತಕದ ಶೀರ್ಷಿಕೆಯೊಂದನ್ನೇ ಇಲ್ಲಿ ಮುದ್ರಿಸಲಾಗುತ್ತದೆ. ಗ್ರಂಥಮಾಲೆಯ ಹೆಸರನ್ನೂ ಒಮ್ಮೊಮ್ಮೆ ಕೊಡುವುದುಂಟು.

**5. ಶೀರ್ಷಿಕೆಯ ಪುಟ (ಟೈಟಲ್ ಪೇಜ್) :** ಇದರಲ್ಲಿ ಗ್ರಂಥದ ಶೀರ್ಷಿಕೆ, ಲೇಖಕನ ಹೆಸರು, ಅವನ ಹುದ್ದೆ, ಪ್ರಕಾಶಕರ ಹೆಸರು, ಪ್ರಕಾಶನ ವರ್ಷ–ಇವುಗಳಿರುತ್ತವೆ.

ಈ ಪುಟದ ಹಿಂದೆ ಗ್ರಂಥಸ್ವಾಮ್ಯದ ವಿಚಾರ ಹಾಗೂ ಪ್ರಕಾಶಕರ, ಮುದ್ರಕರ ವಿಳಾಸಗಳನ್ನು ಕೊಡಲಾಗುತ್ತದೆ. ದೇಶೀ ಭಾಷಾ–ಪುಸ್ತಕಗಳಿದ್ದರೆ, ಇಂಗ್ಲಿಷಿನಲ್ಲಿ ಅದರ ಶೀರ್ಷಿಕೆ, ಲೇಖಕನ ಹೆಸರು, ಜಿಲ್ಲೆ ಮುಂತಾದ್ದನ್ನು ಕೊಡುವ ಕ್ರಮ ಈಚೆಗೆ ಬಂದಿದೆ. ಗ್ರಂಥಗಳ ಆಯ್ಕೆಯಲ್ಲಿ ಮುಖ್ಯವಾಗಿ ಗಮನಿಸಬೇಕಾದ ಒಂದಂಶವಿದೆ. ಶಾಸ್ತ್ರಗ್ರಂಥಗಳನ್ನು ಮುಖ್ಯವಾಗಿ ವಿಜ್ಞಾನಗ್ರಂಥಗಳನ್ನು ಆಯುವಾಗ ಇತ್ತೀಚಿನ ಪರಿಷ್ಕೃತ ಆವೃತ್ತಿಗಳನ್ನೇ ಕೊಳ್ಳುವುದು ಮೇಲು. ಪುಸ್ತಕ ಹಳೆಯದಾದಷ್ಟು ವಿಷಯವೂ ಹಳೆಯದಾಗಿ ಬಿಡುತ್ತದೆ. ಹೀಗೆಂದ ಮಾತ್ರಕ್ಕೆ ಹಳೆಯ ಆವೃತ್ತಿಗಳಿಗೆ ಬೆಲೆ ಇಲ್ಲವೆಂದಲ್ಲ. ತೀರ ಹಳೆಯ ಗ್ರಂಥಗಳಿಗೆ ಐತಿಹಾಸಿಕ ಮೌಲ್ಯವಿರುತ್ತದೆ. ಅಂಥವನ್ನು ಹೆಚ್ಚಿನ ಬೆಲೆ ಕೊಟ್ಟು ಕೊಳ್ಳುವ ಗ್ರಂಥಾಲಯವೂ ಉಂಟು.

**6. ಅರ್ಪಣೆಯ ಪುಟ :** ಗ್ರಂಥ ಯಾರಿಗಾದರೂ ಅರ್ಪಿತವಾಗಿದ್ದರೆ, ಅದನ್ನಿಲ್ಲಿ ನಮೂದಿಸಿರುತ್ತಾರೆ.

**7. ಉಪಕಾರ ಸ್ಮರಣೆ :** ವಿವಿಧ ಲೇಖಕರ ಬರೆಹಗಳ ಸಂಗ್ರಹವಿದ್ದರೆ ಆಯಾ ಲೇಖಕರ, ಪ್ರಕಾಶಕರ ಉಪಕಾರ ಸ್ಮರಣೆ ಇರುವ ಪುಟವಿದು.

**8. ಮುನ್ನುಡಿ:** ಹಿರಿಯರಿಂದ, ತಜ್ಞರಿಂದ ಬರೆಯಿಸಲಾದ ಪ್ರಸ್ತಾವನೆ ಇಲ್ಲಿ ಬರುತ್ತದೆ. ಲೇಖಕನೇ ಮುನ್ನುಡಿ ಬರೆಯುವುದೂ ಉಂಟು.

**9. ಪೀಠಿಕೆ:** ಲೇಖಕನ ನಿವೇದನೆ ಇಲ್ಲಿ ಬರುತ್ತದೆ.

**10. ಒಳಪಿಡಿ:** ಅಧ್ಯಾಯಗಳ ಶೀರ್ಷಿಕೆಗಳು ಮತ್ತು ಅವು ಮೊದಲಾಗುವ ಪುಟ ಸಂಖ್ಯೆಗಳನ್ನು ಇಲ್ಲಿ ಕೊಟ್ಟಿರುತ್ತದೆ. ವಿಷಯದ ವಿಸ್ತಾರ ಪ್ರತಿಪಾದನೆಯಿದ್ದರೆ ಒಂದೊಂದು ಅಧ್ಯಾಯದ ಉಪ ಶೀರ್ಷಿಕೆಗಳನ್ನೂ ಕೊಡುವ ಕ್ರಮವಿದೆ.

**11. ಚಿತ್ರ ಹಾಗೂ ನಕ್ಷೆಗಳ ಪಟ್ಟಿ :** ಮುಖ್ಯ ಚಿತ್ರಗಳೋ ನಕ್ಷೆಗಳ ಪಟ್ಟಿ, ಅವು ಇರುವ ಪುಟಸಂಖ್ಯೆ ಇವು ಇಲ್ಲಿ ಬರುತ್ತವೆ.

**12. ಮುಖಚಿತ್ರ ಪುಟ :** ಇಲ್ಲಿ ಮೊದಲ ಮುಖ್ಯ ಚಿತ್ರ ಇರುತ್ತವೆ. ಗ್ರಂಥ ವಿಷಯಕ್ಕೆ ಸಂಬಂಧಿಸಿದ ಮುಖ್ಯ ಚಿತ್ರವನ್ನಿಲ್ಲಿ ಹಾಲು ಬಿಳುಪಿನ ಆರ್ಟ್ ಕಾಗದದ ಮೇಲೆ ಕೊಡುವುದು ವಾಡಿಕೆ.

**13. ಪಾಠ :** ಇದು ಪುಸ್ತಕದ ಮುಖ್ಯ ಅಂಗ; ಲೇಖಕ ಹೇಳಬೇಕೆಂದಿರುವ ವಿಷಯದ ಪ್ರತಿಪಾದನೆ ಇಲ್ಲಿರುತ್ತದೆ. ಪ್ರತಿಯೊಂದು ಪುಟದ ಮೇಲ್ಗಡೆ ಸಣ್ಣ ಅಕ್ಷರದಲ್ಲಿ ಅಧ್ಯಾಯದ ಶೀರ್ಷಿಕೆಯನ್ನೂ ಮುದ್ರಿಸಿರುತ್ತಾರೆ.

**14. ಆಧಾರ ಗ್ರಂಥಗಳ ಪಟ್ಟಿ :** ಗ್ರಂಥಕರ್ತ ಉಪಯೋಗಿಸಿದ ಅಥವಾ ನೆರವು ಪಡೆದ ಗ್ರಂಥಗಳ ಯಾದಿ. ಇದು ಪುಸ್ತಕದ ಕೊನೆಯಲ್ಲಿ ಇಲ್ಲವೆ ಆಯಾ ಅಧ್ಯಾಯಗಳ ಕೊನೆಯಲ್ಲಿ ಬರುತ್ತದೆ.

**15. ಪಾರಿಭಾಷಿಕ ಶಬ್ದಗಳ ಪಟ್ಟಿ :** ಅಕಾರಾದಿಯಾಗಿರುತ್ತದೆ. ದೇಶೀ ಭಾಷೆಯ ಪದವಾದರೆ ಅದರ ಗ್ರೀಕ್ ಅಥವಾ ಲ್ಯಾಟಿನ್ ಮೂಲ, ಅದು ಮೊದಲ ಬಾರಿಗೆ ಬಂದಿರುವ ಪುಟ ಸಂಖ್ಯೆ ಇಲ್ಲಿ ಸಿಗುತ್ತದೆ.

**16. ಅನುಬಂಧಗಳು:** ಮುಖ್ಯ ವಿಷಯಕ್ಕೆ ಪೂರಕವಾಗಿರುವ ಅಂಶಗಳ ಉಲ್ಲೇಖ ಇಲ್ಲಿರುತ್ತದೆ.

**17. ಅಕಾರಾದಿ ಸೂಚಿ :** ಇದು ಪಾಠದಲ್ಲಿ ಬಂದಿರುವ ಹೆಸರುಗಳ, ವಿಷಯಗಳ ಅಕಾರಾದಿಯಾದ ಸೂಚಿ. ಶಾಸ್ತ್ರಗ್ರಂಥಗಳಲ್ಲಿ ಇದು ಅವಶ್ಯ ಇರತಕ್ಕದ್ದು.

ಯಾವುದೊಂದು ಪುಸ್ತಕದಲ್ಲಿ ಮೇಲೆ ಕಾಣಿಸಿದ ಎಲ್ಲ ಅಂಗಗಳೂ ಇರಬೇಕೆಂದಿಲ್ಲ. ಯುದ್ಧಕಾಲದ ಅಥವಾ ಇನ್ನಾವುದೇ ಮಿತವ್ಯಯ ಧೋರಣೆಯ ಮಾತು ಬಂದಾಗ ಪುಸ್ತಕದ ಬಾಹ್ಯಸ್ವರೂಪ ವಿವರಗಳನ್ನು ಮೊಟಕು ಮಾಡುವುದುಂಟು. ಅದಾವ ನಿರ್ಬಂಧವೂ ಇಲ್ಲದೆ ಇರುವ ಕಾಲದಲ್ಲಿ ಸಾಲಂಕೃತವಾದ ಪುಸ್ತಕಗಳು ಬಂದಿರುವುದೂ ಉಂಟು. ಡಿ.ವಿ.ಜಿ. ಅವರ ಅಂತಃಪುರ ಗೀತೆ, ಎ.ಆರ್.ಕೃ ಅವರ ವಚನಭಾರತ, ಶಿವರಾಮ ಕಾರಂತರಿಗೆ ಅರ್ಪಿಸಿದ ಕಾರಂತ ಪ್ರಪಂಚ ಎಂಬ ಗೌರವ ಗ್ರಂಥ–ಇವು ಉತ್ತಮ ಮುದ್ರಣ ಹಾಗೂ ವಿನ್ಯಾಸಕ್ಕೆ ಹೆಸರಾದ ಕೆಲವು ಪುಸ್ತಕಗಳು.

ಪುಸ್ತಕದ ಬಾಹ್ಯಸ್ವರೂಪಕ್ಕೆ ಸಂಬಂಧಿಸಿದ ಪುಟ ಸಂಖ್ಯೆ, ಆಕಾರ, ನಕ್ಷೆಗಳು ಮೊದಲಾದ ಕೆಲವನ್ನು, ಸೂಚಿಯನ್ನು ತಯಾರಿಸುವಾಗ ಕಾಣಿಸುವುದುಂಟು. (ಎಸ್.ಎಚ್.)

**2. ಪುಸ್ತಕ ವಿಕಸನ :** ಪುಸ್ತಕ ಎಂಬ ಪದಕ್ಕೆ ಸಂವಾದಿಯಾಗಿ ಇಂದು ಗ್ರಂಥ, ಹೊತ್ತಗೆ (ಪುಸ್ತಕ ಎಂಬ ಸಂಸ್ಕೃತ ರೂಪದ ತದ್ಭವ) ಎಂಬ ಶಬ್ದಗಳು ಬಳಕೆಯಲ್ಲಿವೆ.



**ರೊಸೆಟ್ಟ ಶಾಸನ. ಡಿಮೊಟಿಕ್, ಇಜಿಪ್ಷಿಯನ್ ಮತ್ತು ಗ್ರೀಕ್ ಭಾಷೆಗಳನ್ನೊಳಗೊಂಡಿದೆ. ಈ ಶಾಸನದ ಆಧಾರದಿಂದಲೇ ಇಜಿಪ್ಷಿಯನ್ ಲಿಪಿಯ ರಹಸ್ಯವನ್ನು ಭೇದಿಸಲಾಯಿತು**

ಇಂಗ್ಲಿಷಿನಲ್ಲಿ ಪುಸ್ತಕವನ್ನು ಬುಕ್ ಎನ್ನುತ್ತಾರೆ. ಚಿಕ್ಕ ಪುಸ್ತಕಕ್ಕೆ ಬುಕ್‌ಲೆಟ್–ಪುಸ್ತಿಕೆ ಎಂಬ ಮಾತುಗಳು ಬಳಕೆಯಲ್ಲಿವೆ. ಪುಸ್ತಕ, ಗ್ರಂಥ ಎಂಬ ಮಾತುಗಳು ಹೊಲಿಗೆ ಇನ್ನೂ ಬಳಕೆಗೆ ಬಾರದಂದಿನ ಪುಸ್ತಕ ಸ್ವರೂಪವನ್ನು ಸೂಚಿಸುತ್ತವೆ. ಹಿಂದೆ ಹಾಳೆಗಳನ್ನು

ಕ್ರಮವಾಗಿ ಜೋಡಿಸಿ ಒಂದು ಕಟ್ಟಾಗಿ, ಗಂಟಾಗಿ ಹುರಿ ಸುತ್ತಿ ಇಡುತ್ತಿದ್ದರು. ಪೋಥಿ ಮತ್ತು ಗ್ರಂಥಿ (ಗಂಟು) ಎಂಬ ಪದಗಳಲ್ಲಿ ಮೂಲಾರ್ಥ ಉಳಿದು ಬಂದಿದೆ. ಈಗಲೂ ರಿಕಾರ್ಡುಗಳು, ದಫ್ತರ ಕಟ್ಟು ಎಂಬುದನ್ನು ಕಂಥಾ, ಕಂತೆ ಎಂದೂ ಕರೆವುದಿದೆ. ಬುಕ್ ಎಂಬ ಇಂಗ್ಲಿಷ್ ಪದ ಬೈಗೆನ್ ಎಂಬ ಜರ್ಮನ್ ಪದದಿಂದ ಬಂದಿದೆಯೆಂದು ಕೆಲವರ ವಾದ. ಆದರೆ ಜನಸಾಮಾನ್ಯರ ತಿಳಿವಳಿಕೆ ಮತ್ತು ರೂಢಿಯನ್ನು ನೋಡಿದರೆ ಬುಕ್ ಶಬ್ದಕ್ಕೆ ಮೂಲತಃ ಬೀಚ್ ವೃಕ್ಷದ ತೊಗಟೆ ಅಥವಾ ಫಲಕ ಎಂಬ ಅರ್ಥ ಇರುವಂತೆ ಕಾಣುತ್ತದೆ. ಜನಪದ ಸಾಹಿತ್ಯವೂ ಇದನ್ನು ಪುಷ್ಟೀಕರಿಸುತ್ತದೆ. ಗ್ರೀಕರ ಬಿಬ್ಲೋಸ್ ಎಂಬುದು ಜಂಬುಕಾಗದವನ್ನೂ ರೋಮನ್ನರ ಕೋಡೆಕ್ಸ್ ಎಂಬುದು ಗಿಡದ ಬೊಡ್ಡೆಯನ್ನೂ ಸೂಚಿಸುವುದನ್ನು ಇಲ್ಲಿ ನೆನೆಯಬಹುದು.

ಲಿಪಿ ಬಳಕೆಗೆ ಬಂದಿದ್ದರೂ ಮಸಿ, ಜಂಬುಕಾಗದ, ಕಾಗದ ಮೊದಲಾದವುಗಳ ಉಪಯೋಗ ಗೊತ್ತಿರದಿದ್ದ ಪ್ರಾಚೀನ ಕಾಲದಲ್ಲಿ ಮನುಷ್ಯ ಕಲ್ಲು ಫಲಕಗಳ ಮೇಲೆ ಇಟ್ಟಿಗೆಗಳ ಮೇಲೆ ಬರೆಯುತ್ತಿದ್ದುದಕ್ಕೆ ದಾಖಲೆಗಳಿವೆ. ಇತಿಹಾಸಕರ ಯೋಸೆಫಸ್ ಪ್ರ.ಶ.ಪೂ. ಒಂದನೆಯ ದಶಕದಲ್ಲಿ ಇಂಥವು ಇದ್ದುವೆಂದು ಹೇಳಿದ್ದಾನೆ. ಈ ಲೇಖನ ವಿಧಾನ ಬರವಣಿಗೆಯ ಸಾಧನಗಳ ಅಭಾವದಿಂದ ಬಂದುದಾದರೂ ಬರೆದುದನ್ನು ಶಾಶ್ವತವಾಗಿಸಿತು ಎಂಬುದನ್ನು ಮರೆಯಲಾಗದು.

ಆದಿಮಾನವ ತನ್ನ ಭಾವನೆಗಳನ್ನು ವ್ಯಕ್ತಪಡಿಸುವ ಸಲುವಾಗಿ ಮೊದಲು ನಿಸರ್ಗದತ್ತವಾದ ಕಲ್ಲನ್ನೇ ಬಳಸಿದ. ಒಂದು ದೊಡ್ಡ ಬಂಡೆಗಲ್ಲಿನ ಮೇಲೆ ಕಲ್ಲಿನಿಂದಾಗಲಿ ಇಲ್ಲವೇ ಚಾಣ ದಿಂದಾಗಲಿ ಚಿತ್ರಗಳನ್ನು ತೆಗೆದ. ಅವುಗಳಿಗೆ ಬಣ್ಣ ಹಚ್ಚಿದ. ಇವೇ ಶಿಲಾ ಚಿತ್ರಗಳು. ಸ್ಪೇನಿನ ಅನೇಕ ಗುಹೆಗಳಲ್ಲಿ ಇಂಥ ಚಿತ್ರಗಳು ಕಾಣಸಿಗುತ್ತವೆ. ತನ್ನ ಸಂದೇಶವನ್ನು ಮಾತಲ್ಲಿ ತಿಳಿಸಲು ಆತ ನಡೆಸಿದ ಪ್ರಯತ್ನಗಳಿಗೆ ವಿಪುಲವಾಗಿ ದೊರೆಯುವ ಶಿಲಾಶಾಸನಗಳೇ ಸಾಕ್ಷಿಯಾಗಿವೆ.

ಕಲ್ಲು ಬರೆಯುವ ಸಾಧನವಾದರೂ ಅದನ್ನು ಸ್ಥಳಾಂತರಿಸಲಿಕ್ಕಾಗಲಿಲ್ಲವಾಗಿ ಹಗುರ ಸಾಧನಗಳು ಬಳಕೆಗೆ ಬಂದವೆನ್ನಬಹುದು. ಜೇಡಿಮಣ್ಣಿನ ಫಲಕಗಳನ್ನು ಬ್ಯಾಬಿಲೋನಿಯದ ಪುರಾತನ ನಿವಾಸಿಗಳು ಹೇರಳವಾಗಿ ಬಳಸುತ್ತಿದ್ದರು.

ನಿಸರ್ಗದತ್ತ ಬರೆವಣಿಗೆ ಸಾಮಗ್ರಿಯಾದ ಕಲ್ಲನ್ನು ಬಿಟ್ಟರೆ ಜಂಬುಕಾಗದದ (ಭೂರ್ಜಪತ್ರ) ಸುರಳಿಯಿಂದ ಮಾನವನ ಬರೆಯುವ ಸಾಧನಗಳ ಮೊದಲನೆಯ ಅಧ್ಯಾಯ ಪ್ರಾರಂಭವಾಗಿದೆ. ಇದೂ ನಿಸರ್ಗದತ್ತವಾದುದಾದರೂ ಇಟ್ಟಿಗೆಗಳಿಗಿಂತ ಉತ್ತಮ ಎನಿಸಿತು. ಈ ಕಾಗದದ ಒಂದೇ ಮಗ್ಗುಲಿಗೆ ಬರೆಯುತ್ತಿದ್ದರು. ಬರೆಯುವ ಈ ಸಾಧನ ಸಂಪೂರ್ಣವಾಗಿ ಪುರಾತನ ಈಜಿಪ್ಟ್ ನಾಗರಿಕರ ಸ್ವತ್ತಾಗಿತ್ತು. ಭೂರ್ಜವೃಕ್ಷ ನೈಲ್ ನದಿಯ ಕಣಿವೆಯಲ್ಲಿ ಹೇರಳವಾಗಿ ಬೆಳೆಯುತ್ತಿತ್ತು. ಈ ಸಸ್ಯದ ದೇಟುಗಳನ್ನು ಕತ್ತರಿಸಿ, ತೆಳುವಾದ ಪಟ್ಟಿಗಳಿಂದ ಕಾಗದವನ್ನು ತಯಾರಿಸುತ್ತಿದ್ದರು. ಇಂಥ ಪದರುಗಳನ್ನು ಒಂದಕ್ಕೊಂದು ಕೂಡಿಸಿ ಬಹಳ ಉದ್ದನೆಯ ಕಾಗದದ ಸುರುಳಿಯನ್ನು ಮಾಡುತ್ತಿದ್ದುದೂ ಉಂಟು. ಪುರಾತನ ಕಾಲದಲ್ಲಿ ಎಲ್ಲ ಗ್ರಂಥಗಳಿಗಾಗಿ ಬಹುಶಃ ಇದನ್ನೇ ಹೇರಳವಾಗಿ ಬಳಸಲಾಗಿದೆ. ಸುಮಾರು ಪ್ರ.ಶ.ಪೂ.ಸು. 3500ರಲ್ಲೇ ಇಜಿಪ್ಷಿಯನ್ನರು ಈ ಸಾಧನವನ್ನು ಬಳಸಲಾರಂಭಿಸಿದರು. ಅನಂತರ ರೋಮನ್ನರೂ ಗ್ರೀಕರೂ ಇದನ್ನು ಹೇರಳವಾಗಿ ಬಳಸಿದರು.

ಜಂಬುಕಾಗದದ ಸುರಳಿಯ ಎರಡು ದಂಡೆಗೂ ಕಟ್ಟಿಗೆಯ ಹಿಡಿಕೆಗಳನ್ನು ಕೂಡಿಸಿ ಒಯ್ಯಲು ಅನುಕೂಲವಾಗುವಂತೆ ಮಾಡುತ್ತಿದ್ದರು. ಹಿಡಿಕೆಗೆ ಅಂಟಿಸಿದ ಚೀಟಿ ಅವನ್ನು ಗುರುತಿಸಲು ಸಹಾಯಕವಾಗುತ್ತಿತ್ತು. ಸಾಮಾನ್ಯವಾಗಿ 2–3 ಇಂಚು ಅಂಕಣದಲ್ಲಿ ಬರೆವಣಿಗೆ ಇರುತ್ತಿತ್ತು. ಗ್ರಂಥದಲ್ಲಿ ಬೇಕಾದ ಭಾಗವನ್ನೋದಲು ಸುರುಳಿಯನ್ನು ಬಿಚ್ಚಬೇಕಾಗುತ್ತಿತ್ತು. ಇಲ್ಲವೆ ಸುತ್ತಬೇಕಾಗುತ್ತಿತ್ತು. ಕ್ರಮೇಣ ಹಾಳೆಗಳನ್ನು ಒಂದು ಮಗ್ಗಲು ಹೊಲಿದು ಉಪಯೋಗಿಸಲು ಪ್ರಾರಂಭವಾಯಿತು. ಅದರಿಂದಾಗಿ ಪುಸ್ತಕದ ರೂಪ ಬದಲಿಸಿತು.

ತರುವಾಯ ಬರೆಯಲು ಬಳಕೆಗೆ ಬಂದ ವಸ್ತುವೆಂದರೆ ಪ್ರಾಣಿಗಳ ತೊಗಲು (ಪಾರ್ಚ್‌ಮೆಂಟ್ ಮತ್ತು ವೆಲಮ್–ಈ ಎರಡೂ ಶಬ್ದಗಳನ್ನು ಚರ್ಮಪತ್ರ ಎಂಬ ಒಂದೇ ಅರ್ಥದಲ್ಲಿ ಬಳಸುವುದಿದೆ). ಇತಿಹಾಸ ಪ್ರಪಿತಾಮಹ ಹೀರಡಾಟಸ್ ತನ್ನ ಕಾಲದಲ್ಲಿ ತೊಗಲಿನ ಮೇಲೆ ಬರೆಯುವ ಪರಿಪಾಠವಿತ್ತೆಂದು ತಿಳಿಸುತ್ತಾನೆ. ಮೊದಲಿನಿಂದಲೂ ಪರ್ಷಿಯದಲ್ಲಿ ಮಹತ್ತ್ವದ ಕಾಗದಪತ್ರಗಳು ಚರ್ಮದ ಮೇಲೆಯೇ ಬರೆಯಲ್ಪಡುತ್ತಿದ್ದುವು. ಪ್ರಾರಂಭದಲ್ಲಿ ತೊಗಲಿನ ಒಂದೇ ಮಗ್ಗಲಿಗೆ ಬರೆಯುತ್ತಿದ್ದರು. ಆದರೆ ಚರ್ಮದ ಮೇಲಿನ ಬರೆವಣಿಗೆ ಹೆಚ್ಚುಕಾಲ ನಿಲ್ಲುವಂತಿರಲಿಲ್ಲವಾಗಿ ಎಷ್ಟೋ ಮಹಾಕಾವ್ಯಗಳು ನಶಿಸಿ ಹೋಗಿರುವುದರಲ್ಲಿ ಆಶ್ಚರ್ಯವಿಲ್ಲ.

ಪ್ರ.ಶ.ಪೂ. 1500ರ ವರೆಗೂ ಹೇರಳವಾಗಿ ಬಳಕೆಯಲ್ಲಿದ್ದ ಚರ್ಮಪತ್ರ ಅನಂತರ ಪ್ರಶ. ಪ್ರಾರಂಭದವರೆಗೂ ಸುದಿನಗಳನ್ನು ಕಾಣಲಿಲ್ಲ. ಆಮೇಲೆ ಅದರ ಬಳಕೆ ಬಹುವಾಯಿತು.


ಪ್ರಾಣಿಚರ್ಮವನ್ನು ಸ್ವಚ್ಛಮಾಡಿದ ಬಳಿಕ ಬಿಸಿಲಲ್ಲಿ ಒಣಗಿಸಿ, ಚಾಕುವಿನಿಂದ ಹೆರೆದು ಹದ ಮಾಡುತ್ತಿದ್ದರು. ಆಮೇಲೆ ಅದರ ಮೇಲೆ ಸುಣ್ಣದ ಪುಡಿಯನ್ನು ಉದುರಿಸಿ ಕಲ್ಲಿನಿಂದ ಉಜ್ಜಿ ನುಣುಪು ಮಾಡಿ ಬರೆಯಲು ಪ್ರಾರಂಭಿಸುತ್ತಿದ್ದರು. ನಸುಗೆಂಪು ಬಣ್ಣದ ಚರ್ಮಪತ್ರದಿಂದ ಬರೆವಣಿಗೆಗೆ ಮೆರಗು ಬರುತ್ತಿತ್ತು. ಈ ಸಾಮಗ್ರಿಯ ಮೇಲೆ ಬರೆದ ಪುಸ್ತಕಗಳು ಈಗ ಕಾಣಸಿಗುವುದು ಅಪೂರ್ವ.

3ನೆಯ ಶತಮಾನದ ಹೊತ್ತಿಗೆ ಹೊಲೆದ ಚರ್ಮಪತ್ರ ಪುಸ್ತಕಗಳು ಮೈದಳೆದವು.

ಬ್ಯಾಬಿಲೋನಿಯ ಮತ್ತು ಅಸ್ಸೀರಿಯ ನಿವಾಸಿಗಳು ಜೇಡಿಮಣ್ಣಿನ ಫಲಕಗಳನ್ನು ಉಪಯೋಗಿಸಿದರೆ ಮಧ್ಯಯುಗದ ಪಾದ್ರಿಗಳು ಕಟ್ಟಿಗೆಯ ಚೌಕಾಕೃತಿಯ ಫಲಕಗಳನ್ನು ಉಪಯೋಗಿಸಿದ್ದಾರೆ. ಇದಲ್ಲದೆ ಗ್ರೀಕರು ಮತ್ತು ರೋಮನ್ನರು ಹಸ್ತಿದಂತದ ಫಲಕಗಳನ್ನು ಬರೆಯುವ ಸಾಧನಗಳನ್ನಾಗಿ ಬಳಸಿದ್ದಾರೆ. ಕಟ್ಟಿಗೆಯ ಫಲಕಗಳ ಒಳಮೈಯನ್ನು ಕೆತ್ತಿ, ಮೇಣವನ್ನು ತುಂಬಿ ಮೊನೆಯಾದ ಸಾಧನದಿಂದ ಅಕ್ಷರಗಳನ್ನು ಬರೆಯುತ್ತಿದ್ದರು. ಇಂಥ ಫಲಕಗಳ ಹಿಮ್ಮಗ್ಗಲಿನಲ್ಲಿ ತಂತಿಯನ್ನು ಪೋಣಿಸಿ ಕಟ್ಟುತ್ತಿದ್ದರು.

ಭಾರತೀಯ ಲೇಖನ ಸಾಮಗ್ರಿಗಳು: ಪುರಾತನ ಭಾರತೀಯ ಬರೆಹದ ಸಾಮಗ್ರಿಗಳನ್ನು ಎರಡು ಭಾಗಗಳಲ್ಲಿ ವಿಂಗಡಿಸಬಹುದು. (1) ಶಾಶ್ವತವಾದುವು. (2) ನಶಿಸಿ ಹೋಗುವಂಥವು. ಕಲ್ಲು, ತಾಮ್ರ, ಕಬ್ಬಿಣ, ಬೆಳ್ಳಿ, ಬಂಗಾರ ಇತ್ಯಾದಿ ಮೊದಲ ಗುಂಪಿನಲ್ಲಿ ಬಂದರೆ ಎರಡನೆಯ ಗುಂಪಿನಲ್ಲಿ ಭೂರ್ಜಪತ್ರ, ತಾಡೋಲೆಗಳು, ಅರಿವೆ (ರೇಷ್ಮೆಯನ್ನು ಗಣನೆಗೆ ತೆಗೆದುಕೊಂಡರೆ) ಬರುವುವು. ರಾಜಾಜ್ಞೆ, ದತ್ತಿ, ಶಾಸನ ಹಾಗೂ ಕಾಯದೆ ಕಾಗದ ಪತ್ರಗಳನ್ನು ಬರೆಯಲು ಶಾಶ್ವತ ಸಾಧನಗಳನ್ನು ಬಳಸುತ್ತಿದ್ದರು. ಜನಸಾಮಾನ್ಯರು ಎರಡನೆಯ ಭಾಗದ ಸಾಧನ ಸಾಮಗ್ರಿಗಳನ್ನು ಉಪಯೋಗಿಸುತ್ತಿದ್ದರು.

ಕಲ್ಲುಬಂಡೆಯ ಮೇಲಿನ ಬರೆಹಕ್ಕೆ ಅಶೋಕನ ಕಾಲದಿಂದ ಉಳಿದು ಬಂದಿರುವ ಶಾಸನಗಳು ಸಾಕ್ಷಿಯಾಗಿವೆ. ಭಾರತೀಯರು ಮಣ್ಣಿನ ಫಲಕಗಳನ್ನು ಹೇರಳವಾಗಿ ಬಳಸಿದಂತಿಲ್ಲ. ಭಾರತೀಯ ಪ್ರಾಚ್ಯ ಸಂಶೋಧನ ಇಲಾಖೆಯ ನಿರ್ದೇಶಕ ಜನರಲ್ ಕನ್ನಿಂಗ್‌ಹ್ಯಾಮ್ ಮೊದಲಾದ ವಿದ್ವಾಂಸರು ಬಳಕೆಯಲ್ಲಿದ್ದ ಇಂಥ ಸಾಧನಗಳನ್ನು ಶೋಧಿಸಿದ್ದಾರೆ. ಬುದ್ಧಸೂತ್ರದ ಅವತರಣಿಕೆಗಳನ್ನು ಬರೆದ ಕೆಲವು ಫಲಕಗಳನ್ನು ಉತ್ತರ ಪ್ರದೇಶದಲ್ಲಿ ಹೋ ಎಂಬ ವಿದ್ವಾಂಸ ಶೋಧಿಸಿದ್ದಾನೆ. ಕಟ್ಟಿಗೆಯ ಹಲಗೆಗಳನ್ನು ಭಾರತೀಯರು ಸುಮಾರು ಬುದ್ಧನ ಕಾಲದಿಂದಲೂ ಬಳಸಿದ್ದಾಗಿ ಕಂಡುಬರುತ್ತದೆ.




ತಾಮ್ರಶಾಸನದ ಗುಚ್ಛ, ರಾಜಮುದ್ರೆಯೊಡನೆ

ಬೌದ್ಧ ಗ್ರಂಥಗಳಾದ ವಿನಯಪಿಟಕ ಮತ್ತು ಜಾತಕಗಳಲ್ಲಿ ಇದರ ಬಗ್ಗೆ ಅನೇಕ ಉಲ್ಲೇಖಗಳಿವೆ. ಅಕ್ಷರಾಭ್ಯಾಸಗಳಿಗೆ ಇಂಥ ಹಲಗೆಗಳ ಮೇಲೆ ಮೊದಲು ಪಾಠ ಕೊಡುತ್ತಿದ್ದರು. ಓಲೆಗಳನ್ನು ಬರೆಯಲು ಈ ಹಲಗೆಗಳನ್ನು ಉಪಯೋಗಿಸುತ್ತಿದ್ದರೆಂಬುದಕ್ಕೆ ಆಕ್ಸ್‌ಫರ್ಡ್‌ನಲ್ಲಿರುವ ಬೋಡ್ಲೀಯನ್ ಗ್ರಂಥಾಲಯದಲ್ಲಿ ಒಂದು ನಿದರ್ಶನ ದೊರೆಯುತ್ತದೆ. ಬೆಳ್ಳಿ ಮತ್ತು ಬಂಗಾರ ವಿಪುಲವಾಗಿ ಸಿಕ್ಕುತ್ತಿದ್ದರೂ ಭಾರತೀಯರು ಬರೆಯಲು ಅವನ್ನು ಹೇರಳವಾಗಿ ಬಳಸಿಲ್ಲ. ತಾಮ್ರ, ಹಿತ್ತಾಳೆ, ಕಂಚು, ಕಬ್ಬಿಣ ಮುಂತಾದ ಲೋಹಗಳನ್ನು ಹೇರಳವಾಗಿ ಬಳಸಿದ್ದಾರೆ. ಅರಸರ ಪ್ರಮುಖ ಪತ್ರವ್ಯವಹಾರ ಮತ್ತು ದತ್ತಿಗಳನ್ನು ಬರೆಯಲು ಮಾತ್ರ ಬಂಗಾರ ಮೀಸಲಾಯಿತು. ಬುದ್ಧನ ಜಾತಕ ಕಥೆಗಳಲ್ಲಿಯೂ ಇದರ ಉಲ್ಲೇಖವಿದೆ. ಬೆಳ್ಳಿಯನ್ನು ಬರೆಯಲು ಅಷ್ಟಾಗಿ ಬಳಸಿದಂತಿಲ್ಲ. ದತ್ತಿ, ದಾನಧರ್ಮ, ರಾಜಾಜ್ಞೆ ಹಾಗೂ ರಾಜನ ಮುಖ್ಯ ವ್ಯವಹಾರಗಳನ್ನು ನಮೂದಿಸಲು ತಾಮ್ರವನ್ನು ಹೇರಳವಾಗಿ ಉಪಯೋಗಿಸಲಾಗಿದೆ. ತಾಮ್ರಶಾಸನಗಳು ಇಂದಿಗೂ ನೋಡಲು ಸಿಗುತ್ತವೆ. ಯುವಾನ್ ಚಾಂಗ್ ಮೊದಲಾದ ಚೀನಿ ಯಾತ್ರಿಕರು ಇವುಗಳ ಬಗ್ಗೆ ಬರೆದಿದ್ದಾರೆ. ತಾಡೋಲೆಗಳಂತೆ

ಹಗುರಾಗಿ ತಾಮ್ರಶಾಸನಗಳನ್ನು ತಯಾರಿಸುತ್ತಿದ್ದರು. ಮಹಮ್ಮದೀಯರ ಆಳಿಕೆ ಪ್ರಾರಂಭವಾದಮೇಲೆ ಅಂದರೆ ಪ್ರ.ಶ. ಸುಮಾರು 12ನೆಯ ಶತಮಾನದ ಅನಂತರ ತಾಮ್ರಶಾಸನಗಳ ಬಳಕೆ ವಿರಳವಾಯಿತು.

ಸ್ವತಂತ್ರವಾದ ಬೇರೆ ಬೇರೆ ಶಾಸನಗಳನ್ನು ಬರೆಯಲು ಕಂಚು ಮತ್ತು ಹಿತ್ತಾಳೆಗಳನ್ನು ಬಳಸಿದಂತಿಲ್ಲ. ಅಬುವಿನ ಪಕ್ಕದಲ್ಲಿರುವ ಅಚಲಗಡ ಜೈನ ದೇವಾಲಯದಲ್ಲಿ ಕಂಚಿನ ಘಂಟೆಗಳ ಮೇಲೆ ಕೆಲ ಮಾತುಗಳನ್ನು ಬರೆಯಲಾಗಿದೆ, ಅಷ್ಟೇ. ತುಕ್ಕು ಹಿಡಿಯುವುದರಿಂದ ಬರೆಯಲು ಕಬ್ಬಿಣವನ್ನು ಬಹಳಷ್ಟು ಉಪಯೋಗಿಸಿಲ್ಲ. ದೆಹಲಿಯ ಕುತುಬ್ ಮಿನಾರದ ಹತ್ತಿರವಿದ್ದ ಕಬ್ಬಿಣದ ಕಂಬವೇ ಇದಕ್ಕೆ ಸಾಕ್ಷಿ. ಪುರಾತನ ಭಾರತೀಯರು ತಾಡೋಲೆಗಳನ್ನು ವಿಪುಲವಾಗಿ ಬಳಸಿದ್ದಾರೆ. ದಕ್ಷಿಣ ಭಾರತದಲ್ಲಿ ತಾಡ ವೃಕ್ಷಗಳು ಬಹಳವಿರುವುದರಿಂದ ಬಹುಶಃ ತಾಡೋಲೆಗಳ ಮೇಲೆ ಬರೆಯುವುದು ಅಲ್ಲಿಯೇ ಪ್ರಾರಂಭವಾಗಿರಬೇಕು. ಬಹು ಪ್ರಾಚೀನ ತಾಡೋಲೆಗಳು ಉಳಿದು ಬಂದಿಲ್ಲ. ಭಾರತದ ಹವೆ ಅವನ್ನು ಉಳಿಯಗೊಟ್ಟಿಲ್ಲ. ಅಳಿದುಳಿದ ಕೆಲ ತಾಡೋಲೆಗಳಲ್ಲಿ 6ನೆಯ ಶತಮಾನದ ಪ್ರಾಜ್ಞಪರಿಮಿತ ಹೃದಯಸೂತ್ರವೆಂಬ ಗ್ರಂಥವನ್ನು ಉದಾಹರಿಸಬಹುದು. 7ನೆಯ ಶತಮಾನದಲ್ಲಿ ಬರೆದಿರಬಹುದಾದ ಸ್ಕಂದಪುರಾಣದ ಒಂದು ಪ್ರತಿ ಇಂದಿಗೂ ನೇಪಾಳದ ದರ್ಬಾರ್ ಗ್ರಂಥಾಲಯದಲ್ಲಿವೆ. ಸುಮಾರು 3 ಅಡಿ ಉದ್ದ 4 ಇಂಚು ಅಗಲದ ಅನೇಕ ತಾಡೋಲೆಗಳು



ಕಡತ

ಸಿಕ್ಕಿವೆ. ಕಾಗದದ ಬಳಕೆ ಬಂದ ಮೇಲೆ ತಾಡೋಲೆಗಳ ಬಳಕೆ ಕಡಿಮೆಯಾಯಿತು. ಹಳ್ಳಿಯ ಕೆಲವರು ಇಂದಿಗೂ ತಾಡೋಲೆಗಳನ್ನು ಬಳಸುವುದುಂಟು. ಬರೆಯಲು ಉಪಯೋಗಿಸುವ ಬಟ್ಟೆಗೆ ಪಾಟ ಇಲ್ಲವೆ ಪಾಟಕಾ ಎಂದು ಹೆಸರು. ಈಗ ದೊರೆತಿರುವ ಕೆಲವು ಲೇಖಗಳು 17ನೆಯ ಶತಮಾನದ ಉತ್ತರಾರ್ಧದವು. ಅದಕ್ಕೂ ಹಿಂದಿನ ದಾಖಲೆಗಳು ಸಿಕ್ಕಿಲ್ಲ. ಶಾಶ್ವತವಾದ ಶಬ್ದಸಂಪತ್ತನ್ನು ತೊಗಲಿನ ಮೇಲೆ ಮೂಡಿಸಲು ಧಾರ್ಮಿಕ ಮನೋಭಾವದ ಭಾರತೀಯರು ಒಪ್ಪಲಿಲ್ಲವೆಂದು ತೋರುತ್ತದೆ. ಎಲೆ, ಅರಿವೆ, ಗಿಡದ ತೊಗಟೆ ಮೊದಲಾದವು ವಿಪುಲವಾಗಿ ಸಿಕ್ಕಿದ್ದರಿಂದ ತೊಗಲಿನ ಆವಶ್ಯಕತೆ ಬೀಳಲಿಲ್ಲವೆಂದೂ ಹೇಳಬಹುದು. ಆದರೆ ಹುಲಿಯ ಚರ್ಮ ಮತ್ತು ಕೃಷ್ಣಾಜಿನದ ಮೇಲೆ ಬರೆದ ಕೆಲವು ಉದಾಹರಣೆಗಳು ದೊರೆತಿವೆ.

ಭಾರತೀಯರು ಬಹು ಹಿಂದಿನಿಂದ ಕಾಗದವನ್ನು ಬಳಸುತ್ತಿದ್ದಾರೆ. 13ನೆಯ ಶತಮಾನಕ್ಕಿಂತ ಮೊದಲಿನ ಯಾವ ತಾಡೋಲೆ ಕೃತಿಗಳು ಇಂದಿಗೂ ಉಳಿದಿಲ್ಲ. ಅಲೆಗ್ಸಾಂಡರನೊಂದಿಗೆ ಭಾರತಕ್ಕೆ ಬಂದಿದ್ದ ಲೇಖಕನೊಬ್ಬ ಭಾರತೀಯರು ಹತ್ತಿಯಿಂದ ಕಾಗದವನ್ನು ತಯಾರಿಸುತ್ತಿದ್ದ ವಿಧಾನವನ್ನು ಬಣ್ಣಿಸಿದ್ದಾನೆ. ಕಾಗದ ಪರದೇಶದಿಂದ ಆಮದಾಗಿ ಬಂದ ವಸ್ತುವಾಗಿ ತೋರುವುದಿಲ್ಲ. ಕಾಗದಕ್ಕಿಂತ ಸುಲಭವಾಗಿ ಇತರ ನೈಸರ್ಗಿಕ ವಸ್ತುಗಳು ಸಿಗುತ್ತಿದ್ದುವಾಗಿ ಭಾರತೀಯರು ಕಾಗದವನ್ನು ಸಾಕಷ್ಟು ಪ್ರಮಾಣದಲ್ಲಿ ಬಳಸಿಲ್ಲವೆಂಬುದೇನೋ ನಿಜ. ಬಂಗಾಲದ ಒಂದು ಜಿಲ್ಲೆ ಹತ್ತಿಯಿಂದ ಕಾಗದ ತಯಾರು ಮಾಡುವ ಉದ್ಯಮದಲ್ಲಿ ಹಿಂದೆ ಬಹುಪ್ರಸಿದ್ಧವಾಗಿತ್ತೆನ್ನಲಾಗಿದೆ. ಭಾರತದಲ್ಲಿ ತಯಾರಾದ ಕಾಗದ ಪರದೇಶದಲ್ಲಿ ಬಹು ಜನಪ್ರಿಯವಾಗಿತ್ತೆನ್ನಲಾಗಿದೆ. ಹೀಗಾಗಿ ಭಾರತದಿಂದ ಕಾಗದ ಚೀನವನ್ನು ಮುಟ್ಟಿರಬಹುದೆಂದು ಒಂದು ವಾದ.

**ಪುಸ್ತಕಕ್ಕೆ ಹೊಸ ರೂಪ :** ಕೊಂಡೊಯ್ಯಲು ಹಗುರಾದ ಜಂಬುಕಾಗದ ಬಳಕೆಗೆ ಬಂದಾಗ ಪುಸ್ತಕ ಸುರುಳಿಯ ರೂಪ ತಾಳಿತಷ್ಟೆ. ಲೇಖಕ ತನ್ನ ಗ್ರಂಥವನ್ನು ವಿಭಾಗಗಳಾಗಿ ವಿಂಗಡಿಸಿದಾಗ, ಪ್ರತಿಯೊಂದು ಭಾಗವೂ ಒಂದೊಂದು ಗ್ರಂಥವೇ ಆಗುತ್ತಿತ್ತು. ಒಂದೇ ದುಂಡು ಕೋಲಿಗೆ ಎಲ್ಲ ಸುರುಳಿಯನ್ನೂ ಸುತ್ತಲು ಅಸಾಧ್ಯವಾದಾಗ ಈ ರೀತಿ ವಿಂಗಡಿಸುವುದು ಅನಿವಾರ್ಯವಾಯಿತು. ಸುತ್ತಿದ ಕಟ್ಟಿಗೆಯ ತುಂಡಿಗೆ ಲೇಖಕನ ಪುಟ್ಟ ಪ್ರತಿಮೆಯನ್ನು ಕಟ್ಟುತ್ತಿದ್ದರು. ಈ ಪ್ರತಿಮೆ ಕಟ್ಟಿಗೆ ಇಲ್ಲವೇ ಹಸ್ತಿದಂತದ್ದಾಗಿರುತ್ತಿತ್ತು. ಇದು ಲೇಖಕನನ್ನು ಗುರುತಿಸುವ ಇಲ್ಲವೆ ಸೂಚಿಸುವ ಸುಲಭ ಮಾರ್ಗವಾಗಿತ್ತು. ಇಂಥ ಜಂಬು ಕಾಗದ ಸುರುಳೆಗಳ ಮೇಲೆ ತೊಗಲಿನ ಆವರಣವಿರುತ್ತಿತ್ತು. ಜಂಬು ಕಾಗದದ ಸುರುಳೆ ಗ್ರಂಥಗಳನ್ನು ಉರುಳೆಯಾಕಾರದ ಪಾತ್ರೆಗಳಲ್ಲಿ ಶೇಖರಿಸುತ್ತಿದ್ದರು. ಈ ವಿಧಾನದಿಂದ ಸಹಸ್ರಾರು ಗ್ರಂಥಗಳನ್ನು ಚೆನ್ನಾಗಿ ನಯನಮನೋಹರವಾಗಿ ಸ್ವಲ್ಪವೇ ಸ್ಥಳದಲ್ಲಿ ಇಡಲು ಸಾಧ್ಯವಾಗುತ್ತಿತ್ತು. ಮೈಕ್ರೊಫಿಲ್ಮ್ ಸುರುಳಿಗಳನ್ನು ಈಗ ಇದೇ ಮಾದರಿಯಲ್ಲಿ ಸಂಗ್ರಹಿಸುತ್ತಾರೆ. ಕಾಗದ ಬಂದ ಮೇಲೆ ಗ್ರಂಥಕ್ಕೆ ಈಗಿನ ಹೊಸರೂಪ ಬಂತು.

**ಬರೆಯುವ ರೀತಿ :** ಪೂರ್ವ ರಾಷ್ಟ್ರಗಳಲ್ಲಿ ಮೊದಲಿಗೆ ಬರೆಯುವ ಪರಂಪರೆ ಬಲದಿಂದ ಎಡಕ್ಕೆ ಇತ್ತು; ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಎಡದಿಂದ ಬಲಕ್ಕೆ ಇತ್ತು. ಗ್ರೀಕರು ಎರಡೂ ಬಗೆಯಲ್ಲಿ ಬರೆಯುತ್ತಿದ್ದರು. ಅಂದರೆ ನೇಗಿಲು ಒಮ್ಮೆ ಎಡದಿಂದ ಬಲಕ್ಕೂ ಆಮೇಲೆ ಬಲದಿಂದ ಎಡಕ್ಕೂ ಸರಿಯುವ ರೀತಿಯಲ್ಲಿ ಅಂದಿನ ಬರವಣಿಗೆಯ ಕ್ರಮವಿತ್ತು. ಬಹುತೇಕ ಎಲ್ಲ ದೇಶಗಳಲ್ಲಿ ಬರೆವಣಿಗೆ ಎಡದಿಂದ ಬಲಕ್ಕೆ ಇಲ್ಲವೇ ಬಲದಿಂದ ಎಡಕ್ಕೆ ಸಾಗುತ್ತಿದ್ದರೆ ಚೀನ, ಜಪಾನ್ ಮುಂತಾದ ದೇಶಗಳಲ್ಲಿ ಲಂಬರೂಪದ ಬರೆವಣಿಗೆ ಕಂಡುಬರುತ್ತವೆ. ಗ್ರೀಕರು ಪ್ರ.ಶ.ಪೂ. 6 ನೆಯ ಶತಮಾನದಲ್ಲಿ ಬಲದಿಂದ ಎಡಕ್ಕೆ ಬರೆಯುವ ರೂಢಿಯನ್ನು ದೃಢೀಕರಿಸಿದರು.

**ಚೌಕಾಕೃತಿಯ (ಕೋಡೆಕ್ಸ್) ಗ್ರಂಥಗಳು :** ರೋಮನ್ ಸಾಮ್ರಾಟ ಕಾನ್ಸ್ಟೆಂಟಿನ್ (ಪ್ರ.ಶ. 332) ಧರ್ಮಪ್ರಚಾರಕ್ಕಾಗಿ ಮಾಡಿಸಿದ ಬೈಬಲ್ಲಿನ ಸುಮಾರು 50 ಪ್ರತಿಗಳು ಚೌಕಾಕೃತಿಯ ಚರ್ಮ ಕಾಗದದ ಮೇಲಿವೆ. ಅಲ್ಲಿಯವರೆಗೆ ಜಂಬುಕಾಗದದ ಸುರುಳಿಯಾಗಿದ್ದ ಗ್ರಂಥ ಅಂದಿನಿಂದ ಚೌಕಾಕೃತಿಯನ್ನು ತಾಳಲಾರಂಭಿಸಿತು. ಪ್ರ.ಶ. 4ನೆಯ ಶತಮಾನದಲ್ಲಿ ನಕಲು ಮಾಡಿದ ಬೈಬಲ್ಲಿನ ಎರಡು ಚೌಕಾಕೃತಿಯ ಪ್ರತಿಗಳು ದೊರೆತಿವೆ. ಇವುಗಳಲ್ಲಿ ಒಂದಕ್ಕೆ ಕೋಡೆಕ್ಸ್ ಹೈಟಿಕಾನಸ್ ಎಂದೂ ಎರಡನೆಯದಕ್ಕೆ ಕೋಡೆಕ್ಸ್ ಸಿನೈಟಿಕಸ್ ಎಂದೂ ಹೆಸರು. ಕೋಡೆಕ್ಸ್ ಹೈಟಿಕಾನಸ್ ಆಡಿನ ಚರ್ಮದ ಮೇಲೆ ಬರೆಯಲ್ಪಟ್ಟಿದೆ. ಸಮಗ್ರ ಗ್ರೀಕ್ ಬೈಬಲ್ ಇದರಲ್ಲಡಗಿದೆ. ರೋಮಿನ ವ್ಯಾಟಿಕನ್ ಗ್ರಂಥಭಂಡಾರದ ಗ್ರಂಥಸೂಚಿಯನ್ನು ತಯಾರಿಸುವಾಗ (1875) ಇದು ಬೆಳಕಿಗೆ ಬಂತು. ಸಾಮ್ರಾಟ ನೆಪೋಲಿಯನ್ ಇದನ್ನು ಪ್ಯಾರಿಸಿಗೆ ಒಯ್ದ. ಸುಮಾರು 1809 ರಲ್ಲಿ ಇದರ ಫೋಟೊ ನಕಲು ತೆಗೆಯಲಾಯಿತು. ಚೌಕಾಕೃತಿಯ ಕೋಡೆಕ್ಸ್ ಸಿನೈಟಿಕಸ್ ಸಿನಾಯ್ ಪರ್ವತದಲ್ಲಿ ಸಿಕ್ಕಿದ್ದರಿಂದ ಅದಕ್ಕೆ ಆ ಹೆಸರು ಬಂದಿದೆ. ಲೆನಿನ್‌ಗ್ರಾಡಿನ ಗ್ರಂಥಾಲಯದಲ್ಲಿದ್ದ ಇದನ್ನು ಬ್ರಿಟಿಷ್ ವಸ್ತುಸಂಗ್ರಹಾಲಯ ಸೋವಿಯತ್ ಸರ್ಕಾರದಿಂದ 5 ಲಕ್ಷ ಪೌಂಡ್ ಬೆಲೆ ಕೊಟ್ಟು ಕೊಂಡಿತು (1933). ಇದನ್ನೀಗ ಎರಡು ಬೇರೆ ಬೇರೆ ವಿಭಾಗ ಮಾಡಿ ರಟ್ಟುಕಟ್ಟಿಸಲಾಗಿದೆ. ಮೂವರು ಇದನ್ನು ಬರೆದಂತೆ ಕಾಣುತ್ತದೆ. ಒಂದೊಂದು ಪುಟದಲ್ಲಿ ನಾಲ್ಕು ಅಂಕಣಗಳಿವೆ. ಶಬ್ದದ ನಡುವೆ ಸ್ಥಳಾವಕಾಶ ಬಿಟ್ಟಿಲ್ಲ. ಶಬ್ದಗಳನ್ನು ಬಿಡಿಸಿ ಬೇರೆ ಬೇರೆಯಾಗಿ ಬರೆಯುವ ಪರಿಪಾಠ 4 ನೆಯ ಶತಮಾನದಿಂದ ಪ್ರಚಲಿತವಾಗಿತ್ತೆನ್ನಬಹುದು.

ಈ ನಡುವೆ ಪ್ರಾಚೀನ ಗ್ರಂಥಾಲಯಗಳಾದ ಪರ್ಗಮಮ್ ಮತ್ತು ಅಲೆಗ್ಸಾಂಡ್ರಿಯ ಗ್ರಂಥಾಲಯಗಳ ನಡುವೆ ಸ್ಪರ್ಧೆ ಹೆಚ್ಚಿತು. ದೇಶವಿದೇಶಗಳಿಂದ ಗ್ರಂಥಗಳನ್ನು ಕಲೆಹಾಕುವಲ್ಲಿ ನಾ ಮುಂದೆ ತಾ ಮುಂದೆ ಎಂದು ಇವು ಪೈಪೋಟಿ ನಡೆಸಿದುವು. ಇದಲ್ಲದೆ ಪ್ರತಿಭಾವಂತ ಗ್ರಂಥಪಾಲ ತಮ್ಮಲ್ಲಿರಬೇಕೆಂದು ಭಾವನೆ ಅವರಲ್ಲಿ ಮೆಲ್ಲಮೆಲ್ಲನೆ ಮೂಡತೊಡಗಿತು. ಅಲೆಗ್ಸಾಂಡ್ರಿಯ ಗ್ರಂಥಪಾಲನಾದ ಅರಿಸ್ಟೋಫೆನೀಸನಿಗೆ ಪರ್ಗಮಮ್‌ಗೆ ಬರಲು ಆಮಂತ್ರಣ ಕಳುಹಿಸಲಾಯಿತು. ಇವನು ಅಲ್ಲಿಗೆ ಹೋಗುವುದು ಅಲೆಗ್ಸಾಂಡ್ರಿಯದವರಿಗೆ ಹಿಡಿಸಲಿಲ್ಲ. ಅಲ್ಲದೆ ಈತ ತನಗೆ ಬಂದ ಹೊಸ ಆಮಂತ್ರಣವನ್ನು ಒಪ್ಪಬಹುದೆಂಬ ಶಂಕೆಯೂ ಅವರ ಮನಸ್ಸಿನಲ್ಲಿ ಬೇರೂರಿತು. ಹೀಗಾಗಿ ತತ್‌ಕ್ಷಣ ಅರಿಸ್ಟೋಫೆನೀಸನನ್ನು ಕಾರಾಗೃಹಕ್ಕೆ ಕಳುಹಿಸಲಾಯಿತು. ಇದಲ್ಲದೆ ಪರ್ಗಮಮ್‌ಗೆ ರಫ್ತಾಗುತ್ತಿದ್ದ ಜಂಬುಕಾಗದದ ಮೇಲೆ ನಿರ್ಬಂಧ ಹೇರಲಾಯಿತು. ಹೀಗೆ ಬರೆಯುವ ಸಾಧನಗಳ ಅಭಾವ ಹೆಚ್ಚಾಗಲಾಗಿ ಚರ್ಮಪತ್ರಗಳ ಬಳಕೆ ಹೆಚ್ಚಿತು. ಪರ್ಗಮಮ್ ಅಲ್ಲದೆ ಬೇರೆ ಕಡೆಗೂ ಇದನ್ನು ಬಳಸಿದ ಉದಾಹರಣೆಗಳಿವೆ. ವ್ಯಾಪಾರಸ್ಥರ ಮುಖಾಂತರ ಚರ್ಮಪತ್ರ ಯುರೋಪ್ ಖಂಡವನ್ನು ಸೇರತೊಡಗಿತು.

ಹತ್ತಿ ಮೊದಲಾದುವುಗಳಿಂದ ಕೈಯಲ್ಲಿ ಮಾಡಿದ ಕಾಗದ 105 ರಲ್ಲೇ ಚೀನದಲ್ಲಿ ಕಂಡುಬಂದಿದೆ. 14ನೆಯ ಶತಮಾನದಲ್ಲಿ ಕಾಗದ ಯುರೋಪ್ ಖಂಡವನ್ನು ಮುಟ್ಟಿತು. ಮುದ್ರಣಯಂತ್ರ ಬಂದು ಕಾಗದದ, ಮಸಿಯ ತಯಾರಿಕೆ ಮಾರ್ಪಟ್ಟಂತೆ ಪುಸ್ತಕ ಸ್ಫೋಟ ಉಂಟಾಗಲಾರಂಭಿಸಿತು.


ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಪುಸ್ತಕ ತಯಾರಿಕೆಯ ಉದ್ಯಮ ಅದ್ಭುತವಾಗಿ ಬೆಳೆಯಿತು; 21ನೆಯ ಶತಮಾನದಲ್ಲಿ ಅದು ಇನ್ನೂ ವಿಸ್ತರಿಸಿದೆ. ಆಧುನಿಕ ತಂತ್ರಜ್ಞಾನದಿಂದಾಗಿ ಪುಸ್ತಕ ಮುದ್ರಣದ ಇಡೀ ಪ್ರಕ್ರಿಯೆಯಲ್ಲಿ ಕ್ರಾಂತಿಕಾರಕ ಬದಲಾವಣೆಗಳಾಗಿವೆ. ಬರೆಹವನ್ನು ಮೈಕ್ರೊಫಿಲ್ಮ್ ಆಗಿ ಪರಿವರ್ತಿಸುವುದು ಇಂದು ಸುಲಭ. ಒಂದು ಕಡೆ ಘನವಾದ, ಗಟ್ಟಿಮುಟ್ಟಾದ, ನೂರು ವರ್ಷ ಬಾಳಬಲ್ಲ ಪುಸ್ತಕ ತಯಾರಾಗುತ್ತಿರುವಂತೆ, ಒಮ್ಮೆ ಓದಿ ಬಿಸಾಡಬಹುದಾದ, ಅಲ್ಪ ಬೆಲೆಯ ಆದರೂ ಅಮೂಲ್ಯವಾದ ಪುಸ್ತಕಗಳೂ ಲಕ್ಷಸಂಖ್ಯೆಯಲ್ಲಿ ಹೊರಬರುತ್ತವೆ. ಇದು ಪುಸ್ತಕದ ವಿಕಸನ ಕಥೆ. (ಆರ್.ಆರ್.ಎ.)

## X ಗ್ರಂಥಾಲಯ ವಿಜ್ಞಾನಿಗಳು

ಗ್ರಂಥಾಲಯ ವಿಕಾಸದ ಚರಿತ್ರೆಯನ್ನು ನೋಡಿದರೆ ಒಂದು ಅಂಶ ಸ್ಪಷ್ಟವಾಗುತ್ತದೆ. ಪ್ರಾರಂಭದ ದಿನಗಳಲ್ಲಿ ಆಸಕ್ತರಾದ ಖಾಸಗಿ ಮಹನೀಯರು ತಮ್ಮ ಮತ್ತು ತಮ್ಮ ಜನರ ಉಪಯೋಗಕ್ಕಾಗಿ ಗ್ರಂಥಸಂಗ್ರಹ ಮಾಡುತ್ತ ಬಂದಿದ್ದಾರೆ. ಕ್ರಮೇಣ ಆಯಾ ದೇಶಗಳ ರಾಜ ಮಹಾರಾಜರುಗಳು ಕವಿಗಳಿಗೂ ವಿದ್ವಾಂಸರಿಗೂ ಆಶ್ರಯ, ಪ್ರೋತ್ಸಾಹ, ಧನಸಹಾಯಗಳನ್ನು ಕೊಟ್ಟುದಲ್ಲದೆ ತಮ್ಮ ಅರಮನೆಯ ಒಂದು ಭಾಗದಲ್ಲಿ ಗ್ರಂಥ ಸಂಗ್ರಹಣ ಮಾಡತೊಡಗಿದರು. ಇವರಲ್ಲನೇಕರು ಗ್ರಂಥ ಪ್ರತೀಕರಣ, ಗ್ರಂಥ ವಿಂಗಡಣೆ, ಗ್ರಂಥಸೂಚೀ ರಚನೆ ಮೊದಲಾದ ವಿಷಯಗಳಿಗೆ ಗಮನ ಕೊಟ್ಟರು. ಕ್ರಮೇಣ ಸರ್ಕಾರ ಹಾಗೂ ಸಾರ್ವಜನಿಕ ಸಂಸ್ಥೆಗಳು, ವಿದ್ಯಾಪೀಠಗಳು ಗ್ರಂಥಾಲಯಗಳ ಜವಾಬ್ದಾರಿಯನ್ನು ಹೊರತೊಡಗಿದುವು. ವಿವಿಧೋದ್ದೇಶಗಳಿಗಾಗಿ ವಿವಿಧ ಮಾದರಿಯ ಗ್ರಂಥಾಲಯಗಳು ರೂಪುಗೊಳ್ಳತೊಡಗಿದುವು. ಈ ಸಂದರ್ಭದಲ್ಲಿ ಗ್ರಂಥಾಲಯಗಳ ನಿರ್ಮಾಣ ಹಾಗೂ ಸಕ್ರಮ ವಿಕಾಸಕ್ಕೆ ಕಾರಣರಾದ ಕೆಲವು ಮಹನೀಯರ ಪರಿಚಯವನ್ನಿಲ್ಲಿ ಕೊಡಲಾಗಿದೆ.


**1. ಕಾರ್ನೇಗಿ, ಆಂಡ್ರ್ಯೂ :** 1835–1919. ವಿವಿಧ ಬಗೆಯ ಗ್ರಂಥಾಲಯಗಳ ಸ್ಥಾಪಕ. ಅಮೆರಿಕದ ಕೈಗಾರಿಕೋದ್ಯಮಿ ಮತ್ತು ದಾನಿಯಾದ ಈತ ಗ್ರಂಥಾಲಯಗಳಿಗಾಗಿ ಆರು ಕೋಟಿಗೂ ಹೆಚ್ಚು ಡಾಲರುಗಳನ್ನು ದಾನ ಮಾಡಿದ. ಈತನ ದಾನದತ್ತಿಗಳ ಲೆಕ್ಕದಲ್ಲಿ 1919 ರ ಹೊತ್ತಿಗೆ 2,811 ಸಾರ್ವಜನಿಕ ಗ್ರಂಥಾಲಯಗಳನ್ನು ತೆರೆದಿರುವುದಾಗಿ ತಿಳಿಯುತ್ತದೆ. ಗ್ರಂಥಾಲಯಗಳಿಂದಾಗುವ ಮುಖ್ಯ ಲಾಭ ಜ್ಞಾನಾರ್ಜನೆ. ನಾವೇನಾದರೂ ಕೊಡದಿದ್ದರೆ ಅವು ನಮಗೇನೂ ಕೊಡಲಾರವು ಎಂಬುದು ಈತನ ಅಭಿಪ್ರಾಯ **(ನೋಡಿ– ಕಾರ್ನೇಗಿ, ಆ್ಯಂಡ್ರ್ಯೂ).** (ಎಸ್.ಆರ್.ಜಿಯು.)

**2. ಕಟ್ಟರ್, ಚಾರ್ಲ್ಸ್ ಅಮ್ಮಿ :** 1837–1903. ಗ್ರಂಥಾಲಯ ವಿಜ್ಞಾನದಲ್ಲಿ ಜನಪ್ರಿಯವಾಗಿರುವ ವ್ಯಾಪಕ ವರ್ಗೀಕರಣ ಪದ್ಧತಿಯ (ಎಕ್ಸ್‌ಪ್ಯಾನ್ಸಿವ್ ಕ್ಲ್ಯಾಸಿಫಿಕೇಶನ್) ಕರ್ತೃ. ಈತ ಹುಟ್ಟಿದ್ದು ಅಮೆರಿಕದ ಬಾಸ್ಟನ್ ನಗರದಲ್ಲಿ. ಹಾರ್ವರ್ಡ್ ಕಾಲೇಜಿನಲ್ಲಿ ವ್ಯಾಸಂಗಮಾಡಿ ಪದವೀಧರನಾದ (1855). ಕ್ರೈಸ್ತ ಧರ್ಮೋಪದೇಶಕನಾಗಲು ಆಶಿಸಿ ಹಾರ್ವರ್ಡಿನ ದೇವಜ್ಞಾನ ಶಾಲೆಯಲ್ಲಿ ಕಲಿಯುತ್ತಿದ್ದಾಗ, ಆ ಶಾಲೆಯ ಗ್ರಂಥಾಲಯದ ಸೂಚಿಯನ್ನು ತಯಾರಿಸುವ ಕೆಲಸ ಈತನ ಪಾಲಿಗೆ ಬಂತು. ಇದರಿಂದಾಗಿ ಗ್ರಂಥಾಲಯ ವಿಜ್ಞಾನದಲ್ಲಿ ಆಸಕ್ತಿ ಮೂಡಿತು. ಮುಂದೆ ಹಾರ್ವರ್ಡ್ ಕಾಲೇಜಿನ ಗ್ರಂಥಪಾಲನ ಸಹಾಯಕನಾಗಿ ನೇಮಕಗೊಂಡ (1860). ಬಿಡುವಿನ ವೇಳೆಯಲ್ಲಿ ಬಾಸ್ಟನ್ ಸಾರ್ವಜನಿಕ ಗ್ರಂಥಾಲಯ ಮತ್ತು ಅದರ ಅಂಗಸಂಸ್ಥೆಗಳ ಗ್ರಂಥಾಲಯಗಳಲ್ಲಿ ಕೆಲಸಮಾಡಿ, ಅಲ್ಲಿನ ಗ್ರಂಥ ಸೂಚಿಗಳನ್ನು ಪರಿಷ್ಕರಿಸಿದ. ಅನಂತರ ಅಥೀನಿಯಮ್ ಗ್ರಂಥಾಲಯದ ಪ್ರಧಾನ ಗ್ರಂಥಪಾಲನಾಗಿ ನೇಮಕಗೊಂಡ. ಗ್ರಂಥಸೂಚಿ ಕಾರ್ಯದಲ್ಲಿ ವಿಶೇಷ ಪರಿಶ್ರಮ ಪಡೆದಿದ್ದ ಈತ ದರಮೂಲ ತತ್ತ್ವಗಳನ್ನು ಕುರಿತ ರೂಲ್ಸ್ ಫಾರ್ ಎ ಡಿಕ್ಷನರಿ ಕ್ಯಾಟಲಾಗ್ ಎಂಬ ಗ್ರಂಥವನ್ನು ರಚಿಸಿದ (1875). ಪ್ರಪಂಚದ ಅನೇಕ ಗ್ರಂಥಾಲಯಗಳಲ್ಲಿ ಇಂದಿಗೂ ಇದು ಬಳಕೆಯಲ್ಲಿದೆ.




ಅಮೆರಿಕ ಗ್ರಂಥಾಲಯ ಸಂಘದ ಸ್ಥಾಪನೆಗೆ ಪ್ರಯತ್ನಿಸಿದ ಈತ ಅದರ ಅಭಿವೃದ್ಧಿಗಾಗಿಯೂ ಶ್ರಮಿಸಿದ. ಈತನ ಸೋದರಳಿಯ ಡಬ್ಲ್ಯೂ. ಪಿ. ಕಟ್ಟರ್ ಎಂಬಾತ ಈತನ ಜೀವನ ಚರಿತ್ರೆಯನ್ನು ಬರೆದು ಪ್ರಕಟ ಮಾಡಿದ್ದಾನೆ (1931). (ಎಸ್.ಆರ್.ಜಿಯು.)

**3. ಖುದಾಭಕ್ಷ್ ಖಾನ್ :** 1842–1908. ಪಾಟ್ನಾದ ಪ್ರಸಿದ್ಧ ವಕೀಲ, ಹೈದರಾಬಾದ್ ಸಂಸ್ಥಾನದ ಮುಖ್ಯ ನ್ಯಾಯಾಧೀಶ ಮತ್ತು ಖುದಾ ಭಕ್ಷ್ ಪ್ರಾಚ್ಯ ಸಾರ್ವಜನಿಕ ಗ್ರಂಥಾಲಯದ ಸ್ಥಾಪಕ. ಬಿಹಾರ್ ಜಿಲ್ಲೆಯ ಛಾಪ್ರಾದಲ್ಲಿ ಜನಿಸಿದ. ತಂದೆ ಮಹಮದ್ ಭಕ್ಷ್ ಪುಸ್ತಕ ಪ್ರೇಮಿ ಮತ್ತು ಹಸ್ತಪ್ರತಿಗಳ ಸಂಗ್ರಾಹಕ. ಅರಬ್ಬಿ ಮತ್ತು ಫಾರಸಿ ಭಾಷೆಗಳಲ್ಲಿ ಪಾಂಡಿತ್ಯವನ್ನು ಸಂಪಾದಿಸಿದ ಖುದಾ ಭಕ್ಷ್ ಇಂಗ್ಲಿಷ್ ಭಾಷೆಯನ್ನು ಕಲಿತ. ಇಸ್ಲಾಂ ಗ್ರಂಥಾಲಯಗಳನ್ನು ಕುರಿತು ಅನೇಕ ಲೇಖನಗಳನ್ನು ಪ್ರಕಟಿಸಿದ. ತಂದೆಯ ಸಂಗ್ರಹದಿಂದ ದೊರೆತ ಸು. 1400 ಹಸ್ತಪ್ರತಿಗಳೊಂದಿಗೆ ಒಂದು ಸಾರ್ವಜನಿಕ ಗ್ರಂಥಾಲಯವನ್ನು ತೆರೆದ. ಮೊಗಲರು ಸಂಗ್ರಹಿಸಿದ್ದ ಅಮೂಲ್ಯ ಹಸ್ತಪ್ರತಿಗಳು ಪರದೇಶಗಳಿಗೆ ಹೋಗುವುದನ್ನು ತಡೆಯಲು ಹಾಗೂ ನಾಶವಾಗದಂತೆ ನೋಡಿಕೊಳ್ಳಲು ಪ್ರಯತ್ನಿಸಿದ. ಹಸ್ತಪ್ರತಿಗಳ ಸಂಗ್ರಹಕ್ಕಾಗಿಯೇ ಮಹಮದ್ ಮಾಕಿ ಎಂಬ ಪ್ರಸಿದ್ಧ ಅರಬ್ಬೀ ಗ್ರಂಥ ಸಂಗ್ರಹಕಾರನ ನೆರವನ್ನು ಪಡೆದ. ಅಪೂರ್ವ ಹಸ್ತಪ್ರತಿಗಳ ಸಂಗ್ರಹಕ್ಕಾಗಿ ಈತನನ್ನು ಅರೇಬಿಯ, ಪರ್ಷಿಯ, ಈಜಿಪ್ಟ್, ಸಿರಿಯ ಮೊದಲಾದ ದೇಶಗಳಿಗೆ ಕಳುಹಿಸಿಕೊಟ್ಟ. ಕಮಿಷನ್ ಜೊತೆಗೆ ತಿಂಗಳ ವೇತನವನ್ನೂ ಕೊಟ್ಟು 18 ವರ್ಷಗಳ ಕಾಲ ಈತನಿಂದ ಗ್ರಂಥ ಸಂಗ್ರಹ ಮಾಡಿದ. ಹಸ್ತಪ್ರತಿ ಗಳನ್ನು ಮಾರಲು ಬಂದವರಿಗೆ ಯೋಗ್ಯ ಬೆಲೆಯನ್ನು ಕೊಡುತ್ತಿದ್ದ ನಲ್ಲದೇ ಅವರ ಪ್ರಯಾಣ ವೆಚ್ಚದ ಎರಡರಷ್ಟು ಮೊತ್ತವನ್ನೂ ಕೊಡುತ್ತಿದ್ದ. ಹಸ್ತಪ್ರತಿಗಳ ಬೆಲೆ ಕಟ್ಟುವುದರಲ್ಲಿಯೂ ಈತ ನಿಷ್ಣಾತನಾಗಿದ್ದ. ಈತ ಸ್ಥಾಪಿಸಿದ ಪ್ರಾಚ್ಯ ಸಾರ್ವಜನಿಕ ಗ್ರಂಥಾಲಯ ಬಹುಬೇಗ ಬೆಳೆದು, ಖುದಾ ಭಕ್ಷ್ ಪ್ರಾಚ್ಯ ಸಾರ್ವಜನಿಕ ಗ್ರಂಥಾಲಯ ಎಂದು ಪ್ರಸಿದ್ಧವಾಯಿತು. ಮುಂದೆ ಅದನ್ನು ಬಂಗಾಳ ಸರ್ಕಾರ ವಹಿಸಿ ಕೊಂಡಿತು. ಖುದಾಭಕ್ಷನ ಸಾಮಾಜಿಕ ಸೇವೆಯನ್ನು ಗಮನಿಸಿ ಆಗಿನ ಬ್ರಿಟಿಷ್ ಸರ್ಕಾರ ಖಾನ್ ಬಹಾದೂರ್ (1881) ಮತ್ತು ಸಿ.ಐ.ಇ. (1903) ಬಿರುದುಗಳನ್ನು ನೀಡಿ ಗೌರವಿಸಿತು. (ಎಲ್.ವಿ.ಜಿ.)



**4. ಡ್ಯೂಯಿ, ಮೆಲ್‌ವಿಲ್ :** 1851–1931. ಗ್ರಂಥ ವರ್ಗೀಕರಣಕ್ಕೆ ಸಂಬಂಧಿಸಿದಂತೆ ದಾಶಮಿಕ ವರ್ಗೀಕರಣ (ಡೆಸಿಮಲ್ ಕ್ಲ್ಯಾಸಿಫಿಕೇಶನ್) ಪದ್ಧತಿಯನ್ನು ರೂಪಿಸಿದ ವ್ಯಕ್ತಿ. ಗ್ರಂಥಾಲಯವನ್ನು ಓರಣವಾಗಿಟ್ಟುಕೊಳ್ಳುವುದರಲ್ಲಿ ಎಷ್ಟರಮಟ್ಟಿಗೆ ಕ್ರಮಬದ್ಧ ವಿಧಾನವನ್ನು ಅನುಸರಿಸಬಹುದೆಂಬುದನ್ನು ಮೊಟ್ಟಮೊದಲಿಗೆ ತೋರಿಸಿಕೊಟ್ಟವ. ಹುಟ್ಟಿದ್ದು ಅಮೆರಿಕದ ಸಂಯುಕ್ತ ಸಂಸ್ಥಾನಗಳ ನ್ಯೂಯಾರ್ಕ್ ರಾಜ್ಯದ ಆಡಮ್ಸ್ ಸೆಂಟರ್ ಎಂಬಲ್ಲಿ. ತಂದೆ ಜ್ಯೋಯೆಲ್ ಡ್ಯೂಯಿ; ತಾಯಿ ಎಲಿಜ಼ಾ ಗ್ರೀನ್. ಓದುವುದೆಂದರೆ ಮೆಲ್‌ವಿಲ್‌ಗೆ ಮೊದಲಿನಿಂದಲೂ ಬಹಳ ಆಸಕ್ತಿ. ದುಡಿದು ತಿನ್ನಬೇಕೆಂಬ ಭಾವನೆ ಯಂತೂ ತೀರ ಉತ್ಕಟವಾಗಿತ್ತು. ಕೇವಲ 13 ವರ್ಷದವನಿದ್ದಾಗಲೇ ಅಲ್ಲಷ್ಟು ಇಲ್ಲಷ್ಟು ಕೂಲಿ ಕಂಬಳಿ ಮಾಡಿ ಕೆಲವಾರು ಡಾಲರ್‌ಗಳನ್ನು ಸಂಪಾದನೆ ಮಾಡುತ್ತಿದ್ದ. ಸೇರಿಸಿಟ್ಟ ಹಣದಲ್ಲಿ ಒಂದು ವೆಬ್‌ಸ್ಟರ್ ನಿಘಂಟನ್ನು ಕೊಂಡು ಅದರಲ್ಲಿನ ಶಬ್ದಾರ್ಥಗಳನ್ನು ಹೆಚ್ಚಿನ ಆಸಕ್ತಿಯಿಂದ ಗ್ರಹಿಸಿದ. ಧಾರ್ಮಿಕ ಮನೋಭಾವವೂ ಇದ್ದ ಕಾರಣ ಒಂದು ಕ್ರೈಸ್ತಶಾಲೆಯಲ್ಲಿ ಕೆಲವು ಕಾಲ ಅಭ್ಯಾಸ ನಡೆಸಿದನಲ್ಲದೆ ಕೆಲಕಾಲ ಬೋಧಕನಾಗಿಯೂ ಕೆಲಸ ಮಾಡಿದ. ಶಿಕ್ಷಕ ವೃತ್ತಿಯಲ್ಲಿ ಬೇಸರ ತಲೆದೋರಿದ ಕಾರಣ ಅದನ್ನು ತ್ಯಜಿಸಿ ಮೆಸಾಚುಸೆಟ್ಸ್‌ನ



ಆಮ್‌ಹರ್‌ಸ್ಟ್ ಕಾಲೇಜಿಗೆ ಸೇರಿ, ವಿದ್ಯಾಭ್ಯಾಸ ನಡೆಸಿ ಪದವೀಧರನಾದ (1874.) ಅದೇ ಕಾಲೇಜಿನ ಗ್ರಂಥಾಲಯದ ಗ್ರಂಥಪಾಲನಾದ. ಗ್ರಂಥಗಳ ಜೋಡಣೆಗೆ ಹಾಗೂ ವ್ಯವಸ್ಥಿತ ವರ್ಗೀಕರಣಗಳ ಬಗ್ಗೆ ಆಲೋಚಿಸತೊಡಗಿದ. ಇವನ ಸತತ ಸಂಶೋಧನೆಯಿಂದಾಗಿ ಗ್ರಂಥ ವರ್ಗೀಕರಣದಲ್ಲಿ ದಾಶಮಿಕ ವರ್ಗೀಕರಣ ಪದ್ಧತಿ ರಾಷ್ಟ್ರದ ಎಲ್ಲೆಡೆ ಬಳಕೆಗೆ ಬಂತು. ಗ್ರಂಥಗಳು, ಚಲನಚಿತ್ರಗಳು, ಮೈಕ್ರೊಫಿಲ್ಮ್‌ಗಳು ಮುಂತಾದ ಗ್ರಂಥಾಲಯ ಪದಾರ್ಥಗಳನ್ನು ವಿಷಯಾನುಗುಣವಾಗಿ 1,2,3,4,5,6,7,8,9, – ಈ ಹತ್ತು ವಿಭಾಗಗಳಲ್ಲಿ ವರ್ಗೀಕರಿಸುವ ನೂತನ ಪದ್ಧತಿಯನ್ನು ಈತ ಜಾರಿಗೆ ತಂದ. ವರ್ಗೀಕರಣವನ್ನಷ್ಟೆ ಅಲ್ಲದೆ ಗ್ರಂಥಗಳ ವಿಷಯ ಸೂಚಿಯನ್ನೂ ರೂಪಿಸಿದ. ಅಮೆರಿಕದ ಫಿಲಿಡೆಲ್ಫಿಯದಲ್ಲಿ ನಡೆದ (1876) ಗ್ರಂಥಪಾಲರ ಸಮ್ಮೇಳನದ ಫಲವಾಗಿ ಅಮೆರಿಕದ ಗ್ರಂಥಾಲಯ ಸಂಘ ಸ್ಥಾಪನೆಯಾಯಿತು. ಇದರ ಸ್ಥಾಪನೆಗೆ ಶ್ರಮಿಸಿದ ಡ್ಯೂಯಿ ಬಹು ಮುಖ್ಯ. ಸಂಘದ ತತ್ತ್ವೋದ್ದೇಶಗಳ ಪ್ರಣಾಳಿಕೆಯನ್ನು ದೇಶವಿದೇಶಗಳಲ್ಲಿ ಪ್ರಚುರಪಡಿಸುವ ಸಲುವಾಗಿ 1877 ರಲ್ಲಿ ಈತ ಬಾಸ್ಟನಿಗೆ ತೆರಳಿದ. ಅಲ್ಲಿ ಗ್ರಂಥಾಲಯ ವಿಭಾಗಕ್ಕೆ ಸಂಬಂಧಿಸಿದ ಪ್ರಮುಖರಾದ ಆರ್.ಆರ್.ಬೌಕರ್ ಮತ್ತು ಫ್ರೆಡರಿಕ್ ಲೀಪೋಲ್ಟ್‌ರ ಪರಿಚಯವಾಯಿತು. ಅವರ ಸಹಾಯದಿಂದ ಗ್ರಂಥಾಲಯ ವಿಜ್ಞಾನದ ತಾತ್ತ್ವಿಕ ವಿವೇಚನೆಗೆ ಮೀಸಲಾಗಿದ್ದ ಲೈಬ್ರರಿ ಜರ್ನಲ್ ಎಂಬ ಪತ್ರಿಕೆಯನ್ನು ಸ್ಥಾಪಿಸಿ ಅದರ ಸಂಪಾದಕನಾಗಿ ಕೆಲಸಮಾಡಿದ. ಗ್ರಂಥಾಲಯಗಳ ನಿತ್ಯೋಪಯೋಗಕ್ಕೆ ಬೇಕಾಗುವ ಕುರ್ಚಿ, ಮೇಜು ಮುಂತಾದ ಅಣಿಕಟ್ಟುಗಳು ಮತ್ತು ಕಪಾಟು ಮುಂತಾದ ಸಾಮಾನುಗಳನ್ನು ಕೊಂಡುಕೊಳ್ಳುವಲ್ಲಿ ಗ್ರಂಥಪಾಲರು ಲಕ್ಷ್ಯದಲ್ಲಿಡಬೇಕಾದ ವಿಷಯಗಳನ್ನು ಕುರಿತಾದ ಲೈಬ್ರರಿ ನೋಟ್ಸ್ ಎಂಬ ಮತ್ತೊಂದು ಪತ್ರಿಕೆ ಈತನ ಸಂಪಾದಕತ್ವದಲ್ಲಿ ಹೊರಬಿತ್ತು. ಈತನ ಸಲಹೆಯಂತೆ ಗ್ರಂಥಾಲಯಕ್ಕೆ ಅಗತ್ಯವಿರುವ ಸಾಮಾನುಗಳನ್ನು ತಯಾರಿಸುವಂಥ ಲೈಬ್ರರಿ ಬ್ಯೂರೋ ಎಂಬ ಶಾಖೆಯೊಂದು ಆರಂಭವಾಯಿತು (1878). ಈತ ನ್ಯೂಯಾರ್ಕ್ ನಗರದ ಕೊಲಂಬಿಯ ಕಾಲೇಜಿನ ಗ್ರಂಥಪಾಲನಾಗಿ ಸೇವೆ ಸಲ್ಲಿಸಿ (1883) ಗ್ರಂಥಾಲಯಗಳ ಸುಸಂಬದ್ಧ ಆಡಳಿತಕ್ಕಾಗಿ ಗ್ರಂಥಪಾಲರ ತರಬೇತಿ ಶಾಲೆಯನ್ನು ತೆರೆದ. (1887). ಈ ಶಾಲೆಯ ಚಟುವಟಿಕೆಗಳು ಬಹಳ ಯಶಸ್ವಿಯಾಯಿತಾಗಿ ಇವನ ಮಾರ್ಗದರ್ಶನದಲ್ಲಿ ನ್ಯೂಯಾರ್ಕಿನ ಅಲ್ಬೆನಿ ಎಂಬಲ್ಲಿ ಸ್ಟೇಟ್ ಲೈಬ್ರರಿ ಸ್ಕೂಲ್ ಎಂಬ ಹೆಸರಿನಿಂದ ಅದನ್ನು ಪುನಃ ಸ್ಥಾಪಿಸಲಾಯಿತು. ನ್ಯೂಯಾರ್ಕ್ ಸ್ಟೇಟ್ ಗ್ರಂಥಾಲಯದ ನಿರ್ದೇಶಕನಾಗಿ (1889–1906), ಯೂನಿವರ್ಸಿಟಿ ಆಫ್ ದಿ ಸ್ಟೇಟ್ ಆಫ್ ನ್ಯೂಯಾರ್ಕಿನ ಕಾರ್ಯದರ್ಶಿಯಾಗಿ (1989–1900), ಗ್ರಂಥಾಲಯಗಳ ಸ್ಟೇಟ್ ನಿರ್ದೇಶಕನಾಗಿ (1904–06) – ಹೀಗೆ ಈತ ಕೆಲಸ ಮಾಡಿದ. ಸ್ಟೇಟ್ ಗ್ರಂಥಾಲಯವನ್ನು ಸಂಪೂರ್ಣವಾಗಿ ಪುನರ್ ವ್ಯವಸ್ಥೆಗೊಳಿಸಿ ಅದನ್ನು ಅಮೆರಿಕದಲ್ಲೇ ಅತ್ಯಂತ ಸುವ್ಯವಸ್ಥಿತ ಗ್ರಂಥಾಲಯವನ್ನಾಗಿ ಮಾಡಿದ ಖ್ಯಾತಿ ಇವನದು. ಸಂಚಾರೀ ಗ್ರಂಥಾಲಯಗಳನ್ನು ಸ್ಥಾಪಿಸುವುದರಲ್ಲಿ ಮತ್ತು ಚಿತ್ರಸಂಗ್ರಹಣೆಗೆ ಸಂಬಂಧಿಸಿದ ವ್ಯವಸ್ಥೆಯನ್ನು ಏರ್ಪಡಿಸುವಲ್ಲಿ ಈತ ಹೆಚ್ಚಿನ ಶ್ರಮವಹಿಸಿದ.

**5. ಬ್ಲಿಸ್, ಹೆನ್ರಿ ಎವ್ಲಿನ್ :** 1870–1955. ಗ್ರಂಥಾಲಯ ವಿಜ್ಞಾನದಲ್ಲಿ ಹೊಸದೊಂದು ವರ್ಗೀಕರಣ ಪದ್ಧತಿಯನ್ನು ರೂಪಿಸಿ ಪ್ರಚಾರಕ್ಕೆ ತಂದವ. ಹುಟ್ಟಿದ್ದು ನ್ಯೂಯಾರ್ಕಿನಲ್ಲಿ. ಅಲ್ಲಿನ ಸಿಟಿ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಪದವೀಧರನಾದ. ಅನಂತರ ಇದೇ ಕಾಲೇಜಿನ ಗ್ರಂಥಪಾಲನಾಗಿ ನೇಮಕಗೊಂಡ. ಬಹುಶ್ರುತನಾದ ಈತ ಆಗ್ಗೆ ಗ್ರಂಥಾಲಯ ವಿಜ್ಞಾನದಲ್ಲಿ ಆಗಲೇ ಪ್ರಚಾರದಲ್ಲಿದ್ದ ದಶಾಂಶ ಮತ್ತು ವ್ಯಾಪಕ ವರ್ಗೀಕರಣ ಪದ್ಧತಿಯನ್ನು ಪರಿಷ್ಕರಿಸಿ ವರ್ಗೀಕರಣದ 32 ಮೂಲಸೂತ್ರಗಳನ್ನನುಸರಿಸಿ ಹೊಸತೊಂದು ಪದ್ಧತಿಯನ್ನು ಬಳಕೆಗೆ ತಂದ. ಗ್ರಂಥಾಲಯ ವಿಜ್ಞಾನದಲ್ಲಿದ್ದ ಹಲವಾರು ತಾಂತ್ರಿಕ ದೋಷಗಳನ್ನು ನಿವಾರಿಸಿ, ಅವುಗಳಿಗೆ ಪರಿಹಾರ ಸೂಚಿಸಬೇಕೆಂಬ ಉದ್ದೇಶದಿಂದ ಕ್ಲಾಸಿಫಿಕೇಷನ್ ಬುಲೆಟಿನ್ ಎಂಬ ಪತ್ರಿಕೆಯನ್ನು ಪ್ರಾರಂಭಿಸಿದ.

ಗ್ರಂಥಾಲಯ ವಿಜ್ಞಾನಕ್ಕೆ ಸಂಬಂಧಿಸಿದಂತೆ ಈತ ರಚಿಸಿರುವ ಕೃತಿಗಳಿವು: ದಿ ಆರ್ಗನೈಸೇಷನ್ ಆಫ್ ನಾಲೆಜ್ ಅಂಡ್ ಸಿಸ್ಟಂ ಆಫ್ ಸೈನ್ಸಸ್ (1929) ಮತ್ತು ದಿ ಆರ್ಗನೈಸೇಷನ್ ಆಫ್ ನಾಲೆಜ್ ಇನ್ ಲೈಬ್ರರೀಸ್ ಅಂಡ್ ಸಬ್‌ಜೆಕ್ಟ್ ಅಪ್ರೋಚ್ ಟು ಬುಕ್ಸ್ (1952) .

**6. ಬರ್ವಿಕ್ ಸೇಯರ್ಸ್, ಡಬ್ಲ್ಯೂ. ಸಿ. :** 1881–1960. ಇಂಗ್ಲೆಂಡ್‌ನ ಗ್ರಂಥಾಲಯ ಚಳವಳಿಯ ನೇತಾರ. ಗ್ರಂಥಾಲಯ ವಿಜ್ಞಾನ ಪ್ರಸಾರಕ್ಕಾಗಿ ವಿಶೇಷವಾಗಿ ಶ್ರಮಿಸಿದವ. ಈತನನ್ನು ಗ್ರಂಥಾಲಯ ವಿಜ್ಞಾನದ ಪಾಣಿನಿ ಎಂದು ಎಸ್.ಆರ್.ರಂಗನಾಥನ್ ಕರೆದಿದ್ದಾರೆ. ಚಿಕ್ಕಂದಿನಿಂದಲೂ ಪುಸ್ತಕ ಪ್ರೇಮಿಯಾಗಿದ್ದ ಈತ ಗ್ರಂಥಾಲಯ ವಿಜ್ಞಾನದತ್ತ ತಿರುಗಿದ್ದು ಆಕಸ್ಮಿಕವಾಗಿ. ಈ ಶಾಸ್ತ್ರಕ್ಕೆ ಸಂಬಂಧಿಸಿದ ಯಾವ ಪದವಿಯನ್ನೂ ಈತ ಪಡೆದಿರಲಿಲ್ಲ ವಾದರೂ ಜೀವನೋಪಾಯಕ್ಕಾಗಿ ಬೌರ್ನ್‌ಮತ್ ಗ್ರಂಥಪಾಲನಾದ (1900). ಅನಂತರ ಕ್ರಾಯ್‌ಡನ್ ನಗರದ ಸಾರ್ವಜನಿಕ ಗ್ರಂಥಾಲಯದ ಸಹಗ್ರಂಥಪಾಲನ ಸ್ಥಾನ ಈತನಿಗೆ ಅನಿರೀಕ್ಷಿತವಾಗಿ ದೊರೆಯಿತು (1904). ಕ್ರಮೇಣ ಗ್ರಂಥಾಲಯ ವಿಜ್ಞಾನದಲ್ಲಿ ಡಿಪ್ಲೊಮ ಪಡೆದು ಕ್ರಾಯ್‌ಡನ್ ನಗರಗ್ರಂಥಾಲಯದ ಪ್ರಧಾನ ಗ್ರಂಥಪಾಲನಾಗಿ ನೇಮಕಗೊಂಡು (1915) 1947ರ ವರೆಗೂ ಸೇವೆಸಲ್ಲಿಸಿ ಅನಂತರ ನಿವೃತ್ತನಾದ.

ಇಂಗ್ಲೆಂಡ್ ಗ್ರಂಥಾಲಯ ಸಂಘದ ಸದಸ್ಯನಾಗಿ, ಅಧ್ಯಕ್ಷನಾಗಿ ಮತ್ತು ಅದರ ಫೆಲೋ ಆಗಿ ಈತ ಸಲ್ಲಿಸಿದ ಸೇವೆ ಸ್ಮರಣೀಯ. ಇಂಗ್ಲೆಂಡ್‌ನ ರಾಷ್ಟ್ರೀಯ ಕೇಂದ್ರ ಗ್ರಂಥಾಲಯದ ಸ್ಥಾಪನೆಗಾಗಿ ಈತ ವಿಶೇಷವಾಗಿ ಶ್ರಮಿಸಿದ.

ಗ್ರಂಥಾಲಯ ವಿಜ್ಞಾನವನ್ನು ಕುರಿತು ಈತ ಬರೆದಿರುವ ಪ್ರಮುಖ ಕೃತಿಗಳಿವು: ಗ್ರಂಥಾಲಯ ವರ್ಗೀಕರಣ ಶಾಸ್ತ್ರ ಪರಿಚಯ; ಗ್ರಂಥಾಲಯ ವರ್ಗೀಕರಣ ಶಾಸ್ತ್ರದ ಕೈಪಿಡಿ ಹಾಗೂ ಮಕ್ಕಳ ಗ್ರಂಥಾಲಯ ಕೈಪಿಡಿ.

ಇಷ್ಟೇ ಅಲ್ಲದೆ ಈತ ಕ್ರಾಯ್‌ಡನ್ನಿನ ಇತಿಹಾಸ ಮತ್ತು ಸ್ಯಾಮ್ಯುಯೆಲ್ ಕೋಲ್‌ರಿಜ್ – ಟೇಲರನ ಗೇಯತೆಯನ್ನು ಕುರಿತೂ ಬರೆದಿದ್ದಾನೆ. (ಎಸ್.ಆರ್.ಜಿಯು.)


**7. ಅಸದುಲ್ಲ, ಕಲೀಫ್ ಮಹಮ್ಮದ್ :** 1890–1949. ಭಾರತದ ಗ್ರಂಥಾಲಯ ಚಳವಳಿಯ ನೇತಾರನೆನಿಸಿದ ಕೆಲವೇ ಪ್ರಮುಖ ಗ್ರಂಥಪಾಲರಲ್ಲಿ ಒಬ್ಬರು. ಮೆಲ್‌ವಿಲ್ ಡ್ಯೂಯಿಯ ಶಿಷ್ಯನಾದ ಡಾನ್ ಡಿಕಿನ್‌ಸನ್ ಲಾಹೋರಿನ ಪಂಜಾಬ್ ವಿಶ್ವವಿದ್ಯಾಲಯದ ಆಶ್ರಯದಲ್ಲಿ ಮೊಟ್ಟಮೊದಲು ಗ್ರಂಥಪಾಲರ ತರಬೇತಿ ತರಗತಿಯನ್ನು ತೆರೆದಾಗ (1915) ಅಸದುಲ್ಲ ವಿದ್ಯಾರ್ಥಿಯಾಗಿ ಸೇರಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದರು. ಬ್ರಿಟಿಷ್



ಗ್ರಂಥಾಲಯ ಸಂಘದ ಗ್ರಂಥಾಲಯ ವಿಜ್ಞಾನದ ಡಿಪ್ಲೊಮ ಪದವಿ ಪಡೆದ ಪ್ರಥಮ ಭಾರತೀಯರಿವರು. ಜೊತೆಗೆ ಇವರಿಗೆ ಆ ಸಂಘದ ಸದಸ್ಯತ್ವವೂ (ಫೆಲೊಷಿಪ್) ಲಭಿಸಿತು. ಗ್ರಂಥಾಲಯ ಕ್ಷೇತ್ರದಲ್ಲಿ ಅಸದುಲ್ಲ ವಿವಿಧ ಹುದ್ದೆಗಳನ್ನು ವಹಿಸಿ ಉತ್ತಮ ಕೃಷಿ ಮಾಡಿದ್ದಾರೆ. ಲಾಹೋರಿನ ಸರ್ಕಾರಿ ಕಾಲೇಜು, ಅಲೀಗಡ ಮುಸ್ಲಿಮ್ ವಿಶ್ವವಿದ್ಯಾಲಯ, ದೆಹಲಿಯ ಸೆಕ್ರೆಟೇರಿಯಟ್ ಗ್ರಂಥಾಲಯ, ಕೋಲ್ಕತದ ರಾಷ್ಟ್ರೀಯ ಗ್ರಂಥಾಲಯ – ಇವುಗಳಲ್ಲಿ ಇವರು ಗ್ರಂಥಪಾಲರಾಗಿ ಸೇವೆ ಸಲ್ಲಿಸಿದ್ದಾರೆ. 20ನೆಯ ಶತಮಾನದ ಪ್ರಾರಂಭ ವರ್ಷಗಳಲ್ಲಿ ಗ್ರಂಥಪಾಲರ ತರಬೇತಿ ಮತ್ತು ಹೊಸ ಗ್ರಂಥಾಲಯಗಳ ಬೆಳವಣಿಗೆಗಾಗಿ ಇವರು ಬಹಳ ಕೆಲಸ ಮಾಡಿದ್ದಾರೆ. ರಾಷ್ಟ್ರೀಯ ಗ್ರಂಥಾಲಯದಲ್ಲಿರುವ ಗ್ರಂಥಪಾಲರ ತರಬೇತಿ ವರ್ಗವನ್ನು ಪ್ರಾರಂಭಿಸಿದರಲ್ಲದೆ ಭಾರತೀಯ ಗ್ರಂಥಾಲಯ ಸಂಘದ ಸ್ಥಾಪಕರಲ್ಲೊಬ್ಬರಾಗಿಯೂ 13 ವರ್ಷ ಅದರ ಗೌರವ ಕಾರ್ಯದರ್ಶಿಯಾಗಿಯೂ ಕೆಲಸಮಾಡಿದ್ದಾರೆ. ಭಾರತೀಯ ಗ್ರಂಥಾಲಯ ಸಂಘದ ಸಮ್ಮೇಳನವನ್ನು ಕೋಲ್ಕತದಲ್ಲಿ ಜರುಗಿಸಿದ (1933) ಕೀರ್ತಿ ಇವರಿಗೆ ಸಲ್ಲುತ್ತದೆ. ಸಂಘದ ಜೀವಾಳವಾಗಿದ್ದ ಇವರ ಸೇವೆಯ ಸಾರ್ಥಕ್ಯದ ಸ್ಮರಣೆಗಾಗಿ 1935 ರಲ್ಲಿ ಇವರಿಗೆ ಖಾನ್‌ಬಹಾದೂರ್ ಎಂಬ ಬಿರುದನ್ನಿತ್ತು ಗೌರವಿಸಲಾಯಿತು. (ಎಸ್.ಆರ್.ಜಿ ಯು.)

**8. ರಂಗನಾಥನ್, ಎಸ್. ಆರ್. :** 1892–1972. ಭಾರತದ ಶ್ರೇಷ್ಠ ಗ್ರಂಥಪಾಲರು. ಭಾರತದಲ್ಲಿ ಗ್ರಂಥಾಲಯವ್ಯವಸ್ಥೆಯನ್ನು ವೈಜ್ಞಾನಿಕವಾಗಿ ಓರಣಗೊಳಿಸಿದ ಮೇಧಾವಿ. ಪೂರ್ಣ ಹೆಸರು ಶಿಯಾಳಿ ರಾಮಾಮೃತ ರಂಗನಾಥನ್. ಜನನ ತಮಿಳುನಾಡಿನ ಶಿಯಾಳಿ ಎಂಬ ಊರಿನಲ್ಲಿ. ಒಂದು ಸಾಮಾನ್ಯ ಬಡ ಕುಟುಂಬಕ್ಕೆ ಸೇರಿದವರು. ತಂದೆ, ಎನ್. ರಾಮಾಮೃತ ರಂಗನಾಥನ್. ತಾಯಿ, ಸೀತಾಲಕ್ಷ್ಮಿ. ಶಿಯಾಳಿಯಲ್ಲೇ ಮ್ಯಾಟ್ರಿಕ್ ವರೆಗಿನ ವಿದ್ಯಾಭ್ಯಾಸವಾಯಿತು (1908). ಅನಂತರ ಮದ್ರಾಸಿನ ಕ್ರಿಶ್ಚನ್ ಕಾಲೇಜನ್ನು ಸೇರಿದರು. ಗಣಿತಶಾಸ್ತ್ರದಲ್ಲಿ ಇವರಿಗೆ ಅಪಾರ ಆಸಕ್ತಿ ಇತ್ತು. ವಿವಾಹವಾದದ್ದು 1907 ರಲ್ಲಿ. ಆಗಿನ್ನೂ ಇವರು ಪದವೀಧರರಾಗಿರಲಿಲ್ಲ. 1928 ರಲ್ಲಿ ಹೆಂಡತಿ ತೀರಿಕೊಂಡಳಾಗಿ 1929 ರಲ್ಲಿ ಮತ್ತೆ ಮದುವೆಯಾದರು. ವ್ಯಾಸಂಗವನ್ನು ಮುಂದುವರಿಸಿ 1913 ರಲ್ಲಿ ಬಿ.ಎ. ಪದವಿಯನ್ನು ಗಳಿಸಿ ಬಳಿಕ ಗಣಿತಶಾಸ್ತ್ರವನ್ನು ಐಚ್ಛಿಕ ವಿಷಯವನ್ನಾಗಿ ಆಯ್ದುಕೊಂಡು ಅದರಲ್ಲೆ ಎಂ.ಎ. ಪದವಿಯನ್ನೂ ಪಡೆದರು. ಇವರ ಪ್ರತಿಭೆ ಮತ್ತು ಪಾಂಡಿತ್ಯವನ್ನು ಮೆಚ್ಚಿದ ಕ್ರಿಶ್ಚನ್ ಕಾಲೇಜಿನ ಪ್ರಾಧ್ಯಾಪಕರಾಗಿದ್ದ ಎಡ್ವರ್ಡ್ ಬಿ. ರಾಸ್ ಇವರಿಗೆ ವ್ಯಾಸಂಗಕಾಲದಲ್ಲಿ ಅಪಾರ ಸಹಾಯ ಮಾಡಿದರು. ರಂಗನಾಥನ್ ತಮಗೆ ರಾಸ್ ಅವರಲ್ಲಿದ್ದ ವಿಶ್ವಾಸ,

ಕೃತಜ್ಞತೆಗಳ ಪ್ರತೀಕವಾಗಿ ಆ ಕಾಲೇಜಿನಲ್ಲಿ ಅವರ ಹೆಸರಿನಲ್ಲಿ ಗಣಿತ ವಿಭಾಗದಲ್ಲಿ ಒಂದು ದತ್ತಿಯನ್ನು ಸ್ಥಾಪಿಸಿದರು (1925). ಮಂಗಳೂರಿನ ಸರ್ಕಾರಿ ಕಾಲೇಜಿನಲ್ಲಿ (1917–19) ಮತ್ತು ಕೊಯಮತ್ತೂರಿನ ಸರ್ಕಾರಿ ಕಾಲೇಜಿನಲ್ಲಿ (1921 – 23) ರಂಗನಾಥನ್ ಗಣಿತಶಾಸ್ತ್ರ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು. ಮದ್ರಾಸ್ ವಿಶ್ವವಿದ್ಯಾಲಯದ ಗ್ರಂಥಪಾಲನ ಹುದ್ದೆಗೆ ಕರೆಬಂದಾಗ (1924) ಆ ಕೆಲಸವನ್ನು ಬಹಳ ಆಸ್ಥೆಯಿಂದ ವಹಿಸಿಕೊಂಡರು. ಗ್ರಂಥಾಲಯ ವಿಜ್ಞಾನದಲ್ಲಿ ಹೆಚ್ಚಿನ ತರಬೇತಿಗಾಗಿ ವಿಶ್ವವಿದ್ಯಾಲಯು ಇವರನ್ನು ಲಂಡನ್ನಿನ ಮ್ಯೂಸಿಯಂಗೆ ಕಳುಹಿಸಿಕೊಟ್ಟಿತು. ಅಲ್ಲಿ ಲಂಡನ್ ವಿಶ್ವವಿದ್ಯಾಲಯದ ಗ್ರಂಥಪಾಲ ಮತ್ತು ಡಬ್ಲ್ಯೂ. ಸಿ. ಬರ್‌ವಿಕ್ ಸೇಯರ್ಸ್ ಮುಂತಾದ ಶ್ರೇಷ್ಠ ವ್ಯಕ್ತಿಗಳ ಸಂಪರ್ಕ ರಂಗನಾಥನ್ ಅವರಿಗೆ ಆಯಿತು. ವರಿಷ್ಠ ವ್ಯಕ್ತಿಗಳ ಪರಿಚಯದಿಂದಾಗಿ ಗ್ರಂಥಾಲಯ ವಿಜ್ಞಾನದಲ್ಲಿ ಅದರಲ್ಲೂ ಗ್ರಂಥಗಳ ವರ್ಗೀಕರಣದಲ್ಲಿ ವಿಶೇಷ ಪರಿಶ್ರಮ ಲಭಿಸಿತು. ಗ್ರಂಥಗಳ ದಾಶಮಿಕ ವರ್ಗೀಕರಣ ಕ್ರಮದಲ್ಲಿ ಕಂಡುಬಂದ ಲೋಪದೋಷಗಳನ್ನೂ ಅರೆಕೊರೆಗಳನ್ನೂ ಇವರು ತೋರಿಸಿಕೊಟ್ಟರಲ್ಲದೇ ಅವುಗಳ ನಿವಾರಣೆಗಾಗಿ ಬೇರೊಂದು ವರ್ಗೀಕರಣ ಪದ್ಧತಿಯನ್ನು (ದ್ವಿಬಿಂದು ವರ್ಗೀಕರಣ – ಕೋಲನ್ ಕ್ಲಾಸಿಫಿಕೇಷನ್) ಅನುಷ್ಠಾನಕ್ಕೆ ತಂದರು. 1925 ರಲ್ಲಿ ಲಂಡನ್ ವಿಶ್ವವಿದ್ಯಾಲಯದ ಗ್ರಂಥಾಲಯ ವಿಜ್ಞಾನ ಶಾಲೆ ಇವರಿಗೆ ಪ್ರಶಸ್ತಿಪತ್ರ ನೀಡಿ ಗೌರವಿಸಿತು. ಅದೇ ವರ್ಷ ರಂಗನಾಥನ್ ಭಾರತಕ್ಕೆ ಹಿಂತಿರುಗಿದರು. ಲಂಡನ್ನಿನಲ್ಲಿ ಗಳಿಸಿಕೊಂಡ ವಿಶಿಷ್ಟ ಅನುಭವಗಳಿಂದ ಮದ್ರಾಸು ವಿಶ್ವವಿದ್ಯಾಲಯದ ಗ್ರಂಥಾಲಯವನ್ನು ರಂಗನಾಥನ್ ತುಂಬ ಓರಣವಾಗಿಸಿದರು. ಮುಕ್ತದ್ವಾರ (ಓಪನ್ ಆಕ್ಸೆಸ್) ಪದ್ಧತಿಯನ್ನು ಜಾರಿಗೆ ತಂದರು. ಅಲ್ಲಿನ ಆಗಿನ ಸುಮಾರು 60,000 ಗ್ರಂಥಗಳ ವೈಜ್ಞಾನಿಕ ವರ್ಗೀಕರಣ ಇವರ ಹೊಸ ಕ್ರಮದಂತೆ (ಕೋಲನ್ ಪದ್ಧತಿ) ಇವರ ನೇತೃತ್ವದಲ್ಲೇ ನಡೆಯಿತು. ಗ್ರಂಥಗಳ ಸುವ್ಯವಸ್ಥಿತ ಸೂಚಿಯನ್ನು ಇವರು ತಯಾರಿಸಿದರು. ಇವರ ವರ್ಗೀಕರಣ ಪದ್ಧತಿಯ ವಿವರಗಳು ಪುಸ್ತಕಗಳ ರೂಪದಲ್ಲಿ ಪ್ರಕಟವಾದ್ದು 1933 ರಲ್ಲಿ. ಅಲ್ಲಿಂದೀಚೆಗೆ ಈ ಪುಸ್ತಕದ ಪರಿಷ್ಕೃತ ಆವೃತ್ತಿ ಪ್ರಕಟವಾದುದು 1961 ರಲ್ಲಿ. ಗ್ರಂಥವರ್ಗೀಕರಣಕ್ಕೆ ಸಂಬಂಧಿಸಿದಂತೆ ಅಂಕನ ಪದ್ಧತಿಯನ್ನು (ನೊಟೇಷನ್ ಸಿಸ್ಟಮ್) ಬಳಸುವಲ್ಲಿ ಇವರ ವರ್ಗೀಕರಣ ಸಹಕಾರಿಯಾಯಿತು. ಇವರ ವಿಧಾನವನ್ನು ಅಳವಡಿಸಿಕೊಂಡ ಹಲವಾರು ಸಂಶೋಧನ ಗ್ರಂಥಾಲಯಗಳಲ್ಲಿ ಬ್ರಿಟಿಷ್ ನ್ಯಾಷನಲ್ ಬಯೋಗ್ರಫಿ ಸಂಸ್ಥೆಯೂ ಒಂದು. ಇದು ಅನುಸರಿಸಿದ್ದು ಈ ವಿಧಾನದ ಸರಪಳಿ ಕ್ರಮವನ್ನು (ಚೇನ್ ಪ್ರೊಸೀಜರ್). ರಂಗನಾಥನ್ 1934 ರಲ್ಲಿ ತಮ್ಮ ವರ್ಗೀಕೃತ ಸೂಚೀಸಂಹಿತೆಯನ್ನು ಪ್ರಕಟಿಸಿದರು.



ಗ್ರಂಥಪಾಲರಿಗೆ ಸುವ್ಯವಸ್ಥಿತ ತರಬೇತಿಯನ್ನೂ ಮಾರ್ಗದರ್ಶನವನ್ನೂ ನೀಡುವುದರಲ್ಲಿ ರಂಗನಾಥನ್ ಹೆಚ್ಚಿನ ಶ್ರಮವಹಿಸಿದರು. ಮದ್ರಾಸ್ ಗ್ರಂಥಾಲಯ ಸಂಘದ ಆಶ್ರಯದಲ್ಲಿ ಗ್ರಂಥಾಲಯ ತರಬೇತಿ ತರಗತಿಯನ್ನು ತೆರೆದರು (1929). ಮುಂದೆ ಈ ವಿಭಾಗ ಮದ್ರಾಸ್ ವಿಶ್ವವಿದ್ಯಾಲಯದೊಂದಿಗೆ ಸೇರ್ಪಡೆಗೊಂಡಿತು (1931). ರಂಗನಾಥನ್ 1944 ರ ವರೆಗೆ ಮದ್ರಾಸ್ ವಿಶ್ವವಿದ್ಯಾಲಯದ ಗ್ರಂಥಪಾಲರಾಗಿಯೂ ಪ್ರೆಸಿಡೆನ್ಸಿ ಕಾಲೇಜಿನ ಗ್ರಂಥಾಲಯ ವಿಭಾಗದ ಮುಖ್ಯಸ್ಥರಾಗಿಯೂ ಸೇವೆ ಸಲ್ಲಿಸಿದರು. ಅನಂತರ ಭಾರತದ ಪ್ರಥಮ ಶ್ರೇಷ್ಠ ನ್ಯಾಯಾಧೀಶರಾಗಿದ್ದ ಮಾರಿಸ್ ಗ್ವಯರ್ ಅವರ ಆಹ್ವಾನದ ಮೇರೆಗೆ ಇವರು ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಗ್ರಂಥಪಾಲಕರಾಗಿಯೂ ಗ್ರಂಥಾಲಯ ವಿಜ್ಞಾನ ಮುಖ್ಯಸ್ಥರಾಗಿಯೂ ಕೆಲಸಮಾಡಿದರು. (1945–47). ಆಮೇಲೆ ಇವರ ಸೇವೆ ಕ್ರಮವಾಗಿ ದಿಲ್ಲಿ ವಿಶ್ವವಿದ್ಯಾಲಯ (1947–55), ವಿಕ್ರಮ ವಿಶ್ವವಿದ್ಯಾಲಯಗಳಿಗೆ (1957–59) ಲಭಿಸಿತು. ಸೇವೆಯಿಂದ ನಿವೃತ್ತಿಹೊಂದಿದ ಬಳಿಕವೂ ಬೆಂಗಳೂರಿನಲ್ಲಿದ್ದ ಪ್ರಲೇಖನ ಸಂಶೋಧನ ಮತ್ತು ತರಬೇತಿ ಕೇಂದ್ರದ ಮುಖ್ಯಸ್ಥರಾಗಿ ಇವರು ಕೆಲಸ ಮಾಡಿದರು. ಪಿಟ್ಸ್‌ಬರ್ಗ್ ವಿಶ್ವವಿದ್ಯಾಲಯದಿಂದ ಕರೆ ಬರಲಾಗಿ (1964) ಅಲ್ಲಿಗೆ ಹೋಗಿ ಅಲ್ಲಿನ ಗ್ರಂಥಾಲಯದಲ್ಲಿ ಮತ್ತು ಸಮಾಚಾರ ವಿಜ್ಞಾನಗಳ ಶಾಲೆಯಲ್ಲಿ ವೀಕ್ಷಕ (ವಿಸಿಟಿಂಗ್) ಪ್ರಾಧ್ಯಾಪಕರಾಗಿ ಕೆಲಕಾಲ ಇದ್ದರು. ಅದೇ ವರ್ಷದಲ್ಲಿ ರಜರ್ಸ್ ವಿಶ್ವವಿದ್ಯಾಲಯದ ಒಂದು ಸಮ್ಮೇಳನದಲ್ಲಿ ಇವರು ಭಾಗವಹಿಸಿ ತಮ್ಮ ನೂತನ ವರ್ಗೀಕರಣ ಪದ್ಧತಿಯ ಬಗ್ಗೆ ವಿವರ ನೀಡಿದರು. ಇದರ ಪರಿಣಾಮವಾಗಿ ಡಿಸ್ಕ್ರಿಪ್ಟಿವ್ ಅಕೌಂಟ್ ಆಫ್ ಕೋಲನ್ ಕ್ಲಾಸಿಫಿಕೇಷನ್ ಎಂಬ ಗ್ರಂಥದ ಬಿಡುಗಡೆ (1967) ಸಾಧ್ಯವಾಯಿತು.

ಇವರ ತಾತ್ತ್ವಿಕ ಚಿಂತನೆ ಬಹುಮುಖವಾಗಿ ಹರಿದಿತ್ತು. ಸುಮಾರು 2,500 ಲೇಖನಗಳನ್ನೂ 60 ಗ್ರಂಥಗಳನ್ನೂ ಇವರು ಪ್ರಕಟಿಸಿದರು. ಇವರ ಪ್ರಕಟನೆಗಳಲ್ಲಿ ಮುಖ್ಯವಾಗಿ ಫೈವ್ ಲಾಸ್ ಆಫ್ ಲೈಬ್ರರಿ ಸೈನ್ಸ್ (1931), ಲೈಬ್ರರಿ ಅಡ್ಮಿನಿಸ್ಟ್ರೇಷನ್ (1935) ಪ್ರೋಲೆಗಾಮಿನ ಟು ಲೈಬ್ರರಿ ಕ್ಲಾಸಿಫಿಕೇಷನ್ (1933), ಥಿಯರಿ ಆಫ್ ಲೈಬ್ರರಿ ಕ್ಯಾಟಲಾಗ್ (1938). ರೆಫರೆನ್ಸ್ ಸರ್ವಿಸ್ (1940), ಕ್ಲಾಸಿಫಿಕೇಶನ್ ಅಂಡ್ ಇಂಟರ್‌ನ್ಯಾಷನಲ್ ಡಾಕ್ಯುಮೆಂಟೇಷನ್ (1948), ಲೈಬ್ರರಿ ಡೆವಲಪ್‌ಮೆಂಟ್ ಪ್ಲಾನ್ ಫಾರ್ ಇಂಡಿಯ (1950) ಕ್ಲಾಸಿಫಿಕೇಷನ್ ಅಂಡ್ ಕಮ್ಯೂನಿಕೇಷನ್ (1951) ಲೈಬ್ರರಿ ಲೆಜಿಸ್ಲೇಷನ್ (1953) ಎಲಿಮೆಂಟ್ಸ್ ಆಫ್ ಲೈಬ್ರರಿ ಕ್ಲಾಸಿಫಿಕೇಷನ್ (1962), ಹೆಡಿಂಗ್ಸ್ ಅಂಡ್ ಕ್ಯಾನನ್ಸ್ (1955), ಸೋಷಿಯಲ್ ಸೈನ್ಸ್ ರಿಸರ್ಚ್ ಅಂಡ್ ಲೈಬ್ರರೀಸ್ (1962) – ಮುಂತಾದವು ಸೇರಿವೆ.

ರಂಗನಾಥನ್ ಅನೇಕ ನಿಯತಕಾಲಿಕೆಗಳ ಸಂಪಾದಕರಾಗಿಯೂ ಅನೇಕ ಗ್ರಂಥಾಲಯ ಸಂಘ–ಸಂಸ್ಥೆಗಳ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದುಂಟು. ಇವರ ಸಂಪಾದಕತ್ವ ಪಡೆದ ಕಾಲಿಕೆಗಳಲ್ಲಿ ಆನಲ್ಸ್ ಆಫ್ ಲೈಬ್ರರಿ ಸೈನ್ಸ್ (1956– 1963), ಅಬ್ಗಿಲ (1949–1953), ಲೈಬ್ರರಿ ಸೈನ್ಸ್ ವಿತ್ ಎ ಸ್ಲ್ಯಾಂಟ್ ಟು ಡಾಕ್ಯುಮೆಂಟೇಷನ್ (1964–1972) – ಇವನ್ನು ಹೆಸರಿಸಬಹುದು. ಪ್ರಾದೇಶಿಕ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಗ್ರಂಥಾಲಯ ಸಂಘ–ಸಂಸ್ಥೆಗಳಲ್ಲಿ ಇವರ ಸೇವೆ ಹೀಗಿದೆ; 1928 ರಲ್ಲಿ ಸ್ಥಾಪನೆಗೊಂಡ ಮದ್ರಾಸಿನ ಗ್ರಂಥಾಲಯ ಸಂಘದ ಕಾರ್ಯದರ್ಶಿಯಾಗಿ, ಉಪಾಧ್ಯಕ್ಷ ಹಾಗೂ ಅಧ್ಯಕ್ಷರಾಗಿ 30 ಕ್ಕೂ ಹೆಚ್ಚು ವರ್ಷಗಳು ಇವರು ಕೆಲಸ ಮಾಡಿದ್ದಾರೆ. ಇಂಡಿಯನ್ ಲೈಬ್ರರಿ ಅಸೋಸಿಯೇಷನ್ನಿನ ಅಧ್ಯಕ್ಷರಾಗಿ (1954–1963), ಇಂಡಿಯನ್ ಸ್ಟ್ಯಾಂಡರ್ಡ್ ಇನ್‌ಸ್ಟಿಟ್ಯೂಟ್‌ನ ಅನೇಕ ಉಪಸಮಿತಿಗಳ ಅಧ್ಯಕ್ಷರಾಗಿ, ವಿಶ್ವವಿದ್ಯಾಲಯ ಧನ ಆಯೋಗದ ಗ್ರಂಥಾಲಯ ಸಮಿತಿಯ ಅಧ್ಯಕ್ಷರಾಗಿ, ಭಾರತೀಯ ವೈಜ್ಞಾನಿಕ ಪ್ರಲೇಖನ ಸಂಸ್ಥೆಯ ತಾಂತ್ರಿಕ ಅಧ್ಯಕ್ಷರಾಗಿ ಆ ಸಂಸ್ಥೆಯ ಸಲಹಾ ಸಮಿತಿಯ ಸದಸ್ಯರಾಗಿ, ಇಂಪೀರಿಯಲ್ ಗ್ರಂಥಾಲಯ ಸಮಿತಿಯ ಸದಸ್ಯರಾಗಿ (1948–1950) ಇವರು ಹೆಚ್ಚಿನ ಸೇವೆ ಮಾಡಿದ್ದಾರೆ. ಅನೇಕ ರಾಜ್ಯ ಸರ್ಕಾರಗಳಿಗೆ ಗ್ರಂಥಾಲಯ ಮಸೂದೆಗಳನ್ನು ತಯಾರಿಸಿಕೊಟ್ಟಿದ್ದಾರೆ. ಯುನೆಸ್ಕೊದೊಂದಿಗಿನ ಭಾರತದ ರಾಷ್ಟ್ರೀಯ ಸಹಕಾರ ಸಮಿತಿಯ ಸದಸ್ಯರಾಗಿಯೂ (1948–58) ಸಾರ್ವಜನಿಕ ಗ್ರಂಥಪಾಲರ ಯುನೆಸ್ಕೊ ಶಾಲೆಯ ಸದಸ್ಯರಾಗಿಯೂ (1948) ಯುನೆಸ್ಕೊದ ಅಂತರರಾಷ್ಟ್ರೀಯ ಗ್ರಂಥಸೂಚಿ ಸಮಿತಿಯ ಸದಸ್ಯರಾಗಿಯೂ (1950 –53) ಅಂತರರಾಷ್ಟ್ರೀಯ ಪ್ರಲೇಖನ ಸಂಯುಕ್ತ ಮಂಡಳದ ವರ್ಗೀಕರಣ ವಿಭಾಗದ ಪ್ರಧಾನ ವರದಿಗಾರರಾಗಿಯೂ ಆ ಮಂಡಳದ ಉಪಾಧ್ಯಕ್ಷರಾಗಿಯೂ (1955–56 ಮತ್ತು 1958–61) ಇವರು ಕೆಲಸ ಮಾಡಿದ್ದಾರೆ. 1957 ರಲ್ಲಿ ಇಂಗ್ಲೆಂಡಿನ ಡೋರ್ಕಿಂಗ್‌ನಲ್ಲಿ ಜರುಗಿದ ಅಂತರರಾಷ್ಟ್ರೀಯ ವರ್ಗೀಕರಣ ಸಮ್ಮೇಳನಕ್ಕೆ ಇವರು ಅಧ್ಯಕ್ಷರಾಗಿದ್ದರು.


ರಂಗನಾಥನ್ ಅವರ ಜೀವನ ಬಹು ಸರಳತೆಯಿಂದಲೂ ಮಿತವ್ಯಯದಿಂದಲೂ ಕೂಡಿತ್ತು. ತಾವು ದುಡಿಮೆಯಿಂದ ಸಂಪಾದಿಸಿ ಉಳಿಸಿದ ಹಣವನ್ನು ಇವರು ತಮ್ಮ ಎರಡನೆಯ ಪತ್ನಿಯ ಗೌರವಾರ್ಥ ಗ್ರಂಥಾಲಯ ವಿಜ್ಞಾನಕ್ಕೆ ಮೀಸಲಾದ ಶಾರದಾ–ರಂಗನಾಥನ್ ದತ್ತಿಯನ್ನು ಸ್ಥಾಪಿಸಲು (1962) ಮದ್ರಾಸ್ ವಿಶ್ವವಿದ್ಯಾಲಯಕ್ಕೆ ನೀಡಿದರು. ದತ್ತಿಯ ಹಣದಿಂದ ಗ್ರಂಥಾಲಯ ವಿಜ್ಞಾನಕ್ಕೆ ಸಂಬಂಧಿಸಿದಂತೆ ಉದ್ದಾಮ ಪಂಡಿತರಿಂದ ವಿಶೇಷೋಪನ್ಯಾಸಗಳು ಅಲ್ಲಿ ಜರುಗುತ್ತವಲ್ಲದೆ ಅದನ್ನು ಗ್ರಂಥರೂಪದಲ್ಲಿ ಪ್ರಕಟಿಸಲಾಗುತ್ತಿದೆ.

ರಂಗನಾಥನ್ ಅವರಿಗೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಶಸ್ತಿ ಗೌರವಗಳು ಲಭಿಸಿವೆ. ದೆಹಲಿ ವಿಶ್ವವಿದ್ಯಾಲಯ 1964ರಲ್ಲೂ ಪಿಟ್ಸ್‌ಬರ್ಗ್ ವಿಶ್ವವಿದ್ಯಾಲಯ 1964ರಲ್ಲೂ ಇವರಿಗೆ ಡಿ.ಲಿಟ್ ಪದವಿಯನ್ನಿತ್ತು ಗೌರವಿಸಿದೆ. 1935ರಲ್ಲಿ ಇವರಿಗೆ ಅಂದಿನ ಭಾರತ ಸರ್ಕಾರ ರಾವ್‌ಸಾಹೇಬ ಎಂಬ ಬಿರುದನ್ನಿತ್ತುದಲ್ಲದೆ 1952ರಲ್ಲಿ ಪದ್ಮಶ್ರೀ ಪ್ರಶಸ್ತಿಯನ್ನೂ ನೀಡಿತು. ಅಮೆರಿಕದ ಮಾರ್ಗರೇಟ್ ಮಾನ್ ಪಾರಿತೋಷಕವನ್ನು ಪಡೆದ (1970) ಪ್ರಥಮ ಭಾರತೀಯರಿವರು. ಅಮೆರಿಕದ ಮಾರ್ಕ್‌ಟ್ವೇನ್ ಸೊಸೈಟಿ ಇವರಿಗೆ ಗ್ರ್ಯಾಂಡ್ ನೈಟ್ ಆಫ್ ದಿ ಪೀಸ್ ಎಂಬ ಗೌರವ ಪ್ರಶಸ್ತಿಯನ್ನಿತ್ತು ಗೌರವಿಸಿತು.

(ಎಸ್.ಆರ್.ಜಿಯು.; ಟಿ.ಎಲ್.ಬಿ.)

**9. ಮಾರ್ಷಲ್ ಡಿ. ಎನ್. :** 1906– . ಆಧುನಿಕ ಭಾರತದ ಪ್ರಮುಖ ಗ್ರಂಥಾಲಯ ವಿಜ್ಞಾನಿಗಳಲ್ಲೊಬ್ಬರು. 25 ಏಪ್ರಿಲ್ 1906 ರಂದು ಹುಟ್ಟಿದರು. ಬಾಲ್ಯದಿಂದಲೇ ಪ್ರತಿಭಾವಂತ ವಿದ್ಯಾರ್ಥಿಯೆನಿಸಿಕೊಂಡಿದ್ದು ಮುಂಬಯಿ ವಿಶ್ವವಿದ್ಯಾಲಯದ ಬಿ.ಎ. ಪರೀಕ್ಷೆಯಲ್ಲಿ ಪ್ರಥಮ ವರ್ಗದಲ್ಲೂ (1927) ಎಂ.ಎ. ಪರೀಕ್ಷೆಯಲ್ಲಿ ಪ್ರಥಮ ವರ್ಗದಲ್ಲಿ ಪ್ರಥಮರಾಗಿಯೂ (1930) ತೇರ್ಗಡೆ ಯಾದರು. ಆಗಿನ ಮುಂಬಯಿ ಪ್ರಾಂತ್ಯದಿಂದ ಐ.ಸಿ.ಎಸ್. ಪರೀಕ್ಷೆಗೆ

ಕಟ್ಟಿ ಮುಂಬಯಿ ಪ್ರಾಂತ್ಯಕ್ಕೆ ಪ್ರಥಮಸ್ಥಾನ ಪಡೆದು ಅಪೂರ್ವ ಯಶಸ್ಸು ಗಳಿಸಿದರು. ರಾಜಕೀಯ ಕಾರಣಗಳಿಂದಾಗಿ ಐ.ಸಿ.ಎಸ್. ಸೇವೆಯನ್ನು ಸೇರುವುದು ಇವರಿಗೆ ಸಾಧ್ಯವಾಗಲಿಲ್ಲ. ಮುಂಬಯಿ ವಿಶ್ವವಿದ್ಯಾಲಯದಲ್ಲಿ ಸಹಾಯಕ ರಿಜಿಸ್ಟ್ರಾರ್, ಡೆಪ್ಯುಟಿ ರಿಜಿಸ್ಟ್ರಾರ್ ಹಾಗೂ ರಿಜಿಸ್ಟ್ರಾರ್ ಆಗಿ ಸೇವೆ ಸಲ್ಲಿಸಿದರು. ಬಳಿಕ ಇವರ ಒಲವು ಗ್ರಂಥಾಲಯ ಆಡಳಿತ ಹಾಗೂ ವಿಜ್ಞಾನದ ಪಾಠ ಹೇಳುವುದರ ಕಡೆಗೆ ತಿರುಗಿತು. ಅದೇ ವಿಶ್ವವಿದ್ಯಾಲಯದಲ್ಲಿ ಗ್ರಂಥಾಲಯ ವಿಜ್ಞಾನದ ಪರೀಕ್ಷೆಗೆ ಕಟ್ಟಿ ಅದರಲ್ಲೂ ಪ್ರಥಮ ವರ್ಗದಲ್ಲಿ ಪ್ರಥಮರಾಗಿ ತೇರ್ಗಡೆಯಾದರು. ಅನಂತರ ಮುಂಬಯಿ ವಿಶ್ವವಿದ್ಯಾಲಯದ ಗ್ರಂಥಪಾಲ ಮತ್ತು ಗ್ರಂಥಾಲಯ ವಿಜ್ಞಾನದ ಪ್ರಮುಖ ಪ್ರಾಧ್ಯಾಪಕರಾಗಿ ನೇಮಕಗೊಂಡು (1947) 1971 ರ ವರೆಗೂ ಸೇವೆ ಸಲ್ಲಿಸಿದರು. ಅಲ್ಲಿಯೇ ಗ್ರಂಥಾಲಯ ವಿಜ್ಞಾನದ ಗೌರವ ಪ್ರಾಧ್ಯಾಪಕರಾಗಿಯೂ ಕೆಲಸ ಮಾಡಿದರು.



ಮಾರ್ಷಲ್ ಪ್ರಸಿದ್ಧ ಸೂಚಿಕಾರರಲೊಬ್ಬರು. ಈ ಕ್ಷೇತ್ರದಲ್ಲಿ ಅವರಿತ್ತ ಎರಡು ಅತ್ಯಮೂಲ್ಯ ಕೊಡುಗೆಗಳಿವು : ಮೊಗಲ್ ಬಿಬ್ಲಿಯಾಗ್ರಫಿ ಸೆಲೆಕ್ಟ್ ಪರ್ಷಿಯನ್ ಸೋರ್ಸಸ್ ಫಾರ್ ದಿ ಸ್ಟಡಿ ಆಫ್ ಮೊಗಲ್ಸ್ ಇನ್ ಇಂಡಿಯ; ಮೊಗಲ್ಸ್ ಇನ್ ಇಂಡಿಯ: ಎ ಬಿಬ್ಲಿಯಾಗ್ರಫಿಕಲ್ ಸರ್ವೆ – ಇವು ಮೊಗಲರ ಆಳ್ವಿಕೆ ಕುರಿತ ಅಭ್ಯಾಸ ಹಾಗೂ ಸಂಶೋಧನೆಗೆ ತುಂಬ ಪ್ರಯೋಜನಕಾರಿಯಾಗಿವೆ.

1953ರಲ್ಲಿ ವಿಯೆನ್ನದಲ್ಲಿ ಜರುಗಿದ ಗ್ರಂಥಾಲಯ ಸಂಘಗಳ ಅಂತಾರಾಷ್ಟ್ರೀಯ ಸಂಯುಕ್ತ ಸಂಘಕ್ಕೆ ಇವರು ಭಾರತದ ಪ್ರತಿನಿಧಿಯಾಗಿದ್ದರು. ಇಷ್ಟರ ಸಹಕಾರದೊಂದಿಗೆ ರಚಿತವಾದ ಭಾರತದ ರಾಷ್ಟ್ರೀಯ ಸಂಘದ ಗ್ರಂಥಸೂಚಿ ಸಲಹಾ ಸಮಿತಿಯ ಸದಸ್ಯರಾಗಿದ್ದರು. ಭಾರತೀಯ ವಿಶಿಷ್ಟ ಗ್ರಂಥಾಲಯಗಳ ಹಾಗೂ ಸಮಾಚಾರ ವಿತರಣ ಕೇಂದ್ರಗಳ ಸಂಘದ ಉಪಾಧ್ಯಕ್ಷರಾಗಿದ್ದರು. ಪಾಟ್ನದಲ್ಲಿ ಸೇರಿದ 14ನೆಯ ಅಖಿಲ ಭಾರತ ಗ್ರಂಥಾಲಯ ಪರಿಷತ್ತಿನ ಅಧ್ಯಕ್ಷರಾಗಿದ್ದರು (1964). 1960ರಲ್ಲಿ ಮುಂಬಯಿಯಲ್ಲಿ ಸೇರಿದ 8ನೆಯ ಭಾರತೀಯ ವಿಶಿಷ್ಟ ಗ್ರಂಥಾಲಯಗಳ ಮಹಾ ಸಂಘದ ಅಧಿವೇಶನದ ಅಧ್ಯಕ್ಷರಾಗಿದ್ದರು. ಇದಲ್ಲದೆ ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಸಮೀಕ್ಷಾ ಸಮಿತಿಯ ಸದಸ್ಯರಾಗಿಯೂ ಇವರು ಸೇವೆಸಲ್ಲಿಸಿದ್ದಾರೆ.

ಇವರು ಅರ್ಥಶಾಸ್ತ್ರಕ್ಕೆ ಸಂಬಂಧಿಸಿದಂತೆ ಹಲವು ಲೇಖನಗಳನ್ನು ಬರೆದಿದ್ದಾರೆ.

(ಕೆ.ಎಸ್.ಡಿಇ.)

**10. ಕೇಶವನ್, ಬಿ.ಎಸ್. :** 1909–2000. ಭಾರತ ಗ್ರಂಥಾಲಯ ವಿಜ್ಞಾನಿಗಳಲ್ಲಿ ಒಬ್ಬರು. ಭಾರತದಲ್ಲಿ ಗ್ರಂಥಾಲಯೋದ್ಯಮವನ್ನು ಒಂದು ಉದಾತ್ತ ಉದ್ಯಮವನ್ನಾಗಿ ಪರಿವರ್ತಿಸುವಲ್ಲಿ ಸತತವಾಗಿ ಪರಿಶ್ರಮಿಸಿದರು. ಶಿಕ್ಷಕನಾಗಿ, ಗ್ರಂಥಪಾಲಕನಾಗಿ, ಹಿರಿಯ ಯೋಜಕನಾಗಿ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಕ್ಷೇತ್ರಗಳಲ್ಲಿ ಹೆಚ್ಚಿನ ಕೆಲಸ ಮಾಡಿದ್ದಾರೆ (**ನೋಡಿ– ಕೇಶವನ್, ಬಿ.ಎಸ್.**).



ಇವರಿಗೆ ದೆಹಲಿಯಲ್ಲಿರುವ ವೈಜ್ಞಾನಿಕ ಹಾಗೂ ಔದ್ಯೋಗಿಕ ಸಂಶೋಧನ ಮಂಡಳದ ಆರ್ಥಿಕ ಸಂಪನ್ಮೂಲಗಳ ಹಾಗೂ ಔದ್ಯೋಗಿಕ ನಿಘಂಟು ಕಚೇರಿಯಲ್ಲಿ ಸಹಕಾರ್ಯದರ್ಶಿಯಾಗಿ ಹುದ್ದೆಗಾಗಿ ಕರೆಬಂತು (1944). ಭಾರತದ ಸಂಪತ್ತು (ದಿ ವೆಲ್ತ್ ಆಫ್ ಇಂಡಿಯ) ಎಂಬ ಗ್ರಂಥಪ್ರಕಟನೆಯಲ್ಲಿ ಕೇಶವನ್ ಪ್ರಮುಖವಾಗಿ ಭಾಗವಹಿಸಿದ್ದು ಇಲ್ಲಿದ್ದಾಗಲೇ. ಮುಂದೆ ಎರಡು ವರ್ಷಗಳ ತರುವಾಯ ಭಾರತ ಸರ್ಕಾರದ ಶಿಕ್ಷಣ ಸಚಿವಾಲಯದಲ್ಲಿ ಇವರು ಅಧಿಕಾರಿಗಳಾದರು. ಕಲ್ಕತ್ತೆಯಲ್ಲಿ ರಾಷ್ಟ್ರೀಯ ಗ್ರಂಥಾಲಯದ ಪ್ರಥಮ ಗ್ರಂಥಪಾಲಕರಾಗಿ ನೇಮಕ ಗೊಂಡಿದ್ದು 1948ರಲ್ಲಿ. ಇವರು ಹಾಗೆ ನೇಮಕಗೊಂಡಾಗ ಅದಕ್ಕೊಂದು ಸುಸಜ್ಜಿತ ಕಟ್ಟಡವಿರಲಿಲ್ಲ. ವೈಸರಾಯ್ ನಿವಾಸವಾಗಿದ್ದ ಬೆಲ್ವಡೇರ್ ಅರಮನೆಯನ್ನು ಗ್ರಂಥಾಲಯಕ್ಕೆ ದೊರಕಿಸಿಕೊಡುವುದರಲ್ಲಿ ಇವರು ಯಶಸ್ವಿಯಾದರು. ಈ ಗ್ರಂಥಾಲಯವನ್ನು ಬೆಳೆಸಿದ ಮತ್ತು ಅಧುನಾತನಗೊಳಿಸಿದ ಕೀರ್ತಿ ಇವರದು. ಇವರು ಮಾಡಿದ ಇನ್ನೊಂದು ಕೆಲಸವೆಂದರೆ ಅಲ್ಲಿ ಭಾಷಾ ವಿಭಾಗವನ್ನಾರಂಭಿಸಿದ್ದು. ರಾಷ್ಟ್ರೀಯ ಗ್ರಂಥಸೂಚಿಗಾಗಿ ಇವರು ಪ್ರಾರಂಭಿಸಿದ ಯೋಜನೆ 1958ರಲ್ಲಿ ಕಾರ್ಯಗತವಾಯಿತು.

ಇವರು ರಾಷ್ಟ್ರೀಯ ಗ್ರಂಥಾಲಯದ ಗ್ರಂಥಸಂಗ್ರಹವನ್ನು ಗಣನೀಯವಾಗಿ ಹೆಚ್ಚಿಸಿದರು. ಅಪೂರ್ವ ವೈಯಕ್ತಿಕ ಸಂಗ್ರಹಗಳನ್ನು ಕಲೆಹಾಕಿದರು. ಕೇಂದ್ರೀಯ ಸಂದರ್ಭ ಗ್ರಂಥಾಲಯವನ್ನು ಪ್ರಾರಂಭಿಸಿದರು.

ಕೇಂದ್ರ ರಾಷ್ಟ್ರೀಯ ಫಿಸಿಕಲ್ ಲ್ಯಾಬೋರೇಟರಿಯ ಒಂದು ಅಂಶವಾಗಿದ್ದ ಭಾರತದ ರಾಷ್ಟ್ರೀಯ ವೈಜ್ಞಾನಿಕ ಕೇಂದ್ರವನ್ನು ಪ್ರತ್ಯೇಕಿಸಿ ಅದಕ್ಕೆ ಪ್ರಥಮ ನಿರ್ದೇಶಕರೆಂದು ಕೇಶವನ್ ಅವರನ್ನು ಆಹ್ವಾನಿಸಲಾಯಿತು. ಅನಂತರ ಭಾರತ ಸರ್ಕಾರ ಇವರನ್ನು ಗ್ರಂಥಾಲಯ ಸಲಹೆಗಾರರೆಂದು ನಿಯಮಿಸಿತ್ತು. ಗ್ರಂಥಾಲಯ ವಿಜ್ಞಾನದಲ್ಲಿ ವೀಕ್ಷಕ ಪ್ರಾಧ್ಯಾಪಕರೆಂದು ದೆಹಲಿ ವಿಶ್ವವಿದ್ಯಾಲಯ ಇವರನ್ನು ನೇಮಿಸಿಕೊಂಡಿತು. ಯುನೆಸ್ಕೊ ಇವರನ್ನು ಮನಿಲಾದಲ್ಲಿ ನಡೆದ ಏಷ್ಯದ ರಾಷ್ಟ್ರೀಯ ಗ್ರಂಥಾಲಯಗಳ ಸಮ್ಮೇಳನಕ್ಕೆ ಮುಖ್ಯ ಕಾರ್ಯಕರ್ತರನ್ನಾಗಿ ಆಮಂತ್ರಿಸಿತು (1964). ಭಾರತ ಸರ್ಕಾರದಿಂದ ಇವರಿಗೆ ಪದ್ಮಶ್ರೀ ಪ್ರಶಸ್ತಿ ದೊರೆತದ್ದು 1960ರಲ್ಲಿ.

ಕೇಶವನ್ ಭಾರತೀಯ ಗ್ರಂಥಾಲಯ ಸಂಘದ ಅಧ್ಯಕ್ಷರಾಗಿ ಒಂದು ದಶಕದವರಗೆ ಸೇವೆ ಸಲ್ಲಿಸಿದ್ದಾರೆ. ಇವರು ಗ್ರಂಥಸೂಚಿಯ ಮೇಲಿನ ಅಂತಾರಾಷ್ಟ್ರೀಯ ಸಮಿತಿ, ಯುನೆಸ್ಕೊದ ಪ್ರಲೇಖನ ಹಾಗೂ ಪರಿಭಾಷೆ ಸಮಿತಿ, ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಗ್ರಂಥಪಾಲಕರ ಸಮಿತಿ ಹಾಗೂ ವಿಶ್ವವಿದ್ಯಾಲಯಗಳ ಪಠ್ಯಕ್ರಮ ಮಂಡಳಿಗಳ ಸದಸ್ಯರಾಗಿದ್ದರು. ಅಂತಾರಾಷ್ಟ್ರೀಯ ಪ್ರಲೇಖನ ಮಂಡಳದ ಆಫ್ರೋ ಏಷ್ಯನ್ ವಿಭಾಗಕ್ಕೆ ಉಪಾಧ್ಯಕ್ಷರಾಗಿದ್ದರು. ಪ್ರಲೇಖನ ವಿಷಯದಲ್ಲಿ ಯುನೆಸ್ಕೊದ ಸಲಹಾಗಾರರಾಗಿದ್ದರು. ಭಾರತೀಯ ಮಾನಕ ಸಂಸ್ಥೆಯ ಪ್ರಲೇಖನ ವಿಭಾಗ ಸಮಿತಿಯ ಅಧ್ಯಕ್ಷರಾಗಿದ್ದರು. ಇವರು ಭಾರತದ ರಾಷ್ಟ್ರೀಯ ಗ್ರಂಥ ಸಂಸ್ಥೆಯ ಸದಸ್ಯರಾಗಿದ್ದರಲ್ಲದೆ ಇರಾನಿನ ಪ್ರಲೇಖನ ಕೇಂದ್ರ ಸ್ಥಾಪನೆ ಹಾಗೂ ಅದಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಯುನೆಸ್ಕೊದ ತಜ್ಞರಾಗಿ ಸೇವೆ ಸಲ್ಲಿಸಿದರು. ರಾಷ್ಟ್ರೀಯ ಗ್ರಂಥಾಲಯವನ್ನು ಕುರಿತು ಇವರು ಬರೆದ ಪುಸ್ತಕ, ಇಂಡಿಯಾಸ್ ನ್ಯಾಷನಲ್ ಲೈಬ್ರರಿ– ಎಂಬುದು ಬಹು ಉಪಯುಕ್ತವಾಗಿದೆ.

(ಟಿ.ಎಲ್.ಬಿ.)

## XI ಗ್ರಂಥಾಲಯ – ಒಂದು ಮುನ್ನೋಟ

ಶಿಕ್ಷಣ ಹಾಗೂ ಸಂಶೋಧನ ಕ್ಷೇತ್ರಗಳಲ್ಲಿ ಇದುವರೆಗೂ ಪ್ರಚಲಿತವಿದ್ದ ಸಾಂಪ್ರದಾಯಿಕ ವಿಧಾನಗಳು ಸಹಜವಾಗಿ ಬದಲಾಗುತ್ತಿವೆ. ಇದರಿಂದಾಗಿ ಹೊಸ ಸಂದರ್ಭಗಳಿಗೆ ತಕ್ಕಂತೆ ಗ್ರಂಥಾಲಯಗಳು ಮತ್ತು ವಿದ್ವಾಂಸರೂ ಹೊಸ ಹೊಸ ಮಾರ್ಗಗಳನ್ನು ಹುಡುಕಬೇಕಾಗಿದೆ.. ಸರ್ಕಾರ ಮತ್ತು ಜನತೆ ಜನಸಂಖ್ಯೆಯ ಸ್ಫೋಟವನ್ನು ಕುರಿತು ಭಯಗ್ರಸ್ತರಾಗಿರುವಂತೆ ಸಂಶೋಧಕರಿಗೆ ಮತ್ತು ವಿದ್ವಾಂಸರಿಗೆ ತೀವ್ರಗತಿಯ ಜ್ಞಾನಸ್ಫೋಟ ಕಾತರತೆಯನ್ನುಂಟು ಮಾಡಿದೆ. ಪುಸ್ತಕಗಳ ಮಾತು ಹಾಗಿರಲಿ. ಹಿಂದಿನ ಮೂರು ಶತಮಾನಗಳಲ್ಲಿ ಪ್ರಕಟವಾಗಿರುವ ನಿಯತಕಾಲಿಕೆಗಳನ್ನು ನೋಡಿದಾಗ, ಅವುಗಳಲ್ಲಿ ಮಹತ್ತರವಾದ ಬೆಳವಣಿಗೆ ಕಂಡುಬರುತ್ತದೆ. 17ನೆಯ ಶತಮಾನದ ಉತ್ತರಾರ್ಧದಲ್ಲಿ ಒಂದೇ ಒಂದು ನಿಯತಕಾಲಿಕೆ ಪ್ರಕಟವಾಗುತ್ತಿತ್ತೆಂದು ಹೇಳುತ್ತಾರೆ. ಇಂದು ಇವುಗಳ ಸಂಖ್ಯೆ ಒಂದು ಲಕ್ಷವನ್ನೂ ಮೀರಿದೆ. ಭಾರತ ಒಂದರಲ್ಲಿಯೇ ಪ್ರಕಟವಾಗುತ್ತಿರುವ ಸಮಾಚಾರ ಪತ್ರಿಕೆಗಳು ಹಾಗೂ ನಿಯತಕಾಲಿಕೆಗಳ ಸಂಖ್ಯೆ ಅನೇಕ ಸಾವಿರಗಳಿಗೂ ಹೆಚ್ಚಿದೆ. ಈ ಸನ್ನಿವೇಶಕ್ಕೆ ಹೊಂದಿಕೊಳ್ಳಲು ಗ್ರಂಥಾಲಯಗಳ ಗಾತ್ರವೂ ಬೆಳೆಯಬೇಕೆಂಬುದು ಸ್ಪಷ್ಟವೇ ಆಗಿದೆ. ಒಂದೇ ಒಂದು ವಿಷಯದ ಮೇಲೆ ಪ್ರಕಟವಾಗುವ ನಿಯತಕಾಲಿಕೆಗಳನ್ನು ಪರೀಕ್ಷಿಸುವುದರಿಂದ ಈ ವಿಷಯ ಇನ್ನೂ ಸ್ಪಷ್ಟವಾಗುತ್ತದೆ. ಉದಾ: ರಸಾಯನಶಾಸ್ತ್ರವನ್ನು ತೆಗೆದುಕೊಳ್ಳೋಣ. ಈ ವಿಭಾಗದ ಸಾರಸಂಗ್ರಹವನ್ನು ಪ್ರಕಟಿಸುವ ನಿಯತಕಾಲಿಕೆ ರಸಾಯನಶಾಸ್ತ್ರ ವಿದ್ಯಾರ್ಥಿಗೆ ತುಂಬ ಪರಿಚಿತವಾದದು. ಇತ್ತೀಚಿನ ಒಂದೇ ಒಂದು ವರ್ಷದಲ್ಲಿ 100 ದೇಶಗಳಲ್ಲಿ 54 ಭಾಷೆಗಳಲ್ಲಿ ಪ್ರಕಟವಾದ 11,500 ಪತ್ರಿಕೆಗಳಲ್ಲಿನ 2,15,000 ಲೇಖನಗಳ ಸಂಗ್ರಹವನ್ನು ಈ ಪತ್ರಿಕೆ ಒಳಗೊಂಡಿತ್ತು. ಹೀಗಾಗಿ ಒಂದು ವರ್ಷದಲ್ಲಿ ಪ್ರಕಟಿತವಾದ ಸಾರಸಂಗ್ರಹಗಳಲ್ಲಿನ ಪ್ರತಿಯೊಂದು ಲೇಖನವನ್ನೂ ಓದಲು ಪ್ರಯತ್ನಿಸುವ ರಸಾಯನಶಾಸ್ತ್ರಜ್ಞ ಸೋತುಹೋಗುತ್ತಾನಲ್ಲದೆ ಹಿಂದೆ ಬೀಳುವ ಸಂಭವವೂ ಉಂಟು.

ಇನ್ನೊಂದು ಗಮನಾರ್ಹ ವಿಷಯ ಎಂದರೆ ಬೆಳೆಯುತ್ತಿರುವ ಗ್ರಂಥಾಲಯಗಳ ಗಾತ್ರ. ಗ್ರಂಥಾಲಯ ಪ್ರಪಂಚದಲ್ಲಿ ಬೃಹತ್ ಗ್ರಂಥಾಲಯಗಳ ಪೈಕಿ ಮಧ್ಯಮ ಪ್ರಮಾಣದ್ದೆಂದು ಪರಿಗಣಿತವಾದ ಏಲ್ ವಿಶ್ವವಿದ್ಯಾಲಯ 60 ಲಕ್ಷ ಗ್ರಂಥಗಳನ್ನು ಹೊಂದಿದೆ. ಕಳೆದ ಶತಮಾನದ ಮೊದಲಿನಲ್ಲಿ ಅಲ್ಲಿ ಕೇವಲ 3,61,000 ಗ್ರಂಥಗಳು ಮಾತ್ರ ಇದ್ದವು. ಇದೇ ರೀತಿಯಲ್ಲೆ ಬೆಳೆಯುತ್ತ ಹೋದರೆ ಆ ಗ್ರಂಥಾಲಯದ ಗಾತ್ರ 2040ರ ಹೊತ್ತಿಗೆ 6,000 ಮೈಲಿ ಉದ್ದದ ಬೀರುಗಳನ್ನು ಆಕ್ರಮಿಸುವ 200 ಕೋಟಿ ಗ್ರಂಥಗಳಷ್ಟಾಗಿ ಬೆಳೆಯಬಹುದು. ಅಷ್ಟು ಹೊತ್ತಿಗೆ ಅದರ ಪತ್ರಿಕಸೂಚಿ ಹತ್ತು ಲಕ್ಷ ವಿಷಯಪಟ್ಟಿ ಸೆಳೆಖಾನೆಗಳನ್ನು ಹೊಂದಿದ್ದು ಅವುಗಳಿಗೇ ಸುಮಾರು 80 ಎಕರೆ ಜಾಗ ಬೇಕಾಗುತ್ತದೆ. ಜಾಗತಿಕವಾಗಿ ಒಂದು ವರ್ಷದಲ್ಲಿ 12 ಲಕ್ಷ ಗ್ರಂಥಗಳ ಮೂಲಕ ಹೊಸ ಹೊಸ ವಿಷಯಗಳು ಹೊರಬರುತ್ತಿವೆ. ಈ ಗ್ರಂಥಗಳನ್ನು ಗ್ರಂಥಪಟ್ಟಿಗೆ ಸೇರಿಸಲು 6,000 ಕ್ಕೂ ಮಿಗಿಲಾಗಿ ಸಿಬ್ಬಂದಿ ಬೇಕಾಗುತ್ತದೆ. ಈ ಸ್ಫೋಟ ಭವಿಷ್ಯದಲ್ಲಿ ಗ್ರಂಥಾಲಯದ ನಾಶಕ್ಕೆ ಕಾರಣವಾಗಬಹುದೆಂಬ ಶಂಕೆ ನಮ್ಮನ್ನು ಕಾಡಬಹುದು. ಆದರೆ ಈಗ ಚಾಲ್ತಿಯಲ್ಲಿರುವ ಸಿಡಿ, ಮೈಕ್ರೊಚಿಪ್ ಇತ್ಯಾದಿ ತಂತ್ರಜ್ಞಾನದಿಂದಾಗಿ ಇಡೀ ಗ್ರಂಥಾಲಯವನ್ನು ಕೇವಲ ಒಂದು ಕೋಣೆಯೊಳಗೆ ಅಡಕ ಮಾಡಿಬಿಡಬಹುದಾಗಿದೆ.

ಈ ಲೇಖನದಲ್ಲಿ ಸಾಂಪ್ರದಾಯಿಕ ಪುಸ್ತಕಗಳನ್ನೊಳಗೊಂಡ ಗ್ರಂಥಾಲಯಗಳ ಹುಟ್ಟು, ಬೆಳೆವಣಿಗೆ ಮತ್ತು ಸೇವಾ ಸೌಲಭ್ಯಗಳನ್ನು ವಿಸ್ತಾರವಾಗಿ ವಿವರಿಸಲಾಗಿದೆ. ಇತ್ತೀಚಿನ ಬೆಳೆವಣಿಗೆಗಳಾದ ವಿದ್ಯುನ್ಮಾನ ಮಾಹಿತಿ ಆಕರಗಳು, ಡಿಜಿಟಲ್ ಗ್ರಂಥಾಲಯಗಳು ಹಾಗೂ ವಿವಿಧ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ದತ್ತಾಂಶ ಕೋಶಗಳನ್ನು ಈ ಲೇಖನ ಒಳಗೊಂಡಿರುವುದಿಲ್ಲ. ಆಧುನಿಕ ಗ್ರಂಥಾಲಯಗಳಲ್ಲಿ ತಂತ್ರಾಂಶ ಬಳಸಿ ನೆರವೇರಿಸುವ ವಿವಿಧ ಕಾರ್ಯಚಟುವಟಿಕೆಗಳು ಹಾಗೂ ವಿದ್ಯುನ್ಮಾನ ಮಾಹಿತಿ ಆಕರಗಳಾದ: ಗ್ರಂಥಗಳು, ನಿಯತಕಾಲಿಕೆಗಳು, ಮಹಾಪ್ರಬಂಧಗಳು, ದತ್ತಾಂಶ ಕೋಶಗಳು (Databases) ಮತ್ತು ಸಂಸ್ಥೆಗಳ ವಿಶೇಷ/ಅಪರೂಪದ ಸಂಗ್ರಹಗಳನ್ನು (Institutional Repositories) ಕುರಿತಾದ ಪ್ರತ್ಯೇಕವಾದ ಲೇಖನದ ಅಗತ್ಯವಿರುವುದರಿಂದ ಇಲ್ಲಿ ವಿವರಿಸಿರುವುದಿಲ್ಲ. (ಎಸ್.ಆರ್.ಆರ್.)

**ಗ್ರಂಥಾಲಯ ವಿಜ್ಞಾನ :** ಗ್ರಂಥಾಲಯಗಳಲ್ಲಿನ ವಿವಿಧ ಗ್ರಂಥಗಳ ಪಾಲನೆ, ಸಂಗ್ರಹಣೆ, ಯುಕ್ತ ವಿತರಣೆ; ಗ್ರಂಥಗಳಿಗೆ ಮತ್ತು ಇತರ ಜ್ಞಾನ ಸಾಧನೆಗಳಿಗೆ ಸಂಬಂಧಿಸಿದಂತೆ ಬೇರೆಬೇರೆ ಸೂಚಿಗಳ ತಯಾರಿಕೆ; ಗ್ರಂಥಾಲಯದ ಹಣಕಾಸಿನ ವ್ಯವಹಾರದ ಸಮರ್ಪಕ ನಿರ್ವಹಣೆ, ಯಂತ್ರ ಹಾಗೂ ಆಧುನಿಕ ತಂತ್ರಗಳಿಂದ ಗ್ರಂಥಾಲಯ ವ್ಯವಸ್ಥೆಯನ್ನು ನವೀಕರಿಸುವ ಕೆಲಸ–ಮುಂತಾದ ಎಲ್ಲ ವಿಷಯಗಳನ್ನೂ ಒಳಗೊಂಡ ಗ್ರಂಥಾಲಯ ಶಾಸ್ತ್ರವನ್ನು ಈ ಹೆಸರಿನಿಂದ ಕರೆಯಲಾಗಿದೆ (ಲೈಬ್ರರಿ ಸೈನ್ಸ್). ಇದು ಒಂದು ಶಾಸ್ತ್ರವಾಗಿ ರೂಪುಗೊಂಡು ಬೆಳೆದದ್ದು ಇಪ್ಪತ್ತನೆಯ ಶತಮಾನದಲ್ಲಿ. ಅಮೆರಿಕ, ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ ಮೊದಲಾದ ಮುಂದುವರಿದ ರಾಷ್ಟ್ರಗಳಲ್ಲಿ ಇದು ಬಹುಬೇಗ, ಬಹು ಚೆನ್ನಾಗಿ ಅಭಿವೃದ್ಧಿ ಹೊಂದಿತು. ಈ ವಿಷಯದಲ್ಲಿ ಗ್ರಂಥಾಲಯ ಸಿಬ್ಬಂದಿ ವರ್ಗಕ್ಕೆ ತರಬೇತಿ ಕೊಡಲು ಅನೇಕಾನೇಕ ಶಿಕ್ಷಣಶಾಲೆಗಳು ಹುಟ್ಟಿಕೊಂಡವು. ಅಭಿವೃದ್ಧಿ ಹೊಂದುತ್ತಿರುವ ಇತರ ರಾಷ್ಟ್ರಗಳಲ್ಲಿ ಇಂಥ ಪ್ರಯತ್ನ ನಡೆದದ್ದು ಸ್ವಲ್ಪ ತಡವಾಗಿಯೇ. ಆದರೂ ಭಾರತ, ಆಫ್ರಿಕ, ಲ್ಯಾಟಿನ್ ಅಮೆರಿಕ ಮೊದಲಾದ ರಾಷ್ಟ್ರಗಳಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಲಾಗಿದೆ. ಗ್ರಂಥಾಲಯ ವಿಜ್ಞಾನಕ್ಕೆ ಶಾಶ್ವತವಾದ ನೆಲೆ ಮತ್ತು ಬೆಲೆ ಬಂದಿರುವುದು ಮುಖ್ಯವಾಗಿ ವಿಶ್ವಸಂಸ್ಥೆಯ ಅಂಗವಾದ ಯುನೆಸ್ಕೊದ ಸಹಾಯ ಹಾಗೂ ಪ್ರೋತ್ಸಾಹದಿಂದ. ಅಲ್ಲದೆ ಅಂತಾರಾಷ್ಟ್ರೀಯ ಗ್ರಂಥಾಲಯಗಳ ಸಂಯುಕ್ತ ಮಹಾಸಂಘ, ಅಮೆರಿಕದ ಗ್ರಂಥಾಲಯ ಸಂಘ, ಭಾರತ ಗ್ರಂಥಾಲಯ ಸಂಘ, ಪ್ರಲೇಖನಕ್ಕೆ ಸಂಬಂಧಪಟ್ಟ ಅನೇಕ ಸಂಘಗಳು– ಈ ಮೊದಲಾದ ಸಂಸ್ಥೆಗಳು ಗ್ರಂಥಾಲಯಗಳ ಅಭಿವೃದ್ಧಿಯ ಬಗ್ಗೆ ಹೇಗೋ ಹಾಗೆ ಗ್ರಂಥಾಲಯ ಶಿಕ್ಷಣದ ಬಗ್ಗೆಯೂ ಹೆಚ್ಚಿನ ಕೆಲಸ ಮಾಡಿವೆ, ಮಾಡುತ್ತಿವೆ.

ಗ್ರಂಥಾಲಯ ವಿಜ್ಞಾನ ಹಾಗೂ ಶಿಕ್ಷಣ ಪದ್ಧತಿಗಳು ಬೆಳೆದು ಬಂದ ರೀತಿಯನ್ನು ಸಿಂಹಾವಲೋಕನ ಕ್ರಮದಿಂದ ಇಲ್ಲಿ ರೂಪಿಸಲಾಗಿದೆ.

ಪ್ರಾಚೀನ ಭಾರತದಲ್ಲಾಗಲೀ ಗ್ರೀಸ್, ರೋಮ್ ಹಾಗೂ ಮಧ್ಯಯುಗೀನ ಯುರೋಪಿನಲ್ಲಾಗಲೀ ಪ್ರಸಿದ್ಧ ಗ್ರಂಥಾಲಯಗಳು ಇದ್ದುವೆನ್ನಲು ಆಧಾರಗಳು ಇವೆಯಾದರೂ ಅವುಗಳ ವ್ಯವಸ್ಥೆ ಹೇಗಿತ್ತು, ಗ್ರಂಥವಿಂಗಡಣೆ ಹೇಗಿದ್ದವು, ಆಗಿದ್ದ ಸೂಚಿಗಳು ಹೇಗಿದ್ದವು ಎಂಬ ಬಗ್ಗೆ ವಿವರಗಳು ಹೆಚ್ಚಾಗಿ ಉಳಿದು ಬಂದಿಲ್ಲ. ಆದರೆ ಅನೇಕ ಗ್ರಂಥಾಲಯಗಳಲ್ಲಿ ಒಳ್ಳೆಯ ವ್ಯವಸ್ಥೆ ಇತ್ತು ಎಂದು ತಿಳಿಯಲು ಅಲ್ಪಸ್ವಲ್ಪ ಆಧಾರ ದೊರೆಯುತ್ತದೆ (**ನೋಡಿ– ಗ್ರಂಥಾಲಯ**).

ಮುದ್ರಣ ಯಂತ್ರದ ಆವಿರ್ಭಾವದಿಂದಾಗಿ (15ನೆಯ ಶತಮಾನ) ಪ್ರಪಂಚದ ನಾನಾ ಭಾಗಗಳಿಗೆ ವಿದ್ಯಾಭ್ಯಾಸ ಹರಡಿ ಜನ ಹೆಚ್ಚುಹೆಚ್ಚಾಗಿ ಓದುಬರೆಹವನ್ನು ಕಲಿಯಲು ತೊಡಗಿದಾಗ ಗ್ರಂಥಾಲಯಗಳು ಬೆಳೆದುವಲ್ಲದೆ ಅವನ್ನು ಶಾಸ್ತ್ರೀಯವಾಗಿ ವ್ಯವಸ್ಥಿತಗೊಳಿಸಲು ಗ್ರಂಥಾಲಯ ಸಿಬ್ಬಂದಿಗೆ ಆ ಬಗ್ಗೆ ಶಿಕ್ಷಣ ಕೊಡಲು ಪ್ರಯತ್ನಗಳು ಪ್ರಾರಂಭವಾದುವು.

ಈ ಕೆಲಸ ಭಾರತದಲ್ಲಿ ಹೇಗೆ ಮೊದಲಾಯಿತೆಂಬುದನ್ನು ನೋಡಬಹುದು.

ವಿಲಿಯಮ್ ಅಲಸನ್ ಬೋರ್‌ಡೆನ್ ಬರೋಡ ಸಂಸ್ಥಾನದಲ್ಲಿ ಒಂದು ಉಚಿತ ಸಾರ್ವಜನಿಕ ವಾಚನಾಲಯವನ್ನು ವ್ಯವಸ್ಥೆಗೊಳಿಸಿದಾಗ (1911) ಮೊತ್ತಮೊದಲಿಗೆ ಗ್ರಂಥಪಾಲ ಶಿಕ್ಷಣ ಕಾರ್ಯ ಪ್ರಾರಂಭವಾಯಿತೆನ್ನಬಹುದು. ಬೋರ್‌ಡೆನ್ ಇಂಥ ಶಿಕ್ಷಣವನ್ನು ಪ್ರಾರಂಭಿಸಲು ರಾಜ್ಯಸರ್ಕಾರದಿಂದ 1911ರ ಮಾರ್ಚಿಯಲ್ಲಿ ಅನುಮತಿ ಪಡೆದ. ಬೊಂಬಾಯಿ ವಿಶ್ವವಿದ್ಯಾಲಯದ 6 ಜನ ಪದವೀಧರರನ್ನು, 6 ಜನ ಸ್ನಾತಕಪೂರ್ವ ಪದವೀಧರರನ್ನು ತಲಾ ರೂ. 25 ವಿದ್ಯಾರ್ಥಿವೇತನವನ್ನು ಕೊಟ್ಟು ವ್ಯಾಸಂಗಕ್ಕೆ ಸೇರಿಸಿಕೊಳ್ಳುವುದು ಎಂದು ತೀರ್ಮಾನಿಸಲಾಯಿತು. ತರಬೇತಿಯ ಜೊತೆಗೆ ಹೆಚ್ಚಿನ ವಿದ್ಯಾರ್ಹತೆ ಪಡೆದಿರುವವರನ್ನು ಮೇಲ್ದರಗತಿಯ ಗ್ರಂಥಪಾಲರೆಂದು ಪರಿಗಣಿಸಿ ರೂ. 60 ರಿಂದ ರೂ. 100ರ ವರೆಗೆ ಮತ್ತು ಕಡಿಮೆ ವಿದ್ಯಾರ್ಹತೆ ಪಡೆದವರನ್ನು ಕೆಳದರ್ಜೆಯ ಗ್ರಂಥಪಾಲಕರೆಂದು ಪರಿಗಣಿಸಿ ರೂ. 30 ರಿಂದ ರೂ. 50ರ ವರೆಗೆ ಸಂಬಳ ಕೊಡಬೇಕೆಂದೂ ತೀರ್ಮಾನವಾಯಿತು. ಈ ಶಿಕ್ಷಣಕ್ಕೆ ಬ್ರಿಟಿಷ್ ಇಂಡಿಯದ ಗ್ರಂಥಪಾಲರಿಗೆ ಸಹ ಪ್ರವೇಶವಿತ್ತಾದರೂ ಶಿಕ್ಷಣಕ್ಕಾಗಿ ಬಂದವರು ಹೆಚ್ಚಾಗಿ ದೇಶೀಯ ಸಂಸ್ಥಾನಗಳವರೇ. ಬ್ರಿಟಿಷ್ ಇಂಡಿಯದಿಂದ ಬಂದವ ಒಬ್ಬನೇ. ಈ ಶಿಕ್ಷಣ 1924ರಿಂದ ಆಚೆಗೂ ಮುಂದುವರಿಯಿತೆಂದು ಹೇಳಲು ಯಾವ ಆಧಾರವೂ ಇಲ್ಲ.

ಈ ಶಿಕ್ಷಣಶಾಲೆಯಲ್ಲಿ ಮುಖ್ಯವಾಗಿ ಗ್ರಂಥಾಲಯದ ನಾನಾ ದಾಖಲೆಗಳನ್ನು ದುಂಡಾದ ಅಕ್ಷರಗಳಲ್ಲಿ ಬರೆದಿಡುವುದು, ಪುಸ್ತಕದ ಆಕಾರವನ್ನು ಅಳತೆ ಮಾಡುವುದು, ಹೊಸ ಪುಸ್ತಕಗಳು ಬಂದ ತತ್‌ಕ್ಷಣ ಪುಟಗಳು ಸರಿಯಾಗಿವೆಯೇ ಎಂದು ನೋಡುವುದು, ಕಾಗದವನ್ನು ಪರೀಕ್ಷಿಸುವುದು, ಪುಸ್ತಕಗಳನ್ನು ರಿಪೇರಿ ಮಾಡುವುದು ಮತ್ತು ಅವುಗಳಿಗೆ ರಟ್ಟುಕಟ್ಟುವುದು, ಸೂಚೀಕಾರ್ಡುಗಳನ್ನು ಬರೆಯುವುದು, ಪುಸ್ತಕದಲ್ಲಿರುವ ಅಪೂರ್ವ ಚಿತ್ರಪಟಗಳ ಬಗ್ಗೆ ತೆಗೆದುಕೊಳ್ಳಬೇಕಾದ ಎಚ್ಚರಿಕೆ, ಪುಸ್ತಕಗಳಿಗೆ ಕ್ರಮಾಂಕ ಮತ್ತು ಸೂಚೀಕರಣ ಚಿಹ್ನೆಗಳ ಅಳವಡಿಕೆ, ಪುಸ್ತಕ ವಿತರಣೆ, ಪ್ರತಿದಿನದ ಕೆಲಸದ ದಾಖಲೆಯ ಪುಸ್ತಕಗಳನ್ನು ನೋಡಿಕೊಳ್ಳುವುದು–ಮುಂತಾದವನ್ನು ಹೇಳಿಕೊಡುತ್ತಿದ್ದರು. ಹೆಚ್ಚಿನ ವೇಳೆ ಈ ಕಾರ್ಯದಲ್ಲೇ ಕಳೆದುಹೋಗುತ್ತಿದ್ದುದರಿಂದ ಪುಸ್ತಕಗಳ ವರ್ಗೀಕರಣ ಮತ್ತು ಸೂಚೀಕರಣಗಳ ಬಗ್ಗೆ ತಿಳಿಯಲು ಹೆಚ್ಚು ಸಮಯ ಇರುತ್ತಿರಲಿಲ್ಲ.

ಬರೋಡದಲ್ಲಿ 2 ವರ್ಷ ಅವಧಿಯ ಗ್ರಂಥಾಲಯ ವಿಜ್ಞಾನದ ಸ್ನಾತಕೋತ್ತರ ಶಿಕ್ಷಣಕ್ಕೆ ಪ್ರಯತ್ನ ನಡೆದರೂ (1912) ಅದು ಊರ್ಜಿತವಾಗಲಿಲ್ಲ.

ಲಾಹೋರಿನ ಪಂಜಾಬ್ ವಿಶ್ವವಿದ್ಯಾಲಯ ಗ್ರಂಥಾಲಯ ವಿಜ್ಞಾನದಲ್ಲಿ ಶಿಕ್ಷಣ ನೀಡುವುದರಲ್ಲಿ ಮತ್ತೊಂದು ಪ್ರಯತ್ನ ಮಾಡಿತು. ವಿಶ್ವವಿದ್ಯಾಲಯದ ಗ್ರಂಥಾಲಯ ಸ್ಥಾಪಿತವಾದ್ದು 1908ರಲ್ಲಿ. ಈ ಗ್ರಂಥಾಲಯವನ್ನು ಆಧುನಿಕ ರೀತಿಯಲ್ಲಿ ವ್ಯವಸ್ಥೆಗೊಳಿಸಲು ವಿಶ್ವವಿದ್ಯಾಲಯದ ಆಹ್ವಾನದ ಮೇರೆಗೆ ಬಂದ (1915) ಅಮೆರಿಕನ್ ತಜ್ಞ ಅಸ್‌ಡಾನ್ ಡಿಕನ್‌ಸನ್ ಗ್ರಂಥಾಲಯ ವಿಜ್ಞಾನವನ್ನು ಕಲಿಸಲು ತರಗತಿಯನ್ನು ಪ್ರಾರಂಭಿಸಿದ. ಭಾರತದ ವಿಶ್ವವಿದ್ಯಾಲಯಗಳಲ್ಲಿ ಇದೇ ಮೊತ್ತಮೊದಲ ಗ್ರಂಥಾಲಯ ಶಿಕ್ಷಣ ತರಬೇತಿ ಕೇಂದ್ರ. ಇದಕ್ಕಾಗಿ ಪಂಜಾಬ್ ವಿಶ್ವವಿದ್ಯಾಲಯ ಹೊಸ ರೀತಿಯ ಪಠ್ಯವಿಷಯಗಳ ಪಟ್ಟಿಯೊಂದನ್ನು ತಯಾರಿಸಿತು. 1 ವರ್ಗೀಕರಣ, 2 ಸೂಚೀಕರಣ, 3 ಗ್ರಂಥವಿತರಣೆ ಮತ್ತು ಪುಸ್ತಕ ಕೊಳ್ಳುವಿಕೆ, 4 ಗ್ರಂಥಾಲಯ ಆಡಳಿತ, 5 ಮೌಖಿಕ ಪರೀಕ್ಷೆ–ಇವು ಮುಖ್ಯ ಪಠ್ಯ ವಿಷಯಗಳಾಗಿದ್ದವು. ಮೊದಲ ವರ್ಷದಲ್ಲಿ ವಿಶ್ವವಿದ್ಯಾಲಯದ ಗ್ರಂಥಾಲಯದಿಂದ ಮತ್ತು ಸ್ಥಳೀಯ ಕಾಲೇಜಿನಿಂದ ಆಯ್ದ 30 ಜನ ವಿದ್ಯಾರ್ಥಿಗಳು ಇದ್ದರು.

1921ರಲ್ಲಿ ಡಿಕನ್‌ಸನ್ನನ ಶಿಷ್ಯ ಹಾಗೂ ಪಂಜಾಬ್ ವಿಶ್ವವಿದ್ಯಾಲಯದಲ್ಲಿ ಸಹಾಯಕ ಗ್ರಂಥಪಾಲರಾಗಿದ್ದ ಲಾಲಾ ಲಬ್ಬೂರಾಮ್ ಎಂಬುವವರು ಪಠ್ಯವಿಷಯಗಳನ್ನು 25 ಜನರಿಂದ 75 ಉಪನ್ಯಾಸ ಗಂಟೆಗಳಿಗೆ ವಿಸ್ತರಿಸಿದರು. ಈ ಕ್ರಮಬದ್ಧವಾದ ಶಿಕ್ಷಣದೊಂದಿಗೆ, ಗ್ರಂಥಾಲಯ ವೃತ್ತಿಗೆ ಉಪಯುಕ್ತವಾಗುವ ಇತರ ವಿಷಯಗಳ ಬಗ್ಗೆ ಉಪನ್ಯಾಸ ಕೊಡಲು ಗ್ರಂಥಾಲಯದವರಲ್ಲದೆ ಇತರ ವಿಷಯ ವಿಭಾಗದ ಸಂಶೋಧಕರನ್ನೂ ನೇಮಿಸಿಕೊಳ್ಳುತ್ತಿದ್ದರು. 1 ಪಾಶ್ಚಾತ್ಯಭಾಷೆಗಳು, 2 ಭಾರತದ ನಾನಾಭಾಷೆಗಳ ಸಮೀಕ್ಷೆ, 3 ಪುಸ್ತಕಗಳ ಆಯ್ಕೆ, 4 ಇಂಗ್ಲೆಂಡ್ ಮತ್ತು ಭಾರತದ ಗ್ರಂಥಸ್ವಾಮ್ಯದ ಕಾನೂನು, 5 ಭಾರತದ ಪ್ರಾಂತೀಯ ಚರಿತ್ರೆಯ ಮೂಲ ಗ್ರಂಥಗಳು, 6 ಸಾಹಿತ್ಯ ಚರಿತ್ರೆ, 7 ಪ್ರಾಚ್ಯಗ್ರಂಥಸೂಚಿಗಳು, 8 ಗ್ರಂಥಾಲಯದ ಕಟ್ಟಡ, ಅವುಗಳ ವಿನ್ಯಾಸ ಮತ್ತು ಉಪಕರಣಗಳು, 9 ಭಾರತೀಯರು ಬರೆದ ಇಂಗ್ಲಿಷ್ ಸಾಹಿತ್ಯ ಮತ್ತು 10 ಗ್ರಂಥಗಳನ್ನು ಜೋಡಿಸುವ ಕ್ರಮ, ಮುಕ್ತದ್ವಾರ ಪದ್ಧತಿ, ವಿಶಿಷ್ಟ ಗ್ರಂಥಾಲಯಗಳ ಕಾರ್ಯವಿಧಾನ–ಇವುಗಳ ಬಗ್ಗೆ ಪಾಠಗಳನ್ನು ಹೇಳಿಕೊಡುತ್ತಿದ್ದರು. 1928ರಿಂದ ವಿಶ್ವವಿದ್ಯಾಲಯದ ಪದವೀಧರರನ್ನು

ಮಾತ್ರ ಈ ಶಿಕ್ಷಣಕ್ಕೆ ಸೇರಿಸಿಕೊಳ್ಳಲಾಯಿತು. 1930ರಲ್ಲಿ ಜರ್ಮನ್ ಅಥವಾ ಫ್ರೆಂಚ್ ಭಾಷೆಗಳ ಕಲಿಕೆ ಕಡ್ಡಾಯವಾಯಿತು. ಡಿಕನ್‌ಸನ್ನನ ಪಂಜಾಬ್ ಗ್ರಂಥಾಲಯ ಪ್ರವೇಶ ಎಂಬ ಕಿರುಹೊತ್ತಿಗೆಯನ್ನು ಪಂಜಾಬ್ ವಿಶ್ವವಿದ್ಯಾಲಯ ಪ್ರಕಟಿಸಿತು. ಇದು ಭಾರತದಲ್ಲೇ ಗ್ರಂಥಾಲಯದ ಶಿಕ್ಷಣದ ಬಗ್ಗೆ ಬಂದ ಮೊತ್ತಮೊದಲನೆಯ ಪುಸ್ತಕ. ಈ ಪುಸ್ತಕ 1939ರವರೆಗೂ ಈ ಶಿಕ್ಷಣಕ್ಕೆ ಆಧಾರ ಗ್ರಂಥವಾಗಿತ್ತು.

1920ರಲ್ಲಿ ವಿಜಯವಾಡದ ರಾಮಮೋಹನ ಗ್ರಂಥಾಲಯದಲ್ಲಿ ಆಂಧ್ರಪ್ರದೇಶ ಗ್ರಂಥಾಲಯ ಸಂಘ ಒಂದು ಗ್ರಂಥಾಲಯ ಶಿಕ್ಷಣ ಶಾಲೆಯನ್ನು ತೆರೆಯಿತು. ಇಲ್ಲಿನ ಶಿಕ್ಷಣ ಅವಧಿ ಒಂದು ತಿಂಗಳಿನದಾಗಿದ್ದು ಪ್ರವೇಶ ಕೋರುವ ಅಭ್ಯರ್ಥಿಗಳಿಗೆ ನಿರ್ದಿಷ್ಟ ವಿದ್ಯಾರ್ಹತೆಗಳನ್ನು ವಿಧಿಸಿರಲಿಲ್ಲ. ಪಠ್ಯವಿಷಯಗಳೂ ನೇರ ಗ್ರಂಥಾಲಯ ವಿಜ್ಞಾನಕ್ಕೆ ಸಂಬಂಧಿಸಿದವಾಗಿರಲಿಲ್ಲ. 1934ರಲ್ಲಿ ಪಠ್ಯಪಟ್ಟಿಯನ್ನು ಉದ್ದೇಶಕ್ಕನುಗುಣವಾಗಿ ಪರಿಷ್ಕರಿಸಲಾಯಿತು.

ಮದ್ರಾಸ್ ವಿಶ್ವವಿದ್ಯಾಲಯದ ಗ್ರಂಥಪಾಲರಾಗಿ ನೇಮಕಗೊಂಡ (1924) ಎಸ್.ಆರ್. ರಂಗನಾಥನ್ ಅವರು ತಮ್ಮ ಗ್ರಂಥಾಲಯದ ಪಂಚಸೂತ್ರಗಳು ಮತ್ತು ಕೋಲನ್ ವರ್ಗೀಕರಣ ವಿಧಾನಗಳಿಂದಾಗಿ ಗ್ರಂಥಾಲಯ ಹಾಗೂ ಗ್ರಂಥಾಲಯ ವಿಜ್ಞಾನಗಳಿಗೆ ಹೊಸ ತಿರುವನ್ನು ಕೊಟ್ಟರಲ್ಲದೆ ಶಿಕ್ಷಣದ ಸಮಸ್ಯೆಗಳನ್ನು ಬಿಡಿಸುವಲ್ಲಿ ಮುಂದಾದರು. ಅವರ ಸಲಹೆಯಂತೆ ಮದ್ರಾಸ್ ಗ್ರಂಥಾಲಯ ಸಂಘದ ಆಶ್ರಯದಲ್ಲಿ ಗ್ರಂಥಾಲಯ ವಿಜ್ಞಾನದಲ್ಲಿ ಸರ್ಟಿಫಿಕೇಟ್ ತರಗತಿಗಳು 1929ರಲ್ಲಿ ಪ್ರಾರಂಭವಾದವು. ಮೊದಲ 3 ವರ್ಷಗಳಲ್ಲಿ ಅಲ್ಲಿಗೆ ಕಲಿಯಲು ಬಂದವರಲ್ಲಿ ಹೆಚ್ಚಿನವರು ಶಾಲೆಕಾಲೇಜುಗಳ ಉಪಾಧ್ಯಾಯರು ಮತ್ತು ಸ್ಥಳೀಯ ಸಂಸ್ಥೆಗಳ ಸದಸ್ಯರು. ಪಠ್ಯವಿಷಯದಲ್ಲಿ ಗ್ರಂಥಾಲಯ ವಿಜ್ಞಾನದ ತತ್ತ್ವಬೋಧನೆಗಿಂತ ಆಧುನಿಕ ಗ್ರಂಥಾಲಯದ ಕಾರ್ಯಪ್ರವೃತ್ತಿಯ ಪರಿಚಯಕ್ಕೇ ಹೆಚ್ಚು ಗಮನವನ್ನು ಕೊಡಲಾಗುತ್ತಿತ್ತು. ಇಲ್ಲಿ ಉಪನ್ಯಾಸಗಳನ್ನು ಕೊಡುವಾಗಲೇ ರಂಗನಾಥನ್ ತಾವೇ ರೂಪಿಸಿದ ಗ್ರಂಥಾಲಯ ಪಂಚಸೂತ್ರಗಳನ್ನು ಘೋಷಿಸಿದರು. 1931ರಲ್ಲಿ ಅವನ್ನು ಪುಸ್ತಕರೂಪದಲ್ಲಿ ಪ್ರಕಟಿಸಲಾಯಿತು.

1932ರಲ್ಲಿ ಮದ್ರಾಸ್ ವಿಶ್ವವಿದ್ಯಾಲಯದ ಈ ತರಗತಿಯನ್ನು ನಡೆಸುವ ಜವಾಬ್ದಾರಿ ತೆಗೆದುಕೊಂಡಿತಲ್ಲದೆ 1937ರಲ್ಲಿ ಅದನ್ನು ಒಂದು ವರ್ಷದ ಗ್ರಂಥಾಲಯ ಶಿಕ್ಷಣದ ಡಿಪ್ಲೊಮ ಶಿಕ್ಷಣವನ್ನಾಗಿ ಪರಿವರ್ತಿಸಿತು.

1918ರಲ್ಲಿ ಅಖಿಲ ಭಾರತ ಗ್ರಂಥಾಲಯ ಸಮ್ಮೇಳನದ ಫಲವಾಗಿ ಕೆಲವು ಪ್ರಾಂತ ಗ್ರಂಥಾಲಯ ಸಂಘಗಳು ಹುಟ್ಟಿದವು. ಆಂಧ್ರ (1924), ಬಂಗಾಲ (1927), ಮದ್ರಾಸು (1928) ಮತ್ತು ಪಂಜಾಬಿನಲ್ಲಿ (1929) ಒಂದೊಂದು ಸಂಘ ಅಸ್ತಿತ್ವಕ್ಕೆ ಬಂತು. ಇಷ್ಟಾದರೂ ಪ್ರಾಂತೀಯ ಗ್ರಂಥಾಲಯ ಸಂಸ್ಥೆಗಳ ಚಟುವಟಿಕೆಗಳನ್ನು ಒಂದುಗೂಡಿಸಲು ಗ್ರಂಥಾಲಯ ಉದ್ಯಮಕ್ಕೆ ಒಗ್ಗಟ್ಟಿನಿಂದ ಬೆಂಬಲ ನೀಡಲು ಅಖಿಲ ಭಾರತೀಯ ಸಂಘವೊಂದರ ಅಗತ್ಯ ಇದ್ದೇ ಇತ್ತು. 1933ರ ಸೆಪ್ಟೆಂಬರ್‌ನಲ್ಲಿ ನಡೆದ ಅಖಿಲ ಭಾರತ ಗ್ರಂಥಾಲಯ ಸಮ್ಮೇಳನದಲ್ಲಿ ಈಗಿನ ಭಾರತೀಯ ಗ್ರಂಥಾಲಯ ಸಂಸ್ಥೆ ಹುಟ್ಟಿತು. ಭಾರತದಲ್ಲಿ ಗ್ರಂಥಾಲಯ ಚಳವಳಿಯನ್ನು ವ್ಯಾಪಕ ರೀತಿಯಲ್ಲಿ ವಿಸ್ತರಿಸುವುದು, ಗ್ರಂಥಪಾಲರ ತರಬೇತಿ ಶಾಲೆಗಳನ್ನು, ಮಟ್ಟವನ್ನು ಹೆಚ್ಚಿಸುವುದು, ಗ್ರಂಥಪಾಲರ ಸ್ಥಾನಮಾನಗಳನ್ನು ಉತ್ತಮಗೊಳಿಸುವುದು–ಈ ಸಂಸ್ಥೆಯ ಉದ್ದೇಶವಾಗಿತ್ತು. ಇಷ್ಟಾದರೂ ಗ್ರಂಥಾಲಯ ಶಿಕ್ಷಣದಲ್ಲಿ ಸಾಕಷ್ಟು ಪ್ರಗತಿ ಆಗಲಿಲ್ಲ. ಕಲ್ಕತ್ತದ ಇಂಪೀರಿಯಲ್ ಗ್ರಂಥಾಲಯದ ಗ್ರಂಥಪಾಲರಾದ ಕೆ. ಎಂ. ಅಸದುಲ್ಲ ಅವರು 1934ರ ಮಾರ್ಚ್ ತಿಂಗಳಲ್ಲಿ ನಡೆದ ಕಲ್ಕತ್ತ ಗ್ರಂಥಾಲಯ ಸಮ್ಮೇಳನದ ಅಧ್ಯಕ್ಷ ಭಾಷಣದಲ್ಲಿ, ಗ್ರಂಥಾಲಯ ಶಿಕ್ಷಣವನ್ನು ಉತ್ತಮಪಡಿಸಲು ಕರೆಯಿತ್ತದ್ದಲ್ಲದೆ ಸುವ್ಯವಸ್ಥಿತವಾದ ಬಂಗಾಲ ಗ್ರಂಥಾಲಯ ಸಂಘ ಗ್ರಂಥಪಾಲರ ತರಬೇತಿಯನ್ನು ತನ್ನ ಮೊದಲನೆಯ ಕಾರ್ಯಕ್ರಮವಾಗಿ ಇಟ್ಟುಕೊಳ್ಳಬೇಕೆಂದು ಸೂಚಿಸಿದರು. ಅಸದುಲ್ಲರ ಪ್ರಯತ್ನ ಫಲಿಸಿತು. ಭಾರತ ಸರ್ಕಾರದ ಬೆಂಬಲದಿಂದ ಇಂಪೀರಿಯಲ್ ಗ್ರಂಥಾಲಯ 1935ರಲ್ಲಿ ಗ್ರಂಥಾಲಯ ಶಿಕ್ಷಣದ ತರಗತಿಯನ್ನು ಪ್ರಾರಂಭಿಸಿತು. ಈ ತರಗತಿಗಳು ಎರಡು ವರ್ಷಕ್ಕೆ ಒಮ್ಮೆ ನಡೆಯುತ್ತಿದ್ದವು. ಪ್ರತಿಯೊಂದು ತರಗತಿಗೂ ಇಪ್ಪತ್ತು ವಿದ್ಯಾರ್ಥಿಗಳನ್ನು ತೆಗೆದುಕೊಳ್ಳುತ್ತಿದ್ದರು. ಈ ಶಿಕ್ಷಣಕ್ಕೆ ಸೇರಲು ಕನಿಷ್ಠ ವಿದ್ಯಾರ್ಹತೆ ವಿಶ್ವವಿದ್ಯಾಲಯದ ಪದವಿಯೆಂದಿದ್ದರೂ ಕೆಲಸ ಮಾಡುತ್ತಿರುವವರಿಗೆ ಧಾರಾಳ ಅವಕಾಶವಿತ್ತು. ವರ್ಗೀಕರಣ, ಸೂಚೀಕರಣ, ಪುಸ್ತಕಗಳ ಆಯ್ಕೆ, ಪರಾಮರ್ಶನ ಕಾರ್ಯ, ದಿನವಹಿ ಕೆಲಸ ನಿರ್ವಹಣೆ ಮತ್ತು ಗ್ರಂಥಾಲಯ ವ್ಯವಸ್ಥೆ, ಗ್ರಂಥಸೂಚಿ, ಲೇಖನಕಲೆ– ಮುಂತಾದವುಗಳ ಶಿಕ್ಷಣ ನೀಡಲಾಗುತ್ತಿತ್ತು. 1945ರ ವರೆಗೂ ಈ ವ್ಯವಸ್ಥೆ ಮುಂದುವರಿದು ಹಠಾತ್ತನೆ ನಿಂತು ಹೋಯಿತು.

ಬಂಗಾಲದಲ್ಲಿ ಕುಮಾರ ಮನೀಂದ್ರ ದೇವರಾಯ್ ಮಹಾಶಯ ಅವರು ಸ್ಥಾಪಿಸಿದ ಬಂಗಾಲ ಗ್ರಂಥಾಲಯ ಸಂಘ ಬನಸ್‌ಬೆರಿಯಾದಲ್ಲಿ ಗ್ರಂಥಾಲಯ ಶಿಕ್ಷಣ ಶಾಲೆಯನ್ನು ಸ್ಥಾಪಿಸಿ (1936) ಸರ್ಟಿಫಿಕೇಟ್ ಶಿಕ್ಷಣವನ್ನು ಪ್ರಾರಂಭಿಸಿತು (1937). ಮದ್ರಾಸಿನ ಮೇಲ್ಪಂಕ್ತಿಯನ್ನನುಸರಿಸಿ ಆಂಧ್ರ ವಿಶ್ವವಿದ್ಯಾಲಯ ಸಹ ಒಂದು ಸರ್ಟಿಫಿಕೇಟ್ ಶಿಕ್ಷಣವನ್ನು ಪ್ರಾರಂಭಿಸಿತು (1935).

1941ರ ವರೆಗೂ ಮದ್ರಾಸ್ ವಿಶ್ವವಿದ್ಯಾಲಯ ಮಾತ್ರ ಸ್ನಾತಕೋತ್ತರ ಡಿಪ್ಲೊಮಾ ತರಗತಿಯನ್ನು ನಡೆಸುತ್ತಿತ್ತು. ಆಂಧ್ರ ವಿಶ್ವವಿದ್ಯಾಲಯ ಈ ತರಗತಿಯನ್ನು 1935ರಲ್ಲಿ ಪ್ರಾರಂಭಿಸಿದರೂ ಕ್ರಮೇಣ 1947ರ ಹೊತ್ತಿಗೆ ಅದನ್ನು ಕೈ ಬಿಟ್ಟಿತು. ಡಿಪ್ಲೊಮ ಶಿಕ್ಷಣವನ್ನು ಆರಂಭಿಸಿದ ಇತರ ವಿಶ್ವವಿದ್ಯಾಲಯಗಳೆಂದರೆ ಬನಾರಸ್ (1941), ಬೊಂಬಾಯಿ (1943) ಮತ್ತು ಕಲ್ಕತ್ತ (1945). ಕೆಲವು ವಿಶ್ವವಿದ್ಯಾಲಯಗಳು ಸಂಜೆ ತರಗತಿಗಳನ್ನು ಪ್ರಾರಂಭಿಸಿ ಕಚೇರಿಗಳಲ್ಲಿ ಕೆಲಸ ಮಾಡುತ್ತಿರುವ ಗುಮಾಸ್ತರಿಗೂ ವಿದ್ಯಾವಂತ ನಿರುದ್ಯೋಗಿಗಳಿಗೂ ಗ್ರಂಥಾಲಯಶಿಕ್ಷಣಕ್ಕೆ ಅವಕಾಶ ಮಾಡಿಕೊಟ್ಟವು. ಇಷ್ಟಾದರೂ ತರಬೇತಿ ಹೊಂದಿದ ಗ್ರಂಥಪಾಲರ ಅಭಾವ ಪರಿಹಾರವಾಗುವಂತಿರಲಿಲ್ಲ. ಅಂದಿಗೆ ಜರೂರಾಗಿ ಆಗಬೇಕಾದ ಕೆಲಸ ಒಂದಿತ್ತು–ಇರುವ ಗ್ರಂಥಾಲಯ ಶಿಕ್ಷಣ ಸಂಸ್ಥೆಗಳಲ್ಲಿ ಏಕರೂಪತೆ ಬರಬೇಕಿತ್ತು.

ಜಯಪುರದಲ್ಲಿ 1944ರ ಏಪ್ರಿಲ್‌ನಲ್ಲಿ ಸಮಾವೇಶಗೊಂಡ ಅಖಿಲ ಭಾರತ ಗ್ರಂಥಾಲಯ ಸಮ್ಮೇಳನ ಶಿಕ್ಷಣ ಕ್ರಮ, ಅವಧಿ, ಪಠ್ಯವಿಷಯ–ಮೊದಲಾದುವುಗಳಲ್ಲಿ ಏಕರೂಪತೆಯನ್ನು ತರಬೇಕೆಂದು ಸಲಹೆ ನೀಡಿತು.

1947ರಲ್ಲಿ ದೆಹಲಿ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿದ್ದ ಮಾರಿಸ್ ಗ್ವಯರ್ ಅವರು ರಂಗನಾಥನ್ ಅವರನ್ನು ಬರಮಾಡಿಕೊಂಡು ಅವರ ನೇತೃತ್ವದಲ್ಲಿ ತಮ್ಮ ವಿಶ್ವವಿದ್ಯಾಲಯದಲ್ಲಿ ಗ್ರಂಥಾಲಯ ಶಿಕ್ಷಣ ವಿಭಾಗವನ್ನು ತೆರೆದರು. ಗ್ರಂಥಾಲಯ ಶಿಕ್ಷಣದಲ್ಲಿ ಡಿಗ್ರಿ ತರಗತಿಯನ್ನು ಪ್ರಾರಂಭಿಸುವಲ್ಲಿ ದೆಹಲಿ ವಿಶ್ವವಿದ್ಯಾಲಯ ಮೊದಲನೆಯದಾಯಿತು. ಕ್ರಮೇಣ ಈ ವಿಭಾಗದಲ್ಲಿ ಪಿ.ಎಚ್‌ಡಿ. ಪದವಿಗೆ ಓದುವ ಅವಕಾಶವನ್ನೂ ಒದಗಿಸಲಾಯಿತು. ಇದಕ್ಕಿಂತ ಮೊದಲು ಅಮೆರಿಕದಲ್ಲಿ ಮಾತ್ರ ಇಂಥ ಸೌಲಭ್ಯವಿತ್ತು. ರಂಗನಾಥನ್ ಅವರಿಂದ ರೂಪುಗೊಂಡ ಗ್ರಂಥಾಲಯ ವಿಜ್ಞಾನ ಶಿಕ್ಷಣ ಮೂರು ಹಂತಗಳಲ್ಲಿತ್ತು. 1. ಡಿಪ್ಲೊಮ ನೀಡುವ ಒಂದು ವರ್ಷದ ಸ್ನಾತಕೋತ್ತರ ಶಿಕ್ಷಣ, 2. ಮಾಸ್ಟರ್ ಪದವಿ ನೀಡುವ ಒಂದು ವರ್ಷದ ಸ್ನಾತಕೋತ್ತರ, 3. ಪಿ.ಎಚ್‌ಡಿ. ಪದವಿ ನೀಡುವ ಎರಡು ಅಥವಾ ಮೂರು ವರ್ಷಗಳ ಶಿಕ್ಷಣ. ಶಿಕ್ಷಣದಲ್ಲಿ ಗುಣಮಟ್ಟವನ್ನು ಕಾಯ್ದುಕೊಳ್ಳುವ ಸಲುವಾಗಿ ಪ್ರವೇಶ ಕುಶಾಗ್ರಮತಿಗಳಿಗೆ ಮಾತ್ರ ಸೀಮಿತವಾಗಿತ್ತು. 1948ರಲ್ಲಿ ಡಿಪ್ಲೊಮ ಪಡೆದವರು ಕೇವಲ ನಾಲ್ಕು ಮಂದಿ ಮಾತ್ರ.

ತರಬೇತಿ ಪಡೆದ ಗ್ರಂಥಪಾಲರ ಅಭಾವವನ್ನು ಕಂಡುಕೊಂಡು ಭಾರತ ಸರ್ಕಾರದ ಸಚಿವಾಲಯ ಗ್ರಂಥಾಲಯ ವಿಜ್ಞಾನ ಸಂಸ್ಥೆಯೊಂದನ್ನು ರಚಿಸುವಂತೆ ದೆಹಲಿ ವಿಶ್ವವಿದ್ಯಾಲಯವನ್ನು ಕೇಳಿಕೊಂಡಿತಾಗಿ ಅದೇ ವರ್ಷ ಆ ಹೆಸರಿನ ಒಂದು ಸಂಸ್ಥೆ ಜನ್ಮತಾಳಿತು (1958).

ಭಾರತದಲ್ಲಿ ಈಗ ನಾಲ್ಕು ಹಂತಗಳಲ್ಲಿ ಗ್ರಂಥಾಲಯ ವಿಜ್ಞಾನದಲ್ಲಿ ತರಬೇತಿ ಕೊಡಲಾಗುತ್ತಿದೆ. ಅ) ಸರ್ಟಿಫಿಕೇಟ್ ತರಗತಿ, ಆ) ಡಿಪ್ಲೊಮ ಅಥವಾ ಪದವಿ, ಇ) ಮಾಸ್ಟರ್ ಪದವಿ ಮತ್ತು ಈ) ಡಾಕ್ಟೊರೇಟ್ ಪದವಿ.

ಅ) ಸರ್ಟಿಫಿಕೇಟ್ ತರಬೇತಿ : ಇದರ ಮುಖ್ಯ ಉದ್ದೇಶಗಳು ಇವು : 1. ಗ್ರಂಥಾಲಯ ವಿಜ್ಞಾನದಲ್ಲಿ ಸ್ಥೂಲವಾದ ತಿಳಿವಳಿಕೆಯನ್ನೀಯುವುದು. 2. ಗ್ರಂಥಾಲಯದ ದೈನಂದಿನ ಕ್ರಿಯೆಗಳಲ್ಲಿ ತರಬೇತಿ ನೀಡುವುದು. 3. ಪದವಿಪೂರ್ವ ವಿದ್ಯಾರ್ಥಿಗಳಿಗೆ ಗ್ರಂಥಾಲಯ ವಿಜ್ಞಾನದಲ್ಲಿ ತರಬೇತಿ ನೀಡಿ ಗ್ರಂಥಾಲಯಗಳಲ್ಲಿ ಸೇವಾವಕಾಶ ಕಲ್ಪಿಸುವುದು. 4. ಶಾಲಾ ಗ್ರಂಥಾಲಯಗಳ ಗ್ರಂಥಪಾಲರಿಗೆ ತರಬೇತಿ ನೀಡುವುದು. ಗ್ರಂಥಾಲಯಗಳಲ್ಲಿ ಅಷ್ಟೇನೂ ಕ್ಲಿಷ್ಟವಲ್ಲದ ಕೆಲಸಗಳನ್ನು ನಿರ್ವಹಿಸಲು ಸಾಧ್ಯವಾಗುವಂತೆ ಎಸ್.ಎಸ್.ಎಲ್.ಸಿ. ಅಥವಾ ಮೆಟ್ರಿಕ್ ಪರೀಕ್ಷೆ ಮುಗಿಸಿದವರಿಗಾಗಿ ಮೂರು ಅಥವಾ ನಾಲ್ಕು ತಿಂಗಳ ಅವಧಿಯ ಶಿಕ್ಷಣ ನೀಡುವ ಸರ್ಟಿಫಿಕೇಟ್ ತರಬೇತಿಯನ್ನು ಅಲಿಗಡ, ಆಂಧ್ರ, ಮದ್ರಾಸ್, ಉಸ್ಮಾನಿಯ ಮತ್ತು ರಾಜಸ್ತಾನ್ ವಿಶ್ವವಿದ್ಯಾಲಯಗಳು ಪ್ರಾರಂಭಿಸಿದವು. ಈ ತರಬೇತಿಯನ್ನು ಈಗ ಗ್ರಂಥಾಲಯ ವಿಜ್ಞಾನ ಸಂಸ್ಥೆಗಳು (ಮುಖ್ಯವಾಗಿ ಹೈದರಾಬಾದ್ ಮತ್ತು ವಿಜಯವಾಡ), ಕೆಲವು ರಾಜ್ಯಸರ್ಕಾರಗಳು ಮತ್ತು ಗ್ರಂಥಾಲಯ ಸಂಘಗಳು ನಡೆಸುತ್ತಿವೆ. ಪಠ್ಯವಿಷಯಗಳು ಮುಖ್ಯವಾಗಿ ನಾಲ್ಕು. 1. ವರ್ಗೀಕರಣಶಾಸ್ತ್ರ (ತತ್ತ್ವ ಹಾಗೂ ಅಭ್ಯಾಸ), 2. ಸೂಚೀಕರಣಶಾಸ್ತ್ರ (ತತ್ತ್ವ ಹಾಗೂ ಅಭ್ಯಾಸ), 3. ಗ್ರಂಥಾಲಯಗಳ ಆಡಳಿತ ವಿಧಾನ ಮತ್ತು ಮೇಲ್ವಿಚಾರಣೆ ಮತ್ತು 4. ಗ್ರಂಥಸೂಚಿ ಮತ್ತು ಪರಾಮರ್ಶನ ಸೇವೆ. ಕೆಲವೊಂದು ಶಾಲೆಗಳು ಗ್ರಂಥಾಲಯಗಳ ದೈನಂದಿನ ಕೆಲಸಗಳು ಹಾಗೂ ವಾಸ್ತವಿಕ ವಿಷಯಗಳ ಕುರಿತು ವಿಶೇಷ ತರಬೇತಿ ನೀಡುತ್ತವೆ.

ಈ ಹಂತದ ಶಿಕ್ಷಣ ಮುಖ್ಯವಾಗಿ ಗ್ರಂಥಾಲಯಗಳ ತುರ್ತು ಅಗತ್ಯಗಳನ್ನು ಗಮನಿಸಿ ಅದಕ್ಕೆ ಪೂರಕವಾಗುವ ರೀತಿಯಲ್ಲಿ ನಡೆಸಲ್ಪಡುತ್ತಿದೆಯಷ್ಟೆ.

ಆ) ಡಿಪ್ಲೊಮ ಅಥವಾ ಪದವಿ ಶಿಕ್ಷಣ: ಭಾರತದಲ್ಲಿ ಈಗ ಬಹುಸಂಖ್ಯೆಯ ವಿದ್ಯಾಲಯಗಳು ವಿವಿಧ ಹಂತಗಳಲ್ಲಿ ಗ್ರಂಥಾಲಯ ವಿಜ್ಞಾನ ಶಿಕ್ಷಣವನ್ನೀಯುತ್ತಿವೆ. ಅಲಿಗಡ, ಗೌಹಾತಿ, ಕೇರಳ, ಲಖನೌ, ಮೈಸೂರು ಮತ್ತು ರಾಜಸ್ತಾನ್ ವಿಶ್ವವಿದ್ಯಾಲಯಗಳ ಹೊರತು ಮಿಕ್ಕ ವಿಶ್ವವಿದ್ಯಾಲಯಗಳು ಪ್ರಥಮತಃ ಗ್ರಂಥಾಲಯ ವಿಜ್ಞಾನದಲ್ಲಿ ಸ್ನಾತಕೋತ್ತರ ಡಿಪ್ಲೊಮ ತರಗತಿಗಳನ್ನು ಪ್ರಾರಂಭಿಸಿ ಕ್ರಮೇಣ ಸ್ನಾತಕೋತ್ತರ ಪದವಿ ಶಿಕ್ಷಣ ಕೊಡತೊಡಗಿವೆ. ಕಲ್ಕತ್ತ ವಿಶ್ವವಿದ್ಯಾಲಯ 1969ರ ವರೆಗೆ ಡಿಪ್ಲೊಮ ನೀಡುತ್ತಿದ್ದು ಡಿಗ್ರಿಗೆ ಬದಲಾಯಿಸಿಕೊಂಡಿದೆ. ಭಾರತ ಸರ್ಕಾರದ ವಿಶ್ವವಿದ್ಯಾಲಯ ಧನಸಹಾಯ ಆಯೋಗ ನೇಮಿಸಿದ ಸಮೀಕ್ಷಣ ಸಮಿತಿ, ವಿಶ್ವವಿದ್ಯಾಲಯಗಳು ಗ್ರಂಥಾಲಯ ವಿಜ್ಞಾನದಲ್ಲಿ ಡಿಪ್ಲೊಮ ಶಿಕ್ಷಣ ನೀಡಬೇಕೆಂದು ಶಿಫಾರಸುಮಾಡಿದಂದಿನಿಂದ ಈ ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆಯುಂಟಾಗಿದೆ.

ಶಿಕ್ಷಣಕ್ಕೆ ಪ್ರವೇಶ ಬಯಸುವ ಪ್ರತಿಯೊಬ್ಬನೂ ಕನಿಷ್ಠ ಪಕ್ಷ ಯಾವುದಾದರೊಂದು ವಿಷಯದಲ್ಲಿ ಬ್ಯಾಚುಲರ್ ಪದವಿ ಗಳಿಸಿರಲೇಬೇಕೆಂದು ಎಲ್ಲ ವಿಶ್ವವಿದ್ಯಾಲಯಗಳೂ ನಿಯಮಿಸಿವೆ. ಹೀಗಿದ್ದರೂ ಹೆಚ್ಚಿನ ಸಂಖ್ಯೆಯಲ್ಲಿ ವಿಶೇಷ ಅರ್ಹತೆಯುಳ್ಳ ವಿದ್ಯಾರ್ಥಿಗಳು ಪ್ರವೇಶ ಕೋರಿ ಅರ್ಜಿ ಸಲ್ಲಿಸುತ್ತಿರುವುದರಿಂದ ಅಂಥ ಅಭ್ಯರ್ಥಿಗಳಿಗೆ ಹೆಚ್ಚಿನ ಅವಕಾಶ ನೀಡಲಾಗುತ್ತಿದೆ. ಕೆಲವೆಡೆ ಅಭ್ಯರ್ಥಿಗಳು ಕನಿಷ್ಠ ಪದವಿ ಪರೀಕ್ಷೆಯಲ್ಲಿ ದ್ವಿತೀಯ ದರ್ಜೆಯಲ್ಲಿ ತೇರ್ಗಡೆಯಾಗಿರಬೇಕೆಂಬ ನಿಯಮವಿದೆ. ಇನ್ನು ಕೆಲವು ವಿಶ್ವವಿದ್ಯಾಲಯಗಳಲ್ಲಿ ಕನಿಷ್ಠ ಪಕ್ಷ ಕೆಲವು ವರ್ಷ ಗ್ರಂಥಾಲಯಗಳಲ್ಲಿ ಕೆಲಸ ಮಾಡಿದ ಅನುಭವ ಹೊಂದಿರಬೇಕೆಂಬ ನಿಯಮವಿದೆ. ಕೆಲವು ವಿಶ್ವವಿದ್ಯಾಲಯಗಳು ಗ್ರಂಥಾಲಯ ವಿಜ್ಞಾನದಲ್ಲಿ ಪ್ರವೇಶ ಬಯಸುವ ವಿದ್ಯಾರ್ಥಿಗಳ ಸಾಮಾನ್ಯ ಜ್ಞಾನವನ್ನು ತಿಳಿಯಲು ಪರೀಕ್ಷೆ ನಡೆಸುತ್ತವೆ; ಅನಂತರ ಸಂದರ್ಶನ ಪರೀಕ್ಷೆಯೂ ನಡೆಯುತ್ತದೆ.

ಗ್ರಂಥಾಲಯದಲ್ಲಿ ಶಿಕ್ಷಣಕ್ರಮ ಯಶಸ್ವಿಯಾಗಬೇಕಾದರೆ ಅದರ ಬೋಧನ ವಿಷಯಗಳು ದೇಶ, ಕಾಲ, ಪರಿಸ್ಥಿತಿಯ ಆವಶ್ಯಕತೆಗಳಿಗನುಗುಣವಾಗಿ ಯೋಜಿಸಲ್ಪಡಬೇಕು; ಉದ್ದೇಶ ಹಾಗೂ ಭಾವನೆಗಳು ಶಿಕ್ಷಣಕ್ರಮದಲ್ಲಿ ಫಲಕಾರಿಯಾಗಿ ಮೂಡಿ ಬರಬೇಕು. ವಿಶ್ವವಿದ್ಯಾಲಯ ಧನ ಆಯೋಗ ನೇಮಿಸಿದ ಸಮೀಕ್ಷಣ ಸಮಿತಿ ಗ್ರಂಥಾಲಯ ವಿಜ್ಞಾನದಲ್ಲಿ ಪದವಿ ಶಿಕ್ಷಣದ ಮುಖ್ಯ ಉದ್ದೇಶಗಳನ್ನು ಈ ಕೆಳಗಿನಂತೆ ವಿವರಿಸಿದೆ.

1. ಗ್ರಂಥಾಲಯ ವಿಜ್ಞಾನದ ಮೂಲಭೂತ ತತ್ತ್ವಗಳ ಸಮಗ್ರ ತಿಳಿವಳಿಕೆಯನ್ನು ವಿದ್ಯಾರ್ಥಿಗೆ ಕೊಡುವುದು. 2. ಬದಲಾಗುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಪರಿಸ್ಥಿತಿಯಲ್ಲಿ ಗ್ರಂಥಾಲಯಗಳ ಕಾರ್ಯವ್ಯಾಪ್ತಿ ಮತ್ತು ಉದ್ದೇಶಗಳ ಬಗ್ಗೆ ಸರಿಯಾದ ತಿಳಿವಳಿಕೆಯುಂಟಾಗುವಂತೆ ಮಾಡುವುದು. 3. ಗ್ರಂಥಾಲಯಗಳ ಆಡಳಿತ ವ್ಯವಸ್ಥೆ ಗ್ರಂಥಪಾಲನ ವೃತ್ತಿಕುಶಲತೆಗಳಲ್ಲಿ ವಿದ್ಯಾರ್ಥಿಗೆ ಸಾಕಷ್ಟು ಪರಿಜ್ಞಾನ ಮತ್ತು ತರಬೇತಿಯನ್ನೀಯುವುದು. ವಿಶ್ವವಿದ್ಯಾಲಯಗಳು ಆಯಾ ಪ್ರಾದೇಶಿಕ ಅಗತ್ಯಗಳು ಮತ್ತು ಅನುಕೂಲತೆಗಳನ್ನು ಗಮನದಲ್ಲಿಟ್ಟುಕೊಂಡು ಪಠ್ಯವಿಷಯಗಳಲ್ಲಿ ಬದಲಾವಣೆಗಳನ್ನಾಗಲೀ ಹೊಂದಾಣಿಕೆಯನ್ನಾಗಲೀ ಮಾಡಿಕೊಳ್ಳಲು ಅವಕಾಶವಿದೆ.

ಇ) ಮಾಸ್ಟರ್ ಪದವಿ ಶಿಕ್ಷಣ : ಭಾರತದಲ್ಲಿ ಮೊತ್ತಮೊದಲಿಗೆ ಮಾಸ್ಟರ್ ಪದವಿ ಶಿಕ್ಷಣವನ್ನು ಪ್ರಾರಂಭಿಸಿದ (1949) ಕೀರ್ತಿ ದೆಹಲಿ ವಿಶ್ವವಿದ್ಯಾಲಯಕ್ಕೆ ಸಲ್ಲುತ್ತದೆ. ಈ ಶಿಕ್ಷಣದ ರೂಪರೇಖೆ, ಉದ್ದೇಶ, ಪಠ್ಯಕ್ರಮವನ್ನು ಸ್ವತಃ ರಂಗನಾಥನ್ ಅವರೇ ಯೋಜಿಸಿದ್ದರು. ಅದರ ಉದ್ದೇಶಗಳು ಹೀಗಿವೆ:

(1) ವಿದ್ಯಾರ್ಥಿಗಳಿಗೆ ಜ್ಞಾನಪ್ರಪಂಚ, ಅದರ ವ್ಯವಸ್ಥೆ ಮತ್ತು ಬೆಳೆವಣಿಗೆ, ಸಂಶೋಧನೆಗಳನ್ನು ಸಂಘಟಿಸುವ ಬಗೆ ಹಾಗೂ ಸಂಶೋಧನ ವಿಧಾನಗಳು–ಇವನ್ನು ಪರಿಚಯಿಸುವುದು. (2) ಓದುವ ಹಾಗೂ ಸಂಬಂಧಪಟ್ಟ ಇತರ ವಸ್ತುರೂಪಗಳು ಮತ್ತು ಪ್ರಲೇಖನ ಪಟ್ಟಿಗಳ ವಿಷಯವಾಗಿ ಇಲ್ಲವೆ ವಿವಿಧ ಬಗೆಯ ಗ್ರಂಥಾಲಯಗಳ ಬಗ್ಗೆ ವಿಶಿಷ್ಟ ಪರಿಣತಿಯನ್ನೊದಗಿಸುವುದು. (3) (ಅ) ಪ್ರಲೇಖನ ವಿಧಾನದಲ್ಲಿ ಗ್ರಂಥಾಲಯಗಳ ನವೀನ ತಂತ್ರಗಳು ಹಾಗೂ (ಆ) ಕೆಲವು ಜಾತಿಯ ಗ್ರಂಥಾಲಯಗಳ ಕಾರ್ಯನಿರ್ವಹಣೆ ಮತ್ತು ಆಡಳಿತ ಕ್ರಮಗಳ ಬಗ್ಗೆ ಪ್ರಾವೀಣ್ಯ ಬರುವಂತೆ ಮಾಡುವುದು.

ಗ್ರಂಥಾಲಯ ವಿಜ್ಞಾನದ ಎಲ್ಲ ಸ್ತರಗಳಲ್ಲಿ ನಡೆಯುತ್ತಿರುವ ಸಂಶೋಧನೆ ಹಾಗೂ ವಿಶ್ಲೇಷಣೆಗಳ ಫಲವಾಗಿ ಈ ವಿಜ್ಞಾನ ಅನೇಕ ಹೊಸ ಆವಿಷ್ಕಾರಗಳನ್ನು ಪಡೆದು ತಾಂತ್ರಿಕ ಹಾಗೂ ವೈಜ್ಞಾನಿಕ ರಂಗಗಳಲ್ಲಿ ನಡೆಯುತ್ತಿರುವ ಬೆಳೆವಣಿಗೆಗೆ ಸಹಕಾರಿಯಾಗಿದೆ. ಪ್ರಲೇಖನ ಹಾಗೂ ಮಾಹಿತಿ ವಿಜ್ಞಾನಗಳಲ್ಲಿ ಇಂದು ವಿಶ್ವಾದ್ಯಂತ ಮುಖ್ಯವಾಗಿ ಅಮೆರಿಕ, ಇಂಗ್ಲೆಂಡ್, ರಷ್ಯ, ಜಪಾನ್, ಆಸ್ಟ್ರೇಲಿಯಗಳಲ್ಲಿ ಶೋಧನೆಗಳು ಅವಿರತವಾಗಿ ನಡೆದು ಆ ಬಗ್ಗೆ ಸಾಹಿತ್ಯ ನಿರ್ಮಾಣವಾಗಿದೆ. ಗ್ರಂಥಾಲಯ ಶಿಕ್ಷಣ ವಿಭಾಗ ಈ ಬದಲಾವಣೆಗಳನ್ನು ಹಾಗೂ ಸಂಶೋಧನೆಗಳನ್ನು ಕಾಲಕಾಲಕ್ಕೆ ತನ್ನ ಪಠ್ಯವಿಷಯಗಳಲ್ಲಿ ಸೇರಿಸಿಕೊಳ್ಳುತ್ತಿರಬೇಕು. ಭಾರತದಲ್ಲಿನ ಗ್ರಂಥಾಲಯಗಳು ಈ ಬಗ್ಗೆ ಗಮನ ಹರಿಸುತ್ತಿವೆ. ಗ್ರಂಥಾಲಯ ವಿಜ್ಞಾನಗಳಲ್ಲಿ ಪ್ರಲೇಖನ ಮತ್ತು ಮಾಹಿತಿ ವಿಜ್ಞಾನಗಳ ಬಗ್ಗೆ ಹೆಚ್ಚು ಹೆಚ್ಚು ತಿಳಿವಳಿಕೆ ನೀಡುವ ಆವಶ್ಯಕತೆ ಕಂಡುಬರುತ್ತಿದೆ. ಈ ದಿಸೆಯಲ್ಲಿ ದೆಹಲಿ ವಿಶ್ವವಿದ್ಯಾಲಯ ಹೊಸ ಹೆಜ್ಜೆಯನ್ನಿಟ್ಟಿದೆ. ಮೇಲಿನ ವಿಷಯಗಳನ್ನು ಮನಗಂಡು 1972 ರ ವಿದ್ಯಾವರ್ಷದಿಂದ ಅದು ತನ್ನ ಪಠ್ಯಕ್ರಮವನ್ನು ಪರಿಷ್ಕರಿಸಿದೆಯಲ್ಲದೆ ಶಿಕ್ಷಣಾವಧಿ ಪೂರ್ತಿಗೊಂಡು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದಲ್ಲಿ ಮಾಸ್ಟರ್ ಪದವಿ ನೀಡುತ್ತಿದೆ.

ಪರಿಷ್ಕೃತ ಪಠ್ಯವಿಷಯದಲ್ಲಿ ಮುಖ್ಯವಾಗಿ ಗ್ರಂಥಾಲಯ ವ್ಯವಸ್ಥಾ ವಿಶ್ಲೇಷಣೆ ಮತ್ತು ಸಂಖ್ಯಾಸಂಗ್ರಹಣ ವಿಧಾನ, ಗ್ರಂಥಾಲಯ ಮಾಹಿತಿ ವಿಜ್ಞಾನಗಳ ಪ್ರಚಲಿತ ಸಮಸ್ಯೆಗಳು, ಮಾಹಿತಿ ಸಂಗ್ರಹಣ ಮತ್ತು ಪರಿಶೋಧನ ಪದ್ಧತಿ, ಲೇಖನ ಪ್ರತೀಕರಣ (ರಿಪ್ರೋಗ್ರಫಿ) ಮತ್ತು ಐಚ್ಛಿಕ ವಿಷಯಗಳಾಗಿ ವೈದ್ಯಕೀಯ, ಕೃಷಿ ಮತ್ತು ಯಂತ್ರವಿಜ್ಞಾನಗಳ ಗ್ರಂಥಾಲಯ ಪದ್ಧತಿಗಳು, ಅವುಗಳ ಸಾಹಿತ್ಯ ಹಾಗೂ ಗ್ರಂಥಸೂಚಿಗಳು–ಮುಂತಾದ ನೂತನ ವಿಷಯಗಳು ಸೇರಿವೆ. ಇವಲ್ಲದೆ ವಿದ್ಯಾರ್ಥಿ ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನಗಳಲ್ಲಿನ ಪ್ರಚಲಿತ ಸಮಸ್ಯೆಗಳನ್ನು ಅಧ್ಯಯನ ಮಾಡಿ ವರದಿ ಸಲ್ಲಿಸಬೇಕಾಗುತ್ತದೆ.

ದೆಹಲಿಯ ವಿಶ್ವವಿದ್ಯಾಲಯದ ಮಾದರಿಯಲ್ಲಿಯೇ ಬನಾರಸ್ (1963), ಪಂಜಾಬ್ (1970), ಮೈಸೂರು (1971), ಕರ್ನಾಟಕ (1971), ಅಲಿಗಡ (1971), ವಿಕ್ರಮ್ (1971) ವಿಶ್ವವಿದ್ಯಾಲಯಗಳು ಮಾಸ್ಟರ್ ಪದವಿ ಶಿಕ್ಷಣವನ್ನೀಯಲು ಪ್ರಾರಂಭಿಸಿವೆ. ಗ್ರಂಥಾಲಯಗಳಲ್ಲಿ ವಿಶೇಷತಃ ವಿಶ್ವವಿದ್ಯಾಲಯಗಳಲ್ಲಿ ಹಲವಾರು ವರ್ಷಗಳ ಸೇವಾನುಭವವಿದ್ದ ಗ್ರಂಥಪಾಲರಿಗೆ ಹೆಚ್ಚಿನ ವಿದ್ಯಾರ್ಹತೆಯನ್ನು ಕಲ್ಪಿಸಿ, ಪ್ರಚಲಿತ ವಿಷಯಗಳ ಬಗ್ಗೆ ಪರಿಜ್ಞಾನವೀಯುವ ಸಲುವಾಗಿ ಮುಂಬಯಿ ವಿಶ್ವವಿದ್ಯಾಲಯ 1967 ರಿಂದ ಮಾಸ್ಟರ್ ಪದವಿಯಲ್ಲಿ ತೆರಪಿನ ಶಿಕ್ಷಣವನ್ನೀಯುತ್ತಿದೆ.

ಮೇಲೆ ಹೇಳಿದ ಎಲ್ಲ ವಿಶ್ವವಿದ್ಯಾಲಯಗಳು ತಮ್ಮ ಶಿಕ್ಷಣ ಕ್ರಮ, ಪಠ್ಯವಿಷಯಗಳು, ಪ್ರವೇಶ ನೀಡಿಕೆ ಮುಂತಾದವುಗಳಲ್ಲಿ ದೆಹಲಿ ವಿಶ್ವವಿದ್ಯಾಲಯದ ಮಾದರಿಯನ್ನೇ ಹೆಚ್ಚು ಕಡಿಮೆ ಅನುಸರಿಸಿದೆ. ಇವು ಗ್ರಂಥಾಲಯ ವಿಜ್ಞಾನದಲ್ಲಿ ವಿಶೇಷತಃ ಪ್ರಲೇಖನ ಶಾಸ್ತ್ರದಲ್ಲಿ ಉನ್ನತ ಮಟ್ಟದ ಶಿಕ್ಷಣವನ್ನೀಯುತ್ತಿವೆ. ದೆಹಲಿ ವಿಶ್ವವಿದ್ಯಾಲಯದ ಗ್ರಂಥಾಲಯ ವಿಜ್ಞಾನ ಭಾಗವನ್ನು ಯುನೆಸ್ಕೊ ತನ್ನ ಯೋಜನೆಗಳ ಒಂದು ಅಂಗವನ್ನಾಗಿ ಅಂಗೀಕರಿಸಿದೆ.

ಈ) ಡಾಕ್ಟೊರೇಟ್ ಪದವಿ : ದೆಹಲಿ ವಿಶ್ವವಿದ್ಯಾಲಯ ಈ ಶಿಕ್ಷಣವನ್ನು ಪ್ರಥಮತಃ 1948 ರಲ್ಲಿ ಪ್ರಾರಂಭಿಸಿತು. ಸಂಶೋಧನ ವಿಧಾನಗಳಲ್ಲಿ ತರಬೇತಿ ನೀಡುವುದು ಇದರ ಮುಖ್ಯ ಉದ್ದೇಶ. ಅನಂತರ ಭಾರತದ ಅನೇಕ ವಿಶ್ವವಿದ್ಯಾನಿಲಯಗಳು ಇಂಥ ಪ್ರೌಢ ವ್ಯಾಸಂಗಕ್ಕೆ ಅನುವು ಮಾಡಿಕೊಟ್ಟಿವೆ.

ಭಾರತೀಯ ಗ್ರಂಥಾಲಯ ವಿಜ್ಞಾನ ಶಿಕ್ಷಕರ ಸಂಘ : 1969 ರ ಡಿಸೆಂಬರ್ 19 ರಂದು ಬೆಂಗಳೂರಿನ ಪ್ರಲೇಖನ ಸಂಶೋಧನೆ ಮತ್ತು ತರಬೇತಿ ಕೇಂದ್ರದಲ್ಲಿ ವಾರ್ಷಿಕ ವಿಚಾರ ಸಂಕೀರ್ಣದಲ್ಲಿ ಭಾಗವಹಿಸಲು ಸಮಾವೇಶಗೊಂಡಿದ್ದ ಗ್ರಂಥಾಲಯ ವಿಜ್ಞಾನ ಶಿಕ್ಷಕರು ಈ ಸಂಸ್ಥೆಯನ್ನು ಸ್ಥಾಪಿಸಿದರು. ಗ್ರಂಥಾಲಯ ವಿಜ್ಞಾನದಲ್ಲಿ ವಿವಿಧ ಹಂತಗಳಲ್ಲಿ ಶಿಕ್ಷಣಕ್ರಮ, ಅಧ್ಯಾಪಕರ ಸಮಸ್ಯೆ, ಶಿಕ್ಷಣೋಪಕರಣಗಳು, ಸಂಶೋಧನೆ ಮೊದಲಾದ ವಿಷಯಗಳಲ್ಲಿ ಈ ಸಂಘ ಪ್ರತಿವರ್ಷ ವಿಚಾರಸಂಕಿರಣವನ್ನು ಏರ್ಪಡಿಸುತ್ತದೆ.

ಪ್ರಲೇಖನಶಾಸ್ತ್ರದಲ್ಲಿ ವಿಶೇಷ ಶಿಕ್ಷಣ ನೀಡುವ ಸಂಸ್ಥೆಗಳು : ಭಾರತದಲ್ಲಿ ಪ್ರಲೇಖನಶಾಸ್ತ್ರದಲ್ಲಿ ವಿಶೇಷ ಶಿಕ್ಷಣ ನೀಡುವ ಸಂಸ್ಥೆಗಳು ಎರಡು (1) ಭಾರತ ರಾಷ್ಟ್ರೀಯ ವಿಜ್ಞಾನ ಪ್ರಲೇಖನ ಕೇಂದ್ರ, ಹೊಸ ದೆಹಲಿ ಮತ್ತು (2) ಪ್ರಲೇಖನ ಸಂಶೋಧನ ಮತ್ತು ತರಬೇತಿ ಕೇಂದ್ರ, ಬೆಂಗಳೂರು. ಈ ಎರಡು ಕೇಂದ್ರಗಳೂ ಪ್ರಲೇಖನ ವಿಷಯದಲ್ಲಿ ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ ನೀಡುತ್ತಿವೆ.

1. ದೆಹಲಿಯ ಭಾರತ ರಾಷ್ಟ್ರೀಯ ವಿಜ್ಞಾನ ಪ್ರಲೇಖನ ಕೇಂದ್ರ 1952 ರಲ್ಲಿ ಯುನೆಸ್ಕೊದ ನೆರವಿನಿಂದ ಪ್ರಾರಂಭಗೊಂಡು ಭಾರತ ಸರ್ಕಾರದ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನ ಮಂಡಳಿಯ ಒಂದು ಅಂಗವಾಗಿ ಕಾರ್ಯಾರಂಭ ಮಾಡಿತು. ತನ್ನಿತರ ಉದ್ದೇಶದೊಂದಿಗೆ ಪ್ರಲೇಖನ ಶಾಸ್ತ್ರದಲ್ಲಿ ತರಬೇತಿ ನೀಡುವ ಕಾರ್ಯಕ್ರಮವನ್ನಿದು ರೂಪಿಸಿಕೊಂಡಿದೆ.

ಈ ಶಿಕ್ಷಣಾವಧಿಯಲ್ಲಿ ಮುಖ್ಯವಾಗಿ ಗ್ರಂಥಾಲಯ ವಿಜ್ಞಾನದ ಮೂಲತತ್ತ್ವಗಳು, ವಿಶಿಷ್ಟ ಗ್ರಂಥಾಲಯ ಸೇವಾಕ್ರಮ, ವರ್ಗೀಕರಣ, ಸೂಚೀಕರಣ, ಪರಾಮರ್ಶನಸೇವೆ, ಗ್ರಂಥಸೂಚಿ, ಆಡಳಿತ ನಿರ್ವಹಣೆ, ಸಂಘಟನೆ–ಮೊದಲಾದವುಗಳಲ್ಲಿ ತಿಳಿವಳಿಕೆ ಹಾಗೂ ಅಭ್ಯಾಸವನ್ನೀಯಲಾಗುತ್ತದೆ. ಮಾತ್ರವಲ್ಲದೆ ಜ್ಞಾನಪ್ರಪಂಚ, ಅದರ ಬೆಳೆವಣಿಗೆ, ಪ್ರಲೇಖನ ವಿಜ್ಞಾನ, ಭಾಷಾಂತರ ಕ್ರಮಗಳು, ರೇಖನ ಪ್ರತಿಕರಣ, ಮಾಹಿತಿ ಸಂಗ್ರಹಣೆ ಹಾಗೂ ಪರಿಶೋಧನೆ ಮೊದಲಾದ ತಂತ್ರಗಳಲ್ಲಿ ವಿಶೇಷ ಪರಿಣತಿಯನ್ನೊದಗಿಸಲಾಗುತ್ತದೆ.

ಪ್ರಪಂಚದ ನಾನಾ ಭಾಷೆಗಳಲ್ಲಿ ವೈಜ್ಞಾನಿಕ ಗ್ರಂಥಗಳು, ಲೇಖನಗಳು, ಸಂಶೋಧನ ಪ್ರಬಂಧಗಳು ನಿರಂತರವಾಗಿ ಪ್ರಕಟವಾಗುತ್ತಿರುವ ಕಾಲದಲ್ಲಿ ಯಾವ ಭಾಷೆಯನ್ನೂ ಕಡಿಮೆ ಯೆಂದು ಪರಿಗಣಿಸಬಾರದು. ಸಂಶೋಧನ ಕಾರ್ಯಗಳಿಗೆ ಭಾಷೆ ತೊಡಕಾಗಿ ನಿಲ್ಲಬಾರದು. ಇದನ್ನ ಮನಗಂಡ ಈ ಸಂಸ್ಥೆ ರಷ್ಯನ್ ಭಾಷೆಯಲ್ಲಿ ಭಾಷಾಂತರ ಶಿಕ್ಷಣವನ್ನು ಒದಗಿಸುತ್ತದೆ.

2. ಬೆಂಗಳೂರಿನ ಪ್ರಲೇಖನ ಸಂಶೋಧನ ಮತ್ತು ತರಬೇತಿ ಕೇಂದ್ರ : 1962 ರ ಜನವರಿಯಲ್ಲಿ ಪ್ರಾರಂಭವಾದ ಈ ಸಂಸ್ಥೆ ಎಸ್.ಆರ್. ರಂಗನಾಥನ್ ಅವರ ನಿರ್ದೇಶನದಲ್ಲಿ ತನ್ನ ಕೆಲಸವನ್ನಾರಂಭಿಸಿತು. ಪ್ರಲೇಖನ ವಿಷಯಗಳಲ್ಲಿ ಸಂಶೋಧನೆ ನಡೆಸುವುದು, ಪ್ರಲೇಖನ ಕುಶಲಿಗಳನ್ನು ತಯಾರುಮಾಡುವುದು, ಪ್ರಲೇಖನ ವಿಷಯಕವಾದ ಸಮಸ್ಯೆಗಳನ್ನು ಬಿಡಿಸುವುದು–ಈ ಸಂಸ್ಥೆಯ ಮುಖ್ಯ ಉದ್ದೇಶಗಳು. ಅಸೋಸಿಯೇಟ್, ಅಸೋಸಿಯೇಟ್ ಫೆಲೋಷಿಪ್, ಫೆಲೋಷಿಪ್ ಎಂಬ ಮೂರು ಪದವಿಗಳನ್ನು ಈ ಸಂಸ್ಥೆ ನೀಡುತ್ತಿದೆ. ಭಾರತ ಸರ್ಕಾರದ ಶಿಕ್ಷಣ ಸಚಿವಾಲಯ ನೀಡುವ ಈ ಅಸೋಸಿಯೇಟ್ ಪದವಿಯನ್ನು (ಗ್ರಂಥಾಲಯಗಳಲ್ಲಿ ಹುದ್ದೆಗಳಿಗೆ ನೇಮಕ ಮಾಡುವ ವಿಷಯದಲ್ಲಿ) ಭಾರತದ ಇತರ ವಿಶ್ವವಿದ್ಯಾಲಯಗಳು ನೀಡುವ ಮಾಸ್ಟರ್ ಪದವಿಗೆ ಸಮವೆಂದು ಪರಿಗಣಿಸಿತು (1968).

**(ನೋಡಿ– ಗ್ರಂಥಾಲಯ)**

ಅಮೇರಿಕದ ಸಂಯುಕ್ತಸಂಸ್ಥಾನಗಳಲ್ಲಿ : ಗ್ರಂಥಾಲಯ ಶಿಕ್ಷಣ ವಿಭಾಗವನ್ನು ವಿಶ್ವವಿದ್ಯಾಲಯಕ್ಕೆ ಸೇರಿಸಬೇಕು ಹಾಗೂ ಗ್ರಂಥಾಲಯ ವಿಜ್ಞಾನದಲ್ಲಿ ಆಳವಾದ ಅಧ್ಯಯನ ಮತ್ತು ಸಂಶೋಧನೆಗಳಿಗೆ ಪ್ರೋತ್ಸಾಹ ನೀಡಬೇಕು–ಎಂಬ ವಿಲಿಯಂಸನ್ನರ ವರದಿಯಲ್ಲಿನ ಎರಡು ಪ್ರಮುಖ ಸಲಹೆಗಳು ವಿದ್ಯಾಸಂಸ್ಥೆಗಳಲ್ಲಿನ ಗ್ರಂಥಪಾಲನ ವೃತ್ತಿಯ ಮುನ್ನಡೆಗೆ ಅಸ್ತಿಭಾರದಂತಿವೆ. 1924 ರಲ್ಲಿ ಸ್ಥಾಪನೆಗೊಂಡ ಗ್ರಂಥಾಲಯ ವೃತ್ತಿ ಶಿಕ್ಷಣ ಮಂಡಳಿ ಮತ್ತು 1928 ರಲ್ಲಿ ಸ್ಥಾಪನೆಗೊಂಡ ಶಿಕಾಗೊ ವಿಶ್ವವಿದ್ಯಾಲಯದ ಸ್ನಾತಕೋತ್ತರ ಗ್ರಂಥಾಲಯ ವಿಜ್ಞಾನ ಶಾಲೆ–ಇವು ವಿಲಿಯಂಸನ್ನರ ವರದಿಯ ಅನುಷ್ಠಾನಕ್ಕೆ ಇಟ್ಟ ಪ್ರಮುಖ ಹೆಜ್ಜೆಗಳಾಗಿವೆ.

1946 ರಲ್ಲಿ ಏಕಕಾಲಕ್ಕೆ ಎರಡು ಗ್ರಂಥಗಳು ಪ್ರಕಟವಾದವು. ಅವೆರಡೂ ವಿಲಿಯಂಸನ್ನರ ವರದಿಯಂತೆಯೇ ಪ್ರಾಧಾನ್ಯ ಪಡೆದಿದ್ದು ಆಗಬಹುದಾದ ವ್ಯಾಪಕ ಬದಲಾವಣೆಗಳಿಗೆ ಮುನ್‌ಸೂಚನೆಗಳಾದವು. ಅವುಗಳೆಂದರೆ–ಡಂಟನ್ನನ ಎಜುಕೇಷನ್ ಫಾರ್ ಲೈಬ್ರೇರಿಯನ್‌ಷಿಪ್, ಕ್ರಿಟಿಸಿಸಂ ಡಿಪ್ಲೊಮಾಸ್ ಅಂಡ್ ಪ್ರಪೋಸಲ್ಸ್ ಮತ್ತು ವ್ಹೀಲರರ ಪ್ರಾಗ್ರೆಸ್ ಅಂಡ್ ಪ್ರಾಬ್ಲಂಸ್ ಇನ್ ಎಜುಕೇಷನ್ ಫಾರ್ ಲೈಬ್ರೇರಿಯನ್‌ಷಿಪ್, ಇವೆರಡೂ ಉದ್ಗ್ರಂಥಗಳು ಗ್ರಂಥಾಲಯ ವೃತ್ತಿ ಶಿಕ್ಷಣದ ಮೂಲಭೂತ ಸಮಸ್ಯೆಗಳನ್ನು ಗುರುತಿಸಿ ಮುಂದೆ ಆಗಬೇಕಾದ ಮಹತ್ತರ ಬದಲಾವಣೆಗಳ ಕುರಿತು ವಿವೇಚನೆ ನಡೆಸಿವೆ. ಕಳೆದ ಕಾಲುಶತಮಾನದಿಂದ ವೀಕ್ಷಕರು ಮಾಡಿರುವ ಖಚಿತವಾದ ಟೀಕೆಗಳು ವಿದ್ಯಾ ಸಂಸ್ಥೆಗಳ ಗ್ರಂಥಪಾಲನ ವೃತ್ತಿಯ ದೃಷ್ಟಿಯಿಂದ ಪ್ರಾಮುಖ್ಯ ಪಡೆದಿವೆ.

ಗ್ರಂಥಾಲಯ ಶಿಕ್ಷಣದಲ್ಲಿ ಸಂಶೋಧನೆ: ಗ್ರಂಥಾಲಯ ಶಿಕ್ಷಣದಲ್ಲಿ ಸಂಶೋಧನೆಗಳು ನಡೆದಿದ್ದು ಇತ್ತೀಚಿನ ವರ್ಷಗಳಲ್ಲಿ. ಅದೂ ಎರಡನೆಯ ಮಹಾಯುದ್ಧದಿಂದೀಚೆಗೆ. ಆ ಮೊದಲು ಪ್ರಕಟವಾದ ಗ್ರಂಥಗಳು ಮತ್ತು ನಿಯತಕಾಲಿಕೆ ಲೇಖನಗಳು ಬಹುಮಟ್ಟಿಗೆ ಗ್ರಂಥಾಲಯ ಕಾರ್ಯ ಸ್ವರೂಪದ ವಿವರಣೆ, ಗ್ರಂಥ ಸೂಚಿಗಳ ರಚನೆ ಮತ್ತು ಗ್ರಂಥಪಾಲರ ವೈಯಕ್ತಿಕ ಅನುಭವಗಳನ್ನೊಳಗೊಂಡಿರುತ್ತಿದ್ದುವು. ಸಂಶೋಧನ ಸ್ವರೂಪದ ಮಾಹಿತಿಗಳು ಇವುಗಳಲ್ಲಿ ವಿರಳವಾಗಿದ್ದುವೆಂದೇ ಹೇಳಬೇಕು. ಇಂಥ ಸಾಹಿತ್ಯವನ್ನು ಯಾವ ರೀತಿಯ ಮೌಲ್ಯ ಮಾಪನೆಗಾಗಲೀ ತೌಲನಿಕ ವಿಶ್ಲೇಷಣೆಗಾಗಲೀ ಒಳಪಡಿಸುವುದು ಪ್ರಯೋಜನಕಾರಿಯಾಗಿರಲಿಲ್ಲ.

ಕಳೆದ ದಶಕದ ಪೂರ್ವಾರ್ಧದಲ್ಲಿ ಈ ವಾತಾವರಣ ಉತ್ತಮಗೊಂಡಿತು. ಗ್ರಂಥಾಲಯ ಮತ್ತು ಪ್ರಲೇಖನ ಕೇಂದ್ರಗಳ ಪ್ರಸ್ತುತ ಪರಿಸ್ಥಿತಿಯಲ್ಲಿ ಸುಧಾರಣೆಯಾಗದ ಹೊರತು ಓದುಗರ ಆವಶ್ಯಕತೆಗಳನ್ನು ಪೂರೈಸುವುದು ದುಸ್ಸಾಧ್ಯವೆಂಬುದು ಮನದಟ್ಟಾಯಿತು. ಈ ಸುಧಾರಣೆಗಳಿಗೆ ಆಳವಾದ ಸಂಶೋಧನೆ ಮತ್ತು ವ್ಯಾಪಕವಾದ ಸಮೀಕ್ಷೆಗಳ ಗಟ್ಟಿ ತಳಹದಿ ಅಗತ್ಯವಾಯಿತು. ಗ್ರಂಥಾಲಯದ ಹಲವಾರು ಕ್ಷೇತ್ರಗಳಲ್ಲಿ ಅದರಲ್ಲೂ ಮಾಹಿತಿ ಸಂಗ್ರಹಣೆ ಮತ್ತು ವಿತರಣೆಯಲ್ಲಿ ಈ ಸುಧಾರಣೆಗಳು ಆಗಬೇಕಾಯಿತು. ನವೀನ ಸಂಪರ್ಕಸಾಧನಗಳು ಲಭ್ಯವಿರುವಾಗ ಗ್ರಂಥಾಲಯ ಸೇವಾ ವಿಧಾನಗಳಲ್ಲಿ ಮಾರ್ಪಾಟುಗಳು ಅನಿವಾರ್ಯವಾದುವು. ಇಂಥ ಒಂದು ವಿಶಿಷ್ಟ ಸನ್ನಿವೇಶದಲ್ಲಿ ಗ್ರಂಥಾಲಯ ಶಿಕ್ಷಣ ಮತ್ತು ಸೇವೆಯಲ್ಲಿ ಹೊಸ ಹೊಸ ವಿಧಾನ ಮತ್ತು ಸಂಶೋಧನೆಗಳಿಗೆ ಸಾಕಷ್ಟು ಅವಕಾಶವಿದೆ. ಅಷ್ಟೇ ಅಲ್ಲದೆ, ಈ ಸನ್ನಿವೇಶ ಹೊಸ ಸವಾಲನ್ನು ತಂದೊಡ್ಡಿದೆ. ಇಂಗ್ಲೆಂಡ್ ಮತ್ತು ಅಮೇರಿಕದ ಅನೇಕ ಗ್ರಂಥಾಲಯ ಶಿಕ್ಷಣ ಸಂಸ್ಥೆಗಳು ಈ ಸವಾಲನ್ನು ಬಹುಮಟ್ಟಿಗೆ ಎದುರಿಸಿವೆ.

ಸಂಶೋಧನೆ ಎನಿಸಿಕೊಳ್ಳುವ ಯಾವ ಒಂದು ಯೋಜನೆಯೇ ಇರಲಿ ಯಾವ ರಾಷ್ಟ್ರದಲ್ಲಿಯೇ ಆಗಲಿ ಅದು ಬಹು ಕ್ಲಿಷ್ಟವಾದದ್ದು. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿಯಂತೂ ಇದು ಬಹು ಜಟಿಲವಾದದ್ದು. ಈ ದೇಶಗಳಲ್ಲಿ ಅಸಂಖ್ಯಾತ ಸಮಸ್ಯೆಗಳು ಇದ್ದು ಅವನ್ನು ಬಿಡಿಸುವಾಗ ಹಲವಾರು ತೊಡಕುಗಳು ಕಂಡುಬರುತ್ತವೆ. ಗ್ರಂಥಾಲಯ ಕ್ಷೇತ್ರದಲ್ಲಿರುವ ಸಮಸ್ಯೆಗಳಿಗೆ ಪರಿಹಾರ ಹುಡುಕುವಾಗ ಗ್ರಂಥಾಲಯಗಳ ಮಾನ್ಯತೆಯ ಪ್ರಶ್ನೆ ವ್ಯಾಪಕವಾಗಿರುವ ನಿರಕ್ಷರತೆ, ಗ್ರಂಥಾಲಯಗಳ ಬೆಳವಣಿಗೆಯಲ್ಲಿ ಯೋಜನೆಯಿಲ್ಲದಿರುವುದು, ಇಂಥ ಯೋಜನೆಗಳನ್ನು ತಯಾರಿಸುವಾಗ ಬೇಕಾಗುವ ಸಮಂಜಸ ಅಂಕಿಸಂಖ್ಯೆಗಳ ಅಭಾವ, ಕಟ್ಟಡ, ಗ್ರಂಥಸಂರಕ್ಷಣೆ ಮೊದಲಾದವುಗಳಿಗೆ ಬೇಕಾದ ತಾಂತ್ರಿಕ ಜ್ಞಾನದ ಅಭಾವ–ಇವೇ ಮೊದಲಾದ ಸಮಸ್ಯೆಗಳು ಎದುರಾಗುತ್ತವೆ.

ಗ್ರಂಥಾಲಯ ವಿಷಯಗಳನ್ನು ಕುರಿತ ಸಂಶೋಧನೆಗಳು ಮುಂದುವರಿಯುತ್ತಿರುವ ದೇಶಗಳಲ್ಲಿಯೇ ಆಗಲಿ ಮುಂದುವರಿದ ದೇಶಗಳಲ್ಲಿಯೇ ಆಗಲಿ–ಒಂದು ಸರ್ವ ಸಾಮಾನ್ಯ ವಿಷಯವನ್ನು ಅಲಕ್ಷಿಸಲಿಕ್ಕಾಗದು. ಗ್ರಂಥಾಲಯ ವಿಜ್ಞಾನಕ್ಕೂ ಉಳಿದ ಹಲವಾರು ಶಾಸ್ತ್ರಾದಿವಿಷಯಗಳಿಗೂ ನಿಕಟವಾದ ಸಂಬಂಧವಿದೆ. ಗ್ರಂಥಾಲಯ ವಿಷಯದಲ್ಲಿರುವ ಪರಿಣತಿಯೊಂದಿಗೆ ಸಂಶೋಧಕ ಬೇರೆ ವಿಷಯಗಳಲ್ಲೂ ವಿಶಿಷ್ಟ ಜ್ಞಾನ ಮತ್ತು ಪರಿಣತಿ ಪಡೆದಿರಬೇಕಾಗುತ್ತದೆ. ಈಚೆಗೆ ಪ್ರಲೇಖನ, ಸ್ವಯಂತ್ರೀಕರಣ, ಯಂತ್ರೀಕೃತ ಸೂಚೀಕರಣ ವ್ಯವಸ್ಥೆ ಮೊದಲಾದವು ಬಳಕೆಗೆ ಬರುತ್ತಿವೆಯಾಗಿ ಗ್ರಂಥಾಲಯ ವಿಜ್ಞಾನದಲ್ಲಿ ತೀವ್ರವಾಗಿ ಹೊಸ ಹೊಸ ಸಂಶೋಧನೆಗಳು ನಡೆಯುತ್ತಿವೆ.

ಗ್ರೇಟ್ ಬ್ರಿಟನಿನಲ್ಲಿ : 1880 ರಷ್ಟು ಹಿಂದೆ, ಬ್ರಿಟನಿನ ಗ್ರಂಥಾಲಯ ಸಂಘ, ಅದು ಸ್ಥಾಪನೆಯಾದ ಮೂರು ವರ್ಷಗಳಲ್ಲಿಯೇ ಗ್ರಂಥಾಲಯ ಶಿಕ್ಷಣವನ್ನು ಕುರಿತು ಚಿಂತಿಸತೊಡಗಿತು. ಗ್ರಂಥಾಲಯ ವಿಜ್ಞಾನದಲ್ಲಿ 1885ರಲ್ಲಿ ಲಂಡನ್ ಮತ್ತು ನಾಟಿಂಗ್‌ಹ್ಯಾಮ್‌ಗಳಲ್ಲಿ ಪರೀಕ್ಷೆಗಳು ನಡೆದುವು. ಬ್ರಿಟನ್ನಿನ ಮೊದಲ ಗ್ರಂಥಾಲಯ ಶಿಕ್ಷಣ ಕೇಂದ್ರ ಲಂಡನ್ ವಿಶ್ವವಿದ್ಯಾಲಯದ ಆಶ್ರಯದಲ್ಲಿ 1919ರಲ್ಲಿ ಪ್ರಾರಂಭವಾಯಿತು. ಆಗಿನ ಬ್ರಿಟಿಷ್ ಶಿಕ್ಷಣ ಪದ್ಧತಿಯಂತೆ ಗ್ರಂಥಾಲಯ ಶಿಕ್ಷಣ ಪದ್ಧತಿಯಲ್ಲಿಯೂ ಪರೀಕ್ಷೆಗಳ ಮೇಲೆ ಹೆಚ್ಚಿನ ಹತೋಟಿಯನ್ನು ಗ್ರಂಥಾಲಯ ಸಂಘವೇ ಹೊಂದಿತ್ತು. ತರಬೇತಿಯಲ್ಲಿ ಅಭ್ಯರ್ಥಿಗಳಿಗೆ ಬೇಕಾಗಿದ್ದ ಸಾಧನ ಸಲಕರಣೆಗಳ ಹಾಗೂ ಇತರ ಸವಲತ್ತುಗಳ ಕಡೆಗೆ ಅಷ್ಟೊಂದು ಗಮನ ಕೊಟ್ಟಿರಲಿಲ್ಲ. ಕೆಲಸದಲ್ಲಿರುವವರಿಗೆ (ಉದ್ಯೋಗಸ್ಥರಿಗೆ) ಆಯಾಯ ವೃತ್ತಿಗಳಲ್ಲಿ ತರಬೇತಿ ನೀಡುವ ವಿಧಾನ ಬ್ರಿಟನಿನಲ್ಲಿ ಆಳವಾಗಿ ನೆಲೆಯೂರಿ ನಿಂತಿದೆ. ಈ ಪದ್ಧತಿಗೆ 1898 ರ ರಾಯಲ್ ಚಾರ್ಟರಿನ ರಕ್ಷಣೆಯೂ ಇದೆ. ಈ ಶಾಸನ ಬ್ರಿಟನಿನ ಗ್ರಂಥಾಲಯ ಸಂಘವನ್ನು ವೃತ್ತಿಸಂಘವೆಂದು ಪರಿಗಣಿಸಿ ಮಾನ್ಯ ಮಾಡಿದೆ. ಶಾಸನದ ಮೂರನೆಯ ಮತ್ತು ಹತ್ತನೆಯ ನಿಬಂಧನೆಗಳು ಗ್ರಂಥಾಲಯ ವೃತ್ತಿಯ ಸುಧಾರಣೆ, ವೃತ್ತಿಯಲ್ಲಿ ಬೇಕಾಗುವ ಅರ್ಹತೆ, ಪರೀಕ್ಷೆಗಳ ಮೇಲೆ ನಿಯಂತ್ರಣ ಮತ್ತು ಪ್ರಶಸ್ತಿ ಪತ್ರಗಳ ವಿತರಣೆ–ಇವುಗಳ ಬಗ್ಗೆ ಗ್ರಂಥಾಲಯ ಸಂಘಕ್ಕೆ ಇರುವ ಜವಾಬ್ದಾರಿಯನ್ನು ಒತ್ತಿ ಹೇಳುತ್ತವೆ. ಗ್ರಂಥಾಲಯ ಶಿಕ್ಷಣ ಕ್ಷೇತ್ರದಲ್ಲಿ ಗ್ರಂಥಾಲಯ ಸಂಘವನ್ನು ಬಿಟ್ಟರೆ ಬೇರಾವ ಸಂಘಕ್ಕಾಗಲೀ ಶಿಕ್ಷಣ ಸಂಸ್ಥೆಗಾಗಲೀ ಇಷ್ಟೊಂದು ಅಧಿಕಾರವಿರುವುದಿಲ್ಲ.

ಬ್ರಿಟನಿನ ದೊಡ್ಡ ದೊಡ್ಡ ನಗರಗಳಲ್ಲಿ ಗ್ರಂಥಾಲಯ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಿ ಆ ಮೂಲಕ ವೃತ್ತಿನಿರತ ಗ್ರಂಥಪಾಲರಿಗೆ ಗ್ರಂಥಾಲಯ ಸಂಘ ನಡೆಸುವ ಪರೀಕ್ಷೆಗೆ ಕೂಡುವ ಅಭ್ಯರ್ಥಿಗಳಿಗೆ ತರಬೇತಿ ನೀಡುವ ಹಲವಾರು ಪ್ರಯತ್ನಗಳು ಕಳೆದ ಶತಕದ ಕೊನೆಯಲ್ಲಿ ನಡೆದುವು. ಇಂಥವುಗಳಲ್ಲಿ ಲಂಡನ್ (1998) ಮತ್ತು ಮ್ಯಾಂಚೆಸ್ಟರ್ (1899) ಮುಖ್ಯವಾದುವುಗಳು. ಮೊದಲು ಐವತ್ತು ವರ್ಷಗಳಲ್ಲಿ ತೆರಪಿನ ಶಿಕ್ಷಣವನ್ನು ನೀಡುವ ಕೆಲಸವನ್ನು ಹಲವಾರು ವಾಣಿಜ್ಯ ಹಾಗೂ ತಾಂತ್ರಿಕ ಕಾಲೇಜುಗಳು ಮುಂದುವರಿಸಿಕೊಂಡು ಬಂದುವು. ಸೆಪ್ಟೆಂಬರ್‌ನಿಂದ ಜೂನ್ ವರೆಗೆ ವಾರಕ್ಕೆ ಒಂದು, ಎರಡು ತರಗತಿಗಳನ್ನು ಸ್ಥಳೀಯ ಶಿಕ್ಷಣ ಸಂಸ್ಥೆಗಳು ನಡೆಸುತ್ತಿದ್ದ ಉದಾಹರಣೆಗಳು ಕಾಣಸಿಗುತ್ತವೆ. ಈ ರೀತಿಯ ವಾರಿಕ ತರಬೇತಿ ಕೇಂದ್ರಗಳು ಬ್ರಿಟನ್ನಿನಾದ್ಯಂತ ಹರಡಿದ್ದು, ಬಹು ಮುಖ್ಯ ವೃತ್ತಿ ಶಿಕ್ಷಣ ಕೇಂದ್ರಗಳಾಗಿದ್ದುವು. ಈ ಅವಧಿಯಲ್ಲಿ ವಿಶ್ವವಿದ್ಯಾಲಯಗಳು ಈ ಬಗ್ಗೆ ಮೌನವಾಗೇ ಇದ್ದುವು. 1919ರಲ್ಲಿ ಲಂಡನ್ ವಿಶ್ವವಿದ್ಯಾಲಯ ಗ್ರಂಥಾಲಯ ಶಿಕ್ಷಣ ಕೇಂದ್ರವನ್ನು ಸ್ಥಾಪಿಸುವುದರಲ್ಲಿ ಮೊದಲನೆಯದಾಯಿತು. ಗ್ರಂಥಾಲಯ ಶಿಕ್ಷಣದಲ್ಲಿ ಡಿಪ್ಲೊಮ ಪದವಿಯನ್ನು ನೀಡುವುದರಲ್ಲಿ ಲಂಡನ್ ವಿಶ್ವವಿದ್ಯಾಲಯವೇ ಮೊದಲನೆಯದು. ಎರಡನೆಯದಾಗಿ ಈ ವಿಶ್ವವಿದ್ಯಾಲಯದ ಗ್ರಂಥಾಲಯ ವಿಜ್ಞಾನ ಪದವೀಧರರಿಗೆ ಬ್ರಿಟಿಷ್ ಗ್ರಂಥಾಲಯದಲ್ಲಿ ಕೆಲವು ವಿಶೇಷ ಸವಲತ್ತು ಮತ್ತು ವಿನಾಯಿತಿಗಳನ್ನು ನೀಡಲಾಯಿತು. ಬ್ರಿಟನ್ನಿನ ಗ್ರಂಥಪಾಲನ ವೃತ್ತಿಯ ಇತಿಹಾಸದಲ್ಲಿ ಮೊತ್ತಮೊದಲ ಬಾರಿಗೆ ಗ್ರಂಥಾಲಯ ಶಿಕ್ಷಣ ಕೇಂದ್ರ ಒಬ್ಬ ಪ್ರತ್ಯೇಕ ಹಾಗೂ ಪೂರ್ಣಾವಧಿಯ ನಿರ್ದೇಶಕನ ಆಡಳಿತಕ್ಕೆ ಒಳಪಟ್ಟದ್ದು ಬಹು ಮುಖ್ಯವಾದ ಅಂಶ.

ಬ್ರಿಟಿಷ್ ಗ್ರಂಥಾಲಯ ಪದ್ಧತಿಯಲ್ಲಿನ ಮುಖ್ಯ ಅಂಶ ಇದು : ಸ್ಥಾಪಿತವಾಗುವ ಪ್ರತಿ ಗ್ರಂಥಾಲಯ ಶಿಕ್ಷಣ ಸಂಸ್ಥೆಗೂ ಬ್ರಿಟಿಷ್ ಗ್ರಂಥಾಲಯ ಸಂಘದ ಪರವಾನಗಿ ಅಗತ್ಯವಾದರೂ ಸ್ಥಾಪನೆಯಾದ ಅನಂತರ ಆ ಶಿಕ್ಷಣ ಸಂಸ್ಥೆ ಗ್ರಂಥಾಲಯ ಸಂಘದ ಯಾವ ನಿಯಂತ್ರಣಕ್ಕೂ ಒಳಪಡದೆ ಮುಂದುವರಿಯಬಹುದು.

ಬ್ರಿಟನ್ನಿನ ಉನ್ನತ ಶಿಕ್ಷಣ ಪದ್ಧತಿ ಅಮೆರಿಕ ಮತ್ತು ಆಸ್ಟ್ರೇಲಿಯದ ಶಿಕ್ಷಣ ವಿಧಾನಕ್ಕಿಂತ ತೀರ ಭಿನ್ನವಾಗಿದೆ. ಹೇಗೆಂದರೆ–ಬ್ರಿಟನ್ನಿನಲ್ಲಿ ಗ್ರಂಥಾಲಯಶಾಸ್ತ್ರದ ಉನ್ನತ ಶಿಕ್ಷಣ ವಿಶ್ವವಿದ್ಯಾಲಯಗಳ ಸಾಂಪ್ರದಾಯಿಕ ಹಿಡಿತದಿಂದ ದೂರವಿರಲು ಪ್ರಯತ್ನಿಸಿದೆ. ಗ್ರಂಥಪಾಲರ ಆವಶ್ಯಕತೆಗಳು ಬ್ರಿಟನ್ನಿನಲ್ಲಿ ಬಹುಮಟ್ಟಿಗೆ ಉನ್ನತ ಶಿಕ್ಷಣ ಸಂಸ್ಥೆಗಳ ಮತ್ತು ವಿಶಿಷ್ಟ ಗ್ರಂಥಾಲಯ ಸಂಸ್ಥೆಗಳಿಗಿಂತ ಸಾರ್ವಜನಿಕ ಗ್ರಂಥಾಲಯಗಳಲ್ಲೇ ಇರುವುದನ್ನು ಕಾಣಬಹುದು. ಯುದ್ಧೋತ್ತರ ಬೆಳೆವಣಿಗೆಗಳು ಹೆಚ್ಚು ಹೆಚ್ಚಾಗಿ ಸಾರ್ವಜನಿಕ ಗ್ರಂಥಾಲಯಗಳ ಸಿಬ್ಬಂದಿಯ ತರಬೇತಿ ಮತ್ತು ಪೂರೈಕೆಯ ಕಡೆಗೇ ವಾಲುತ್ತದೆ. ಹೀಗಾಗಿ ಗ್ರಂಥಾಲಯಗಳಲ್ಲಿರುವ ವೈವಿಧ್ಯಗಳಿಗನುಸಾರವಾಗಿ ವಿವಿಧ ಬಗೆಯ ಮತ್ತು ವಿವಿಧ ಮಟ್ಟಗಳ ಗ್ರಂಥಾಲಯವಿಜ್ಞಾನ ಶಿಕ್ಷಣ ಸಂಸ್ಥೆಗಳು ಸ್ಥಾಪಿತವಾಗಿವೆ.

ಸ್ನಾತಕೋತ್ತರ ಗ್ರಂಥಾಲಯ ವಿಜ್ಞಾನದ ಪದವಿಗಳಲ್ಲಿ ಈ ಕೆಳಗಿನ ಅವಧಿ ಮತ್ತು ಶಿಕ್ಷಣ ವಿಧಾನಗಳು ಪ್ರಚುರವಾಗಿವೆ. ಗ್ರಂಥಾಲಯ ಸಂಘದ ಒಂದು ವರ್ಷ ಅವಧಿಯ ಸ್ನಾತಕೋತ್ತರ ಪರೀಕ್ಷೆ; ಒಂದು ವರ್ಷ ಅವಧಿಯ ಸ್ನಾತಕೋತ್ತರ ಡಿಪ್ಲೊಮ ಮಟ್ಟದ ವಿಶ್ವವಿದ್ಯಾಲಯ ಪರೀಕ್ಷೆ; ವಿಶ್ವವಿದ್ಯಾಲಯದ ಪದವಿಯಿಲ್ಲದೆ ನಡೆಸುವವರಿಗೆ ಎರಡು ವರ್ಷದ ಪರೀಕ್ಷೆ ಮತ್ತು ಒಂದು ವರ್ಷ ಅವಧಿಯ ಎಂ.ಎ. ಅಥವಾ ಎಂ.ಎಸ್‌ಸಿ. ಪರೀಕ್ಷೆ.

ಈ ರೀತಿಯ ಶಿಕ್ಷಣ ವಿಧಾನಗಳು ಲಂಡನ್ ವಿಶ್ವವಿದ್ಯಾಲಯದಲ್ಲಿ ಪ್ರಚುರದಲ್ಲಿವೆ. ಗ್ರಂಥಾಲಯ ವಿಜ್ಞಾನದ ವಿವಿಧ ವಿಭಾಗಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸವಿರುವ ತರಬೇತಿಗಳನ್ನು ಷಫೀಲ್ಡ್, ಸ್ಟ್ರಾಚ್‌ಲೈಡ್ ಮತ್ತು ಕ್ವೀನ್ಸ್ ವಿಶ್ವವಿದ್ಯಾಲಯಗಳು ನಡೆಸುತ್ತಿವೆ. ಷಫೀಲ್ಡ್ ವಿಶ್ವವಿದ್ಯಾಲಯ ವೈಜ್ಞಾನಿಕ ಹಾಗೂ ಕೈಗಾರಿಕಾ ಕ್ಷೇತ್ರಗಳ ಗ್ರಂಥಪಾಲರಿಗೆ ವಿಶಿಷ್ಟ ರೀತಿಯ ಪಠ್ಯಕ್ರಮವನ್ನು ಹೊಂದಿದೆ. ಇದು ಗ್ರಂಥಾಲಯ ವಿಜ್ಞಾನದ ಜೊತೆಗೆ ಮಾಹಿತಿ ಶಾಸ್ತ್ರದಲ್ಲಿಯೂ ತರಬೇತಿ ನೀಡುತ್ತದೆ. ಇಲ್ಲಿನ ವಿದ್ಯಾರ್ಥಿಗಳು ಗ್ರಂಥಾಲಯ ಹಾಗೂ ಮಾಹಿತಿ ಶಾಸ್ತ್ರದ ಯಾವುದಾದರೊಂದು ವಿಶಿಷ್ಟ ಅಂಗದಲ್ಲಿ ಆಳವಾದ ಅಧ್ಯಯನ ನಡೆಸಿ ಪರಿಣತಿಯನ್ನು ಪಡೆಯಬೇಕಾಗುತ್ತದೆ. ಲಂಡನ್ ವಿಶ್ವವಿದ್ಯಾಲಯ ಕೂಡ ಇದೇ ರೀತಿಯ ಶಿಕ್ಷಣ ಪದ್ಧತಿಯನ್ನು ಹೊಂದಿದ್ದು ಜೊತೆಗೆ ಅಧ್ಯಾಪಕ ಗ್ರಂಥಪಾಲರಿಗೆ ವಿಶಿಷ್ಟ ತರಬೇತಿ ನೀಡುತ್ತಿದೆ. ಈ ಎಲ್ಲ ನಾಲ್ಕು ವಿಶ್ವವಿದ್ಯಾಲಯಗಳ ಶಿಕ್ಷಣ ಕ್ರಮವನ್ನೂ ಗ್ರಂಥಾಲಯ ಸಂಘ ಪುರಸ್ಕರಿಸಿದೆ. ವಿಶ್ವವಿದ್ಯಾಲಯದ ಒಂದು ಶಿಕ್ಷಣ ಕೇಂದ್ರವಿದ್ದರೆ, ಅದು ಪದವಿಪೂರ್ವದ ಅಭ್ಯರ್ಥಿಗಳ ಆಶೋತ್ತರ ಮತ್ತು ಅಭಿರುಚಿಗಳ ಮೇಲೆ ಸಾಕಷ್ಟು ಪ್ರಭಾವವನ್ನು ಬೀರಬಲ್ಲದು. ಆಸಕ್ತಿಯುಳ್ಳ ಅಭ್ಯರ್ಥಿಗಳನ್ನೂ ಪ್ರತಿಭಾವಂತ ಶಿಕ್ಷಕರನ್ನೂ ಆಕರ್ಷಿಸಬಲ್ಲುದು.

ಗ್ರಂಥಾಲಯ ವಿಜ್ಞಾನದ ಯಾವುದಾದರೊಂದು ವಿಷಯದ ಮೇಲೆ ಪ್ರೌಢ ಪ್ರಬಂಧವೊಂದನ್ನು ಬರೆದು ಗ್ರಂಥಾಲಯ ಸಂಘದ ಸದಸ್ಯತ್ವವನ್ನು ಪಡೆಯಬಹುದು. ಪ್ರತಿವರ್ಷ ಐವತ್ತಕ್ಕಿಂತ ಹೆಚ್ಚಿನವರು ಅಂಗೀಕಾರ ಪಡೆಯುತ್ತಾರೆ.

ಸೋವಿಯತ್ ದೇಶದಲ್ಲಿ ಇಪ್ಪತ್ತನೆಯ ಶತಕದ ಪ್ರಾರಂಭದಲ್ಲಿ ಒಂದೇ ಒಂದು ಗ್ರಂಥಾಲಯ ವಿಜ್ಞಾನ ಶಿಕ್ಷಣ ಕೇಂದ್ರವಾಗಲೀ ಆ ವಿಷಯವನ್ನು ಕುರಿತ ನಿಯತಕಾಲಿಕೆಯಾಗಲೀ ಸಂಘ ಸಂಸ್ಥೆಯಾಗಲೀ ಇರಲಿಲ್ಲ. 1913 ರಲ್ಲಿ ಶಾನಿವ್‌ಸ್ಕಿ ಸಾರ್ವಜನಿಕ ವಿಶ್ವವಿದ್ಯಾಲಯ ಸಾರ್ವಜನಿಕ ಮತ್ತು ಸಾಮಾಜಿಕ ಗ್ರಂಥಾಲಯಗಳ ಸಿಬ್ಬಂದಿಗೆ ತರಬೇತಿ ನೀಡುವ ಮೂರು ವಾರದ ತರಬೇತಿಯನ್ನು ಪ್ರಾರಂಭಿಸಿತು. ಎಲ್.ಬಿ. ಖವ್ಕೀನಾ ಈ ಯೋಜನೆಯ ನಿರ್ದೇಶಕರಾಗಿದ್ದರು. ಈಕೆ ಗ್ರಂಥಾಲಯ ವಿಜ್ಞಾನದಲ್ಲಿ ಒಳ್ಳೆಯ ಪರಿಣತಿ ಪಡೆದವರಲ್ಲದೆ ರಷ್ಯದಲ್ಲಿ ಗ್ರಂಥಾಲಯಶಾಸ್ತ್ರ ಶಿಕ್ಷಣದ ಸಂಸ್ಥಾಪಕಳೂ ಆಗಿದ್ದಳು. 1918ರ ಅಂತರ್ಯುದ್ಧ ಮತ್ತು ಸೈನಿಕ ಕಾರ್ಯಾಚರಣೆಗಳ ಗೊಂದಲಮಯ ವಾತಾವರಣದಲ್ಲಿಯೇ ಪೀಪಲ್ಸ್ ಕಮಿಷನ್ ಆಫ್ ಎಜುಕೇಷನ್ ಸಂಸ್ಥೆ ವಯಸ್ಕರ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿತು. ಇದು ಈಗ ಲೆನಿನ್‌ಗ್ರಾಡಿನಲ್ಲಿ ಕೃಪ್ಸ್‌ಕಾಯಯಾ ಗ್ರಂಥಾಲಯ ಸಂಸ್ಥೆಯಾಗಿ ಮುಂದುವರಿಯುತ್ತಿದೆ. ರಷ್ಯದ ಸಾಂಸ್ಕೃತಿಕ ಕ್ರಾಂತಿಯಲ್ಲಿ ಇದು ಮಹತ್ತ್ವದ ಪಾತ್ರ ವಹಿಸಿದೆ. ರಷ್ಯದ ಮಹಾನಾಯಕ ಲೆನಿನ್ನನ ತೀವ್ರ ಆಸಕ್ತಿಯೂ ಗ್ರಂಥಾಲಯಗಳ ಅಭಿವೃದ್ಧಿಯ ಕಡೆಗೆ ಹೋಯಿತು. ಆಧುನಿಕ ರಷ್ಯದ ಮಹಾಶಿಲ್ಪಿಯೆನಿಸಿದ ಈತ ಗ್ರಂಥಾಲಯಗಳ ಸುವ್ಯವಸ್ಥಿತ ಬೆಳೆವಣಿಗೆಯಲ್ಲಿ ತೀವ್ರ ಆಸಕ್ತಿ ಹೊಂದಿದ್ದ. ವಿಶೇಷ ಹಾಗೂ ಏಕೈಕ ಗ್ರಂಥಾಲಯ ಪದ್ಧತಿಯ ನಿರ್ಮಾಣದೊಡನೆ ಲಭ್ಯವಿರುವ ಗ್ರಂಥಾಲಯ ಸಾಧನ–ಸಲಕರಣೆಗಳ ಪರಿಣಾಮಕಾರೀ ಉಪಯೋಗಗಳನ್ನು ಪಡೆದು ರಾಷ್ಟ್ರದ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬೆಳೆವಣಿಗೆಗೆ ದಾರಿ ಮಾಡಿಕೊಡುವುದರಲ್ಲಿ ಲೆನಿನ್ ಕೃತಕೃತ್ಯನಾದ.

ಮಾಸ್ಕೊ, ಲೆನಿನ್‌ಗ್ರಾಡ್, ಖೆಂಖೋಫ್ ಮತ್ತು ಉಲಾನ್–ಉಡೆ ವಿಶ್ವವಿದ್ಯಾಲಯಗಳ ಆಶ್ರಯದಲ್ಲಿ ನಾಲ್ಕು ಗ್ರಂಥಾಲಯ ಶಿಕ್ಷಣ ವಿಭಾಗಗಳು ಅಸ್ತಿತ್ವದಲ್ಲಿದೆ. ಇವುಗಳ ಜೊತೆಗೆ ದೇಶದ ಹಲವೆಡೆ ಅನೇಕ ಶಿಕ್ಷಕ ತರಬೇತಿ ಕೇಂದ್ರಗಳು ಗ್ರಂಥಾಲಯ ವಿಜ್ಞಾನದಲ್ಲಿ ಅಧ್ಯಯನ ಸೌಲಭ್ಯಗಳನ್ನು ಹೊಂದಿವೆ. ಮಾಸ್ಕೊ ಹಾಗೂ ಲೆನಿನ್‌ಗ್ರಾಡ್ ವಿಶ್ವವಿದ್ಯಾಲಯಗಳು ಮತ್ತು ವಿಜ್ಞಾನ ಅಕಾಡೆಮಿ–ಈ ಮೂರು ಸಂಸ್ಥೆಗಳು ಸ್ನಾತಕೋತ್ತರ ಗ್ರಂಥಾಲಯ ಅಧ್ಯಯನ ಯೋಜನೆಗಳನ್ನು ಹೊಂದಿವೆ. ಈ ಯೋಜನೆಗಳು ಪರಿಣತರಿಗೆ ಗ್ರಂಥಾಲಯ ಶಾಸ್ತ್ರದಲ್ಲಿ ತರಬೇತಿ ನೀಡುವುದಲ್ಲದೆ, ಗ್ರಂಥಾಲಯ ಕೇಂದ್ರಗಳಿಗೆ ಶಿಕ್ಷಕರನ್ನು ಒದಗಿಸುತ್ತವೆ. ಇಲ್ಲಿ ವಿದ್ಯಾರ್ಥಿಗಳು ಗ್ರಂಥಾಲಯ ವಿಜ್ಞಾನದಲ್ಲಿ ಪರಿಣತಿಯನ್ನು ಪಡೆಯುವುದರ ಜೊತೆಗೆ ಈ ಕ್ಷೇತ್ರದಲ್ಲಿ ಸಂಶೋಧನೆ ನಡೆಸಲೂ ಶಕ್ತರಾಗಿರುತ್ತಾರೆ. ಸ್ನಾತಕೋತ್ತರ ಶಿಕ್ಷಣ ಮೂರು ವರ್ಷದ ಪೂರ್ಣ ಅವಧಿಯದಾಗಿರುತ್ತದೆ. ಈ ಅವಧಿಯ ಕೊನೆಯಲ್ಲಿ ಪ್ರತಿಯೊಬ್ಬ ಅಭ್ಯರ್ಥಿಯೂ ಒಂದೊಂದು ಪ್ರೌಢ ಪ್ರಬಂಧವನ್ನು ಬರೆದು ಸಲ್ಲಿಸಿ ತಾನು ಬರೆದದ್ದನ್ನು ಸಮರ್ಥಿಸಿಕೊಳ್ಳಬೇಕಾಗುತ್ತದೆ. ಈ ಪದವಿ ಗಳಿಸಿದವ ಗ್ರಂಥಾಲಯ ವಿಜ್ಞಾನದಲ್ಲಿ ಶಿಕ್ಷಣ ನೀಡುವ ಅರ್ಹತೆಯನ್ನು ಪಡೆಯುತ್ತಾನೆ. ತರಬೇತಿ ಪಡೆಯುವ ಪ್ರತಿಯೊಬ್ಬ ಅಭ್ಯರ್ಥಿಗೂ ತರಬೇತಿ ಅವಧಿಯಲ್ಲಿ ವಿದ್ಯಾರ್ಥಿವೇತನ ಉಂಟು.

ಪ್ರೌಢ ಶಾಲೆಗಳಲ್ಲಿ ಉತ್ತೀರ್ಣರಾದ ಮತ್ತು ಪ್ರವೇಶ ಪರೀಕ್ಷೆಗಳನ್ನು ಮುಗಿಸಿದ ಗ್ರಂಥಪಾಲರಿಗೆ ರಷ್ಯದಲ್ಲಿ 100 ಕ್ಕೂ ಹೆಚ್ಚು ತರಬೇತಿ ಕೇಂದ್ರಗಳಿವೆ. ಇಂಥ ಕೇಂದ್ರಗಳು ಸಾಂಸ್ಕೃತಿಕ ಕೇಂದ್ರಗಳ ವಿಭಾಗಗಳಾಗಿ ಇಲ್ಲವೆ ಅವುಗಳ ಅಧೀನದಲ್ಲಿ ನಡೆಯುತ್ತವೆ. ಇಲ್ಲಿ ತರಬೇತಿ ಪಡೆದ ಗ್ರಂಥಪಾಲರು ಸಾಮಾನ್ಯವಾಗಿ ಗ್ರಾಮೀಣ ಗ್ರಂಥಾಲಯಗಳು, ನಗರ ಗ್ರಂಥಾಲಯಗಳ ಮಕ್ಕಳ ವಿಭಾಗಗಳು ಮತ್ತು ಪ್ರೌಢಶಾಲಾ ಗ್ರಂಥಾಲಯಗಳಲ್ಲಿ ಕೆಲಸ ಮಾಡುತ್ತಾರೆ. ತರಬೇತಿಯ ಅವಧಿ ಎರಡು ವರ್ಷ.


ಡಿಸೆಂಬರ್ 1970 ರಿಂದ ಕೆಲಸ ಮಾಡುತ್ತಿರುವ ಮತ್ತೊಂದು ಬೃಹತ್ ಸಂಸ್ಥೆಯೆಂದರೆ ಪೂರ್ವ ಸೈಬೀರಿಯದಲ್ಲಿ ಸ್ಥಾಪಿತವಾದ ಗ್ರಂಥಾಲಯ ಶಿಕ್ಷಣ ಕೇಂದ್ರ. ಸೈಬೀರಿಯದ 15 ವಿಭಾಗಗಳಿಂದ ಮತ್ತು ದೂರಪ್ರಾಚ್ಯ ವಿಭಾಗಗಳಿಂದ ಯುವಕರು ಬಂದು ಇಲ್ಲಿ ಶಿಕ್ಷಣ ಪಡೆಯುತ್ತಾರೆ. ಉಲಾನ್–ಉಡೆಯಲ್ಲಿರುವ ಮುಖ್ಯ ಗ್ರಂಥಾಲಯದಲ್ಲಿ 1 ಲಕ್ಷಕ್ಕೂ ಹೆಚ್ಚು ಗ್ರಂಥಗಳಿವೆ. ಈ ಗ್ರಂಥಾಲಯ ಕೇಂದ್ರದ ಸುತ್ತಮುತ್ತ ಹೊಸದೊಂದು ನಗರವೇ ನಿರ್ಮಾಣ ವಾಗಿದೆ. ಇಲ್ಲಿ 5 ಲಕ್ಷ ಗ್ರಂಥಗಳ ಸ್ವಾಸ್ಥ್ಯಕ್ಕೆ ಅವಕಾಶವಿರುವ ಒಂದು ಕಟ್ಟಡ, ತರಗತಿ ಕೊಠಡಿ ಗಳು, ವಿದ್ಯಾರ್ಥಿ ಭವನಗಳು, ಅಧ್ಯಾಪಕರ ಮನೆಗಳು ಮತ್ತು ಸ್ಟೇಡಿಯಂ– ಅಸ್ತಿತ್ವದಲ್ಲಿವೆ.

ತಾಂತ್ರಿಕ ಹಾಗೂ ಸಂಶೋಧನ ಕೇಂದ್ರಗಳಲ್ಲಿರುವ ಗ್ರಂಥಾಲಯಗಳ ಸಿಬ್ಬಂದಿಗೆ ಪ್ರಲೇಖನ ಹಾಗೂ ಮಾಹಿತಿ ಶಾಸ್ತ್ರದಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆ ರಷ್ಯದಲ್ಲಿದೆ. ಆಲ್ ಯೂನಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈಂಟಿಫಿಕ್ ಅಂಡ್ ಟೆಕ್ನಿಕಲ್ ಇನ್‌ಫರ್ಮೇಷನ್ ಎಂಬುದು ಹಲವಾರು ವಿಶಿಷ್ಟ ವಿಭಾಗಗಳಲ್ಲಿ ಸ್ನಾತಕೋತ್ತರ ಶಿಕ್ಷಣ ನೀಡುತ್ತಿದೆ. ಇಷ್ಟೇ ಅಲ್ಲದೆ ಮಾಸ್ಕೊದಲ್ಲಿರುವ ಎಂ. ವಿ. ಲೊಮೊನೊಸೊಫ್ ಸ್ಟೇಟ್ ವಿಶ್ವವಿದ್ಯಾಲಯ ವಿಜ್ಞಾನ ಮಾಹಿತಿಯ ವಿಭಾಗವನ್ನು ಸ್ಥಾಪಿಸಿದೆ. (ಪಿ.ಕೆ.ಪಿ.)

**ಗ್ರಂಥಿ :** ನಿರ್ದಿಷ್ಟವಾದ ಸ್ರಾವವನ್ನು (ಸೆಕ್ರಿಷನ್) ಇಲ್ಲವೇ ರಸವನ್ನು ಉತ್ಪಾದಿಸುವ ಅಂಗಭಾಗ (ಗ್ಲ್ಯಾಂಡ್). ಜೀವಿಯ ಬಾಳ್ವೆಗೆ ಈ ಸ್ರವಣ ಅವಶ್ಯ. ದೇಹದಲ್ಲಿನ ಹಲವಾರು ನಿಶ್ಚಿತ ಕೆಲಸಗಳನ್ನು ನಡೆಸಬಲ್ಲ ವಿಶಿಷ್ಟ ರಸಗಳನ್ನು ವಿಶಿಷ್ಟ ಗ್ರಂಥಿಗಳು ಉತ್ಪಾದಿಸುತ್ತವೆ. ರಸವನ್ನು ಸ್ರವಿಸುವ ಬಗೆ, ರಸದ ಗುಣ, ಗ್ರಂಥಿಯೊಳಗಿನ ಕೋಶದ ವರ್ತನೆ ಮತ್ತು ಗ್ರಂಥಿಯ ರಚನೆ ಇವುಗಳಿಗೆ ತಕ್ಕಂತೆ ಗ್ರಂಥಿಗಳನ್ನು ವಿಂಗಡಿಸಲಾಗಿದೆ. ಕೆಲವು ಗ್ರಂಥಿಗಳು ದೇಹಕ್ಕೆ ಬೇಡವಾದ ಮಲಿನ ಮತ್ತು ಹಾನಿಕರ ವಸ್ತುಗಳನ್ನು ರಕ್ತದಿಂದ ಬೇರ್ಪಡಿಸಿ ಹೊರದೂಡುತ್ತವೆ. ಇವು ವಿಸರ್ಜಕ (ಎಕ್ಸ್‌ಕ್ರೀಟರಿ) ಗ್ರಂಥಿಗಳು. ಮೂತ್ರ ಪಿಂಡಗಳು ಮತ್ತು ಸ್ವೇದ ಗ್ರಂಥಿಗಳು ಈ ರೀತಿಯವು. ಮತ್ತೆ ಕೆಲವು ಗ್ರಂಥಿಗಳು ದೇಹಸೌಖ್ಯದ ವಿಷಯದಲ್ಲಿ ಮುಖ್ಯಪಾತ್ರ ವಹಿಸುವುವು. ಇವುಗಳಲ್ಲಿ ಮುಖ್ಯವಾದವು ಜೀರ್ಣಕಾರಿ ಗ್ರಂಥಿಗಳು. ಜೀರ್ಣಪಥದಲ್ಲಿರುವ (ಡೈಜೆಸ್ಟಿವ್ ಟ್ರ್ಯಾಕ್ಟ್) ಜಠರ ಹಾಗೂ ಕರುಳು ಗ್ರಂಥಿಗಳು, ತಮ್ಮ ಸ್ರಾವವನ್ನು ನಾಳಗಳ ಮೂಲಕ ಜೀರ್ಣಪಥಕ್ಕೆ ಸೇರಿಸುವ ಲಾಲಾಗ್ರಂಥಿಗಳು, ಯಕೃತ್ತು ಮತ್ತು ಮೇದೋಜೀರಕಾಂಗಗಳು ಈ ಗುಂಪಿಗೆ ಸೇರಿ ಆಹಾರ ವಸ್ತುಗಳು ರಕ್ತಗತವಾಗುವಂತೆ ಅವನ್ನು ಅರಗಿಸುವ ಕ್ರಿಯೆಯಲ್ಲಿ ನಿರತವಾಗಿವೆ. ಇನ್ನು ಕೆಲವು ಗ್ರಂಥಿಗಳು ದೇಹದ ನಾನಾ ಕ್ರಿಯೆಗಳು ಕ್ಲುಪ್ತವಾಗಿ ನಡೆಯುವಂತೆ ನಿಯಂತ್ರಿಸುತ್ತವೆ. ಪಿಟ್ಯುಯಿಟರಿ, ಅಡ್ರಿನಲ್ ಮುಂತಾದ ಗ್ರಂಥಿಗಳು ಈ ಗುಂಪಿಗೆ ಸೇರಿವೆ. ಹೀಗೆ ಅನೇಕ ವಿಧಗಳಲ್ಲಿ ಗ್ರಂಥಿಗಳು ದೇಹದ ಆರ್ಥಿಕತೆಗೆ (ಬಾಡಿ ಎಕಾನಮಿ) ಮುಖ್ಯವಾಗಿವೆ. ಪುರುಷರಲ್ಲಿ ಗುದನಾಳದ ಮುಂದುಗಡೆ ಮೂತ್ರಕೋಶದ ಕೆಳಗಿರುವ ಶುಕ್ಲಗ್ರಂಥಿ (ಪ್ರಾಸ್ಟೇಟ್) ಸಂಭೋಗ ಕಾಲದಲ್ಲಿ ಒಂದು ಬಗೆಯ ರಸವನ್ನು ಸ್ರವಿಸಿ ಮೂತ್ರನಾಳಕ್ಕೆ ಸೇರಿಸುತ್ತದೆ. ಈ ಸ್ರಾವ ದೇಹದ ಆರ್ಥಿಕತೆಗೆ ಮುಖ್ಯವಲ್ಲವಾದರೂ ವೀರ್ಯಾಣುಗಳ ಬಾಳ್ವೆಗೆ ಅಗತ್ಯ.


ರಸವನ್ನು ಗ್ರಂಥಿಯಿಂದ ಹೊರಕ್ಕೆ ನಾಳಗಳ ಮೂಲಕ ಸಾಗಿಸುವವು ಸನಾಳ ಗ್ರಂಥಿಗಳು. ಇವುಗಳಿಗೆ ಬಾಹ್ಯಸ್ರಾವಿಗಳು ಎಂದು ಹೆಸರು (ಎಕ್ಸೋಕ್ರೈನ್ಸ್). ನಾಳಗಳ

ಮೂಲಕ ರಸ ಹೊರಬರದೆ ನೇರವಾಗಿ ರಕ್ತಕ್ಕೋ ದುಗ್ಧರಸಕ್ಕೋ ಸೇರುವಂತಿರುವ ಗ್ರಂಥಿಗಳು ನಿರ್ನಾಳ ಗ್ರಂಥಿಗಳು. ಇವುಗಳಿಗೆ ಅಂತಃಸ್ರಾವಿಗಳು (ಎಂಡೋಕ್ರೈನ್ಸ್) ಎಂದು ಹೆಸರು. ಪಿಟ್ಯುಯಿಟರಿ, ಗುರಾಣಿಕ ಗ್ರಂಥಿ ಮುಂತಾದವು ಇಂಥವು. ಇವು ಉತ್ಪಾದಿಸುವ




ಚಿತ್ರ 1. ವಿವಿಧ ಬಗೆಯ ಸರಳ ಗ್ರಂಥಿಗಳು : 1. ಸಣ್ಣ ಕರುಳಿನ ಗ್ರಂಥಿ, 2. ಜಠರದ ಫಂಡಿಕ್ ಗ್ರಂಥಿ, 3. ಜಠರದ ಪೈಲೋರಿಕ್ ಗ್ರಂಥಿ, 4. ಸ್ವೇದ ಗ್ರಂಥಿ, 5. ಮೈ ಜಿಡ್ಡಿನ ಗ್ರಂಥಿ, 6. ಕಣ್ಣು ರೆಪ್ಪೆಯೊಳಗಿನ ಗ್ರಂಥಿ. ಈ ಚಿತ್ರದಲ್ಲಿ A ನಾಳ ಭಾಗವನ್ನೂ B ಸ್ರವಿಸುವ ಭಾಗವನ್ನೂ ಸೂಚಿಸುತ್ತವೆ

ಅಂತಃಸ್ರಾವಗಳಿಗೆ ಹಾರ್ಮೋನುಗಳು (**ನೋಡಿ**) ಎಂದು ಹೆಸರು. ಕೆಲವು ಗ್ರಂಥಿಗಳು ಮಿಶ್ರ ಗ್ರಂಥಿಗಳಾಗಿ ಬಾಹ್ಯಸ್ರಾವ ಅಂತಃಸ್ರಾವಗಳೆರಡನ್ನೂ ಉತ್ಪಾದಿಸುತ್ತವೆ. ಮೇದೋಜೀರಕಾಂಗ (ಪ್ಯಾಂಕ್ರಿಯಾಸ್) ಇಂಥ ಒಂದು ಗ್ರಂಥಿ. ಇದರ ಬಾಹ್ಯಸ್ರಾವವಾದ ಮೇದೋಜೀರಕರಸ ನಾಳದ ಮೂಲಕ ಸಣ್ಣಕರುಳೊಳಕ್ಕೆ ಪ್ರವಹಿಸಿ ತಿಂದ ಆಹಾರದಲ್ಲಿರುವ ಹಿಟ್ಟು ಸಕ್ಕರೆಗಳು ಮತ್ತು ಪ್ರೋಟೀನು ಕೊಬ್ಬುಗಳನ್ನು ಅರಗಿಸುವುದಕ್ಕೆ ಸಹಾಯ ಮಾಡುತ್ತದೆ. ಅಂತಃಸ್ರಾವವಾದ ಇನ್ಸುಲಿನ್ ನೇರವಾಗಿ ರಕ್ತಗತವಾಗಿ ವ್ಯಕ್ತಿ ಮಧುಮೇಹ ರೋಗದಿಂದ (ಡಯಾಬೆಟಿಸ್ ಮೆಲೈಟಸ್) ನರಳದಂತೆ ಕಾಪಾಡುವುದು. ಪುರುಷರ




ಚಿತ್ರ 2. ಜಟಿಲಗ್ರಂಥಿಯೊಂದರ ಅಡ್ಡಸೀಳಿಕೆ : 1. ಪ್ರಧಾನ ನಾಳ, 2. ನಾಳದ ಶಾಖೆ, 3. ಸ್ರವಿಸುವ ಭಾಗ

ವೃಷಣಗಳೂ ಸ್ತ್ರೀಯರ ಅಂಡಾಶಯಗಳೂ ಒಂದು ರೀತಿಯ ಮಿಶ್ರ ಗ್ರಂಥಿಗಳು. ಇವು ವ್ಯಕ್ತಿಯ ಪ್ರಜನನಶೀಲ ಅವಧಿಯಲ್ಲಿ ಕಾರ್ಯ ಸಾಫಲ್ಯಕ್ಕೆ ಅಗತ್ಯವಾದ ವಿಶೇಷ ಅಂತಃಸ್ರಾವಗಳನ್ನು ಉತ್ಪಾದಿಸುತ್ತವೆ. ಮತ್ತು ಅದೇ ವೇಳೆ ಕೋಟಿಗಟ್ಟಲೆ ಪುರುಷಾಣುಗಳನ್ನೂ ಅಂಡಾಶಯ ನಿರ್ದಿಷ್ಟ ಕಾಲಕ್ಕೆ ಒಂದೊಂದು ಅಂಡಾಣುವನ್ನೂ ತಯಾರಿಸಿ ಅವನ್ನು ಬಾಹ್ಯಸ್ರಾವದಂತೆ ನಾಳಗಳ ಮೂಲಕ ಹೊರಹಾಕುತ್ತವೆ ಕೂಡ.


ಬಾಹ್ಯಸ್ರಾವಿ ಗ್ರಂಥಿಗಳು ಒಂದೇ ಕೋಶದಿಂದಾಗಿರಬಹುದು. ಜಠರ ಕರುಳಿನ ನಾಳ ಮತ್ತು ಶ್ವಾಸನಾಳಗಳಲ್ಲಿ ಇವು ಕಾಣಬರುತ್ತವೆ. ಇವುಗಳಿಗೆ ಗಾಬ್ಲೆಟ್ (ಲೋಟಾಕೃತಿ) ಕಣಗಳೆಂದು ಹೆಸರು. ಇವು ನಿರಂತರವಾಗಿ ಲೋಳೆಯನ್ನು ಸ್ರವಿಸಿ ಹೊರಹಾಕುತ್ತವೆ. ಅದು ಸುತ್ತಲೂ ಹರಡಿ ಆ ಭಾಗವನ್ನು ಒದ್ದೆಯಾಗಿ ಜಾರುವಂತೆ ಇಟ್ಟಿರುತ್ತದೆ. ಸಾವಿರ, ಲಕ್ಷ, ಕೋಟಿಗಟ್ಟಲೆ ಕೋಶಗಳು ನಿರ್ದಿಷ್ಟ ರಚನೆಗೆ ಒಳಪಟ್ಟು ಆಗಿರುವುದು ಗ್ರಂಥಿಗಳ ಸಾಮಾನ್ಯ ಲಕ್ಷಣ. ಗ್ರಂಥಿಗಳು ಕಣ್ಣಿಗೆ ಕಾಣದಷ್ಟು ಸಣ್ಣವಿರಬಹುದು ಇಲ್ಲವೇ ಯಕೃತ್ತು, ಮೂತ್ರಪಿಂಡಗಳಂತೆ ಬಹುಗಾತ್ರದ ಗ್ರಂಥಿಗಳಾಗಿರಬಹುದು. ಮಿದುಳಿನ ಕೋರಾಯ್ಡ್ ಪ್ಲೆಕ್ಸಸಿನಲ್ಲಿ ಕೋಶಗಳು ಮಡಿಸಿದ ಹಾಳೆಯಂತೆ ಜೋಡಿಕೊಂಡಿವೆ. ಇವುಗಳಿಗೆ ಮಿಕ್ಕಗ್ರಂಥಿಗಳಂತೆಯೇ ಸ್ರಾವಸಾಮರ್ಥ್ಯ ಉಂಟು. ಕರುಳಿನಲ್ಲಿರುವ ಗ್ರಂಥಿಗಳು ಪ್ರಯೋಗನಳಿಕೆ (ಟೆಸ್ಟ್ ಟ್ಯೂಬ್) ಆಕಾರದಲ್ಲಿವೆ. ಜಠರದ ಗ್ರಂಥಿಗಳು ಕೂಡ ನಳಿಕೆಯಾಕಾರದಲ್ಲಿವೆ. ಆದರೆ ಅವುಗಳಲ್ಲಿ ಸ್ರವಿಸುವ ಭಾಗ ಮತ್ತು ಸ್ರಾವವನ್ನು ಹೊರಕ್ಕೊಯ್ಯುವ ನಾಳಭಾಗವೆಂದು ಗುರುತಿಸಬಹುದು. ಸ್ವೇದಗ್ರಂಥಿಗಳಲ್ಲಿ ಸ್ರವಿಸುವ ಭಾಗ ಸುರುಳಿ ಸುತ್ತಿಕೊಂಡಿರುವ ನಾಳದಂತೆಯೂ ಸ್ರಾವವನ್ನು ಹೊರಕ್ಕೊಯ್ಯುವ ಮತ್ತು ಸ್ವತಃ ಸ್ರಾವಸಾಮರ್ಥ್ಯ ಇಲ್ಲದ ನಾಳಭಾಗ ಸುಮಾರಾಗಿ ನೇರವಾಗಿಯೂ ಇವೆ.

ಮೈಜಿಡ್ಡಿನ ಗ್ರಂಥಿಗಳಲ್ಲಿ (ಸೆಬೇಶಿಯಸ್ ಗ್ಲ್ಯಾಂಡ್ಸ್) ಸ್ರವಿಸುವ ಭಾಗ ಕುಡಿಕೆಯಂತಿದೆ. ಇಲ್ಲಿ ಸಹ ಸ್ರಾವವನ್ನು ಹೊರಕ್ಕೆ ಒಯ್ಯುವ ಭಾಗವನ್ನು ನಾಳವಾಗಿ ಗುರುತಿಸಬಹುದು. ಇಂಥ ಗ್ರಂಥಿಗಳೆಲ್ಲ ಸರಳ ಗ್ರಂಥಿಗಳು ಮತ್ತು ಕಣ್ಣಿಗೆ ಕಾಣಿಸದವು. ಹೀಗಲ್ಲದೇ ನಾಳ ಕವಲೊಡೆದು ಪ್ರತಿ ಕವಲೂ ನಳಿಕೆಯಾಕಾರದ ಇಲ್ಲವೇ ಕುಡಿಕೆಯಾಕಾರದ ಸ್ರವಿಸುವ ಭಾಗಗಳಲ್ಲಿ ಕೊನೆಗೊಂಡಿದ್ದರೆ ಅಂಥ ಗ್ರಂಥಿಗಳಿಗೆ ಜಟಿಲ ರಚನೆಯ ಗ್ರಂಥಿಗಳೆಂದು ಹೆಸರು. ಇವು ಸಾಮಾನ್ಯವಾಗಿ ದ್ರಾಕ್ಷಿ ಗೊಂಚಲಿನಂತಿವೆ. ಸೂಕ್ಷ್ಮದರ್ಶಕದಲ್ಲಿ ಮಾತ್ರ ಕಾಣಬಹುದು. ಅನೇಕ ಗ್ರಂಥಿಗಳಲ್ಲದೇ ದೊಡ್ಡ ಗ್ರಂಥಿಗಳಾದ ಲಾಲಾಗ್ರಂಥಿಗಳು, ಮೇದೋಜೀರಕಾಂಗಗಳು ಕೂಡ ಈ ಬಗೆಯವು. ಮುಖ್ಯ ನಾಳದ ಬೇರೆ ಬೇರೆ ಪ್ರಾಥಮಿಕ ಮತ್ತು ದ್ವಿತೀಯಕ ಕವಲುಗಳಿಗೆ ಅಂಟಿದಂತೆ ಗ್ರಂಥಿಭಾಗಗಳನ್ನು ಗುರುತಿಸಬಹುದು. ಈ ಗ್ರಂಥಿ ಭಾಗಗಳನ್ನೆಲ್ಲ ಅಥವಾ ಹಾಲೆಗಳನ್ನೆಲ್ಲ ಜೋಡಿಸಿ ಗ್ರಂಥಿಯನ್ನು ಒಂದು ಅಂಗವಾಗಿ ಪ್ರತ್ಯೇಕಿಸುವ ಹೊರಕವಚ ಉಂಟು. ಗ್ರಂಥಿಯ ಸ್ರವಣ ಭಾಗಗಳು, ಸಾಗುನಾಳಗಳು, ಗ್ರಂಥಿಗೆ ಪೂರೈಕೆಯಾಗುವ ರಕ್ತ ಮತ್ತು ದುಗ್ಧರಸನಾಳಗಳು, ನರಗಳು– ಇವನ್ನು ಯುಕ್ತಸ್ಥಾನಗಳಲ್ಲಿ ಹೊಂದಿಸಿ ಇಡಲು ಗ್ರಂಥಿಯ ಮಿಕ್ಕ ಭಾಗವನ್ನೆಲ್ಲ ತುಂಬಿಕೊಂಡಿರುವ ಬಂಧನಾಂಗಾಂಶ (ಕನೆಕ್ಟಿವ್ ಟಿಶ್ಯೂ) ಉಂಟು. ಗ್ರಂಥಿಯ ಸ್ರವಿಸುವ ಭಾಗದ ಕೋಶಗಳು ರಕ್ತದಿಂದ ಬೇಕಾದ ವಸ್ತುಗಳನ್ನು ಹೀರಿಕೊಂಡು ನಿರ್ದಿಷ್ಟವಾದ ಸ್ರಾವವನ್ನು ಉತ್ಪಾದಿಸುತ್ತವೆ. ಇದು ಕೋಶಗಳಿಂದ ಊರಿ (ಊಜ್) ಹೊರಬಂದು ನಾಳವನ್ನು ಸೇರಬಹುದು. ಲಾಲಾಗ್ರಂಥಿಗಳು, ಯಕೃತ್ತು ಮುಂತಾದವುಗಳಲ್ಲಿ ಈ ರೀತಿಯ ಸ್ರಾವವನ್ನು ನೋಡಬಹುದು. ಸ್ರಾವ ತುಂಬಿದ ಕೋಶವೇ ಕಳಚಿಕೊಂಡು ದ್ರವವಾಗಿ ನಾಳವನ್ನು ಸೇರಬಹುದು. ಮೈಜಿಡ್ಡಿನ ಗ್ರಂಥಿಗಳು ಈ ಬಗೆಯವು. ಇವೆರಡಕ್ಕೂ ಮಧ್ಯಸ್ಥವಾಗಿ ಸ್ರಾವ ತುಂಬಿದ ಕೋಶದ ತುದಿ ಭಾಗ ವಿಸರ್ಜಿಸಲ್ಪಟ್ಟು ದ್ರವವಾಗಿ ನಾಳದೊಳಕ್ಕೆ ಸೇರಬಹುದು. ಕರುಳಿನ ವಿಶೇಷ ಸ್ವೇದಗ್ರಂಥಿಗಳು ಮತ್ತು ಸ್ತನಗ್ರಂಥಿಗಳು ಈ ಗುಂಪಿಗೆ ಸೇರಿದುವು. ಗ್ರಂಥಿಗಳ ನಾಳ ಭಾಗಗಳು ಸ್ರಾವವನ್ನು ಹೊರಕ್ಕೆ ಒಯ್ಯುತ್ತವೆ. ಮಾತ್ರವಲ್ಲ ಕೆಲವು ಗ್ರಂಥಿಗಳಲ್ಲಿ ಸ್ರವಿಸುವ ಮತ್ತು/ಅಥವಾ ಇಂಗಿಸುವ ಸಾಮರ್ಥ್ಯವೂ ಇವುಗಳಿಗುಂಟು. ಲಾಲಾಗ್ರಂಥಿಗಳಲ್ಲಿಯೂ ಯಕೃತ್ತಿನಲ್ಲಿಯೂ ಈ ಕ್ರಿಯೆ ಕಾಣಬರುತ್ತದೆ. ಒಂದು ಗ್ರಂಥಿಗೆ ಒಂದೇ ನಾಳವಿರುವುದು ಸಾಮಾನ್ಯ. ಆದರೆ ಕೆಲವೆಡೆ ಒಂದೇ ಗ್ರಂಥಿಗೆ ಅನೇಕ ನಾಳಗಳಿರುವುದೂ ಉಂಟು. ಅಶ್ರು ಗ್ರಂಥಿಗಳು, ಸ್ತನ, ನಾಲಿಗೆ ತಳದಲ್ಲಿರುವ ಲಾಲಾಗ್ರಂಥಿ, ಪುರುಷರಲ್ಲಿರುವ ಶುಕ್ಲ ಗ್ರಂಥಿ ಇವು ಈ ಗುಂಪಿಗೆ ಸೇರಿದುವು.

ಅಂತಃಸ್ರಾವೀ ಗ್ರಂಥಿಗಳು ನಿರ್ನಾಳ ಗ್ರಂಥಿಗಳು. ಇವುಗಳ ಸ್ರಾವ ಬಾಹ್ಯ ಸ್ರಾವಗಳಿಗಿಂತ ಬಹುಕಡಿಮೆ ಪ್ರಮಾಣದಲ್ಲಿ ಉತ್ಪಾದನೆಯಾಗಿ ನೇರವಾಗಿ ರಕ್ತಗತವಾಗಿ ದೇಹಕ್ರಿಯಾನಿಯಂತ್ರಣದಲ್ಲಿ ಮುಖ್ಯ ಪಾತ್ರವಹಿಸುತ್ತವೆ. ಇವುಗಳಿಗೆ ರಾಸಾಯನಿಕ ದೂತಗಳೆಂದೂ ಅಂತಃಸ್ರಾವಗಳೆಂದೂ ಹಾರ್ಮೋನುಗಳೆಂದೂ ಹೆಸರುಂಟು. ಇವು ರಕ್ತದಲ್ಲಿ ಕಲೆತು ದೇಹದ ಎಲ್ಲ ಭಾಗಗಳಿಗೂ ಒಯ್ಯಲ್ಪಟ್ಟರೂ ನಿರ್ದಿಷ್ಟ ಅಂಗಗಳ ಮೇಲೆ

ಮಾತ್ರ ತಮ್ಮ ಪ್ರಭಾವ ಬೀರಿ ಅವುಗಳ ಕ್ರಿಯೆಯನ್ನು ನಿಯಂತ್ರಿಸುತ್ತವೆ. ಈ ಗ್ರಂಥಿಗಳ ಪೈಕಿ ತಲೆಚಿಪ್ಪಿನೊಳಗೆ ಮಿದುಳಿನ ಕೆಳಭಾಗದಲ್ಲಿ ಸ್ಥಾಪಿತವಾಗಿರುವ ಬಟಾಣಿಕಾಳಿನ ಗಾತ್ರದ ಪಿಟ್ಯುಯಿಟರಿ ಗ್ರಂಥಿ ಬಹುಮುಖ್ಯವಾದದ್ದು. ಇದರ ಸ್ರಾವಗಳು ಗುರಾಣಿಕ ಗ್ರಂಥಿ, ಅಡ್ರಿನಲ್ ಗ್ರಂಥಿ, ಲೈಂಗಿಕ ಗ್ರಂಥಿಗಳು ಮುಂತಾದವುಗಳ ಕ್ರಿಯೆಯನ್ನು ನಿಯಂತ್ರಿಸುತ್ತವೆ. ಅಂತಃಸ್ರಾವಗಳ ಪ್ರಭಾವ ರಾಸಾಯನಿಕ ದೂತಕ್ರಿಯೆಯಿಂದಾಗುತ್ತದೆ. ಆದ್ದರಿಂದ ಕುರಿ, ದನ, ಹಂದಿ ಮುಂತಾದವುಗಳಿಂದ ವಿಶೇಷ ರೀತಿಯಲ್ಲಿ ಅಂತಃಸ್ರಾವಗಳು ಸಂಗ್ರಹಿಸಲ್ಪಟ್ಟು ವೈದ್ಯದಲ್ಲಿ ಬಳಕೆಯಲ್ಲಿವೆ. ಕೆಲವು ಅಂತಃಸ್ರಾವಗಳ ರಾಸಾಯನಿಕ ರಚನೆ ಗೊತ್ತಿರುವುದರಿಂದ ಅವನ್ನು ಸಂಯೋಗಿಸಿ ಕೃತಕ ಅಂತಃಸ್ರಾವವಾಗಿ ಉಪಯೋಗಿಸಲಾಗುತ್ತದೆ. ದೇಹದಲ್ಲಿ ಅಂತಃಸ್ರಾವಗಳ ಪರಿಮಾಣದ ಏರುಪೇರಿನಿಂದ ಅನೇಕ ರೋಗಸ್ಥಿತಿಗಳು ಉಂಟಾಗುವುದರಿಂದ ಮತ್ತು ಕೆಲವು ವೇಳೆ ಇವು ಮಾರಕಗಳಾಗುವುದರಿಂದ ಚಿಕಿತ್ಸೆಯಲ್ಲಿ ಅಂತಃಸ್ರಾವಗಳ ಪ್ರಾಮುಖ್ಯ ಎಷ್ಟೆಂಬುದನ್ನು ಅರಿಯಬಹುದು. ಎಲ್ಲ ರೀತಿಯ ಗ್ರಂಥಿಗಳ ಕೋಶಗಳಲ್ಲೂ ಮಿಕ್ಕ ಕೋಶಗಳಲ್ಲಿರುವಂತೆಯೇ ಕೋಶದ ಎಲ್ಲ ಭಾಗಗಳೂ ಇರುತ್ತವೆ. ವಿಶೇಷವಾಗಿ ಸ್ರಾವವೋ ಸ್ರಾವಜನಕವೋ ಆದ ಕಿರುಕಣಗಳೂ (ಗ್ರಾನ್ಯೂಲ್ಸ್), ಮೈಟೋಕಾಂಡ್ರಿಯ ಮತ್ತು ಗಾಲ್ಜಿ ವಸ್ತುವೂ ಕಂಡುಬಂದು ಅವುಗಳ ಆಕಾರ, ಗಾತ್ರಗಳಲ್ಲಿ ಸ್ರಾವಚಟುವಟಿಕೆಗೆ ಅನುಗುಣವಾದ ಬದಲಾವಣೆಗಳಾಗುತ್ತವೆ. (ಕೆ.ಕೆ.ಎಸ್‌ಡಬ್ಲ್ಯೂ.; ಡಿ.ಎಸ್.ಎಸ್.)

**ಸಸ್ಯಗಳಲ್ಲಿ :** ಪ್ರಾಣಿಗಳಲ್ಲಿರುವಂತೆಯೆ ಸಸ್ಯಗಳ ಗ್ರಂಥಿಗಳು ಕೂಡ ನಿರ್ದಿಷ್ಟ ಬಗೆಯ ರಸವನ್ನು ಉತ್ಪಾದಿಸುವ ಅಂಗ ಭಾಗಗಳು. ಅಂತೆಯೇ ಇವುಗಳಲ್ಲಿ ಸ್ರಾವ ಇಲ್ಲವೇ ವಿಸರ್ಜಿತ ಪದಾರ್ಥ ಸಂಗ್ರಹವಾಗಿರುತ್ತದೆ. ಗ್ರಂಥಿಗಳು ಬಿಡಿಕೋಶಗಳ ಇಲ್ಲವೆ ಅನೇಕ ಚಿಕ್ಕಕೋಶಗಳ ಸಮೂಹದ ರೂಪದಲ್ಲಿರಬಹುದು. ಗ್ರಂಥಿಗಳ ರೂಪರಚನೆ ಯಾವ ಬಗೆಯೇ ಇರಲಿ ಸಸ್ಯಗಳಲ್ಲಿ ಮಾತ್ರ ನಾಳ ವ್ಯವಸ್ಥೆ ಇರುವುದಿಲ್ಲ. ಪ್ರಾಣಿಗಳಲ್ಲಿ ಉಂಟು. ಆದ್ದರಿಂದ ಸಸ್ಯಗ್ರಂಥಿಗಳಲ್ಲಿ ಉತ್ಪತ್ತಿಯಾಗುವ ರಸ ಫ್ಲೋಯೆಮ್ ನಾಳ ವ್ಯವಸ್ಥೆಯ ಮೂಲಕ ಸಸ್ಯ ದೇಹದಲ್ಲಿ ವ್ಯಾಪಿಸುತ್ತದೆ. ಸಸ್ಯಗಳಲ್ಲಿ ಗ್ರಂಥಿಗಳು ದೇಹದ ಹೊರಪದರವಾದ ಎಪಿಡರ್ಮಿಸಿನ ಮೇಲಿರಬಹುದು ಅಥವಾ ದೇಹದ ಒಳಗಿನ ಇತರ ಬಗೆಯ ಅಂಗಾಂಶಗಳ ಮಧ್ಯೆ ಇರಬಹುದು. ಮೊದಲನೆಯ ಬಗೆಗೆ ಬಹಿರ್‌ಗ್ರಂಥಿಗಳೆಂದೂ ಎರಡನೆಯವಕ್ಕೆ ಅಂತರ್‌ಗ್ರಂಥಿಗಳೆಂದೂ ಹೆಸರು.




ಚಿತ್ರ 3. ಸಸ್ಯಗ್ರಂಥಿಗಳ ವಿವಿಧ ಭಾಗಗಳು : 1. ಲ್ಯಾವೆಂಡರ್, 2. ಪೆಲಾರ್ಗೋನಿಯಮ್, 3. ಚುರುಚುರುಕೆ ಗಿಡ, 4ನೆಯ ಗುಂಪಿನ ಚಿತ್ರಗಳಲ್ಲಿ a, b ಮತ್ತು cಗಳು ಯೂಫೋರ್ಬಿಯ ಪಲ್ಚೆರಿಮ ಗಿಡದ ಮಧುಗ್ರಂಥಿಯ ಹೊರನೋಟ, ಹಾಲೆಗಳು ಮತ್ತು ಉದ್ದಸೀಳಿಕೆಯನ್ನು ಅನುಕ್ರಮವಾಗಿ ಸೂಚಿಸುತ್ತವೆ.

ಬಹಿರ್ ಗ್ರಂಥಿಗಳು : ಇವುಗಳಲ್ಲಿ ಹಲವು ಬಗೆಗಳಿವೆ. 1. ರೋಮಗಳಂತಹ ಗ್ರಂಥಿಗಳು : ಇವು ಕೂದಲುಗಳಂತೆ ಕಾಣುವ ಗ್ರಂಥಿಗಳು. ಇವಕ್ಕೆ ಬಹುಕೋಶಿ ಇಲ್ಲವೆ ಏಕಕೋಶಿ ಅಗ್ರಭಾಗವೂ ತೊಟ್ಟಿನಂಥ ಬುಡವೂ ಇವೆ. ಅಗ್ರಭಾಗಕ್ಕೆ ಮಾತ್ರ ಸ್ರಾವಕಸಾಮರ್ಥ್ಯವಿರುತ್ತದೆ. ಉದಾಹರಣೆಗೆ ಚುರುಚುರುಕೆ ಗಿಡದ ಕುಟುಕು ರೋಮಗಳು, ಲ್ಯಾವೆಂಡರ್, ಪಚ್ಚೆತೆನೆ, ತುಳಸಿ ಮುಂತಾದವುಗಳ ಸುವಾಸನಾ ಗ್ರಂಥಿಗಳು, ಹೊಗೆಸೊಪ್ಪು, ಸೇಬು, ಭೂರ್ಜಪತ್ರ ಮುಂತಾದ ಸಸ್ಯಗಳಲ್ಲಿ ಜಿಗುಟು ವಸ್ತುಗಳನ್ನು ಉತ್ಪಾದಿಸುವ ಗ್ರಂಥಿಗಳು.

2. ಮಧು ಗ್ರಂಥಿಗಳು : ಅನೇಕ ಬಗೆಯ ಹೂಗಳ ಅಂಡಾಶಯದ ಕೆಳಗೆ ಅಥವಾ ಸುತ್ತುವರಿದಂತೆ ಇರುವ ಗ್ರಂಥಿಗಳಿವು. ಉದಾಹರಣೆಗೆ ಯೂಫೋರ್ಬಿಯ, ತುಂಬೆ, ಗುಲಾಬಿ, ದಾಸವಾಳ ಇತ್ಯಾದಿ. ಕೆಲವೊಮ್ಮೆ ಎಲೆ, ಕಾಂಡ, ವೃಂತಪತ್ರ ಮುಂತಾದವುಗಳ ಮೇಲೂ ಮಧು ಗ್ರಂಥಿಗಳಿರಬಹುದು. ಈ ಗ್ರಂಥಿಗಳೆಲ್ಲೆಲ್ಲ ಸಿಹಿಯಾದ ದ್ರವ ಉತ್ಪತ್ತಿಯಾಗುತ್ತಿದ್ದು ಕೀಟಗಳನ್ನು ಆಕರ್ಷಿಸಲು ಅದು ಸಹಾಯಕವಾಗುತ್ತದೆ.

3. ಹೈಡತೋಡುಗಳು : ಟೊಮ್ಯಾಟೊ, ನಾಸ್ಟರ್ಷಿಯಮ್, ಟ್ರೋಪಿಯೋಲಮ್, ಹುಲ್ಲು, ತೆರ್ಮೆ (ಫರ್ನ್) ಮುಂತಾದ ಗಿಡಗಳ ಎಲೆಗಳ ತುದಿ ಮತ್ತು ಅಂಚುಗಳಲ್ಲಿ ಇರುವ ಗ್ರಂಥಿಗಳಿವು. ಇವುಗಳ ಮುಖಾಂತರ ವಿಲೀನವಾದ ಲವಣಗಳುಳ್ಳ ನೀರು ವಿಸರ್ಜಿತವಾಗುತ್ತದೆ. ಈ ಕಾರ್ಯಕ್ಕೆ ಗಟೇಷನ್ ಎಂದು ಹೆಸರು.

4. ಪಾಚಕ ಗ್ರಂಥಿಗಳು : ಇವನ್ನು ಕೀಟಭಕ್ಷಕ ಸಸ್ಯಗಳಾದ ಡ್ರಾಸಿರ, ನೆಪೆಂತೆಸ್, ಯುಟ್ರಿಕ್ಯುಲೇರಿಯ ಇತ್ಯಾದಿಗಳಲ್ಲಿ ಕಾಣಬಹುದು. ಇವು ಎಲೆಗಳ ಮೈಮೇಲೆ ಇದು ಒಂದು ರೀತಿಯ ಪಾಚಕರಸವನ್ನು ಉತ್ಪಾದಿಸುತ್ತವೆ. ಇದರಿಂದ ಗಿಡ ಸೆರೆ ಹಿಡಿಯುವ ಕೀಟಗಳನ್ನು ಜೀರ್ಣಿಸಲು ಅನುಕೂಲವಾಗುತ್ತದೆ.

5. ಅಂತರ್‌ಗ್ರಂಥಿಗಳು : ಇವುಗಳಲ್ಲಿ ಸ್ರಾವಕ ಕೋಶಗಳು (ಸೆಕ್ರೀಟರಿ ಸೆಲ್ಸ್), ಸ್ರಾವಕ ನಾಳಗಳು (ಸೆಕ್ರೀಟರಿ ಕೆನಾಲ್ಸ್) ಮತ್ತು ಲೇಟಿಸಿಫರ್ಸ್ ಎಂಬ ಮೂರು ಮುಖ್ಯ ಬಗೆಗಳಿವೆ.

1. ಸ್ರಾವಕ ಕೋಶಗಳು : ಇವು ಬೇರೆ ಬೇರೆ ರೀತಿಯ ಕೋಶಗಳ ನಡುವೆ ಹರಡಿಕೊಂಡಿರುತ್ತವೆ. ಇವುಗಳಲ್ಲಿ ಸಂಗ್ರಹವಾಗುವ ಪದಾರ್ಥದ ಆಧಾರದ ಮೇಲೆ ಇವಕ್ಕೆ ಹಲವಾರು ಹೆಸರುಗಳನ್ನು ಕೊಡಲಾಗಿದೆ. ಇವುಗಳ ಸ್ರಾವ ತೈಲವಾಗಿರಬಹುದು (ಉದಾಹರಣೆಗೆ ಕೊತ್ತುಂಬರಿ, ಜೀರಿಗೆ, ದಾಲ್ಚಿನ್ನಿ, ಸಂಪಿಗೆ ಇತ್ಯಾದಿ), ರಾಳ (ರೆಸಿನ್) ಆಗಿರಬಹುದು (ಉದಾಹರಣೆಗೆ ಸೂರ್ಯಕಾಂತಿ, ಪೈನ್ ಇತ್ಯಾದಿ), ಲೋಳೆಯಂಥ ವಸ್ತುವಾಗಿರಬಹುದು (ಉದಾಹರಣೆಗೆ ಕಳ್ಳಿ, ಗೊಡ್ಡು ಈಚಲು, ದಾಸವಾಳ ಮುಂತಾದವು) ಅಥವಾ ಟ್ಯಾನಿನ್ ಆಗಿರಬಹುದು (ಉದಾಹರಣೆಗೆ ತಂಗಡಿ, ಕ್ರ್ಯಾಸ್ಯುಲ, ರೂಬಸ್ ಮುಂತಾದವು).

2. ಸ್ರಾವಕನಾಳಗಳು : ಇವು ಹಲವಾರು ಕೋಶಗಳು ಕ್ಷಯಿಸುವುದರಿಂದ ಇಲ್ಲವೆ ಬೇರೆ ಬೇರೆಯಾಗುವುದರಿಂದ ಉಂಟಾಗುತ್ತವೆ. ಇವು ಕೂಡ ತೈಲ, ರಾಳ, ಟ್ಯಾನಿನ್ ಅಥವಾ ಲೋಳೆಯಿಂದ ಕೂಡಿರಬಹುದು. ಉದಾಹರಣೆಗೆ ಪೈನ್, ನಿಂಬೆ, ಹತ್ತಿ ಇತ್ಯಾದಿ.

3. ಲೇಟಿಸಿಫರ್ಸ್ : ಹಾಲ್ನೊರೆಯ (ಲೇಟೆಕ್ಸ್) ಉತ್ಪಾದನೆಯಲ್ಲಿ ತೊಡಗಿರುವ ಗ್ರಂಥಿಗಳಿವು. ಇವು ಒಂದೇ ಜೀವಕೋಶದಿಂದ ಕೂಡಿದ ಸರಳ ರೀತಿಯವಾಗಿರಬಹುದು, ಇಲ್ಲವೆ ಹಲವಾರು ಜೀವಕೋಶಗಳಿಂದ ಕೂಡಿದ ಸಂಕೀರ್ಣ ರೀತಿಯವಾಗಿರಬಹುದು. ಇವುಗಳಲ್ಲಿ ತಯಾರಾಗುವ ಹಾಲ್ನೊರೆ ಬಣ್ಣರಹಿತವಾಗಿರಬಹುದು. ಇಲ್ಲವೆ ಬಿಳಿ, ಕಿತ್ತಳೆ, ಕಂದು ಬಣ್ಣಗಳಿಂದ ಕೂಡಿರಬಹುದು. ಉದಾಹರಣೆಗೆ ಹೀವಿಯ ಬ್ರಸಿಲಿಯನ್ಸಿಸ್ (ರಬ್ಬರ್‌ಮರ), ಪಪ್ಯಾವರ್ ಸಾಮ್ನಿಫೆರಮ್ (ಅಫೀಮು ಗಿಡ), ಕೇರಿಕ ಪಪಾಯ (ಪಪ್ಪಾಯಿ), ಡ್ಯಾಂಡೆಲಿಯನ್, ಲ್ಯಾಕ್ಟುಕ ಇತ್ಯಾದಿ. (ಎಂ.ಎಸ್.ಎಸ್.ಆರ್.)

**ಗ್ರನಾಡ :** ದಕ್ಷಿಣ ಸ್ಪೇನಿನ ಪ್ರದೇಶದ ಒಂದು ನಗರ. ಅದೇ ಹೆಸರಿನ ಪ್ರಾಂತ್ಯದ ಮುಖ್ಯ ಪಟ್ಟಣ. ಮ್ಯಾಡ್ರಿಡ್ ನಗರದ ದಕ್ಷಿಣಕ್ಕೆ 360 ಕಿಮೀ ದೂರದಲ್ಲಿದೆ. ಜನಸಂಖ್ಯೆ 2,37,929 (2007). ನಗರ ಸಮುದ್ರಮಟ್ಟದಿಂದ 738 ಮೀ ಎತ್ತರದಲ್ಲಿದೆ. ಸೈರಾ ನೆವೇಡ ಪರ್ವತಶ್ರೇಣಿಯ ವಾಯವ್ಯಭಾಗದಲ್ಲಿ ಹೆನಿಲ್ ಮತ್ತು ದರೋ ನದಿಗಳ ಸಂಗಮಸ್ಥಾನವಿದು. ಗ್ರನಾಡದ ಮೂಲಕ ಹರಿಯುವ ದರೋ ನದಿಯ ಬಲಗಡೆ ಹಳೆಯ ನಗರ ಇದೆ. ಇಲ್ಲಿ ಮೋರ್ ಜನಾಂಗದವರ ಹಳೆಯ ಕಟ್ಟಡಗಳೂ ಕಿರಿದಾದ ತಿರುವುಮುರುವಿರುವ ಬೀದಿಗಳೂ ಸಣ್ಣಸಣ್ಣ ಚೌಕಗಳೂ ಇವೆ. ಗ್ರನಾಡ ಉತ್ತರದ ಕಡೆಯಲ್ಲಿ ವಿಸ್ತರಿಸಿದೆ. ಆಧುನಿಕ ಕಟ್ಟಡಗಳು ತಲೆಯೆತ್ತಿವೆ. ಆಹಾರ ಪದಾರ್ಥಗಳ ತಯಾರಿಕೆ, ಸಕ್ಕರೆ ಪರಿಷ್ಕರಣ– ಇವು ಇಲ್ಲಿಯ ಮುಖ್ಯ ಉದ್ಯಮಗಳು.



ಅಲ್‌ಹಾಂಬ್ರದ ಸಿಂಹಗಳ ಮೊಗಸಾಲೆ

ಗ್ರನಾಡ ನಗರದಲ್ಲಿ ಅನೇಕ ಭವ್ಯ ಕಟ್ಟಡಗಳುಂಟು. ಇವುಗಳಲ್ಲಿ ಬಹಳ ಮುಖ್ಯವಾದ್ದು ಕತೀಡ್ರಲ್ ಕಟ್ಟಡ. ಇದು 1529–1703 ರಲ್ಲಿ ಪುನರುಜ್ಜೀವನ ಶೈಲಿಯಲ್ಲಿ ನಿರ್ಮಿತವಾಯಿತು. ಸ್ಪೇನಿನ ಖ್ಯಾತ ಕಲಾವಿದರ ಚಿತ್ರಕೃತಿಗಳು ಈ ಕಟ್ಟಡದಲ್ಲಿವೆ. ಕತೀಡ್ರಲ್ ಬಳಿಯಲ್ಲೇ ಇರುವ ಚಾಪೆಲ್‌ನಲ್ಲಿ ಅರಸರ ಗೋರಿಗಳಿವೆ. ಅಪೂರ್ಣವಾಗಿರುವ 5 ನೆಯ ಚಾರ್ಲ್ಸ್ ಅರಮನೆ, ವಿಶ್ವವಿದ್ಯಾಲಯ, ಇಂಪೀರಿಯಲ್ ಕಾಲೇಜು, ಸೇಂಟ್ ಆನ್ ಮತ್ತು ಸ್ಯಾನ್ ಸಾಲ್ವಡಾರ್ ಚರ್ಚುಗಳು, ಸೇಂಟ್ ಎಲಿಜ಼ಬೆತ್ ಕಾನ್ವೆಂಟ್ – ಇವು ಇತರ ಭವ್ಯಕಟ್ಟಡಗಳ ಪೈಕಿ ಕೆಲವು. ಐತಿಹಾಸಿಕ ಮಹತ್ತ್ವದ್ದೂ ಬಹು ಪ್ರಮುಖವೂ ಆದ ಸ್ಮಾರಕ ಅಲ್‌ಹಾಂಬ್ರ, ಕೆಂಪಿಟ್ಟಿಗೆಗಳನ್ನು ಉಪಯೋಗಿಸಿ ಮೋರ್ ವಾಸ್ತು ಶೈಲಿಯಲ್ಲಿ ನಿರ್ಮಿಸಲಾದ ಕಟ್ಟಡಗಳ ಸಮೂಹ ಇದು. ಈ ಕಟ್ಟಡಗಳ ನಿರ್ಮಾಣ 1 ನೆಯ ಮಹಮ್ಮದನ ಕಾಲದಲ್ಲಿ ಆರಂಭಗೊಂಡು, 1 ನೆಯ ಯೂಸಫನ ಕಾಲದಲ್ಲಿ ಪೂರ್ಣಗೊಂಡುವು. ಅಲಂಕಾರ ಪಟ್ಟಿಕೆಗಳೂ ಚಿತ್ರವಿಚಿತ್ರ ಅಲಂಕಾರಗಳೂ ಬರೆಹಗಳೂ ಇಲ್ಲಿ ಕಂಡುಬರುತ್ತವೆ. ಅಲ್‌ಹಾಂಬ್ರದ ಎರಡು ವಿಭಾಗಗಳಲ್ಲಿ ಒಂದು ರಾಜರ ಮತ್ತು ರಾಜವಂಶದವರ ವಾಸಕ್ಕೂ ಮತ್ತೊಂದು ಅಧಿಕಾರಿಗಳಿಗೂ ಸಭಾಸದರಿಗೂ ಮೀಸಲಾಗಿದ್ದುವು. ಅಲ್‌ಹಾಂಬ್ರದ ಪೊಮಿಗ್ರೇನೇಟ್ಸ್ ದ್ವಾರ, ರಾಯಭಾರಿಗಳ ಹಜಾರ, ಸಿಂಹಗಳ ಮೊಗಸಾಲೆ, ಮರ್ಟಲ್ ಮೊದಲು ಸಸ್ಯಗಳ ಮೊಗಸಾಲೆ – ಇವೂ ಆಕರ್ಷಕವಾಗಿವೆ. ಅಲ್‌ಹಾಂಬ್ರವನ್ನು ವಿಶ್ವ ಪರಂಪರೆಯ ನೆಲೆಯೆಂದು ಪರಿಗಣಿಸಲಾಗಿದೆ.

ಪ್ರಾಚೀನ ನಗರವಾದ ಇಲಿಬೆರೀಸಿನ ಪಾಳು ಪ್ರದೇಶದ ಬಳಿ ಗ್ರನಾಡವನ್ನು 7 ನೆಯ ಶತಮಾನದಲ್ಲಿ ಸ್ಥಾಪಿಸಲಾಯಿತು. 8ನೆಯ ಶತಮಾನದಲ್ಲಿ ಈ ಪ್ರದೇಶ ಮೋರರ ವಶವಾಯಿತು. 1015ರವರೆಗೂ ಇದು ಉಮಾಯದ್ ಖಲೀಫರ ಆಳಿಕೆಗೊಳಪಟ್ಟಿತ್ತು. ಅನಂತರ ಆಲ್ಮೊರಾವಿಡರ ವಶಕ್ಕೆ ಬಂತು (1157). ಆಮೇಲೆ ನಾಸ್ರಿಡ್‌ಗಳ ಕೈಗೆ ಬಂದು (1238) ಸ್ವತಂತ್ರ ರಾಜ್ಯವೊಂದರ ರಾಜಧಾನಿಯಾಯಿತು. ಮುಸ್ಲಿಮರ ಆಳಿಕೆಯ ಕಾಲದಲ್ಲಿ ಇದು ಅವರ ಸಂಸ್ಕೃತಿ ಮತ್ತು ನಾಗರಿಕತೆಗಳ ಕೇಂದ್ರಸ್ಥಾನವಾಗಿತ್ತು. ಇಬ್ನ್ ಖಾಲ್ದೂನ್ (1332 –1406), ಇಬ್ನ್ ಬತೂತ (1304– 68) ಮುಂತಾದ ಖ್ಯಾತ ಇತಿಹಾಸಕಾರರು ಗ್ರನಾಡದ ಸಂಸ್ಕೃತಿಗಳಿಂದ ಆಕರ್ಷಿತರಾಗಿದ್ದರು. 1492 ರಲ್ಲಿ ಫರ್ಡಿನೆಂಡ್ ದೊರೆ ಇದನ್ನು ಗೆದ್ದು ಮೋರರ ಆಳಿಕೆಯನ್ನು ಕೊನೆಗಾಣಿಸಿ, ಗ್ರನಾಡವನ್ನು ಸ್ಪೇನಿನೊಡನೆ ಸೇರಿಸಿದ. ಆಗ ಗ್ರನಾಡದ ಅವನತಿ ಆರಂಭವಾಯಿತು. ಸ್ಪೇನಿನವರ ದಾಳಿಯ ಫಲವಾಗಿ ಅಲ್‌ಹಾಂಬ್ರದ ಸೌಂದರ್ಯ ಕುಂಠಿತವಾಯಿತು. 1812 ರ ಫ್ರೆಂಚ್ ದಾಳಿಯೂ 1821 ರಲ್ಲಿ ಸಂಭವಿಸಿದ ಒಂದು ಭೂಕಂಪವೂ ಇದರ ಹಲವು ಭಾಗಗಳನ್ನು ನಾಶಗೊಳಿಸಿದುವು. ಅಲ್‌ಹಾಂಬ್ರದ ಪುನರ್‌ನಿರ್ಮಾಣ ಕಾರ್ಯ 1828 ರಲ್ಲಿ ಪ್ರಾರಂಭವಾಯಿತು. ಅದರ ಹಿಂದಿನ ಮೌಲ್ಯಗಳ ಪುನಃಸ್ಥಾಪನೆಯ ಪ್ರಯತ್ನಗಳು ನಡೆದಿವೆ.

ಗ್ರನಾಡ ಪ್ರಾಂತ: ಆಂಡಾಲೂಸಿಯಕ್ಕೆ ಸೇರಿದ ಜಿಲ್ಲೆಗಳನ್ನು ಒಟ್ಟುಗೂಡಿಸಿ 1833ರಲ್ಲಿ ಗ್ರನಾಡ ಪ್ರಾಂತವನ್ನು ರಚಿಸಲಾಯಿತು. ವಿಸ್ತೀರ್ಣ 12,531 ಚ. ಕಿಮೀ. ಜನಸಂಖ್ಯೆ 9,18,072 (2010). ಈ ಪ್ರಾಂತದ ಉತ್ತರಕ್ಕೆ ಕಾರ್ಡೊಬ, ಹಾಯೇನ್ ಮತ್ತು ಆಲ್ಬಾಥೇಟಗಳೂ ಪೂರ್ವಕ್ಕೆ ಮರ್ಸಿಯ ಮತ್ತು ಆಲ್ಮೇರಿಯಗಳೂ ದಕ್ಷಿಣಕ್ಕೆ ಮೆಡಿಟರೇನಿಯನ್ ಸಮುದ್ರವೂ ಪಶ್ಚಿಮಕ್ಕೆ ಮ್ಯಾಲಗವೂ ಇವೆ. ಪಶ್ಚಿಮ ಹಾಗೂ ವಾಯವ್ಯ ಭಾಗಗಳಲ್ಲಿ ಸೈರಾ ನೆವೇಡ ಪರ್ವತಶ್ರೇಣಿ ಇದೆ. ಈ ಪ್ರಾಂತ ಪ್ರಮುಖ ಪ್ರವಾಸೀ ಕೇಂದ್ರಗಳಲ್ಲೊಂದು. (ಕೆ.ವಿ.ಎಸ್‌ಯು.)

**ಗ್ರನೈಕಸ್ ಕದನ :** ಗ್ರನೈಕಸ್ ನದಿಯ ದಂಡೆಯ ಮೇಲೆ ಮ್ಯಾಸಿಡೋನಿಯದ ಅಲೆಗ್ಸಾಂಡರ್ ಮಹಾಶಯನಿಗೂ ಪರ್ಷಿಯದ ಸೇನೆಗೂ ನಡುವೆ ಪ್ರ.ಶ.ಪೂ. 334 ರಲ್ಲಿ ನಡೆದ ಕದನ. ಇದರಲ್ಲಿ ಪರ್ಷಿಯನ್ ಸೇನೆಗೆ ಸೋಲುಂಟಾಯಿತು.

ಅಲೆಗ್ಸಾಂಡರ್ ತನ್ನ ಪರ್ಷಿಯದ ದಂಡಯಾತ್ರೆಗಾಗಿ ಭಾರಿ ಸೈನ್ಯವನ್ನು ಸಜ್ಜುಗೊಳಿಸಿದ್ದ. ಇವನ ಸೇನೆಯಲ್ಲಿ ರಾವುತರು, ಭಲ್ಲೆಯವರು ಮತ್ತು ಬಿಲ್ಲಾಳುಗಳಿದ್ದರು. ಪರ್ಷಿಯನ್ ಸೇನೆ 20,000 ಗ್ರೀಕ್ ಕಾಲಾಳುಗಳು, 20,000 ಅಶ್ವಸೈನಿಕರಿಂದ ಕೂಡಿತ್ತೆಂದು ಏರಿಯನ್ ಎಂಬ ಗ್ರೀಕ್ ಇತಿಹಾಸಕಾರ ಹೇಳಿದ್ದಾನೆ. ಅವರ ಸೇನೆ ಗ್ರನೈಕಸ್ ನದಿಯ ಬಲದಂಡೆಯಲ್ಲಿ ಬಿಡಾರ ಹೂಡಿತ್ತು. ಅಲೆಗ್ಸಾಂಡರನ ಭಾರಿ ಸೈನ್ಯವನ್ನು ನೋಡಿದ ಪರ್ಷಿಯನರು ತಮ್ಮ ಎಡಕಕ್ಷೆಯನ್ನು ಬಲಪಡಿಸಿಕೊಂಡು ಸಜ್ಜಾದರು. ಉಗ್ರವಾದ ಹೋರಾಟ ಪ್ರಾರಂಭವಾಯಿತು. ಮ್ಯಾಸಿಡೋನಿಯನರು ಭಲ್ಲೆಯ ಮಳೆಯನ್ನು ಎದುರಿಸಿ ಪ್ರಯಾಸದಿಂದ ನದಿದಂಡೆಯನ್ನು ಏರಿದರು. ಅಲೆಗ್ಸಾಂಡರ್ ತನ್ನ ಸೇನಾಬಲವನ್ನು ಹೆಚ್ಚಿಸಿಕೊಂಡು ಪರ್ಷಿಯನ್ ಸೇನಾಧಿಕಾರಿಗಳಿದ್ದ ಭಾಗದ ಮೇಲೆ ಆಕ್ರಮಣವನ್ನು ಪ್ರಾರಂಭಿಸಿದ. ಪರ್ಷಿಯನ್ ದೊರೆ ಡೇರಿಯಸನ ಅಳಿಯನೂ ಅವನ ಸಂಬಂಧಿಯೊಬ್ಬನೂ ಅಲೆಗ್ಸಾಂಡರ್‌ನಿಂದ ಹತರಾದರು. ಸಾವಿನ ದವಡೆಯಲ್ಲಿ ಸಿಕ್ಕಿದ್ದ ಅಲೆಗ್ಸಾಂಡರ್‌ನನ್ನು ಅಶ್ವಸೇನೆಯ ನಾಯಕ ಕ್ಲೈಟಸ್ ರಕ್ಷಿಸಿದ.

ಆದರೆ ಕೊನೆಗೂ ಪರ್ಷಿಯನರು ಹಿಮ್ಮೆಟ್ಟಬೇಕಾಯಿತು. ಪಾರ್ಶ್ವಗಳಲ್ಲಿದ್ದ ಸೈನಿಕರು ಪಲಾಯನ ಮಾಡಿದರು. ಅಲೆಗ್ಸಾಂಡರ್‌ನ ಉಳಿದ ಸೇನೆ ಸುಲಭವಾಗಿ ನದಿಯನ್ನು ದಾಟಿ ಪರ್ಷಿಯನರ ಕೂಲಿ ಭಟರನ್ನು ಸುತ್ತುವರಿಯಿತು. ಕೈಸೆರೆಯಾದ ಗ್ರೀಕ್ ಕೂಲಿ ಭಟರನ್ನು ಅವನು ಮ್ಯಾಸಿಡೋನಿಯಕ್ಕೆ ಕಠಿಣ ದುಡಿಮೆಗೆ ಕಳುಹಿಸಿದ. ಥೀಬ್ಸಿನ ಸೈನಿಕರನ್ನು ಬಿಡುಗಡೆ ಮಾಡಿದ. ಮ್ಯಾಸಿಡೋನಿಯನರು ಈ ಯುದ್ಧದಲ್ಲಿ ಹೆಚ್ಚಿನ ಕಷ್ಟ ನಷ್ಟಗಳನ್ನು ಅನುಭವಿಸಲಿಲ್ಲವೆಂದೂ ಅವರು ಕೇವಲ 115 ಜನರನ್ನು ಕಳೆದುಕೊಂಡರೆಂದೂ ಏರಿಯನ್ ಹೇಳಿದ್ದಾನೆ. ಈ ಗೆಲುವಿಗಾಗಿ ದೇವತೆಗಳಿಗೆ, ಮುಖ್ಯವಾಗಿ ಅಥೆನ ದೇವತೆಗೆ ಧನ್ಯವಾದಗಳನ್ನು ಅರ್ಪಿಸುವ ಸಲುವಾಗಿ ಅಲೆಗ್ಸಾಂಡರ್ ಅಥೆನ್ಸಿಗೆ 300 ಜೊತೆ ಯುದ್ಧಕವಚಗಳನ್ನು ಕಳುಹಿಸಿಕೊಟ್ಟ. (ಎಚ್.ವಿ.ಎಸ್.ಎಂ.)

**ಗ್ರನ್‌ವಾಲ್ಡ್ ಕದನ :** ಟ್ಯುಟಾನಿಕ್ ಸೇನೆಗೂ ಪೋಲರಿಗೂ 1410 ರ ಜುಲೈ 15 ರಂದು ನಡೆದ ಕದನ. ಇದು ಸ್ಟೆಬಾರ್ಕ್ (ಟ್ಯಾನನ್‌ಬರ್ಗ್) ಮತ್ತು ಗ್ರನ್‌ವಾಲ್ಡ್ ಹಳ್ಳಿಗಳ ನಡುವೆ ನಡೆಯಿತಾದ್ದರಿಂದ ಇದಕ್ಕೆ ಗ್ರನ್‌ವಾಲ್ಡ್ ಕದನವೆಂಬ ಹೆಸರು ಬಂದಿದೆ. ಟ್ಯಾನನ್‌ಬರ್ಗ್ ಕದನವೆಂದೂ ಇದನ್ನು ಕರೆಯುವುದುಂಟು. ಈ ಕದನದಿಂದಾಗಿ ಬಾಲ್ಟಿಕ್ ಸಮುದ್ರದ ಆಗ್ನೇಯ ಕರಾವಳಿಯಲ್ಲಿ ಜರ್ಮನರ ವಸಾಹತು ಕೊನೆಗೊಂಡಿತು.

1385ರಲ್ಲೇ ಪೋಲೆಂಡ್ ಮತ್ತು ಲಿಥುವೇನಿಯ ಒಂದಾದಾಗ ಪೋಲೆಂಡಿನ ಶಕ್ತಿ ಹೆಚ್ಚಿತ್ತು. ಇದು ಆದದ್ದು 2 ನೆಯ ವ್ಲಾಡಿಸ್ಲಾಫನಿಂದ. ಈತ 1386 ರಿಂದ 1434 ರವರೆಗೆ ಪೋಲೆಂಡ್‌ನ ದೊರೆಯಾಗಿದ್ದ. ಟ್ಯುಟಾನಿಕ್ ಪಂಥದ ಕೇಂದ್ರ ಇದ್ದದ್ದು ಮ್ಯಾಲ್ಬಾರ್ಕ್‌ನಲ್ಲಿ. ಅದರ ಮೇಲೆ ಏರಿ ಹೋಗಲು ವ್ಲಾಡಿಸ್ಲಾಫ್ ತನ್ನ ಸೇನೆಯನ್ನು ಶತ್ರುಗಳು ನಿರೀಕ್ಷಿಸಿದ್ದಕ್ಕಿಂತ ದೂರದಲ್ಲಿ ನಿಲ್ಲಿಸಿದ. ಅಲ್ರಿಚ್ ಫಾನ್ ಜಂಗಿಂಜೆನನ ನಾಯಕತ್ವದಲ್ಲಿ ಪಂಥದ ಶಸ್ತ್ರಸಜ್ಜಿತ ರಾವುತದಳ ಮುಂದೆ ನುಗ್ಗಿ, ವೈಟಾಟಸನ ಲಿಥುವೇನಿಯನ್ ಸೇನೆಯನ್ನು ಸೋಲಿಸಿತು. ಆದರೆ ವ್ಲಾಡಿಸ್ಲಾಫ್ ನಿರ್ದೇಶಿಸುತ್ತಿದ್ದ ಪೋಲಿಸ್ ಸೇನೆ ಸುರಕ್ಷಿತವಾಗಿತ್ತು. ಅದು ಜಂಗಿಂಜೆನನ ಸೇನೆಯ ಮೇಲೆ ಬಿತ್ತು. ಜಂಗಿಂಜೆನ್ ಸಾವಿಗೆ ಈಡಾದ. ಅವನ ವೀರರ ಪೈಕಿ 205 ಮಂದಿ ಸತ್ತರು. ಉಳಿದವರು ದಿಕ್ಕಾಪಾಲಾಗಿ ಓಡಿಹೋದರು.

ಈ ಕದನದಿಂದಾಗಿ ಟ್ಯುಟಾನಿಕ್ ಪಂಥದ ನೈತಿಕ ಸ್ಥೈರ್ಯ ನಷ್ಟವಾಯಿತು. ಅನೇಕ ಕೋಟೆಗಳು ಶರಣಾದುವು. ಆದರೆ ಆಗಸ್ಟ್–ಸೆಪ್ಟೆಂಬರ್ ತಿಂಗಳುಗಳಲ್ಲಿ ಹೆನ್ರಿಕ್ ರ್‍ಯೂಸ್‌ವಾನ್ ಫ್ಲೂನ್ ಎಂಬುವನು ಮ್ಯಾಲ್‌ಬ್ರಾಕಿನ ರಕ್ಷಣೆಯ ನೇತೃತ್ವ ವಹಿಸಿದ್ದ. ಸ್ವಲ್ಪ ಕಾಲ ಪೋಲಿಸರ ಕೈಕಟ್ಟಿದಂತಾಗಿತ್ತು. ಆದರೂ ಟ್ಯುಟಾನಿಕ್ ಪಂಥೀಯರು ಮತ್ತೆ ತಮ್ಮ ಪ್ರತಿಷ್ಠೆ ಬೆಳೆಸಿ ಕೊಳ್ಳಲಾಗಲಿಲ್ಲ. ಮೊದಲಿನ ಒಗ್ಗಟ್ಟೂ ಇರಲಿಲ್ಲ. ಬಾಲ್ಟಿಕ್ ಪ್ರದೇಶದ ಮೇಲೆ 1466 ರಲ್ಲಿ ಟ್ಯುಟಾನಿಕ್ ಪಂಥೀಯರ ಹತೋಟಿ ಸಂಪೂರ್ಣವಾಗಿ ಕುಸಿಯಿತು. (ಎಂ.ಆರ್.ಎಎನ್.)

**ಗ್ರಸ್ :** ಆಕಾಶದಲ್ಲಿರುವ 88 ನಕ್ಷತ್ರಪುಂಜಗಳಲ್ಲಿ (ಕಾನ್ಸ್‌ಟಲೇಷನ್ಸ್) ಒಂದು. ಇದು ದಕ್ಷಿಣಾರ್ಧಗೋಳದಲ್ಲಿದೆ. 16ನೆಯ ಶತಮಾನದ ಕೊನೆಯ ದಶಕಗಳಲ್ಲಿ ಇದನ್ನು ಗುರುತಿಸಲಾಯಿತು. ವಿಷುವದಂಶ (ರೈಟ್ ಅಸೆನ್ಷನ್) 22 ಗಂಟೆ, ಘಂಟಾವೃತ್ತಾಂಶ (ಡೆಕ್ಲಿನೇಷನ್) – $47^0$. ಇದನ್ನು ಬಕ (ಲ್ಯಾಟಿನ್ ಭಾಷೆಯಲ್ಲಿ ಗ್ರಸ್ ಎಂದರೆ ಬಕ) ಎಂದು ಹೆಸರಿಸಲಾಗಿದೆ. *

**ಗ್ರಹ :** ಒಂದು ನಕ್ಷತ್ರದ ಸುತ್ತ ಪರಿಭ್ರಮಿಸುತ್ತಿರುವ ಚಿಕ್ಕದಾದ ಘನ ಆಕಾಶಕಾಯ (ಪ್ಲ್ಯಾನೆಟ್). ರೂಢಿಯಲ್ಲಿ ಸೂರ್ಯನಕ್ಷತ್ರವನ್ನು ಪರಿಭ್ರಮಿಸುತ್ತಿರುವ ಬುಧಾದಿಯಾಗಿ ಒಂಬತ್ತು ಕಾಯಗಳಿಗೆ ಗ್ರಹಗಳೆಂದು ಹೆಸರುಂಟು. ಸೂರ್ಯನಿಂದ ಏರುತ್ತಿರುವ ದೂರಗಳಲ್ಲಿ ಇವುಗಳ ಹೆಸರು ಅನುಕ್ರಮವಾಗಿ ಬುಧ, ಶುಕ್ರ, ಭೂಮಿ, ಮಂಗಳ, ಗುರು, ಶನಿ, ಯುರೇನಸ್, ನೆಪ್ಚೂನ್ ಮತ್ತು ಪ್ಲೂಟೋ. ಇವಲ್ಲದೇ ಮಂಗಳ ಮತ್ತು ಗುರುಕಕ್ಷೆಗಳ ನಡುವೆ ಕ್ಷುದ್ರಗ್ರಹಗಳ ಹೊನಲೇ ಉಂಟು (**ನೋಡಿ– ಕ್ಷುದ್ರಗ್ರಹಗಳು**).


**ಲಕ್ಷಣಗಳು :** ಎಲ್ಲ ಗ್ರಹಗಳಿಗೂ ಸಾಮಾನ್ಯವಾದ ಕೆಲವು ಲಕ್ಷಣಗಳಿವೆ.

1. ಅವು ಸೂರ್ಯನ ಸುತ್ತ ಭಿನ್ನ ಕಕ್ಷೆಗಳಲ್ಲಿ ಆದರೆ ಒಂದೇ ದಿಶೆಯಲ್ಲಿ ಪರಿಭ್ರಮಿಸುತ್ತಿವೆ.

2. ಈ ಕಕ್ಷೆಗಳೆಲ್ಲವೂ ದೀರ್ಘವೃತ್ತಗಳು. ಸೂರ್ಯನ ಸ್ಥಾನ ಆಯಾ ದೀರ್ಘವೃತ್ತದ ಒಂದು ನಾಭಿಯಲ್ಲಿ ಉಂಟು (ಇದೇ ಕೆಪ್ಲರನ ಮೊದಲ ನಿಯಮ). ಆದ್ದರಿಂದ ಎಲ್ಲ ಗ್ರಹಕಕ್ಷೆಗಳಿಗೂ ಸೂರ್ಯನಿರುವ ನಾಭಿ ಸಾಮಾನ್ಯವಾದದ್ದು.

3. ಗ್ರಹಗಳ ಕಕ್ಷಾವೇಗ ಸಮಕಾಲಗಳಲ್ಲಿ ಸಮ ಸಲೆಗಳು ಎಂಬ ಸೂತ್ರಾನುಸಾರ ಉಂಟು (ಕೆಪ್ಲರನ ಎರಡನೆಯ ನಿಯಮ). ಅಂದರೆ ಸೂರ್ಯ–ಗ್ರಹ ರೇಖೆ ಸೂರ್ಯನನ್ನು ಕುರಿತಂತೆ ಸಲೆಯನ್ನು ರೇಖಿಸುವ ದರ ಸ್ಥಿರವಾಗಿದೆ. ಇದರ ಪರಿಣಾಮವಾಗಿ ಸೂರ್ಯನೀಚ (ಪೆರಿಹೀಲಿಯನ್) ಬಿಂದುವಿನಲ್ಲಿ ಗ್ರಹಕ್ಕೆ ಗರಿಷ್ಠ ವೇಗವೂ ಸೂರ್ಯೋಚ್ಚ ಬಿಂದುವಿನಲ್ಲಿ (ಅಪ್‌ಹೀಲಿಯನ್) ಕನಿಷ್ಠ ವೇಗವೂ ಪ್ರಾಪ್ತವಾಗುತ್ತವೆ.


4. ಸೂರ್ಯನನ್ನು ಪರಿಭ್ರಮಿಸಲು ಗ್ರಹ ತೆಗೆದುಕೊಳ್ಳುವ ಅವಧಿಕಾಲದ ವರ್ಗ ಸೂರ್ಯ–ಗ್ರಹ ಸರಾಸರಿ ದೂರದ ಘನದ ಅನುಪಾತದಲ್ಲಿದೆ. ಈ ಅನುಪಾತದ ಸ್ಥಿರಾಂಕ ಪ್ರತಿಯೊಂದು ಗ್ರಹಕ್ಕೂ ಒಂದೇ (ಕೆಪ್ಲರನ ಮೂರನೆಯ ನಿಯಮ).



ಚಿತ್ರ 1. ಎಡ : ಭೂಮಿಯಿಂದ ತೊಡಗಿ ಪ್ಲೂಟೋ ವರೆಗೆ ಸೌರವ್ಯೂಹದ ಗ್ರಹಗಳ ಕಕ್ಷೆಗಳನ್ನೂ ಉತ್ಕೇಂದ್ರತೆಗಳನ್ನೂ ಇಲ್ಲಿ ಗಮನಿಸಬಹುದು.
ಬಲ : ಬುಧದಿಂದ ಗುರು ವರೆಗೆ. ಬುಧ ಮತ್ತು ಮಂಗಳ ಕಕ್ಷೆಗಳ ತೀವ್ರ ಉತ್ಕೇಂದ್ರತೆಗಳನ್ನೂ ಗಮನಿಸಬಹುದು.

5. ಸೂರ್ಯ–ಗ್ರಹ ನಡುವಿನ ಬಲಸಂಬಂಧ ವ್ಯಸ್ತವರ್ಗನಿಯಮಾನುಸಾರ (ಇನ್ವರ್ಸ್ ಸ್ಕ್ವೇರ್ ಲಾ) ಇರುವುದರಿಂದ ಗ್ರಹಗಳ ಚಲನೆ ಈ ಮೇಲೆ (2), (3), (4) ರಲ್ಲಿ ವಿವರಿಸಿದಂತೆ ಉಂಟು (ಈ ನಿಯಮವನ್ನು ಆವಿಷ್ಕರಿಸಿದವ ಐಸಾಕ್ ನ್ಯೂಟನ್, 1642–1727).

6. ಎಲ್ಲ ಗ್ರಹಗಳಿಗೂ ಬೆಳಕು, ಉಷ್ಣ ಮುಂತಾದ ಶಕ್ತಿಗಳ ಆಕರ ಸೂರ್ಯನೇ. ಸೂರ್ಯನಿಂದ ತಮ್ಮ ಮೇಲೆ ಪಾತವಾಗುವ ಬೆಳಕನ್ನು ಪ್ರತಿಫಲಿಸಿ ಅವು ಆಕಾಶದಲ್ಲಿ ಬೆಳಗುತ್ತವೆ, ಅಷ್ಟೆ.



ಚಿತ್ರ 2. ಗ್ರಹಗಳ ಸಾಪೇಕ್ಷ ಕಕ್ಷಾವೇಗಗಳು

7. ಗ್ರಹಗಳಿಗೆ ಉಪಗ್ರಹಗಳು ಇರಬಹುದು, ಇಲ್ಲದೆಯೂ ಇರಬಹುದು. ಉಪಗ್ರಹಗಳ ಹಾಗೂ ಬೇರೆ ವಿವರಗಳನ್ನು ಲೇಖನದ ಕೊನೆಯಲ್ಲಿರುವ ಯಾದಿಗಳಲ್ಲಿ ಕೊಟ್ಟಿದೆ.

8. ಭೂಮಿಯನ್ನುಳಿದು ಮಿಕ್ಕ ಯಾವ ಗ್ರಹದಲ್ಲೂ ಜೀವಿಗಳಿರುವುದಕ್ಕೆ ಪುರಾವೆಗಳು ಲಭಿಸಿಲ್ಲ. ಮಂಗಳದಲ್ಲಿ ಏನಾದರೂ ಇದ್ದರೆ ಅದು ತೀರ ಆದಿಮ ಸ್ಥಿತಿಯಲ್ಲಿ ಇರಬಹುದೆಂದು ಅಂದಾಜು ಮಾಡಲಾಗಿದೆ.


**ವರ್ಗೀಕರಣ :** ಗಾತ್ರಾನುಸಾರ ಎರಡು ಪ್ರಧಾನ ವರ್ಗಗಳಿವೆ. ಬುಧ, ಶುಕ್ರ, ಭೂಮಿ, ಮಂಗಳ ಮತ್ತು ಪ್ಲೂಟೋ–ಇವು ಕಿರಿಯ ಗ್ರಹಗಳು; ಗುರು, ಶನಿ, ಯುರೇನಸ್ ಮತ್ತು ನೆಪ್ಚೂನ್–ಇವು ಹಿರಿಯ ಗ್ರಹಗಳು. ಸೂರ್ಯ ಮತ್ತು ಗ್ರಹಗಳನ್ನು ನಾವು ವೀಕ್ಷಿಸುವುದು ಭೂಮಿಯ ಮೇಲಿನಿಂದಾದ್ದರಿಂದ ಬುಧ ಹಾಗೂ ಶುಕ್ರ ಗ್ರಹಗಳನ್ನು ಒಳಗ್ರಹಗಳೆಂದೂ ಮಂಗಳದಿಂದ ಪ್ಲೂಟೋದ ವರೆಗಿನ ಗ್ರಹಗಳನ್ನು ಹೊರಗ್ರಹಗಳೆಂದೂ ಕರೆಯುವುದುಂಟು.

ಸೂರ್ಯನಿಂದ ಗ್ರಹಗಳ ದೂರಗಳು ಮೇಲುನೋಟಕ್ಕೆ ಯಾದೃಚ್ಛಿಕವಾಗಿರುವಂತೆ ತೋರುತ್ತವೆ. ಇವುಗಳಲ್ಲಿ ಒಂದು ಕ್ರಮ ಇರಲಾರದೇ ಎಂಬುದನ್ನು ವಿಜ್ಞಾನಿಗಳು ಪರಿಶೀಲಿಸಿದ್ದಾರೆ. ಇಂಥ ಚಿಂತನೆಯ ಫಲಿತಾಂಶವಾಗಿ ಟೆಶಿಯಸ್–ಬೋಡ್ ನಿಯಮ (ರೂಢಿಯಲ್ಲಿ ಬೋಡ್ ನಿಯಮ ಎಂದೇ ಇದನ್ನು ಕರೆಯುತ್ತಾರೆ) ಪ್ರಸಿದ್ಧಿಗೆ ಬಂದಿದೆ (1772). ಈ ನಿಯಮದ ವಿವರಗಳನ್ನೂ ಇದರ ಅನ್ವಯದಿಂದ ಹೇಗೆ ಕ್ಷುದ್ರಗ್ರಹಗಳ ಆವಿಷ್ಕಾರ ಆಯಿತೆಂಬ ವಿಷಯವನ್ನೂ ತಿಳಿಯಲು **ನೋಡಿ– ಕ್ಷುದ್ರಗ್ರಹಗಳು**. ಸೂರ್ಯನಿಂದ ಗ್ರಹಗಳ ದೂರಗಳು ಬೋಡ್ ನಿಯಮಾನುಸಾರವೇ ಏಕೆ ಇರಬೇಕು ಎನ್ನುವುದಕ್ಕೆ ಸಾಕ್ಷ್ಯಾಧಾರಗಳನ್ನು ಪ್ರಾಯಶಃ ಸೌರವ್ಯೂಹದ ಉಗಮ, ಸಮಗ್ರ ವ್ಯವಸ್ಥೆಯ ಗತಿವಿಜ್ಞಾನ ಮುಂತಾದ ಹಲವಾರು ಪ್ರಾಚಲಗಳನ್ನು ಆಧರಿಸಿ ಒದಗಿಸಬೇಕಾಗುತ್ತದೆ.

**ದ್ರವ್ಯರಾಶಿ, ಗುರುತ್ವ ಮತ್ತು ಸಾಂದ್ರತೆ :** ಒಂದು ಅಥವಾ ಹೆಚ್ಚು ಉಪಗ್ರಹಗಳಿರುವ ಗ್ರಹದ ದ್ರವ್ಯರಾಶಿಯನ್ನು ನ್ಯೂಟನನ ಗುರುತ್ವಾಕರ್ಷಣ ನಿಯಮದ ಅನ್ವಯದಿಂದ ಸುಲಭವಾಗಿ ಕಂಡುಹಿಡಿಯಬಹುದು. ಉಪಗ್ರಹದ ಕಕ್ಷೆಯ ಅರ್ಧದೀರ್ಘಾಕ್ಷ $a$ ಖಗೋಳಮಾನ ಮತ್ತು ಅದರ ಪರಿಭ್ರಮಣೆಯ ಅವಧಿ ಕಾಲ $T$ ನಾಕ್ಷತ್ರಿಕ ವರ್ಷ ಆಗಿದ್ದರೆ ಆಗ ಗ್ರಹದ ದ್ರವ್ಯರಾಶಿ $m = a^3/T^2$. ಇಲ್ಲಿ ಸೂರ್ಯನ ದ್ರವ್ಯರಾಶಿ ಏಕಮಾನ. ಈ ಗಣನೆ ಮಾಡುವಾಗ ಗ್ರಹಕ್ಕೆ ಸಾಪೇಕ್ಷವಾಗಿ ಉಪಗ್ರಹದ ದ್ರವ್ಯರಾಶಿಯನ್ನೂ ಸೂರ್ಯನಿಗೆ ಸಾಪೇಕ್ಷವಾಗಿ ಭೂಮಿಯ ದ್ರವ್ಯರಾಶಿಯನ್ನೂ ಉಪೇಕ್ಷಿಸಬಹುದೆಂದು ಭಾವಿಸಲಾಗಿದೆ. ಭೂಮಿ ($m_e$) ಹಾಗೂ ಸೂರ್ಯ ($m_S$) ದ್ರವ್ಯರಾಶಿಗಳ ನಿಷ್ಪತ್ತಿ $m_e$: $m_S$ ನ್ನು ಇದೇ ಪ್ರಕಾರ ಶೋಧಿಸಬಹುದಾದ್ದರಿಂದ $m_e$ ಪದಗಳಲ್ಲಿ ಕೂಡ ಗ್ರಹದ್ರವ್ಯರಾಶಿಗಳನ್ನು ಪಡೆಯಬಹುದು. ಗ್ರಹಕ್ಕೆ ಒಂದು ಉಪಗ್ರಹ ಕೂಡ ಇಲ್ಲದಾಗ (ಉದಾಹರಣೆಗೆ ಬುಧ, ಶುಕ್ರ) ಆ ಗ್ರಹದ ದ್ರವ್ಯರಾಶಿಯನ್ನು ಅದು ನೆರೆಗ್ರಹಗಳ ಕಕ್ಷೆಗಳ ಮೇಲೋ ಅಪರೂಪವಾಗಿ ಅದರ ಸಮೀಪ ಹಾಯುವ ಧೂಮಕೇತುವಿನ ಕಕ್ಷೆಯ ಮೇಲೋ ಪ್ರಯುಕ್ತಿಸುವ ಕ್ಷೋಭೆಗಳನ್ನು (ಪರ್ಟರ್ಬೇಷನ್ಸ್) ಅಳೆದು ಪಡೆಯಬಹುದು. ಈ ಕ್ರಮದಿಂದ ಅಷ್ಟೇನೂ ನಿಖರವಾದ ಮಾಪನ ದೊರೆಯುವುದಿಲ್ಲ. ಏಕೆಂದರೆ ಕಕ್ಷೆಗಳಲ್ಲಿ ಗ್ರಹದಿಂದ ಉಂಟಾಗುವ ಕ್ಷೋಭೆಗಳು ಅಲ್ಪ ಪ್ರಮಾಣದವು. ಈಚೆಗೆ ಕೃತಕ ಉಪಗ್ರಹಗಳ ನೆರವಿನಿಂದ ಮತ್ತು ರಾಡಾರ್ ವೀಕ್ಷಣೆಗಳಿಂದ ಬುಧ, ಶುಕ್ರ ಮತ್ತು ಮಂಗಳ ಗ್ರಹಗಳ ದ್ರವ್ಯರಾಶಿಗಳನ್ನು ಹೆಚ್ಚು ನಿಷ್ಕೃಷ್ಟವಾಗಿ ಪಡೆಯಲಾಗಿದೆ. ಗ್ರಹದ ದ್ರವ್ಯರಾಶಿ $m$ ಮತ್ತು ತ್ರಿಜ್ಯ $r$ ಭೂಮಿಯ ದ್ರವ್ಯರಾಶಿ


ಮತ್ತು ತ್ರಿಜ್ಯ ಪದಗಳಲ್ಲಿ ಒಮ್ಮೆ ನಿರ್ಧರಿತವಾಯಿತೋ ಬಳಿಕ ಭೂಮಿಗೆ ಸಾಪೇಕ್ಷವಾಗಿ ಆ ಗ್ರಹದ ಮೇಲ್ಮೈ ಗುರುತ್ವ ಮತ್ತು ಸರಾಸರಿ ಸಾಂದ್ರತೆಗಳನ್ನು ಅನುಕ್ರಮವಾಗಿ $g = m/r^2$ ಮತ್ತು $\rho = m/r^3$ ಸಮೀಕರಣಗಳು ಕೊಡುತ್ತವೆ. 981 ಮತ್ತು 5.552 ರಿಂದ ಗುಣಿಸಿದಾಗ cgs ಏಕಮಾನಗಳಲ್ಲಿ ಅನುರೂಪ ಮಾಪನಗಳನ್ನು ಪಡೆಯಬಹುದು. $r$ ಮತ್ತು $m$ ತಿಳಿದ ತರುವಾಯ ಗ್ರಹವನ್ನು ಒಂದು ವಿಕ್ಷೇಪಿತವೋ (ಪ್ರೊಜೆಕ್ಟೈಲ್) ಅಣುವೋ ತೂರೆದು ಪರವಲಯ ಪಥದಲ್ಲಿ ಹೋಗಲು ಬೇಕಾಗುವ ವಿಮೋಚನ ವೇಗ $v_1$ನ್ನು ಗಣಿಸಬಹುದು:

$$v1 = \sqrt{2Gm/r}$$



ಚಿತ್ರ 3. ಗ್ರಹಗಳ ತೌಲನಿಕ ಗಾತ್ರಗಳು

**ಆವರ್ತನೆ ಮತ್ತು ಪರಿಭ್ರಮಣೆ :** ಪ್ರತಿಯೊಂದು ಗ್ರಹವೂ ತನ್ನ ಅಕ್ಷದ ಮೇಲೆ ಸುತ್ತುತ್ತ ಜೊತೆಯಲ್ಲೇ ಸೂರ್ಯನ ಸುತ್ತ ಸಹ ಸುತ್ತುತ್ತಿರುವುದು. ಮೊದಲನೆಯ ಚಲನೆಗೆ ಆವರ್ತನೆ (ರೊಟೇಷನ್) ಎಂದೂ ಎರಡನೆಯ ಚಲನೆಗೆ ಪರಿಭ್ರಮಣೆ (ರಿವೊಲ್ಯೂಷನ್) ಎಂದೂ ಹೆಸರು. ಇವು ದೇವಾಲಯಗಳ ಸುತ್ತ ಹೊರಳಿಕೊಂಡೇ ಪ್ರದಕ್ಷಿಣೆ ಮಾಡುವ ಭಕ್ತರ ಉರುಳು ಸೇವೆಯ ಏಕಕಾಲೀನ ದ್ವಿವಿಧ ಚಲನೆಗಳಂತಿವೆ. ಉಪಗ್ರಹಗಳಿಗೆ ಆಯಾ ಮಾತೃಗ್ರಹಗಳನ್ನು ಕುರಿತಂತೆ ಇವೆರಡು ವಿಧದ ಚಲನೆಗಳಿವೆ.



ಚಿತ್ರ 4. ಭೂಕಕ್ಷೆಯ ಒಳಭಾಗದಲ್ಲಿ ಸೂರ್ಯನ ಸುತ್ತ ಸಾಗುವ ಬುಧ ಮತ್ತು ಶುಕ್ರ ಗ್ರಹಗಳು ಭೂಮಿಗೆ ಪ್ರದರ್ಶಿಸುವ ದೃಶ್ಯ

ಪರಿಭ್ರಮಣೆಯ ದಿಶೆಯಲ್ಲಿಯೇ ಆವರ್ತನೆಯ ದಿಶೆಯೂ ಇದ್ದರೆ ಅದಕ್ಕೆ ಮುನ್ನಡೆ (ಡೈರೆಕ್ಟ್ ಮೋಷನ್) ಎಂದೂ ವಿರುದ್ಧ ದಿಶೆಯಲ್ಲಿ ಇದ್ದರೆ ಅದಕ್ಕೆ ಹಿನ್ನಡೆ (ರಿಟ್ರೊಗ್ರೇಡ್ ಮೋಷನ್) ಎಂದೂ ಹೆಸರು. ಯುರೇನಸ್ ಗ್ರಹದ ಚಲನೆ ಹಿನ್ನಡೆ. ಬಾಕಿ ಎಲ್ಲ ಗ್ರಹಗಳ ಚಲನೆಗಳೂ ಮುನ್ನಡೆಗಳೇ. ಉಪಗ್ರಹಗಳ ಪೈಕಿ ಗುರುವಿನ ನಾಲ್ಕು ಉಪಗ್ರಹಗಳಿಗೆ (VIII, IX, XI, XII), ಶನಿಯ ಒಂದು ಉಪಗ್ರಹಕ್ಕೆ (IX ಫೀಬಿ), ಯುರೇನಸಿನ ನಾಲ್ಕು ಉಪಗ್ರಹಗಳಿಗೆ (I ಏರಿಯಲ್, II ಅಂಬ್ರಿಯೇಲ್, III ಟೈಟಾನಿಯ ಮತ್ತು IV ಓಬರಾನ್) ಮತ್ತು ನೆಪ್ಚೂನಿನ ಒಂದು ಉಪಗ್ರಹಕ್ಕೆ (I ಟ್ರೈಟಾನ್) ಹಿನ್ನಡೆಗಳಿವೆ. ಸೂರ್ಯನನ್ನು ಕುರಿತಂತೆ ಒಂದು ಗ್ರಹದ ಆವರ್ತನಾವಧಿಯೂ ಪರಿಭ್ರಮಣಾವಧಿಯೂ ಸಮವಾಗಿದ್ದರೆ ಅಂಥ ಗ್ರಹದ ಒಂದು ಅರ್ಧ ಸದಾ ಸೂರ್ಯಮುಖವಾಗಿಯೂ ಇನ್ನೊಂದು ಅರ್ಧ ಸದಾ ಸೂರ್ಯವಿಮುಖವಾಗಿಯೂ ಇರುತ್ತದೆ. ಮೊದಲಿನ ಅರ್ಧಕ್ಕೆ ಸದಾ ಹಗಲು, ಎರಡನೆಯ ಅರ್ಧಕ್ಕೆ ಸದಾ ರಾತ್ರಿ ಕವಿದಿರುವವು. ಬುಧ ಮತ್ತು ಶುಕ್ರಗ್ರಹಗಳ ಪರಿಸ್ಥಿತಿ ಇದು. ಭೂಮಿಯ ಉಪಗ್ರಹವಾದ ಚಂದ್ರನ ಆವರ್ತನಾವಧಿಯೂ (ಭೂಮಿಯನ್ನು ಕುರಿತಂತೆ) ಪರಿಭ್ರಮಣಾವಧಿಯೂ ಒಂದೇ ಆಗಿರುವುದರಿಂದ ಭೂನಿವಾಸಿಗಳಿಗೆ ಚಂದ್ರನ ಒಂದು ಪಾರ್ಶ್ವ ಮಾತ್ರ ಗೋಚರಿಸುತ್ತದೆ. ಆವರ್ತನಾವಧಿಗೆ ಆಯಾ ಗ್ರಹದ ಇಲ್ಲವೆ ಉಪಗ್ರಹದ ದಿವಸವೆಂದೂ ಪರಿಭ್ರಮಣಾವಧಿಗೆ ಆಯಾ ಗ್ರಹದ ಇಲ್ಲವೆ ಉಪಗ್ರಹದ ವರ್ಷವೆಂದೂ ಸಾಮಾನ್ಯ ನಾಮಗಳಿವೆ. ಆದರೆ ರೂಢಿಯಲ್ಲಿ ಭೂಮಿಯನ್ನು ಕುರಿತು ಮಾತ್ರ ಈ ಪದಗಳನ್ನು ಉಪಯೋಗಿಸಿಕೊಂಡು ಇವನ್ನು ಏಕಮಾನಗಳಾಗಿ ಬಳಸಿ ಇತರ ಗ್ರಹೋಪಗ್ರಹಗಳ ಆವರ್ತನಾವಧಿ ಹಾಗೂ ಪರಿಭ್ರಮಣಾವಧಿಗಳನ್ನು ಅಳೆಯುವುದು ವಾಡಿಕೆ.

ಒಂದು ಗ್ರಹದ ಆವರ್ತನೆಯ ಅವಧಿಕಾಲವನ್ನು ಈ ಕೆಳಗಿನ ನಾಲ್ಕು ಭಿನ್ನ ವಿಧಗಳಿಂದ ಪಡೆಯುವುದು ಸಾಧ್ಯ:

1. ಗ್ರಹ ತಲದಲ್ಲಿರುವ ಶಾಶ್ವತ ಇಲ್ಲವೆ ಅರೆ ಶಾಶ್ವತ ಗುರುತುಗಳನ್ನು ದೂರದರ್ಶಕಗಳ ಸಹಾಯದಿಂದ ನೇರವಾಗಿ ವೀಕ್ಷಿಸಿ ಆವರ್ತನಾವಧಿಯ ನಿರ್ಧರಣೆ.

2. ಸಮಭಾಜಕೀಯ ವಿರುದ್ಧ ಅಂಚುಗಳ ವೇಗಗಳಲ್ಲಿನ ವ್ಯತ್ಯಾಸವನ್ನು ರೋಹಿತವೀಕ್ಷಣೆಯಿಂದ ಗಣಿಸಿ ಗ್ರಹದ ರೇಖೀಯವ್ಯಾಸದ ನೆರವಿನಿಂದ ಆವರ್ತನಾವಧಿಯ ನಿರ್ಧರಣೆ.

3. ರಾಡಾರ್ ವೀಕ್ಷಣೆಯಿಂದ ಆವರ್ತನಾವಧಿಯ ನಿರ್ಧರಣೆ.


4. ಗ್ರಹ ಪ್ರತಿಫಲಿಸುವ ಬೆಳಕಿನಲ್ಲಿ ತಲೆದೋರುವ ಕಲಾ ವ್ಯತ್ಯಾಸಗಳನ್ನು (ಫೇಸ್ ಡಿಫರೆನ್ಸಸ್) ಹಾಗೂ ಏರಿಳಿತಗಳನ್ನು ಅಳೆದು ಆವರ್ತನಾವಧಿಯ ನಿರ್ಧರಣೆ.

**ಗ್ರಹವೀಕ್ಷಣೆ:** ಸ್ವತಃ ಆವರ್ತನೆ ಮತ್ತು ಪರಿಭ್ರಮಣೆಗಳಿರುವ ಗ್ರಹವಾದ ಭೂಮಿಯ ಮೇಲೆ ನಿಂತು ಇತರ ಗ್ರಹಗಳನ್ನು ಸ್ಥಿರನಕ್ಷತ್ರಗಳ ಹಿನ್ನೆಲೆಯಲ್ಲಿ ವೀಕ್ಷಿಸಿ ಗುರುತಿಸುವ ಮನುಷ್ಯನಿಗೆ ಗ್ರಹಗಳ ನಿರಪೇಕ್ಷ ಚಲನೆ ತಿಳಿಯುವುದು ಸಾಧ್ಯವಿಲ್ಲ. ಇವನ ಪ್ರತಿಯೊಂದು ವೀಕ್ಷಣೆಯ ಮೇಲೂ ಭೂಮಿಯ ಚಲನೆಗಳ ಪರಿಣಾಮಗಳಿದ್ದೇ ಇರುತ್ತವೆ. ಎಲ್ಲ ಗ್ರಹಗಳೂ ಸೂರ್ಯನ ಸುತ್ತ ಒಂದೇ ದಿಶೆಯಲ್ಲಿ ಸುತ್ತುತ್ತಿದ್ದರೂ ಇವುಗಳ ಕಕ್ಷಾತಲಗಳು ಪರಸ್ಪರ ಬಾಗಿಕೊಂಡಿವೆ. ಭೂಮಿ ಕಕ್ಷಾತಲವನ್ನು (ಇದಕ್ಕೆ ಕ್ರಾಂತಿವೃತ್ತತಲವೆಂದು ಹೆಸರು) ಆಧಾರತಲವಾಗಿ ಆಯ್ದು ಇತರ ಗ್ರಹಕಕ್ಷಾತಲಗಳ ಬಾಗುಗಳನ್ನು (ಅಬ್‍ಲೀಕ್ವಿಟೀಸ್) ಇದಕ್ಕೆ ಸಾಪೇಕ್ಷವಾಗಿ ಅಳೆಯಲಾಗಿದೆ (**ನೋಡಿ– ಕಕ್ಷೆ**). ಗ್ರಹಗಳ ಕಕ್ಷಾವೇಗಗಳು ಭಿನ್ನವಾಗಿವೆ–ಸೂರ್ಯಸಮೀಪ ಗ್ರಹವಾದ ಬುಧದ ಕಕ್ಷಾವೇಗ ಗರಿಷ್ಠ. ಸೂರ್ಯ ದೂರ ಗ್ರಹವಾದ ಪ್ಲೂಟೋದ ಕಕ್ಷಾವೇಗ ಕನಿಷ್ಠ; ಇತರ ಗ್ರಹಗಳ ಕಕ್ಷಾವೇಗಗಳು ಇವುಗಳ ನಡುವೆ ಅವರೋಹೀ ಕ್ರಮದಲ್ಲಿವೆ. ಯಾವುದೋ ಒಂದು ಮುಹೂರ್ತದಲ್ಲಿ ಸಕಲ ಗ್ರಹಗಳೂ ಸೂರ್ಯನ ಒಂದೇ ಮಗ್ಗುಲಿಗೆ ಸಾಲಾಗಿ ನಿಲ್ಲಿಸಲ್ಪಟ್ಟಿವೆಯೆಂದೂ ಆ ಕ್ಷಣದಲ್ಲಿ ಅವನ್ನು ಆಯಾ ಕಕ್ಷೆಗಳ ಮೇಲೆ ಆಯಾ ವೇಗಗಳಿಂದ ಚಲಿಸಲು ಬಿಡಲಾಗಿದೆಯೆಂದೂ ಭಾವಿಸಿದರೆ ಮುಂದೆ ಯಾವುದೇ ಮೂಹರ್ತದಲ್ಲಿ ಅವುಗಳ ಸಾಪೇಕ್ಷ ಸ್ಥಾನಗಳು ಯದ್ವತದ್ವಾ ಇರುವುವೆನ್ನುವುದು ಸ್ಪಷ್ಟ ಆದ್ದರಿಂದಲೇ ಭೂಮಿಯಿಂದ ನೋಡುವ ವೀಕ್ಷಕನಿಗೆ ಗ್ರಹಗಳ ಸ್ಥಾನಗಳಲ್ಲಿ ಯಾವ ಕ್ರಮವೂ ಇರುವಂತೆ ತೋರುವುದಿಲ್ಲ. ಇದು ಪೂರ್ಣಸತ್ಯವೆಂದು ಹೇಳಲುಬಾರದು. ಈ ವೀಕ್ಷಕ ಕೆಲವು ಸಾಮಾನ್ಯ ನಿಯಮಗಳನ್ನು ಕ್ರಮೇಣ ಗಮನಿಸದಿರಲಾರ.


1. ಸಾಮಾನ್ಯವಾಗಿ ಎಲ್ಲ ಗ್ರಹಗಳೂ ಆಕಾಶದಲ್ಲಿ ಅಗಲ ಕಿರಿದಾದ ಒಂದು ಪಟ್ಟಿಗೆ ಮಾತ್ರ ಸೀಮಿತವಾಗಿವೆ. ಇದರ ಹೆಸರು ರಾಶಿಚಕ್ರ (ಜ಼ೋಡಿಯಕ್); ಕ್ರಾಂತಿ ವೃತ್ತದ ಉಭಯ ಪಾರ್ಶ್ವಗಳಲ್ಲೂ ಸಮಾಂಗವಾಗಿ $8^0$ ಗಳಷ್ಟು ಅಗಲಕ್ಕೆ ಈ ಪಟ್ಟಿ ವ್ಯಾಪಿಸಿದೆ. ಭೂಮಿಯಿಂದ ಕಾಣುವಂತೆ ಸೂರ್ಯ ಕೂಡ ರಾಶಿಚಕ್ರದ ಒಳಗೇ ಸಂಚರಿಸುವುದು. ಆದರೆ ಬುಧ (ಬಾಗು $7^0$), ಪ್ಲೂಟೋ (ಬಾಗು $17^0\ 9^/$) ಮತ್ತು ಕ್ಷುದ್ರಗ್ರಹಗಳು ಈ ನಿಯಮಕ್ಕೆ ಅಪವಾದ.

2. ಗ್ರಹಗಳಿಗೆ ಮುನ್ನಡೆ, ಹಿನ್ನಡೆ ಚಲನೆಗಳೆರಡೂ ಉಂಟು. ಅಲ್ಲದೆ ಒಂದು ಗ್ರಹದ ಚಲನೆಯಲ್ಲಿ ಮುನ್ನಡೆಯಿಂದ ಹಿನ್ನಡೆಗೆ ಇಲ್ಲವೇ ಹಿನ್ನಡೆಯಿಂದ ಮುನ್ನಡೆಗೆ ಸ್ಥಿತಿ ಬದಲಾವಣೆ ಆಗುತ್ತಿರುವ ಮಧ್ಯಾಂತರದಲ್ಲಿ ಒಂದಷ್ಟು ಕಾಲ ಅದು ಸ್ತಬ್ಧ ಸ್ಥಿತಿಯಲ್ಲಿ (ಸ್ಟೇಷನರಿ ಸ್ಟೇಟ್) ಇರುವುದು.


3. ವೀಕ್ಷಕನಲ್ಲಿ (ಅಂದರೆ ಭೂಮಿಯಲ್ಲಿ) ಸೂರ್ಯ ಹಾಗೂ ಗ್ರಹ ರಚಿಸುವ ಕೋನಕ್ಕೆ ಗ್ರಹದ ಕೋನಾಂತರ (ಇಲಾಂಗೇಷನ್) ಎಂದು ಹೆಸರು. ಬುಧ ಹಾಗೂ ಶುಕ್ರ ಗ್ರಹಗಳಿಗೆ ಕೋನಾಂತರದ ಗರಿಷ್ಠ ಮೌಲ್ಯಗಳು ಅನುಕ್ರಮವಾಗಿ $28^0$ ಮತ್ತು $48^0$. ಆಕಾಶದಲ್ಲಿ ಈ ಗ್ರಹಗಳು ಸೂರ್ಯನಿಂದ ಅತಿಹೆಚ್ಚು ಮುಂದೆ (ಪಶ್ಚಿಮ–ಪೂರ್ವ ದಿಶೆ) ಅಥವಾ ಅತಿ ಹೆಚ್ಚು ಹಿಂದೆ (ಪೂರ್ವ–ಪಶ್ಚಿಮ ದಿಶೆ) ಸಾಗಬಹುದಾದ ಮಿತಿಗಳಿವು ಎಂದರ್ಥ. ಹೊರಗ್ರಹಗಳಿಗೆ ಈ ನಿಯಮ ಅನ್ವಯಿಸುವುದಿಲ್ಲ. ಇದನ್ನು ಅರ್ಥಮಾಡಿಕೊಳ್ಳಲು ಚಿತ್ರ (5) ನ್ನು ಪರಿಶೀಲಿಸಬೇಕು. ಅಲ್ಲಿ $S$ ಸೂರ್ಯ, $V$ ಒಳ ಗ್ರಹ, $E$ ಭೂಮಿ. $\sigma$' $p$ ಗಳು $V$ ಮತ್ತು $E$ ಗಳ ಕಕ್ಷೆಗಳು. ಅಪ್ರದಕ್ಷಿಣ ದಿಶೆಯನ್ನು ಮುನ್ನಡೆಯ ದಿಶೆ ಎಂದು ಭಾವಿಸುತ್ತೇವೆ. ಒಂದು ನಿರ್ದಿಷ್ಟ ಮುಹೂರ್ತದಲ್ಲಿ $S$, $V$, $E$ ಗಳು ಒಂದೇ ರೇಖೆಯ ಮೇಲಿವೆ ಎಂದು ಭಾವಿಸೋಣ. ಆಗ $V$ ಯ ಕೋನಾಂತರ $0^0$. ಈ ಸ್ಥಿತಿಯನ್ನು $E$ ಯೊಡನೆ $V$ ನೀಚಯುತಿಯಲ್ಲಿ (ಇನ್ಫೀರಿಯರ್ ಕಂಜಂಕ್ಷನ್) ಇದೆ ಎನ್ನುತ್ತೇವೆ. $E$ ನಿಶ್ಚಲವಾಗಿದೆಯೆಂದೂ $V$ ಸಾಪೇಕ್ಷ ವೇಗದಿಂದ ಚಲಿಸುತ್ತಿದೆಯೆಂದೂ ಭಾವಿಸಿ $V$ ಯ ಚಲನೆಯನ್ನು ಪರಿಶೀಲಿಸಬಹುದು. ಆಗ $E$ ಯನ್ನು ಕುರಿತಂತೆ $V$ ಗೆ ಮುಂದಿಶೆಯಲ್ಲಿ (ಅಪ್ರದಕ್ಷಿಣೆ) ನಿವ್ವಳ ವೇಗವಿರುವುದರಿಂದ ಆ ದಿಶೆಯಲ್ಲೇ ಚಲಿಸಲು ತೊಡಗುತ್ತದೆ. ಅದು $V_1$ ಕ್ಕೆ ಬಂದಾಗ $V$ ಯ ಕೋನಾಂತರ ($\angle SEV_1$) ಗರಿಷ್ಠ. ಅಲ್ಲಿಂದ ಅದು ಕಡಿಮೆ ಆಗುತ್ತ ಸಾಗಿ $V_2$ ಕ್ಕೆ ಬಂದಾಗ ಶೂನ್ಯವಾಗುತ್ತದೆ. ಈ ಸ್ಥಿತಿಗೆ $V$ ಯ ಉಚ್ಚಯುತಿ (ಸುಪೀರಿಯರ್ ಕಂಜಂಕ್ಷನ್) ಎಂದು ಹೆಸರು. ಮುಂದೆ ಕೋನಾಂತರ ಕ್ರಮೇಣ ಏರಿ $V_3$ ಕ್ಕೆ ಬಂದಾಗ ಅದು ಪುನಃ ಗರಿಷ್ಠವಾಗುತ್ತದೆ. ಮತ್ತು $V$ ಗೆ ಮರಳಿದಾಗ ಅದು ಪುನಃ ಶೂನ್ಯವಾಗುವುದು. $V$-$V_1$-$V_2$ ಅಂತರದಲ್ಲಿ ಗ್ರಹವಿರುವಾಗ ಭೂಮಿಯ ಮೇಲಿನ ಓರ್ವ ವೀಕ್ಷಕನಿಗೆ ಗ್ರಹೋದಯ ಮೊದಲೂ ಸೂರ್ಯೋದಯ ತರುವಾಯವೂ ಆಗುತ್ತದೆ. ಅಂದರೆ ಆಗ ಗ್ರಹ ಮುಂಜಾನೆ ಪೂರ್ವ ದಿಗಂತದಲ್ಲಿ ಸೂರ್ಯ ಮೂಡುವ ಬಿಂದುವಿಗಿಂತ ಎತ್ತರದಲ್ಲಿ ಹೊಳೆಯುತ್ತಿರುತ್ತದೆ. ಈ ದೃಶ್ಯವನ್ನು ರೂಢಿಯಲ್ಲಿ ಮುಂಜಾನೆಯ ತಾರೆ (ಮಾರ್ನಿಂಗ್ ಸ್ಟಾರ್) ಎಂದು ಕರೆಯುವುದುಂಟು. $V_2$ ಮತ್ತು ಅದರ ಆಸುಪಾಸಿನಲ್ಲಿ ಗ್ರಹವಿರುವಾಗ ಅದು ಕಣ್ಮರೆಯಾಗಿರುತ್ತದೆ. $V_2$–$V_3$–$V$ ಅಂತರದಲ್ಲಿ ಗ್ರಹವಿರುವಾಗ ಮೊದಲಿನ ವೀಕ್ಷಕನಿಗೆ ಸೂರ್ಯೋದಯ ಮೊದಲೂ ಗ್ರಹೋದಯ ತರುವಾಯವೂ ಆಗುತ್ತದೆ. ಆದ್ದರಿಂದ ಈ ಸಂದರ್ಭದಲ್ಲಿ ಸೂರ್ಯಾಸ್ತಮಾನವಾದ ಬಳಿಕ ಪಶ್ಚಿಮ ದಿಗಂತದಲ್ಲಿ ಗ್ರಹ ಹೊಳೆಯುತ್ತಿರುವುದನ್ನು ನೋಡಬಹುದು. ಈ ದೃಶ್ಯವನ್ನು ರೂಢಿಯಲ್ಲಿ ಸಾಯಂಕಾಲದ ತಾರೆ (ಈವ್ನಿಂಗ್ ಸ್ಟಾರ್) ಎಂದು ಕರೆಯುವರು. $V$ ಮತ್ತು ಅದರ ಆಸುಪಾಸಿನಲ್ಲಿ ಗ್ರಹ ಇರುವಾಗ ಅದು ಕಣ್ಮರೆಯಾಗಿರುತ್ತದೆ.


**ಚಿತ್ರ 5**


ಚಿತ್ರ (6)ರಲ್ಲಿ $M$ ಒಂದು ಹೊರಗ್ರಹ, $E$ ಭೂಮಿ, $S$ ಸೂರ್ಯ. ಒಂದು ನಿರ್ದಿಷ್ಟ ಮುಹೂರ್ತದಲ್ಲಿ $S, E, M$ ಏಕರೇಖಸ್ಥವಾಗಿವೆ ಎಂದು ಭಾವಿಸೋಣ. $M$ ನ ಕಕ್ಷಾವೇಗ $E$ ಯ ಕಕ್ಷಾವೇಗಕ್ಕಿಂತ ಕಡಿಮೆ ಇರುವುದರಿಂದ $E$ ನಿಶ್ಚಲವಾಗಿದೆಯೆಂದು ಭಾವಿಸಿದರೆ ಆಗ $M$ ಸಾಪೇಕ್ಷ ವೇಗದಿಂದ ಪ್ರದಕ್ಷಿಣ ದಿಶೆಯಲ್ಲಿ ಸಂಚರಿಸಲು ಆರಂಭಿಸುತ್ತದೆ. ಅಂದರೆ $E$ಯಲ್ಲಿ ಇರುವ ವೀಕ್ಷಕನಿಗೆ ಹೊರಗ್ರಹ $M$ ನಿಂದ $M_1$ ರ ಕಡೆಗೆ ಸಾಗುತ್ತಿರುವಂತೆ ಕಾಣುವುದು. ಗ್ರಹ $M$ ನಲ್ಲಿರುವಾಗ ಅದರ ಕೋನಾಂತರ ($\angle SEM$) $180^0$. ಈ ಸ್ಥಿತಿಗೆ ವಿಯುತಿ (ಅಪೊಸಿಷನ್) ಎಂದು ಹೆಸರು. ಇದು ನೀಚ ವಿಯುತಿ ಎಂಬುದನ್ನು ಗಮನಿಸಬೇಕು. ಆ ದಿವಸಗಳಲ್ಲಿ ಸೂರ್ಯ ಮುಳುಗುವ ವೇಳೆ $M$ ಮೂಡುತ್ತಿರುವುದು. ಮುಂದಿನ ದಿವಸಗಳಲ್ಲಿ ಅದು $M_1$ ನ್ನು ತಲುಪಿದಾಗ ಅದರ ಕೋನಾಂತರ $90^0$ ಆಗಿರುತ್ತದೆ. ಆ ದಿವಸಗಳಲ್ಲಿ ವೀಕ್ಷಕನಿಗೆ ಸೂರ್ಯ ಮೊದಲೂ ಗ್ರಹ ತರುವಾಯವೂ ಮೂಡುವುದರಿಂದ ಸೂರ್ಯಾಸ್ತಮಾನದ ಬಳಿಕ ಬಹಳ ಹೊತ್ತು ಆಕಾಶದಲ್ಲಿ ಅದನ್ನು ಕಾಣಬಹುದು.


**ಚಿತ್ರ 6**

ಗ್ರಹ–ಸೂರ್ಯ ಅಂತರ ಕ್ರಮೇಣ ಕಡಿಮೆ ಆಗಿ ಗ್ರಹ $M_2$ ಕ್ಕೆ ಬಂದಾಗ ಅದು ಶೂನ್ಯವೇ ಆಗುತ್ತದೆ. ಈ ಸ್ಥಿತಿಗೆ ಯುತಿ ಎಂದು ಹೆಸರು. ಇದು ಉಚ್ಚಯುತಿ ಎಂಬುದನ್ನು ಗಮನಿಸಬೇಕು. ಗ್ರಹ $M_2$ ಕ್ಕೆ ಬರುವ ಕೆಲವು ದಿವಸಗಳ ಮೊದಲು ಅದು ರೂಢಿಯ ಮಾತಿನಲ್ಲಿ ಸಾಯಂಕಾಲದ ತಾರೆ ಆಗಿರುತ್ತದೆ. $M_2$ ರಿಂದ ಮುಂದಕ್ಕೆ ಗ್ರಹದ ಕೋನಾಂತರ ಏರುತ್ತ ಹೋಗುವುದು. ಆ ದಿವಸಗಳಲ್ಲಿ ವೀಕ್ಷಕನಿಗೆ ಅದು ಮೊದಲೂ ಸೂರ್ಯ ತರುವಾಯವೂ ಮೂಡುತ್ತದೆ. ಅಂದರೆ ಗ್ರಹ ಆಗ ರೂಢಿಯ ಮಾತಿನಲ್ಲಿ ಮುಂಜಾನೆಯ ತಾರೆ ಆಗಿರುವುದು. ಹೀಗೆ ಗ್ರಹ $M_3$ ಕ್ಕೆ ಬಂದಾಗ ಅದರ ಕೋನಾಂತರ $90^0$. ಮುಂದೆ $M$ ಗೆ ಬಂದಾಗ ಪ್ರಾರಂಭದ ವಿಯುತಿಸ್ಥಿತಿ ಪುನರಾವರ್ತಿಸುತ್ತದೆ. ಒಂದು ಒಳಗ್ರಹ ಎಂದೂ ವಿಯುತಿಸ್ಥಿತಿಯನ್ನು ಪಡೆಯಲಾರದು. ಒಂದು ಹೊರಗ್ರಹ ಎಂದೂ ನೀಚಯುತಿ ಸ್ಥಿತಿಯನ್ನಾಗಲೀ ಉಚ್ಚವಿಯುತಿ ಸ್ಥಿತಿಯನ್ನಾಗಲೀ ಪಡೆಯಲಾರದು.


**ಚಿತ್ರ 7. ಬುಧದ ಕಲೆಯನ್ನು ಅನುಸರಿಸಿ ಅದರ ದೃಗ್ವ್ಯಾಸದಲ್ಲಿ ಆಗುವ ಬದಲಾವಣೆಗಳು**


4. ಭೂಮಿಗೆ ಗ್ರಹ ಪ್ರದರ್ಶಿಸುವ ಬಿಂಬಕ್ಕೆ (ಅಂದರೆ ಹೊಳೆಯುವ ಭಾಗ) ಗ್ರಹದ ಕಲೆ (ಫೇಸ್) ಎಂದು ಹೆಸರು. ಹೊಳೆಯುವ ಭಾಗದ ಸಲೆ ಮತ್ತು ಗ್ರಹ ತಲದ ಸಲೆ ಇವುಗಳ ನಿಷ್ಪತ್ತಿಯೇ ಕಲೆ. ಆದ್ದರಿಂದ ಅಮಾವಾಸ್ಯೆ ಚಂದ್ರನ ಕಲೆ ಸೊನ್ನೆ; ಹುಣ್ಣಿಮೆ



**ಚಿತ್ರ 8. ಶುಕ್ರದ ಕಲೆಯನ್ನು ಅನುಸರಿಸಿ ಅದರ ದೃಗ್ವ್ಯಾಸದಲ್ಲಿ ಆಗುವ ಬದಲಾವಣೆಗಳು**


ಚಂದ್ರನ ಕಲೆ ಒಂದು; ಉಳಿದ ದಿವಸಗಳಲ್ಲಿ ಚಂದ್ರನ ಕಲೆ ಈ ಎರಡು ಪರಿಮಿತಿಗಳ ನಡುವೆ ಆಂದೋಲಿಸುತ್ತಿರುವುದು. ಕಲೆ ಸರಿಸುಮಾರು 0.75 ಆಗಿರುವಾಗ (ಶುಕ್ಲಪಕ್ಷದ ನವಮಿ ಇಲ್ಲವೇ ದಶಮಿ ಚಂದ್ರ) ಆ ಸ್ಥಿತಿಗೆ ಅರ್ಧಾಧಿಕ (ಜಿಬ್ಬಸ್) ಎಂದು ಹೆಸರು. ಒಳಗ್ರಹದ ಕಲೆ 0 ಮತ್ತು 1 ರ ನಡುವೆ ಸಮಸ್ತ ಬೆಲೆಗಳನ್ನೂ ತಾತ್ತ್ವಿಕವಾಗಿ ಪಡೆಯಬಲ್ಲುದು. ಆದರೆ ಕಲೆಯ ಬೆಲೆ 1 ಆದಾಗ ಅಂದರೆ ಪೂರ್ಣಗ್ರಹ ನಮಗೆ ಎದುರಾಗಿರುವಾಗ (ಹುಣ್ಣಿಮೆಗೆ ಸಂವಾದಿಯಾದ ಸ್ಥಿತಿ) ಸೂರ್ಯನಿಂದ ಆಚೆಗೆ ಅದು ಇರುವುದರಿಂದ ಬರಿಗಣ್ಣಿಗೆ ಗ್ರಹ ಕಾಣಿಸಲಾರದು. ಆದ್ದರಿಂದ ವಾಸ್ತವಿಕವಾಗಿ ಒಂದು ಒಳಗ್ರಹದ ಕಲೆ 0 ಮತ್ತು ಅರ್ಧಾಧಿಕ ಸ್ಥಿತಿಗಳ ನಡುವೆ ಆಂದೋಲಿಸುತ್ತಿರುವುದು. ಹೊರ ಗ್ರಹದ ಕಲೆ ಎಂದೂ 0 ಆಗುವುದಿಲ್ಲ. ಅದು ಅರ್ಧಾಧಿಕ ಹಾಗೂ ಪೂರ್ಣಸ್ಥಿತಿಗಳ ನಡುವೆ ಆಂದೋಲಿಸುತ್ತಿರುತ್ತದೆ.

**5. ದೃಗ್ಗೋಚರ ಚಲನೆಗಳು :** ಗ್ರಹಗಳೂ ಭೂಮಿಯೂ ಸ್ವಂತಾಕ್ಷಗಳ ಸುತ್ತ ಆವರ್ತಿಸುತ್ತ ಸೂರ್ಯನ ಸುತ್ತ ಪರಿಭ್ರಮಿಸುತ್ತ ಇರುವುದರಿಂದ ಭೂಮಿಯಿಂದ




ಚಿತ್ರ 9. ಮೇಲೆ : ಭೂಮಿ ಮತ್ತು ಒಂದು ಉಚ್ಚಗ್ರಹದ ಚಲನೆಗಳ ಸಂಯುಕ್ತ ಫಲ. ಉಚ್ಚಗ್ರಹದ ಮುನ್ನಡೆಯನ್ನೂ ಸ್ತಬ್ಧಸ್ಥಿತಿಯನ್ನೂ ಹಿನ್ನಡೆಯನ್ನೂ ಪುನಃ ಸ್ತಬ್ಧಸ್ಥಿತಿಯನ್ನೂ ಮುನ್ನಡೆಯನ್ನೂ ನೋಡಬಹುದು. ಕೆಳಗೆ : ಭೂಮಿಯಿಂದ ಕಾಣುವಂತೆ ಉಚ್ಚಗ್ರಹದ ಪಥ.

ನೋಡುವಾತನಿಗೆ ಗ್ರಹ ಚಲನೆಗಳು ಸಂಕೀರ್ಣವಾಗಿ ಕಾಣುತ್ತವೆ. ಸ್ಥಿರ ನಕ್ಷತ್ರ ಚಿತ್ರಗಳ ಹಿನ್ನೆಲೆಯಲ್ಲಿ ಒಂದು ಗ್ರಹದ ಚಲನೆ ವೀಕ್ಷಕನಿಗೆ ಹೇಗೆ ಕಾಣುವುದು ಎನ್ನುವುದನ್ನು ಚಿತ್ರ (9)ರಲ್ಲಿ ತೋರಿಸಿದೆ. ಗ್ರಹದ ದೃಗ್ಗೋಚರ ಚಲನೆಗಳು ಎರಡು–ಮುನ್ನಡೆ ಮತ್ತು ಹಿನ್ನಡೆ. ಇವೆರಡರ ನಡುವಿನ ಸ್ಥಿತಿ ಸ್ತಬ್ಧತೆ. ಮುನ್ನಡೆಯಲ್ಲಿ ಗ್ರಹ ಪಶ್ಚಿಮ–ಪೂರ್ವ ದಿಶೆಯಲ್ಲಿ ಚಲಿಸಿದಂತೆಯೂ ಹಿನ್ನಡೆಯಲ್ಲಿ (ಇದನ್ನು ವಕ್ರನಡೆ ಎಂದೂ ಕರೆಯುವುದಿದೆ) ಪೂರ್ವ–ಪಶ್ಚಿಮ ದಿಶೆಯಲ್ಲಿ ಚಲಿಸಿದಂತೆಯೂ ಕಾಣುವುದು. ಸ್ತಬ್ಧ ಸ್ಥಿತಿಯಲ್ಲಿ (ಸ್ಟೇಷನರಿ ಸ್ಟೇಟ್) ಗ್ರಹ ಚಲನರಹಿತ ವಾಗಿರುವಂತೆ ತೋರುತ್ತದೆ. ಆ ವೇಳೆಯಲ್ಲಿ ಭೂಮಿ–ಗ್ರಹರೇಖೆ ಸಮಾಂತರವಾಗಿ ಚಲಿಸುತ್ತಿರುವುದೇ ಇದರ ಕಾರಣ. ಯಾವುದೋ ಒಂದು ಮುಹೂರ್ತದಲ್ಲಿ ಭೂಮಿ $E_1$ ಮತ್ತು ಗ್ರಹ $M_1$ ಸೂರ್ಯ $S$ ನ್ನು ಕುರಿತಂತೆ



ಚಿತ್ರ 11. ಎಡ : ಶುಕ್ರದ ದೃಕ್‌ಪಥದಲ್ಲಿ ಕಾಣುವ ಒಂದು ಕುಣಿಕೆ. ಭೂಮಿ ಮತ್ತು ಶುಕ್ರ ಗ್ರಹಗಳ ಚಲನೆಗಳ ಸಂಯುಕ್ತ ಫಲವಿದು. ಬಲ : ಭೂಮಿಯಿಂದ ಕಾಣುವಂತೆ ನೀಚ ಗ್ರಹದ ಪಥ.


ಏಕರೇಖಸ್ಥವಾಗಿವೆ ಎಂದು ಭಾವಿಸೋಣ. ನಿರ್ದಿಷ್ಟ ಕಾಲಾನಂತರ ಅವು $E_2$ $M_2$ ಸ್ಥಾನಗಳಲ್ಲಿ ಇರುವುವೆಂದು ಭಾವಿಸಿದರೆ $E$ ಯ ಕಕ್ಷಾವೇಗ $M$ ನ ಕಕ್ಷಾವೇಗಕ್ಕಿಂತ ಅಧಿಕವಾಗಿರುವುದರಿಂದ ಕಂಸ $E_1E_2$ ಕಂಸ $M_1M_2$ ಕ್ಕಿಂತ ಉದ್ದವಾಗಿರುತ್ತದೆ. ಈಗ $E_2$ ರಿಂದ ನೋಡುವಾತನಿಗೆ $M_2$ ಹಿಂದೆ ಬಿದ್ದಿರುವಂತೆ (ಪೂರ್ವ–ಪಶ್ಚಿಮ ದಿಶೆ)



ಚಿತ್ರ 10. ಮೇಲೆ : ಭೂಮಿಯನ್ನು ಕುರಿತು ಒಂದು ಉಚ್ಚಗ್ರಹ ಯುತಿಕಾಲದಲ್ಲಿ ಪ್ರದರ್ಶಿಸುವ ವಿವಿಧ ಸ್ಥಾನಗಳು.
ಕೆಳಗೆ : ಭೂಮಿಯನ್ನು ಕುರಿತಂತೆ ಒಂದು ನೀಚ ಗ್ರಹ ಯುತಿಕಾಲದಲ್ಲಿ ಪ್ರದರ್ಶಿಸುವ ಸ್ಥಾನಗಳು

ಅಂದರೆ ಹಿನ್ನಡೆದಿರುವಂತೆ ತೋರುವುದು. ಮುಂದಿನ ಒಂದಿಷ್ಟು ವೇಳೆಯಲ್ಲಿ ಈ ಎರಡು ಗ್ರಹಗಳು $E_3 M_3$ ಸ್ಥಾನಗಳಿಗೆ ಬಂದರೆ ಅವುಗಳ ವೇಗಗಳ ಹಾಗೂ ಕಕ್ಷಾವಿನ್ಯಾಸಗಳ ಫಲವಾಗಿ $E_3, M_3$ ರೇಖೆ $E_2 M_2$ ರೇಖೆಗೆ ಸಮಾಂತರವಾಗಿಯೇ ಇರುತ್ತದೆ. ಆದ್ದರಿಂದ $E_3$ ರಿಂದ ನೋಡುವಾತನಿಗೆ ಈ ಅವಧಿಯಲ್ಲಿ $M$ಗೆ ಚಲನೆಯೇ ಇಲ್ಲವೆಂಬ ಭಾವನೆ

ಮೂಡುತ್ತದೆ. ಅಂದರೆ ಆಗ $M$ ಸ್ತಬ್ಧಸ್ಥಿತಿಯಲ್ಲಿ ಇರುವಂತೆ ಭಾಸವಾಗುತ್ತದೆ. ಮುಂದೆ ನಿರ್ದಿಷ್ಟ ಅವಧಿಯ ಬಳಿಕ ಗ್ರಹಗಳು $E_4, M_4$ ಗಳಲ್ಲಿದ್ದರೆ $E_4$ ರಿಂದ ನೋಡುವಾತನಿಗೆ $M$ ಮುನ್ನಡೆದಿರುವಂತೆ (ಪಶ್ಚಿಮ-ಪೂರ್ವ ದಿಶೆ) ಕಾಣುವುದು. ಆದ್ದರಿಂದ ಸ್ತಬ್ಧಸ್ಥಿತಿ ಎನ್ನುವುದು ಹಿನ್ನಡೆಗೂ ಮುನ್ನಡೆಗೂ ನಡುವಿನ ಸ್ಥಿತ್ಯಂತರ ಕಾಲ.



ಚಿತ್ರ 12

**ಇತರ ನಕ್ಷತ್ರಗಳಲ್ಲಿ ಗ್ರಹವ್ಯವಸ್ಥೆ :** ಸೌರವ್ಯೂಹದಲ್ಲಿರುವ ಗ್ರಹೋಪಗ್ರಹಗಳ ಅಸ್ತಿತ್ವ ನಮಗೆ ತಿಳಿಯುವುದು ಮುಖ್ಯವಾಗಿ ಎರಡು ಪ್ರಧಾನ ಕಾರಣಗಳಿಂದ- 1. ನೇರವಾಗಿ ಅವು ನಮಗೆ ಕಾಣುತ್ತವೆ. 2. ಅವು ನೆರೆ ಗ್ರಹ ಇಲ್ಲವೆ ಉಪಗ್ರಹದ ಮೇಲೆ ಗುರುತ್ವಾಕರ್ಷಣ ಪ್ರಭಾವವನ್ನು-ಅಂದರೆ ಕಕ್ಷೀಯ ಕ್ಷೋಭೆಯನ್ನು- ಬೀರುತ್ತವೆ. ಇತರ ನಕ್ಷತ್ರಗಳಲ್ಲಿ ಗ್ರಹವ್ಯವಸ್ಥೆ ಇರಬಾರದೆಂದೇನೂ ಇಲ್ಲ. ಅಲ್ಲಿಗೆ ಸೌರವ್ಯೂಹ ವಿಶ್ವದ ಆಕಸ್ಮಿಕವೇನೂ ಆಗಿರಬೇಕಾಗಿಲ್ಲ ಎಂದು ಒಪ್ಪಿಕೊಂಡಂತಾಯಿತು. ಹಾಗೆ ನೆರೆಯ ಒಂದು ನಕ್ಷತ್ರಕ್ಕೆ ಗ್ರಹವ್ಯವಸ್ಥೆ ಇರುವುದಾದರೆ ಅದರ ಇರವಿನ ಅರಿವು ನಮಗೆ ಮೂಡುವುದು ಪರೋಕ್ಷವಾಗಿ ಮಾತ್ರ. ಗುರುವಿನಂತಹ ದೊಡ್ಡ ಗ್ರಹ ಸೂರ್ಯನ ಮೇಲೆ ಪರಿಣಾಮ ಬೀರಿ ಅದು ಓಲಾಡುವಂತೆ ಮಾಡಬಲ್ಲುದು. ಈ ಪ್ರಮಾಣ ಅತ್ಯಲ್ಪ. ಇಂದು ದೊಡ್ಡ ದೊಡ್ಡ ದೂರದರ್ಶಕ ಗಳನ್ನು ಬಳಸಿ ನಕ್ಷತ್ರಗಳ ಈ ಬಗೆಯ ಓಲಾಟವನ್ನು ಅಳೆಯುವುದು ಸಾಧ್ಯವಾಗಿದೆ. ತತ್ಪರಿಣಾಮವಾಗಿ ಸುಮಾರು 100 ನಕ್ಷತ್ರಗಳಿಗೆ ಗ್ರಹಗಳಿರುವುದನ್ನು ಪತ್ತೆ ಮಾಡಲಾಗಿದೆ.

ಭೂಮಿಯಂತಹ ಗ್ರಹಗಳನ್ನು ಪತ್ತೆಮಾಡುವುದು ಬಹಳ ಕಷ್ಟ ಸಾಧ್ಯ. ಕಾರಣಗಳು ಸುಸ್ಪಷ್ಟ. ಭೂಮಿಯ ಪ್ರಭಾವ ಸೂರ್ಯನ ಮೇಲೆ ವ್ಯಕ್ತಪಡುವಂತೆಯೇ ಇಲ್ಲ.

ಈ ಹೊಸ ಸೌರಮಂಡಲಗಳಲ್ಲಿ ಜೀವಿಗಳಿರಬಹುದೇ ಎಂಬುದನ್ನು ಪತ್ತೆಮಾಡಲು ಜೀವವಿಜ್ಞಾನಿಗಳೂ ಖಗೋಳ ವಿಜ್ಞಾನದ ಮಿತಿಯೊಳಗೆ ಬಂದು ಸೇರಿದ್ದಾರೆ. ಆಸ್ಟ್ರೋ ಬಯಾಲಜಿ-ಖಗೋಳ ಜೀವವಿಜ್ಞಾನ ಎಂಬ ಹೊಸ ಶಾಖೆ ಜನ್ಮ ತಳೆದಿದೆ. (ಸಿ.ಎನ್.ಎಸ್.)

**ಗ್ರಹಗಳನ್ನು ಕುರಿತ ಕೆಲವು ಅಂಕಿಅಂಶಗಳನ್ನು ಮುಂದಿನ ಯಾದಿಗಳಲ್ಲಿ ಬರೆದಿದೆ**

ಯಾದಿ 1. ಕೆಲವು ಉಪಯುಕ್ತ ಮಾಹಿತಿಗಳು

| ಗ್ರಹದ ಹೆಸರು | ಕಕ್ಷೆಯ ಅರ್ಧ ದೀರ್ಘಾಕ್ಷ[1] ಭೂಮಿ=1 | ಉತ್ಕೇಂದ್ರತೆ[2] | ಸೂರ್ಯ ನೀಚ ಬಿಂದುವಿನ ರೇಖಾಂಶ[5] 0 ' | ಬಾಗು[4] 0 ' | ಆರೋಹಿ ಪಾತದ ರೇಖಾಂಶ[5] 0 ' | ನಾಕ್ಷತ್ರಿಕ ಅವಧಿಕಾಲ[6] | ಸಂಯುಕ್ತ ಆವಧಿಕಾಲ[7] | ಅವರ್ತನ ಅವಧಿ ಕಾಲ[8] | ದೃಶ್ಯ ಅಲ್ಬೆಡೊ[9] |
|---|---|---|---|---|---|---|---|---|---|
| | | | | | | ದಿವಸಗಳು | ದಿವಸಗಳು | | |
| ಬುಧ | 0.3871 | 0.2056 | 76 41 | 7 00 | 47 44 | 87.96 | 115.88 | 56 ದಿ | 0.06 |
| ಶುಕ್ರ | 0.7233 | 0.0068 | 130 52 | 3 24 | 76 14 | 224 .70 | 583.92 | 224.70 ದಿ | 0.64 |
| ಭೂಮಿ | 1.0000 | 0.0167 | 102 05 | 0 00 | – | 365.26 | – | 23 ಗಂ.56 ಮಿ. 4 ಸೆ | 0.40 |
| ಮಂಗಳ | 1.5237 | 0.0933 | 335 08 | 1 51 | 49 10 | 686.98 | 779.94 | 23 ಗಂ.37 ಮಿ 23ಸೆ | 0.13 |
| ಗುರು | 5.2026 | 0.0484 | 13 32 | 1.18 | 99 57 | 4332.60 | 398.88 | 9ಗಂ.50.ಮಿ-9ಗಂ.55ಮಿ. | 0.37 |
| ಶನಿ | 9.5547 | 0.0557 | 92 05 | 2 29 | 113 14 | 10,759.00 | 378.09 | 16 ಗಂ. 14 ಮಿ. | 0.40 |
| ಯುರೇನಸ್ | 19.2181 | 0.0463 | 172 17 | 0 46 | 73 43 | 30,688.00 | 369.66 | 16 ಗಂ. 45 ಮಿ. | 0.43 |
| ನೆಪ್ಚೂನ್ | 30.1096 | 0.0090 | 47 26 | 1 46 | 131 14 | 60,181.00 | 367.49 | 15 ಗಂ. 29 ಮಿ. | 0.48 |
| ಪ್ಲೂಟೊ | 39.5177 | 0.2486 | 222 29 | 17 09 | 108 78 | 90,737.00 | 366.73 | 6 ದಿ. 9 ಮಿ. | |

ಸೂಚನೆ: 1 ಸೆಮಿ ಮೇಜರ್ ಆಕ್ಸಿಸ್. 2 ಎಕ್ಸೆಂಟ್ರಿಸಿಟಿ 3 ಲಾಂಜಿಟ್ಯೂಡ್ ಆಫ್ ಪೆರಿಹೀಲಿಯನ್ 4 ಇನ್‌ಕ್ಲಿನೇಷನ್ 5 ಲಾಂಜಿಟ್ಯೂಡ್ ಆಫ್ ಅಸೆಂಡಿಂಗ್ ನೋಡ್ 6 ಸೈಡೀರಿಯಲ್ ಪೀರಿಯಡ್ 7 ಸಿನಾಡಿಕ್ ಪೀರಿಯಡ್ 8 ರೊಟೇಷನ್ ಪೀರಿಯಡ್ 9 ವಿಸಿಬಲ್ ಆಲ್ಬೆಡೊ. ಭೂ ಕಕ್ಷೆಯ ಅರ್ಧದೀರ್ಘಾಕ್ಷದ ಉದ್ದ 149,600,000 ಕಿಮೀ.

ಯಾದಿ 2. ಭೌತ ಮೌಲ್ಯಗಳು

| ಗ್ರಹದ ಹೆಸರು | ಸರಾಸರಿ ವ್ಯಾಸ ಭೂಮಿ =1 | ದ್ರವ್ಯರಾಶಿ ಭೂಮಿ =1 | ಸರಾಸರಿ ಸಾಂದ್ರತೆ ಗ್ರಾಮ್ / ಘ.ಸೆಂಮೀ | ಅತ್ಯಧಿಕ ಪ್ರಕಾಶ ವಿರುವಾಗ ನಾಕ್ಷತ್ರಿಕ ಕಾಂತಿಮಾನ | ಸರಾಸರಿ ಕಕ್ಷಾವೇಗ ಕಿಮೀ / ಸೆ | ವಿಮೋಚನ ವೇಗ ಕಿಮೀ / ಸೆ. |
|---|---|---|---|---|---|---|
| ಬುಧ | 0.380 | 0.0543 | 5.46 | –1.9 | 47.90 | 4.2 |
| ಶುಕ್ರ | 0.961 | 0.8136 | 5.06 | –4.4 | 35.05 | 10.4 |
| ಭೂಮಿ | 1.000 | 1.0000 | 5.52 | –– | 29.80 | 11.2 |
| ಮಂಗಳ | 0.523 | 0.1069 | 4.12 | –2.8 | 24.14 | 5.0 |
| ಗುರು | 10.970 | 318.3500 | 1.35 | –2.5 | 13.06 | 61.0 |
| ಶನಿ | 9.030 | 95.3000 | 0.71 | –0.4 | 9.65 | 37.0 |
| ಯುರೇನಸ್ | 3.720 | 14.5400 | 1.56 | +5.7 | 6.80 | 22.0 |
| ನೆಪ್ಚೂನ್ | 3.380 | 17.2000 | 2.47 | +7.6 | 5.43 | 25.0 |
| ಪ್ಲೂಟೋ | 0.178 | 0.002 | 2.1 | 13 | 4.74 | 5.0 |

ಸೂಚನೆ : ಭೂಮಿಯ ಸರಾಸರಿ ತ್ರಿಜ್ಯ $6.37123 \times 10^{8}$ ಸೆಂಮೀ. ಭೂಮಿಯ ದ್ರವ್ಯರಾಶಿ $5.975 \times 10^{27}$ ಗ್ರಾಮ್.

**ಯಾದಿ 3. ಕೆಲವು ಪ್ರಕಾಶಮಾನವಾದ ಉಪಗ್ರಹಗಳು**

| ಉಪಗ್ರಹದ ಹೆಸರು | ಕಾಂತಿಮಾನ ಮಾಧ್ಯ (ವಿಯುತಿಯಲ್ಲಿ) | ವ್ಯಾಸ ಕಿಮೀ. | ಮೂಲಗ್ರಹದಿಂದ ದೂರ ಗ್ರಹತ್ರಿಜ್ಯ= 1 | ನಾಕ್ಷತ್ರಿಕ ಅವಧಿಕಾಲ | ಆವಿಷ್ಕರಣ |
|---|---|---|---|---|---|
| ಚಂದ್ರ | ---12 | 1736.7 | ಭೂಮಿ 60.26659 | 27 ದಿ. 7 ಗಂ. 43 ಮಿ. 11.5 ಸೆ. | --- |
| | | | ಮಂಗಳ | | |
| I ಫೋಬಸ್ | 11.5 | 15 | 2.70 | 0 ದಿ. 7 ಗಂ. 39 ಮೀ. 14 ಸೆ. | 1877 ಎ. ಹಾಲ್ |
| II ಡೈಮಾಸ್ | 12.0 | 8 | 6.95 | 1 ದಿ. 6 ಗಂ. 17 ಮಿ. 55 ಸೆ. | " |
| | | | ಗುರು | | |
| V ಅಮಲ್ತೀಯ | 13.0 | 190 | 2.53 | 0 ದಿ. 11 ಗಂ. 57 ಮಿ. 23 ಸೆ. | 1892 ಬಾರ್ನರ್ಡ್ |
| I ಅಯೊ | 5.5 | 3735 | 5.91 | 1 ದಿ 18 ಗಂ. 27 ಮಿ. 34 ಸೆ. | 1892 ಬಾರ್ನರ್ಡ್ |
| II ಯೂರೋಪ | 5.7 | 3150 | 9.40 | 3 ದಿ 13 ಗಂ. 13 ಮಿ. 42 ಸೆ. | " |
| III ಗನಿಮೀಡ್ | 5.0 | 5150 | 14.99 | 7. ದಿ 3 ಗಂ. 42 ಮಿ. 31 ಸೆ. | " |
| IV ಕಲಿಸ್ಟೊ | 6.3 | 5180 | 26.36 | 16 ದಿ. 16 ಗಂ. 32 ಮಿ. 9 ಸೆ. | " |
| VI | 14.0 | 140 | 160.00 | 250 ದಿ. 15 ಗಂ. | 1904 ಪೆರೈನ್ |
| VII | 17.0 | 40 | 164.00 | 260 ದಿ. 1 ಗಂ. | 1905 " |
| X | 19.0 | 20 | 165.00 | 260 ದಿ. | 1938 ನಿಕಲ್ಸನ್ |
| VII | 19.0 | 20 | 293.00 | 600 ದಿ. | 1951 " |
| XI | 19.0 | 25 | 317.00 | 692 ದಿ. | 1938 " |
| VIII | 18.0 | 30 | 329.00 | 739 ದಿ. | 1908 ಮೆಲೋಟ್ |
| IX | 19.0 | 20 | 338.00 | 745 ದಿ. | 1914 ನಿಕಲ್ಸನ್ |
| | | | ಶನಿ | | |
| ಬಳೆಗಳು | --- | --- | 1.16 ರಿಂದ 2.26 | --- | 1659 ಹೈಗೆನ್ಸ್ |
| I ಮೈಮ್ಯಾಸ್ | 12.0 | 600 | 3.07 | 0 ದಿ. 22 ಗಂ. 37 ಮಿ. 5 ಸೆ. | 1789 ಡಬ್ಲ್ಯು. ಹರ್ಷೆಲ್ |
| II ಎನ್‌ಸಲಾಡೆಸ್ | 12.0 | 600 | 3.94 | 1 ದಿ. 8 ಗಂ. 53 ಮಿ. 7 ಸೆ. | " |
| III ಟೆತಿಸ್ | 10.5 | 1200 | 4.88 | 1 ದಿ 21 ಗಂ. 18ಮಿ. 26 ಸೆ. | 1684 ಕ್ಯಾಸಿನಿ |
| IV ಡೈಯೋನಿ | 11.0 | 1200 | 6.24 | 2 ದಿ. 17 ಗಂ 41 ಮಿ. 9 ಸೆ. | " |
| V ರೀಯ | 10.0 | 1800 | 8.72 | 4 ದಿ. 12 ಗ. 25 ಮೊ. | 1672 " |
| VI ಟೈಟ್ಯಾನ್ | 8.3 | 4200 | 20.20 | 12 ಸೆ. 15 ದೊ. 22 ಗಂ. | 1655 ಹೈಗೆನ್ಸ್ |
| VII ಹೈಪರಿಯನ್ | --- | --- | 24.20 | 41 ಮೊ. 25 ಸೆ. 20 ದಿ. 20 ಗಂ. | 1900 ಡಬ್ಲ್ಯು. ಪಿಕ್ಕರಿಂಗ್ |
| VIII ಐಯಾಪಿಟಸ್ | 13.0 | 500 | 24.50 | 21 ದಿ. 6 ಗಂ. 38 ಮಿ. 20 ಸೆ. | 1848 ಬಾಂಡ್ |
| IX ಫೀಬಿ | 10–12 | 1800 | 58.90 | 79 ದಿ. 7 ಗ 55 ಮಿ. 25 ಸೆ. | 1671 ಕ್ಯಾಸಿನಿ |
| X ತೀಮಿಸ್ | 14.0 | 200 | 214.40 | 550 ದಿ. 11 ಗಂ. | 1898 ಡಬ್ಲ್ಯು. ಪಿಕ್ಕರಿಂಗ್ |
| | | | ಯುರೇನಸ್ | | |
| ಮಿರಾಂಡ | 19 | 200 | 5.21 | ದಿ. 9 ಗಂ. 56 ಮಿ. | 1948 ಕುಯ್‌ಪರ್ |
| I ಏರಿಯಲ್ | 15 | 900 | 7.7 | 2 ದಿ. 12 ಗಂ. 29 ಮೊ. | 1851 ಲ್ಯಾಸೆಲ್ |
| II ಅಂಬ್ರಿಯೆಲ್ | 16 | 700 | 10.7 | 4 ದಿ. 3 ಗಂ. 28 ಮೊ. | " |
| III ಟೈಟಾನ್‌ನಿಯ | 14 | 1700 | 17.6 | 8 ದಿ. 16 ಗಂ. 57 ಮಿ. | 1787 ಡಬ್ಲ್ಯು. ಹರ್ಷೆಲ್ |
| IV ಓಬರಾನ್ | 14 | 1600 | 23.6 | 13 ದಿ. 11 ಗ. 7 ಮಿ. | " |
| | | | ನೆಪ್ಚೂನ್ | | |
| I ಟ್ರೈಟಾನ್ | 14 | 5000 | 13.3 | 5 ದಿ. 21 ಗಂ. 3 ಮಿ. | 1846 ಲ್ಯಾಸೆಲ್ |
| II ನೀಯರಿಯಿಡ್ | 19 | 300 | 211.0 | 359 ದಿ. 9 ಗಂ. 36 ಮಿ. | 1849 ಕುಯ್‌ಪರ್ |

**ಗ್ರಹಕುಂಡಲಿ :** ಭೂಮಂಡಲದಲ್ಲಿ ಸಂಚರಿಸುವ ಗ್ರಹಗಳ ಸ್ಥಾನಗಳನ್ನು ಸುಲಭವಾಗಿ ತಿಳಿಯುವಂತೆ ಬರೆದು ಸೂಚಿಸುವ ವಿಧಾನ. ಕುಂಡಲಿಗೆ ಚಕ್ರವೆಂದೂ ಹೆಸರಿದೆ. ಕುಂಡಲಿಯನ್ನು ಒಂದೊಂದು ದೇಶದವರು ಒಂದೊಂದು ಕ್ರಮದಲ್ಲಿ ಬರೆಯುತ್ತಾರೆ. ಹಿಂದು ಕುಂಡಲಿಯಲ್ಲಿ ಹನ್ನೆರಡು ಮನೆಗಳಿರುತ್ತವೆ. ಇದನ್ನು ಕುಂಡಲಾಕಾರದಲ್ಲಿ ಬರೆಯುತ್ತಿದ್ದುದರಿಂದ ಇದಕ್ಕೆ ಕುಂಡಲಿ ಎಂಬ ಹೆಸರು ಪ್ರಚಲಿತವಾಗಿದೆ. ದಕ್ಷಿಣ ಭಾರತದಲ್ಲಿ ಇದನ್ನು ಚಚ್ಚೌಕವಾಗಿ ಬರೆಯುತ್ತಾರೆ. ಇದರಲ್ಲಿರುವ ಮನೆಗಳಲ್ಲಿ ಮೇಷಾದಿ ಹನ್ನೆರಡು ರಾಶಿಗಳ ಸ್ಥಾನ ನಿಯತವಾಗಿರುತ್ತದೆ. ಭಮಂಡಲದಲ್ಲಿ ಗ್ರಹ ಯಾವ ರಾಶಿವಿಭಾಗದಲ್ಲಿ ಇರುವುದೊ ಅದನ್ನು ತಿಳಿದುಕೊಂಡು ಕುಂಡಲಿಯ ಆ ರಾಶಿಯ ಮನೆಯಲ್ಲಿ ಆ ಗ್ರಹದ ಹೆಸರನ್ನು ಬರೆಯಬೇಕು. ಹೀಗೆ ಸೂರ್ಯ, ಚಂದ್ರ, ಅಂಗಾರಕ,


ಬುಧ, ಗುರು, ಶುಕ್ರ, ಶನಿ, ರಾಹು, ಕೇತು ಈ ಒಂಬತ್ತು ಗ್ರಹಗಳ ಹೆಸರುಗಳೂ ಕುಂಡಲಿಯಲ್ಲಿ ಇರುತ್ತವೆ. ಇದರಿಂದ ಏಕಕಾಲದಲ್ಲಿ ನವಗ್ರಹಗಳು ಯಾವಯಾವ ರಾಶಿಗಳಲ್ಲಿ ಇವೆ ಎಂಬುದು ತಿಳಿಯುತ್ತದೆ. ಜನನ ಲಗ್ನರಾಶಿಯನ್ನು ಲೆಕ್ಕಮಾಡಿ ತಿಳಿದು ಅದನ್ನು

ಕುಂಡಲಿಯಲ್ಲಿ ಆ ರಾಶಿಯ ಮನೆಯಲ್ಲಿ ಲಗ್ನ ಎಂದು ಗುರ್ತಿಸಬೇಕು. ಹೀಗೆ ಬರೆದು ಸಿದ್ಧಪಡಿಸಿರುವ ಕುಂಡಲಿಯ ಸಹಾಯದಿಂದ ಜಾತಕನಿಗೆ ಗ್ರಹಗಳಿಂದ ಉಂಟಾಗುವ

| | | | |
|---|---|---|---|
| ಮೀನ | ಮೇಷ | ವೃಷಭ | ಮಿಥುನ |
| ಕುಂಭ | | | ಕರ್ಕಾಟಕ |
| ಮಕರ | | | ಸಿಂಹ |
| ಧನುಸ್ಸು | ವೃಶ್ಚಿಕ | ತುಲಾ | ಕನ್ಯಾ |


ಚಿತ್ರ 1

ಫಲಗಳನ್ನು ತಿಳಿಯಲು ಅನುಕೂಲವಾಗುತ್ತದೆ. ಜನನಕಾಲ, ವಿವಾಹ ಮೊದಲಾದ ಶುಭಕಾರ್ಯಗಳನ್ನು ಮಾಡುವ ಕಾಲ ಮತ್ತು ಪ್ರಶ್ನಕಾಲ, ಈ ಕಾಲಗಳಲ್ಲಿ ಕುಂಡಲಿಯನ್ನು ಸಿದ್ಧಪಡಿಸಿ ಅದರ ಸಹಾಯದಿಂದ ಗ್ರಹಫಲವನ್ನು ತಿಳಿಯಬೇಕಾಗುತ್ತದೆ.




ಚಿತ್ರ 2


ಕುಂಡಲಿಯನ್ನು ಬರೆಯುವುದರಲ್ಲಿ ಪ್ರಚಲಿತವಾಗಿರುವ ಕೆಲವು ವಿಧಾನಗಳನ್ನು ಈ ಕೆಳಗೆ ಚಿತ್ರರೂಪದಲ್ಲಿ ಕೊಟ್ಟಿದೆ.




ಚಿತ್ರ 3

1, 2, 4 ನೆಯ ವಿಧಾನಗಳಲ್ಲಿ ಮೇಷಾದಿ 12 ರಾಶಿಗಳಿಗೆ ಗೊತ್ತಾದ ಮನೆಗಳಿವೆ. ಮೂರನೆಯ ವಿಧಾನದಲ್ಲಿ ರಾಶಿಗಳಿಗೆ ನಿಯತವಾದ ಸ್ಥಾನವಿಲ್ಲ. ಎಲ್ಲಮನೆಗಳಲ್ಲೂ ಮೇಷಾದಿ ಹನ್ನೆರಡು ರಾಶಿಗಳು ಬರಬಹುದು. ಇದರಲ್ಲಿ ಲಗ್ನ ಮೊದಲಾದ ಹನ್ನೆರಡು ಸ್ಥಾನಗಳಿಗೆ ನಿಯತಸ್ಥಾನ ಲಗ್ನಾನುಗುಣವಾಗಿ ರಾಶಿಗಳು ಬದಲಾಗುತ್ತವೆ. ಇಷ್ಟಕಾಲದಲ್ಲಿ ಮೇಷ ಲಗ್ನವಾದರೆ ಲಗ್ನದಲ್ಲಿ ಮೇಷರಾಶಿ ಇದ್ದು, ಸಂಖ್ಯಾ ಕ್ರಮದಲ್ಲಿ ಉಳಿದ ರಾಶಿಗಳಿರುತ್ತವೆ. ಲಗ್ನ ವೃಷಭವಾದರೆ ಲಗ್ನ ಸ್ಥಾನದಲ್ಲಿ ವೃಷಭ ರಾಶಿ ಇರುತ್ತದೆ. ಹೀಗೆಯೇ ಲಗ್ನಸ್ಥಾನದಲ್ಲಿದ್ದು ಉಳಿದ ರಾಶಿಗಳು ಕ್ರಮವಾಗಿ ಆಯಾ ಸ್ಥಾನಗಳಲ್ಲಿರುತ್ತವೆ. ಬಳಿಕ ಗ್ರಹಗಳನ್ನು ಆಯಾರಾಶಿಗಳಲ್ಲಿ ಬರೆಯಬೇಕು. ಮೊದಲಿನ ಕುಂಡಲಿ ವಿಧಾನದಲ್ಲಿ ರಾಶಿಯ ಗಣನೆ ಪ್ರದಕ್ಷಿಣಾಕಾರದಲ್ಲಿದ್ದರೆ ಉಳಿದ ಮೂರು ವಿಧಾನಗಳಲ್ಲೂ ಅಪ್ರದಕ್ಷಿಣಾಕಾರದಲ್ಲಿರುತ್ತದೆ.


ಕುಂಡಲಿಗಳಲ್ಲಿ ರಾಶಿಕುಂಡಲಿ ಭಾವಕುಂಡಲಿ ದ್ರೇಕ್ಕಾಣಕುಂಡಲಿ ಅಂಶಕುಂಡಲಿ ಇವು ಮುಖ್ಯವಾದುವು. ಇವಲ್ಲದೆ ಇನ್ನೂ ಕೆಲವು ಕುಂಡಲಿಗಳುಂಟು. ಗ್ರಹಗಳಿರುವ ರಾಶಿಯನ್ನು ರಾಶಿಕುಂಡಲಿ ತಿಳಿಸುತ್ತದೆ. ಭಾವಕುಂಡಲಿ ತನು ಮೊದಲಾದ ಹನ್ನೆರಡು ಭಾವಗಳಲ್ಲಿ ಗ್ರಹಸ್ಥಿತಿಯನ್ನು ಸೂಚಿಸುತ್ತದೆ. ರಾಶಿ, ಭಾವಕುಂಡಲಿಗಳಲ್ಲಿ ಗ್ರಹಸ್ಥಿತಿ ಬಹುಪಾಲು ಒಂದೇ ವಿಧವಾಗಿದ್ದರೂ ಕೆಲವು ವೇಳೆ ಒಂದೆರಡು ಗ್ರಹಗಳು ಮಾತ್ರ ವ್ಯತ್ಯಾಸವಾಗುತ್ತವೆ. ಗ್ರಹವಿರುವ ದ್ರೇಕ್ಕಾಣ ವಿಭಾಗವನ್ನು ದ್ರೇಕ್ಕಾಣ ಕುಂಡಲಿ ತಿಳಿಸುತ್ತದೆ. ಅಂತೆಯೇ ನವಾಂಶಕುಂಡಲಿ ಗ್ರಹವಿರುವ ನವಾಂಶವನ್ನು ಸೂಚಿಸುತ್ತದೆ. ಈ ಕುಂಡಲಿಗಳಿಂದ ಪ್ರತ್ಯೇಕವಾದ ಫಲಗಳನ್ನು ತಿಳಿಯಲು ಅನುಕೂಲವಾಗುತ್ತದೆ.




ಚಿತ್ರ 4

ಪಕ್ಷ ಮತ್ತು ಮಾಸಗಳ ಕೊನೆಯ ದಿನದ ಗ್ರಹಸ್ಥಿತಿಯನ್ನು ಕುಂಡಲಿಯ ಮೂಲಕ ಪಂಚಾಂಗಗಳಲ್ಲಿ ಸೂಚಿಸುತ್ತಾರೆ. (ಎಸ್.ಎನ್.ಕೆ.)


**ಗ್ರಹಣಕಾರಕ ಯಮಳ ನಕ್ಷತ್ರಗಳು :** ಪರಸ್ಪರ ಒಂದರ ಸುತ್ತ ಇನ್ನೊಂದು ಪರಿಭ್ರಮಿಸುತ್ತಿರುವ ಒಂದು ಜೊತೆ ನಕ್ಷತ್ರಗಳಲ್ಲಿ ಒಂದು ಇನ್ನೊಂದನ್ನು ತಾತ್ಕಾಲಿಕವಾಗಿ ಮರೆಮಾಡುವ ವ್ಯವಸ್ಥೆ (ಎಕ್ಲಿಪ್ಸಿಂಗ್ ಬೈನರಿ ಸ್ಟಾರ್ಸ್). ವಿಶ್ವದಲ್ಲಿ ಯಮಳ ನಕ್ಷತ್ರಗಳು(**ನೋಡಿ**)




ಪೂರ್ಣ ಗ್ರಹಣಗಳನ್ನು ಪ್ರದರ್ಶಿಸುವ ಕಾಲ್ಪನಿಕ ಗ್ರಹಣಕಾರಕ ಯಮಳ ನಕ್ಷತ್ರ ಮತ್ತು ಅದರ ಬೆಳಕಿನ ರೇಖಾಚಿತ್ರ

ಸಾಕಷ್ಟು ಸಂಖ್ಯೆಯಲ್ಲಿವೆ. ಇಂಥ ಒಂದೊಂದು ವ್ಯವಸ್ಥೆಯಲ್ಲೂ ಒಂದು ನಕ್ಷತ್ರ ಇನ್ನೊಂದು ನಕ್ಷತ್ರವನ್ನು ತನ್ನೆಡೆಗೆ ಆಕರ್ಷಿಸುತ್ತ ಒಟ್ಟಾಗಿ ಒಂದರ ಸುತ್ತ ಇನ್ನೊಂದು ಪರಿಭ್ರಮಿಸುತ್ತಿರುವವು. ಸಮಬಲವಿರುವ ಇಬ್ಬರು ವ್ಯಕ್ತಿಗಳ ಅಪ್ಪಾಲೆತಿಪ್ಪಾಲೆ ಆಟದಂತೆ ಈ ಪರಸ್ಪರ ಪರಿಭ್ರಮಣೆ ಉಂಟು. ಯಮಳ ನಕ್ಷತ್ರಗಳ ಕಕ್ಷಾತಲ ಭೂಮಿಯ ಮೂಲಕ ಹಾಯುವಂತಿದ್ದರೆ ಆಗ ಒಂದು ನಕ್ಷತ್ರ ಇನ್ನೊಂದು ನಕ್ಷತ್ರದ ಹಿಂದಕ್ಕೆ ಸರಿದು ವೀಕ್ಷಕನ ದೃಷ್ಟಿಯಿಂದ ತಾತ್ಕಾಲಿಕವಾಗಿ ಮರೆಯಾಗಿರುವ ವಿದ್ಯಮಾನ ಘಟಿಸುತ್ತಲೇ ಇರುತ್ತದೆ. ಅಂಥಲ್ಲಿ ಮೊದಲಿನ ನಕ್ಷತ್ರದಿಂದ ಎರಡನೆಯ ನಕ್ಷತ್ರ ಗ್ರಹಣಗೊಂಡಿತು ಎನ್ನುತ್ತೇವೆ. [ಇಲ್ಲಿ ಗ್ರಹಣ ಪದದ ಅರ್ಥ ಕಣ್ಮರೆಯಾಯಿತು ಎಂದು, ಸೌರವ್ಯೂಹದಲ್ಲಿನ ಗ್ರಹಣಗಳನ್ನು ಕುರಿತು ನೀಡಿದ ಅರ್ಥ, ನೆರಳಿನಿಂದ ಅಸ್ಫುಟವಾಗುವಿಕೆ, ಅಲ್ಲ (**ನೋಡಿ– ಗ್ರಹಣ, ಖಗೋಳೀಯ**). ಆದ್ದರಿಂದ, ಭೂಮಿಯನ್ನು ಕುರಿತಂತೆ ಯಮಳನಕ್ಷತ್ರ ವ್ಯವಸ್ಥೆಯೊಂದರ ವಿನ್ಯಾಸವನ್ನು ಅವಲಂಬಿಸಿ ಗ್ರಹಣಕಾರಕ ಯಮಳನಕ್ಷತ್ರ ವ್ಯವಸ್ಥೆ ಉಂಟು. ಪರ್ಸಿಯಸ್ ನಕ್ಷತ್ರಪುಂಜದಲ್ಲಿರುವ


(ವಿಷುವದಂಶ 1 ಗಂ. 25ಮಿ.–4ಗಂ. 45 ಮಿ. ಮತ್ತು ಘಂಟಾವೃತ್ತಾಂಶ $31^0$–$59^0$) ಆಲ್ಗಾಲ್ ಎನ್ನುವ ನಕ್ಷತ್ರ ಸುಪ್ರಸಿದ್ಧ ಉದಾಹರಣೆ. ಒಂದು ಪ್ರಕಾಶಮಾನ ನಕ್ಷತ್ರ ಮತ್ತು ಒಂದು ಮಸಕು ನಕ್ಷತ್ರ ಇವುಗಳ ವ್ಯವಸ್ಥೆ ಆಲ್ಗಾಲ್. ಸುಮಾರಾಗಿ ಪ್ರತಿ ಎರಡು ದಿವಸಗಳು



ಗ್ರಹಣಕಾರಕ ಯಮಳ ನಕ್ಷತ್ರಗಳ ಮೂರು ಪ್ರರೂಪಗಳು. ಎಡಗಡೆಯ ಚಿತ್ರದಲ್ಲಿ ಈ ನಕ್ಷತ್ರಗಳ ಬೆಳಕಿನ ಏರಿಳಿತಗಳನ್ನು ಗುರುತಿಸುವ ವಕ್ರರೇಖೆಗಳನ್ನು ನೋಡಬಹುದು. ಬಲಗಡೆಯ ಚಿತ್ರದಲ್ಲಿ ಮೇಲಿನದು ಕಂಕಣ ಗ್ರಹಣವನ್ನೂ ನಡುವಿನದು ಪಾರ್ಶ್ವ ಗ್ರಹಣವನ್ನೂ ಪ್ರದರ್ಶಿಸುತ್ತವೆ. ಕೆಳಗಡೆಯದು ಸರಿಸುಮಾರು ಸಮಾನ ಗಾತ್ರದ ಆದರೆ ಭಿನ್ನಕಾಂತಿಗಳ ನಕ್ಷತ್ರಗಳಾಗಿರುವುದರಿಂದ ಪರಸ್ಪರ ಆಂದೋಳನಗಳನ್ನೇ ಎಬ್ಬಿಸುತ್ತವೆ.

ಮತ್ತು ಇಪ್ಪತ್ತೊಂದು ಗಂಟೆಗಳಲ್ಲಿ ಪ್ರಕಾಶಮಾನ ಘಟಕ ಮಸಕು ಘಟಕದ ಹಿಂದಕ್ಕೆ ಹೋಗುತ್ತದೆ. ಮತ್ತು ಆಗ ಆಲ್ಗಾಲಿನ ದೃಗ್ಗೋಚರ ಪ್ರಕಾಶ ಗಣನೀಯವಾಗಿ ಅಂದರೆ ಸಾಮಾನ್ಯ ಪ್ರಕಾಶದ ಅರ್ಧಕ್ಕಿಂತಲೂ ಕಡಿಮೆ ಮಟ್ಟಕ್ಕೆ ತಗ್ಗುತ್ತದೆ. ಇದನ್ನು ಬರಿಗಣ್ಣಿನಿಂದ ನೋಡಿ ಗುರುತಿಸಬಹುದು. ಗ್ರಹಣಕಾರಕ ಯಮಳ ನಕ್ಷತ್ರಗಳ ಪ್ರಕಾಶದ ಏರಿಳಿತಗಳ ಅಧ್ಯಯನದಿಂದ ವ್ಯವಸ್ಥೆಯ ಘಟಕಗಳ ಗಾತ್ರಗಳನ್ನೂ ದ್ರವ್ಯರಾಶಿಗಳನ್ನೂ ಗಣನೆ ಮಾಡುವುದು ಸಾಧ್ಯ. *


**ಗ್ರಹಣ, ಖಗೋಳೀಯ :** ಒಂದು ಆಕಾಶಕಾಯ ಇನ್ನೊಂದು ಆಕಾಶಕಾಯದ ನೆರಳಿನಿಂದ ಆಂಶಿಕವಾಗಿ ಇಲ್ಲವೇ ಪೂರ್ಣವಾಗಿ ಅಸ್ಫುಟವಾಗುವಿಕೆ (ಎಕ್ಲಿಪ್ಸ್, ಸೆಲೆಸ್ಟಿಯಲ್). ಗ್ರಹಣಕ್ಕೆ ಒಳಗಾಗುವ ಕಾಯ ಸ್ವಯಂಪ್ರಭಾಯುತವಾಗಿದ್ದು ಅಪಾರ ದರ್ಶಕ ಕಾಯವೊಂದರ ನೆರಳಿನಿಂದ ಅಸ್ಫುಟವಾಗುವುದು ಒಂದು ಬಗೆಯ ಗ್ರಹಣ; ಬದಲು ಅದು ಪ್ರತಿಫಲಿತ ಬೆಳಕಿನಿಂದ ಹೊಳೆಯುವುದಾಗಿದ್ದು ಅಪಾರ ದರ್ಶಕ ಕಾಯವೊಂದು ಇದಕ್ಕೂ ಇದರ ಬೆಳಕಿನ ಆಕರಕ್ಕೂ ನಡುವೆ ಸರಿಯುವಾಗ ಅಸ್ಫುಟವಾಗುವುದು ಇನ್ನೊಂದು ಬಗೆಯ ಗ್ರಹಣ. ಮೊದಲನೆಯ ಪ್ರರೂಪದ ಗ್ರಹಣಕ್ಕೆ ಆಚ್ಛಾದನೆ (ಅಕಲ್ಟೇಷನ್) ಎಂದು ಹೆಸರು. ಇದಕ್ಕೆ ಸೂರ್ಯಗ್ರಹಣ ಮತ್ತು ನಕ್ಷತ್ರಗ್ರಹಣ ನಿದರ್ಶನಗಳು. ಸೂರ್ಯಗ್ರಹಣದಲ್ಲಿ ವೀಕ್ಷಕನಿಗೂ ಸೂರ್ಯನಿಗೂ ನಡುವೆ ಚಂದ್ರ ಸರಿಯುತ್ತದೆ. ನಕ್ಷತ್ರಗ್ರಹಣದಲ್ಲಾದರೋ ವೀಕ್ಷಕನಿಗೂ ನಕ್ಷತ್ರಕ್ಕೂ ನಡುವೆ ಚಂದ್ರ ಇಲ್ಲವೇ ಒಂದು ಗ್ರಹ ಸರಿಯುತ್ತದೆ. ಗ್ರಹಣಕಾರಕ ಯಮಳ ನಕ್ಷತ್ರಗಳು (ಎಕ್ಲಿಪ್ಸಿಂಗ್ ಬೈನರಿ ಸ್ಟಾರ್ಸ್) ಕೂಡ ಈ ಬಗೆಯ ಗ್ರಹಣಕ್ಕೆ ನಿದರ್ಶನಗಳು. ಎರಡನೆಯ ಪ್ರರೂಪದ ಗ್ರಹಣಕ್ಕೆ ಚಂದ್ರಗ್ರಹಣ ಅದರಂತೆಯೇ ಗ್ರಹಗಳ ಉಪಗ್ರಹಗಳ ಗ್ರಹಣಗಳು ಕೂಡ ಉದಾಹರಣೆಗಳು. ರೂಢಿಯಲ್ಲಿ ಗ್ರಹಣ ಎನ್ನುವ




ಚಿತ್ರ 1. ಸೂರ್ಯ ಮತ್ತು ಚಂದ್ರ ಗ್ರಹಣಗಳ ಕ್ರಿಯಾವಿನ್ಯಾಸ


ಪದದ ಬಳಕೆ ಭೂಮಿಯಿಂದ ಕಾಣುವಂತೆ ಸೂರ್ಯ ಮತ್ತು ಚಂದ್ರಗ್ರಹಣಗಳನ್ನು ಕುರಿತು ಉಂಟು. ಪ್ರಸಕ್ತ ಲೇಖನದಲ್ಲಿ ಇವೆರಡು ಗ್ರಹಣಗಳ ಸವಿವರ ನಿರೂಪಣೆ ಇದೆ. ಗ್ರಹಣಕಾರಕ ಯಮಳ ನಕ್ಷತ್ರಗಳನ್ನು ಕುರಿತ ವಿವರಣೆಗೆ **ನೋಡಿ– ಗ್ರಹಣಕಾರಕ ಯಮಳ ನಕ್ಷತ್ರಗಳು.** ಇದಲ್ಲದೆ ಶುಕ್ರ ಮತ್ತು ಬುಧ, ಸೂರ್ಯನ ಮುಂದೆ ಹಾದುಹೋಗುವ ಅಪೂರ್ವ ಘಟನೆಗಳನ್ನು ಸಂಕ್ರಮ (ಟ್ರಾನ್ಸಿಟ್) ಎಂದು ಕರೆಯಲಾಗಿದೆ.

**ಸೂರ್ಯ ಮತ್ತು ಚಂದ್ರಗ್ರಹಣಗಳು :** ಭೂಮಿ ತನ್ನ ಅಕ್ಷದ ಸುತ್ತ ಆವರ್ತಿಸುತ್ತ ಮತ್ತು ಸೂರ್ಯನ ಸುತ್ತ ಪರಿಭ್ರಮಿಸುತ್ತ ಇರುವ ಒಂದು ಅಪಾರಕ ಕಾಯ; ಚಂದ್ರ ಸ್ವಂತಾಕ್ಷದ ಸುತ್ತ ಆವರ್ತಿಸುತ್ತ ಮತ್ತು ಭೂಮಿಯ ಸುತ್ತ ಪರಿಭ್ರಮಿಸುತ್ತ ಇರುವ





ಚಿತ್ರ 2. ಪಾತರೇಖೆಯ ನೇರ ಇಲ್ಲವೆ ಸರಿಸುಮಾರು ಆ ನೇರ ಸೂರ್ಯ ಇದ್ದಾಗ ಮಾತ್ರ ಗ್ರಹಣಗಳು ಸಂಭವಿಸುತ್ತವೆ

ಇನ್ನೊಂದು ಅಪಾರದರ್ಶಕ ಕಾಯ. ಭೂಮಿ ಸಾಗುವ ಕಕ್ಷಾತಲ ಖಗೋಳವನ್ನು ಛೇದಿಸುವ ಮಹಾವೃತ್ತಕ್ಕೆ ಕ್ರಾಂತಿವೃತ್ತ **(ನೋಡಿ)** ಎಂದು ಹೆಸರು. ಈ ಮಹಾವೃತ್ತದ ಮೇಲೆ ಭೂಮಿಯ ಸುತ್ತ ಸೂರ್ಯ ಪರಿಭ್ರಮಿಸುತ್ತಿರುವಂತೆ ಭೂಮಿಯ ಮೇಲಿನ ವೀಕ್ಷಕನಿಗೆ ಭಾಸವಾಗುವುದು. ಚಂದ್ರನ ಕಕ್ಷಾತಲ ಖಗೋಳವನ್ನು ಇನ್ನೊಂದು ಮಹಾವೃತ್ತದಲ್ಲಿ ಛೇದಿಸುತ್ತದೆ. ಈ ಮಹಾವೃತ್ತದ ಮೇಲೆ ಭೂಮಿಯ ಸುತ್ತ ಚಂದ್ರ ಪರಿಭ್ರಮಿಸುತ್ತಿರುವಂತೆ ಭೂಮಿಯ ಮೇಲಿನ ವೀಕ್ಷಕನಿಗೆ ಭಾಸವಾಗುವುದು. ಕ್ರಾಂತಿವೃತ್ತತಲವೂ ಚಂದ್ರಕಕ್ಷಾವೃತ್ತತಲವೂ ಎರಡು ಬಿಂದುಗಳಲ್ಲಿ (N, N') ಪರಸ್ಪರ ಸಂಧಿಸುತ್ತವೆ; ಇವೆರಡು ತಲಗಳೂ ಪರಸ್ಪರ $5^0$ $8'$ ಗಳಷ್ಟು ಬಾಗಿಕೊಂಡಿವೆ. N ಮತ್ತು N' ಬಿಂದುಗಳಿಗೆ ಪಾತ ಬಿಂದುಗಳು ಅಥವಾ ಸರಳವಾಗಿ ಪಾತಗಳು (ನೋಡ್ಸ್) ಎಂದು ಹೆಸರು. ಚಿತ್ರ(3)ರಲ್ಲಿ E ಭೂಮಿ; NMN'MM' ಚಂದ್ರಕಕ್ಷೆ; NSN'S' ಕ್ರಾಂತಿವೃತ್ತ (ಸೂರ್ಯ ಕಕ್ಷೆ). ಚಂದ್ರ ಮತ್ತು ಸೂರ್ಯರು ಆಯಾ ಕಕ್ಷೆಯ ಮೇಲೆ ಅನುರೂಪ ಕಕ್ಷಾವೇಗಗಳಿಂದ ಸಂಚರಿಸುತ್ತಿರುವಾಗ ಭೂಮಿಯ ಮತ್ತು ಚಂದ್ರನ ನೆರಳುಗಳು ನಿರಂತರ ಚಲನೆಯಲ್ಲಿರುತ್ತವೆ. ಮಾತ್ರವಲ್ಲ, ವಾಸ್ತವಿಕವಾಗಿ ಈ ಮೂರು ಕಾಯಗಳ ವಿನ್ಯಾಸಗಳೂ ನಡುವಿನ ಅಂತರಗಳೂ ಬದಲಾಗುತ್ತಲೇ ಇರುವುದರಿಂದ ನೆರಳುಗಳ ಗಾತ್ರಗಳು ಕೂಡ ಬದಲಾಗುತ್ತಲೇ ಇರುತ್ತವೆ. ನಿರಂತರವಾಗಿ ನಡೆಯುತ್ತಿರುವ ಈ ವಿದ್ಯಮಾನದಲ್ಲಿ ಚಂದ್ರನ ನೆರಳು ಭೂಮಿಯ ಮೇಲೆ ಪತನವಾದಾಗ ಸೂರ್ಯ ಗ್ರಹಣ ಸಂಭವಿಸುವುದು; ಹಾಗೆಯೇ ಭೂಮಿಯ ನೆರಳು ಚಂದ್ರನ ಮೇಲೆ ಪತನವಾದಾಗ ಚಂದ್ರಗ್ರಹಣ ಸಂಭವಿಸುತ್ತದೆ. ಚಂದ್ರಕಕ್ಷೆ ಕ್ರಾಂತಿ ವೃತ್ತಕ್ಕಿಂತ ಭಿನ್ನವಾಗಿರುವುದರಿಂದ ಹಾಗೂ ಚಂದ್ರ ಮತ್ತು ಸೂರ್ಯರ ಕಕ್ಷಾವೇಗಗಳು ಭಿನ್ನವಾಗಿರುವುದ ರಿಂದ ಗ್ರಹಣಗಳು ಪದೇ ಪದೇ ಸಂಭವಿಸುವ ಘಟನೆಗಳಲ್ಲ, ವಿರಳ ಘಟನೆಗಳು. ಚಿತ್ರ (1)ನ್ನು ಇಲ್ಲವೇ ಚಿತ್ರ(2)ನ್ನು ಗಮನಿಸಿ ಒಂದು ಅಂಶವನ್ನು ಖಾತ್ರಿ ಮಾಡಿಕೊಳ್ಳ ಬಹುದು: ಸೂರ್ಯ ಮತ್ತು ಚಂದ್ರ ಎರಡೂ ಪಾತಬಿಂದುಗಳ ಸನಿಹದಲ್ಲಿರುವಾಗ ಮಾತ್ರ ಗ್ರಹಣ ಸಂಭಾವ್ಯ. ಸೂರ್ಯಗ್ರಹಣವಾದರೆ ಚಂದ್ರ ಮತ್ತು





ಚಿತ್ರ 3

ಸೂರ್ಯ ಭೂಮಿಯಿಂದ ಒಂದೇ ದಿಶೆಯಲ್ಲಿ ಇರುವುದರಿಂದ ಅವುಗಳ ರೇಖಾಂಶಗಳು ಸಮ. ಆದ್ದರಿಂದ ಅಂದು ಅಮಾವಾಸ್ಯೆಯೂ ಹೌದು. ಚಂದ್ರಗ್ರಹಣವಾದರೆ ಚಂದ್ರ ಮತ್ತು ಸೂರ್ಯ ಭೂಮಿಯಿಂದ ವಿರುದ್ಧ ದಿಶೆಗಳಲ್ಲಿ ಇರುವುದರಿಂದ ಅವುಗಳ ರೇಖಾಂಶ ವ್ಯತ್ಯಾಸ $180^0$. ಆದ್ದರಿಂದ ಅಂದು ಹುಣ್ಣಿಮೆಯೂ ಹೌದು. ಹೀಗೆ ಗ್ರಹಣಗಳು ಚಂದ್ರ ಮತ್ತು ಸೂರ್ಯರು ಪಾತಬಿಂದುಗಳ ಸಮೀಪವಿರುವ ಅಮಾವಾಸ್ಯೆ ಇಲ್ಲವೇ ಹುಣ್ಣಿಮೆ ದಿವಸಗಳಂದು ಮಾತ್ರ ಸಂಭವಿಸುತ್ತವೆ. ಈ ಷರತ್ತುಗಳ ಪೈಕಿ ಯಾವುದೇ ಒಂದು ಪೂರೈಕೆ ಆಗದಿದ್ದರೆ ಗ್ರಹಣ ಸಂಭವಿಸುವುದಿಲ್ಲ.



ಚಿತ್ರ 4. ಚಂದ್ರಗ್ರಹಣದ ಕ್ರಿಯಾವಿನ್ಯಾಸ dಯಲ್ಲಿ ಚಂದ್ರಬಿಂಬ ಅರೆನೆರಳಿನ ಪ್ರದೇಶವನ್ನು ಪ್ರವೇಶಿಸುತ್ತದೆ. ಬಳಿಕ ದಟ್ಟನೆರಳನ್ನು ಪ್ರವೇಶಿಸುತ್ತದೆ (M). ಇಲ್ಲಿಂದ ಪುನಃ ಅರೆನೆರಳಿನ ಪ್ರದೇಶವನ್ನು ಪ್ರವೇಶಿಸಿ ಮತ್ತೆ cಯಲ್ಲಿ ಪೂರ್ಣ ಮುಕ್ತಿಯನ್ನು ಪಡೆಯುತ್ತದೆ.


ಕ್ರಾಂತಿವೃತ್ತತಲದ ಮೇಲೆಯೇ ಚಂದ್ರಕಕ್ಷೆಯೂ ಇದ್ದಿದ್ದರೆ ಪ್ರತಿ ಅಮಾವಾಸ್ಯೆಯಂದು ಸೂರ್ಯಗ್ರಹಣವೂ ಪ್ರತಿ ಹುಣ್ಣಿಮೆಯಂದು ಚಂದ್ರಗ್ರಹಣವೂ ಆಗುತ್ತಿದ್ದುವು. ಹೀಗಾಗದಿರುವುದಕ್ಕೆ ಮುಖ್ಯಕಾರಣಗಳು ಎರಡು : ಒಂದು, ಚಂದ್ರಕಕ್ಷಾತಲ ಕ್ರಾಂತಿವೃತ್ತತಲಕ್ಕೆ ಬಾಗಿಕೊಂಡಿರುವುದು; ಎರಡು, ಪಾತಬಿಂದುಗಳ ಹಿನ್ನಡೆ (ರಿಟ್ರೊಗ್ರೇಡ್ ಮೋಷನ್). ಇವು ವಾರ್ಷಿಕವಾಗಿ $20^0$ ಗಳಷ್ಟು ಪ್ರದಕ್ಷಿಣ ದಿಶೆಯಲ್ಲಿ ಸಂಚರಿಸುತ್ತ ಸುಮಾರು 18




ಚಿತ್ರ 5. 18–11–1956ರಲ್ಲಿ ಸಂಭವಿಸಿದ ಪೂರ್ಣ ಚಂದ್ರಗ್ರಹಣದ ಚಿತ್ರ. ಕಾಲವನ್ನು ವಿಶ್ವಕಾಲದಲ್ಲಿ ಸೂಚಿಸಿದೆ.

ವರ್ಷಗಳಿಗೊಮ್ಮೆ ಮೊದಲಿನ ಸ್ಥಾನಗಳನ್ನು ಹೊಂದುತ್ತವೆ. ಈ ಕಾರಣಗಳಿಂದಲೆ ಪ್ರತಿ ಅಮಾವಾಸ್ಯೆ (ಚಂದ್ರ ಮತ್ತು ಸೂರ್ಯರ ರೇಖಾಂಶ ವ್ಯತ್ಯಾಸ ಶೂನ್ಯವಾಗುವ ಘಟನೆ) ಮತ್ತು ಹುಣ್ಣಿಮೆಗಳಂದು (ರೇಖಾಂಶ ವ್ಯತ್ಯಾಸ $180^0$ ಆಗುವ ಘಟನೆ) ಚಂದ್ರನ ನೆರಳು ಭೂಮಿಯ ಮೇಲೆ ಬೀಳುವುದಿಲ್ಲ ಅಥವಾ ಭೂಮಿಯ ನೆರಳು ಚಂದ್ರನ ಮೇಲೆ ಬೀಳುವುದಿಲ್ಲ ಮತ್ತು ಗ್ರಹಣಗಳು ಸಂಭವಿಸುವುದಿಲ್ಲ. ಇದರ ಪರಿಣಾಮವೆಂದರೆ ಯಾವುದಾದರೂ ಒಂದು ವರ್ಷದಲ್ಲಿ ಆಗಬಹುದಾದ ಗ್ರಹಣಗಳ ಒಟ್ಟು ಸಂಖ್ಯೆ ಏಳಕ್ಕಿಂತ ಹೆಚ್ಚಾಗಿರುವುದಿಲ್ಲ ಮತ್ತು ಎರಡೇ ಎರಡರಷ್ಟು ಕಡಿಮೆಯಾಗಿರಬಹುದು. ಗರಿಷ್ಠ ಸಂಖ್ಯೆಯಾದ ಏಳರಲ್ಲಿ ಐದು ಸೂರ್ಯಗ್ರಹಣಗಳು ಮತ್ತು ಎರಡು ಚಂದ್ರಗ್ರಹಣಗಳು; ಇಲ್ಲವೇ ನಾಲ್ಕು ಸೂರ್ಯಗ್ರಹಣಗಳು ಮತ್ತು ಮೂರು ಚಂದ್ರಗ್ರಹಣಗಳು ಇವೆ. ಕನಿಷ್ಠ ಸಂಖ್ಯೆಯಾದ ಎರಡರಲ್ಲಿ ಎರಡೂ ಸೂರ್ಯಗ್ರಹಣಗಳೇ. ಅಂದಮಾತ್ರಕ್ಕೆ ಯಾವುದೇ ಒಂದು ಸ್ಥಳದಲ್ಲಿರುವ ವೀಕ್ಷಕನಿಗೆ ಇವೆಲ್ಲವೂ ಕಾಣಲೇಬೇಕೆಂದೇನೂ ಇಲ್ಲ. ಭೂಮಿಯ ಮೇಲಿನ ಒಂದು ಸ್ಥಳದಿಂದ ಕಾಣಬಹುದಾದ ಗ್ರಹಣ ಮತ್ತು ಅದರ ವಿನ್ಯಾಸ (ಆಂಶಿಕವೋ ಪೂರ್ಣವೋ ಎಂಬ ಅಂಶ) ಗ್ರಹಣ ಸಂಭವಿಸುವಾಗ ಆ ಸ್ಥಳದ ಸ್ಥಾನವನ್ನು (ಅಂದರೆ ಅಕ್ಷಾಂಶ ರೇಖಾಂಶಗಳನ್ನು) ಅವಲಂಬಿಸಿ ಇವೆ.

**ಚಂದ್ರಗ್ರಹಣ :** ಭೂಮಿಯ ಸೂರ್ಯವಿಮುಖ ಪಾರ್ಶ್ವದಲ್ಲಿ ಶಂಕುವಿನಾಕಾರದ ನೆರಳು ಉಂಟಾಗಿರುತ್ತದೆ. ಚಿತ್ರ(4)ರಲ್ಲಿ ಈ ದೃಶ್ಯದ ಅಡ್ಡಕೊಯ್ತವನ್ನು ಕಾಣಿಸಿದೆ. ಇಲ್ಲಿ S, E, M ಅನುಕ್ರಮವಾಗಿ ಸೂರ್ಯಕೇಂದ್ರ, ಭೂಮಿಕೇಂದ್ರ ಮತ್ತು ಚಂದ್ರಕೇಂದ್ರ. AD, BC ಸೂರ್ಯ ಮತ್ತು ಚಂದ್ರಬಿಂಬಗಳಿಗೆ ಎಳೆದ ನೇರ ಸಾಮಾನ್ಯ ಸ್ಪರ್ಶರೇಖೆಗಳು.



ಚಿತ್ರ 6. ಚಂದ್ರಗ್ರಹಣದ ಭಿನ್ನ ಪ್ರರೂಪಗಳು. A ರೇಖೆಯ ಮೇಲೆ ಚಂದ್ರಬಿಂಬ ಸಾಗುವಾಗ ಪೂರ್ಣಗ್ರಹಣ ಸಂಭವಿಸುತ್ತದೆ. B ರೇಖೆಯ ಮೇಲೆ ಸಾಗುವಾಗ ಪಾರ್ಶ್ವ ಗ್ರಹಣ ಸಂಭವಿಸುತ್ತದೆ. C ರೇಖೆಯ ಮೇಲೆ ಸಾಗುವಾಗ ಚಂದ್ರಬಿಂಬದ ಬೆಳಕು ಸ್ವಲ್ಪ ಕುಂದಬಹುದಷ್ಟೆ. D ರೇಖೆಯ ಮೇಲೆ ಸಾಗುವಾಗ ಯಾವ ಬದಲಾವಣೆಯೂ ತಿಳಿಯುವುದಿಲ್ಲ.

ಅವು Gಯಲ್ಲಿ ಸಂಧಿಸುತ್ತವೆ. ACK, BDL ಈ ಬಿಂಬಗಳಿಗೆ ಎಳೆದ ಅಡ್ಡ ಸಾಮಾನ್ಯ ಸ್ಪರ್ಶರೇಖೆಗಳು. ಅವು Fನಲ್ಲಿ ಸಂಧಿಸುತ್ತವೆ. CGD ಸೂರ್ಯನ ಬೆಳಕಿನಿಂದಾದ ಭೂಮಿಯ ನೆರಳಿನ ಶಂಕು. ಈ ಭಾಗದಲ್ಲಿ ಸೂರ್ಯನ ಬೆಳಕು ಸ್ವಲ್ಪವೂ ಕಾಣಿಸುವುದಿಲ್ಲ. ಇದಕ್ಕೆ ಭೂಮಿಯ ನೆರಳಿನ ಶಂಕು ಅಥವಾ ದಟ್ಟ ನೆರಳಿನ ಶಂಕು (ಅಂಬ್ರ) ಎಂದು ಹೆಸರು. KCG ಮತ್ತು LDG ವಲಯದಲ್ಲಿ ಭಾಗಶಃ ನೆರಳಿರುತ್ತದೆ. ಇದಕ್ಕೆ ಅರೆನೆರಳಿನ ಶಂಕು (ಪಿನಂಬ್ರ) ಎಂದು ಹೆಸರು. ಈ ವಲಯದಿಂದ ನೋಡುವಾತನಿಗೆ ಸೂರ್ಯನ ಕೆಲವು ಭಾಗ ಮಾತ್ರ ಕಾಣುವುದಷ್ಟೆ. ಉಳಿದ ಭಾಗವನ್ನು ಭೂಮಿ ಮರೆ ಮಾಡಿರುತ್ತದೆ. adcb ವೃತ್ತ ಭೂಮಿಯ ಸುತ್ತ ಇರುವ ಚಂದ್ರನ ಕಕ್ಷೆಯನ್ನು ಸೂಚಿಸುವುದು.

ಸೂರ್ಯ, ಭೂಮಿ ವ್ಯಾಸಗಳನ್ನೂ ಅವುಗಳ ಕೇಂದ್ರಗಳ ನಡುವಿನ ಸರಾಸರಿ ಅಂತರವನ್ನೂ ತೆಗೆದುಕೊಂಡು ಲೆಕ್ಕ ಹಾಕಿದರೆ ಶಂಕುವಿನಾಕಾರದ ದಟ್ಟ ನೆರಳಿನ ಉದ್ದ ಭೂವ್ಯಾಸದ ಸುಮಾರು 108 ಪಾಲು ದೊಡ್ಡದು ಎಂದು ತಿಳಿಯುವುದು. ಅಂದರೆ ದಟ್ಟ ನೆರಳಿನ ಶೃಂಗ G ಭೂಕೇಂದ್ರದಿಂದ ಸರಾಸರಿ ಸುಮಾರು 13,80,522 ಕಿಮೀಗಳಷ್ಟು ದೂರದಲ್ಲಿರುತ್ತದೆ. ಚಂದ್ರ ಮತ್ತು ಭೂ ಕೇಂದ್ರಗಳ ನಡುವಿನ ಅಂತರ ಭೂವ್ಯಾಸದ ಸುಮಾರು 30 ರಷ್ಟು ಉಂಟು. ಇದು ಸರಾಸರಿ ಸುಮಾರು 3,84,551 ಕಿಮೀಗಳೆನ್ನಬಹುದು. ಆದ್ದರಿಂದ ಭೂಮಿಯ ಉಪಗ್ರಹವಾದ ಚಂದ್ರ ಭೂಮಿ ತನ್ನ ಹಿಂದೆ ಕೆಡೆಯುವ ದಟ್ಟ




ಚಿತ್ರ 7. ಚಂದ್ರಗ್ರಹಣದ ಕ್ರಮಾಗತ ಚಿತ್ರಗಳು

ನೆರಳಿನ ಶಂಕುವಿನ ಮೂಲಕ ಹಾದುಹೋಗುವ ಸಂಭಾವ್ಯತೆ ಉಂಟು. ದಟ್ಟ ನೆರಳಿನ ಭಾಗದ ಒತ್ತಿಗೆ ಅರೆನೆರಳಿನ ಭಾಗಗಳು ಇವೆ. ಆದ್ದರಿಂದ ಚಂದ್ರ ದಟ್ಟ ನೆರಳಿನ ಭಾಗವನ್ನು ಪ್ರವೇಶಿಸುವ ಮುನ್ನ ಮತ್ತು ಅದನ್ನು ಹಾದುಹೋದ ತರುವಾಯ ಅರೆನೆರಳಿನ ಭಾಗದ ಮೂಲಕ ಹೋಗಲೇಬೇಕು.



ಚಿತ್ರ 8. ಒಂದು ಸೂರ್ಯಗ್ರಹಣ ಕಾಲದಲ್ಲಿ ಸೂರ್ಯ, ಚಂದ್ರ ಮತ್ತು ಭೂಮಿಗಳ ಸಾಪೇಕ್ಷ ಸ್ಥಾನಗಳು (ಮಾನಕ್ಕೆ ಅನುಸಾರವಾಗಿ ಚಿತ್ರಿಸಿಲ್ಲ)

ಚಂದ್ರ ತನ್ನ ಕಕ್ಷೆಯಲ್ಲಿ ಭೂಮಿಯ ಸುತ್ತ ಸಂಚರಿಸುವಾಗ ಭೂಮಿಯ ನೆರಳಿನೊಳಕ್ಕೆ ಬಂದರೆ ಆಗ ಚಂದ್ರಗ್ರಹಣವಾಗುತ್ತದೆ. ಈ ಗ್ರಹಣವಾಗಬೇಕಾದರೆ ಸೂರ್ಯ, ಭೂಮಿ ಮತ್ತು ಚಂದ್ರ ಇವು ಮೂರೂ ಸುಮಾರಾಗಿ ಒಂದೇ ಸರಳರೇಖೆಯಲ್ಲಿರಬೇಕು. ಚಂದ್ರ ತನ್ನ ಪಥದ ಒಂದು ಪಾತಬಿಂದುವಿನಲ್ಲೋ (ರಾಹು ಇಲ್ಲವೆ ಕೇತು) ಇಲ್ಲವೇ ಅದರ ಹತ್ತಿರವೋ ಇದ್ದು ಸೂರ್ಯನೊಂದಿಗೆ ವಿಯುತಿಯಲ್ಲಿದ್ದರೆ (ಅಪೊಸಿಷನ್) ಅಂದರೆ ಹುಣ್ಣಿಮೆಯಾಗಿದ್ದರೆ ಆಗ ಚಂದ್ರ ಗ್ರಹಣವಾಗುತ್ತದೆ. ಚಂದ್ರಪಥ ನೇರವಾಗಿ ದಟ್ಟ ನೆರಳಿನ ಹೋಗಿ ಆ ಭಾಗವನ್ನು ಪ್ರವೇಶಿಸುತ್ತಿರುವಾಗ ಚಂದ್ರನ ಸ್ವಲ್ಪ ಭಾಗಕ್ಕೆ ಬೆಳಕು ಕಡಿದುಹೋದ ಹಾಗಾಗುತ್ತದೆ. ಇದಕ್ಕೆ ಚಂದ್ರನ ಪಾರ್ಶ್ವಗ್ರಹಣ ಎಂದು ಹೆಸರು. ದಟ್ಟ ನೆರಳಿನ ಭಾಗದಲ್ಲಿ ಪೂರ್ತ ಮುಳುಗಿದರೆ ಚಂದ್ರನ ಪೂರ್ಣಗ್ರಹಣವಾಗುತ್ತದೆ. ಚಂದ್ರ ತನ್ನ ಪಥದಲ್ಲಿ ಮುಂದುವರಿದಂತೆ ಪೂರ್ಣಗ್ರಹಣವು ಪಾರ್ಶ್ವಗ್ರಹಣವಾಗಿ ಮೋಕ್ಷಗೊಂಡು ಅರೆನೆರಳಿನ ಭಾಗದಲ್ಲಿ ಮುಳುಗಿ ಹೊರಬರುತ್ತದೆ. ಪೂರ್ಣಗ್ರಹಣವಾಗುವುದಕ್ಕೆ ಮುಂಚೆ ಮತ್ತು ಆದ ಮೇಲೆ ಪಾರ್ಶ್ವಗ್ರಹಣವಾಗುತ್ತದೆ ಎಂಬುದನ್ನು ಗಮನಿಸಬೇಕು. ಭೂಮಿಯ ದಟ್ಟ ನೆರಳಿನ ಭಾಗವನ್ನು ಚಂದ್ರ ಸ್ಪರ್ಶಿಸಿ ಮುಂದಕ್ಕೆ ಸರಿದಾಗ ಮಾತ್ರ ಚಂದ್ರಗ್ರಹಣವಾಗಿದೆ ಎನ್ನುತ್ತಾರೆ. ಅರೆನೆರಳಿನ ಭಾಗದಲ್ಲಿದ್ದಾಗ ಆಗುವ ಗ್ರಹಣಕ್ಕೆ ಜನರು ಅಷ್ಟೇನೂ ಪ್ರಾಮುಖ್ಯ ನೀಡುವುದಿಲ್ಲ. ಅದನ್ನು ಆಸಕ್ತಿಯಿಂದ ವೀಕ್ಷಿಸುವುದೂ ಇಲ್ಲ. ಭೂಮಿಯನ್ನು ಚಂದ್ರ ಪಶ್ಚಿಮದಿಂದ ಪೂರ್ವಕ್ಕೆ ಸುತ್ತುತ್ತಿರುವುದರಿಂದ ಗ್ರಹಣವಾಗುವಾಗ ಚಂದ್ರನ ಪೂರ್ವಭಾಗದಲ್ಲಿ ಸ್ಪರ್ಶವೂ ಪಶ್ಚಿಮ ಭಾಗದಲ್ಲಿ ಮೋಕ್ಷವೂ ಆಗುತ್ತವೆ. ಭೂಮಿಯಿಂದಾದ ನೆರಳಿನ ಸೀಳ್ನೋಟವನ್ನು ಮತ್ತು ಗ್ರಹಣವಾಗುವಾಗ ಚಂದ್ರ ವಿವಿಧ ಭಾಗಗಳಲ್ಲಿರುವುದನ್ನು ಚಿತ್ರ (5)ರಲ್ಲಿ ತೋರಿಸಿದೆ. ಚಂದ್ರ ಕ್ಷಿತಿಜಕ್ಕಿಂತ ಮೇಲಿದ್ದಾಗ ಗ್ರಹಣವಾದರೆ ಅದನ್ನು ನೋಡಲು ಸಾಧ್ಯವಾಗುವ ಭೂಮಿಯ ಮೇಲಿನ ಭಾಗ ಹೆಚ್ಚು. ಇದು ಭೂಮಿಯ ಮೇಲ್ಮೈಯ ಸುಮಾರು ಅರ್ಧಕ್ಕಿಂತ ಹೆಚ್ಚು ಭಾಗಗಳಿಂದ ಕಾಣಿಸುತ್ತದೆ. ಅದೂ ಅಲ್ಲದೆ ಎಲ್ಲ ಕಡೆಗಳಿಂದಲೂ ಒಂದೇ ತರಹ ಗ್ರಹಣ ಕಾಣಿಸುತ್ತದೆ.



ಚಿತ್ರ 9


ಪಾತರೇಖೆಯ ವಿನ್ಯಾಸವನ್ನು ಅನುಸರಿಸಿ ಗ್ರಹಣವನ್ನು ವಿಭಾಗಿಸಬಹುದು.

1) ಅರೆನೆರಳಿನ ಗ್ರಹಣ : ಭೂಮಿಯ ದಟ್ಟ ನೆರಳಿನ ಭಾಗವನ್ನು ಮುಟ್ಟದೆಯೇ ಚಂದ್ರ ಹೊರಗೆ ಬರುವುದು.

2) ಪಾರ್ಶ್ವಗ್ರಹಣ : ಅರೆ ನೆರಳಿನ ಮೂಲಕ ಹೋಗಿ ದಟ್ಟ ನೆರಳಿನ ಕೆಲ ಭಾಗವನ್ನು ಹಾದು ಹೊರಕ್ಕೆ ಬರುವುದು.

3) ಪೂರ್ಣಗ್ರಹಣ : ದಟ್ಟ ನೆರಳಿನ ಮಧ್ಯೆ ಅಥವಾ ಅಂಚಿನಲ್ಲಿ ಪೂರ್ತಿ ಮುಳುಗಿ ಹೊರಗೆ ಬರುವುದು.

ದಟ್ಟ ನೆರಳಿನ ಮಧ್ಯೆ ನೇರ ಹಾದುಹೋಗುವಾಗ ಚಂದ್ರಗ್ರಹಣ ಕಾಣಿಸುವ ಗರಿಷ್ಠ ಕಾಲಾವಧಿ ಸುಮಾರು 2 ಗಂಟೆಗಳು. ದಟ್ಟ ನೆರಳಿನ ಸುತ್ತ ಆವರಿಸಿರುವ ಅರೆ ನೆರಳಿನ ಭಾಗವನ್ನೂ ಗಣನೆಗೆ ತೆಗೆದುಕೊಂಡರೆ ಗ್ರಹಣದ ಗರಿಷ್ಠ ಕಾಲಾವಧಿ ಸುಮಾರು 4



ಚಿತ್ರ 10. ಚಂದ್ರನ ನೆರಳು ಭೂಮಿಯವರೆಗೆ ಮಾತ್ರ ಬಂದಾಗ ಕಾಣುವ ಸೂರ್ಯಗ್ರಹಣ. ಸಂಪೂರ್ಣ ಗ್ರಹಣ ಕಾಣುವ ಪ್ರದೇಶದ ಅಕ್ಕಪಕ್ಕದಲ್ಲಿ ಪಾರ್ಶ್ವಗ್ರಹಣ ಕಾಣಿಸುತ್ತದೆ

ಮಧ್ಯೆ ಹಾದುಹೋಗಬಹುದು ಇಲ್ಲವೇ ಸ್ವಲ್ಪ ಮೇಲೆ ಅಥವಾ ಕೆಳಗೆ ಹೋಗಬಹುದು. ಇವು ಪಾತರೇಖೆಯ ವಿನ್ಯಾಸವನ್ನು ಅವಲಂಬಿಸಿರುತ್ತವೆ. ಚಿತ್ರ (4)ರಲ್ಲಿ ಚಂದ್ರನು ಭೂಮಿಯ ದಟ್ಟ ನೆರಳಿನೊಳಗಿದ್ದು ಪೂರ್ಣಚಂದ್ರಗ್ರಹಣವಾಗಿರುವುದನ್ನು ತೋರಿಸಲಾಗಿದೆ. ಅರೆನೆರಳಿನ ಮೂಲಕ ಚಂದ್ರ ಹಾದುಹೋಗುವಾಗ ಚಂದ್ರ ಬಿಂಬಿಸುವ ಬೆಳಕು ಸ್ವಲ್ಪ ಮಂಕಾಗಬಹುದು. ದಟ್ಟ ನೆರಳಿನ ಹತ್ತಿರ ಹೋದಹಾಗೆಲ್ಲ ಈ ಬೆಳಕು ಕಡಿಮೆಯಾಗುತ್ತ ಗಂಟೆಗಳು. ಆದ್ದರಿಂದ ಚಂದ್ರಗ್ರಹಣವನ್ನು ಬಹಳ ಹೊತ್ತು ನೋಡುವುದಕ್ಕಾಗುತ್ತದೆ. ಯಾವುದಾದರೂ ಒಂದು ವರ್ಷದಲ್ಲಾಗುವ ಒಟ್ಟು ಚಂದ್ರಗ್ರಹಣಗಳ ಸಂಖ್ಯೆ ಕಡಿಮೆಯಾಗಿದ್ದರೂ ಅದರಲ್ಲಿ ಪೂರ್ಣ ಚಂದ್ರಗ್ರಹಣಗಳೇ ಹೆಚ್ಚಾಗಿ ಆಗುತ್ತವೆ. ಪೂರ್ಣ ಚಂದ್ರಗ್ರಹಣವಾದ ಕೆಲವು ಸಂದರ್ಭಗಳಲ್ಲಿ ಗ್ರಹಣವಾದ ಚಂದ್ರನ ಮೇಲ್ಮೈ ಹೊಳಪಿನಿಂದ ಇರಬೇಕಾಗಿದ್ದುದು ಭೂಮಿಯ ಮೇಲಾದ ವಿಪ್ಲವದಿಂದ ಮಂಕಾಗಿ ಕಂಡುದೂ ಉಂಟು.